₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 10.05.2026 ಸಂಪುಟ: 11 ಸಂಚಿಕೆ: 114 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಸೇನಾಪಡೆಗೆ ಜ.ಸುಬ್ರಮಣಿ ನೂತನ ಮುಖ್ಯಸ್ಥ

ದೇಶದ ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರನ್ನಾಗಿ ಲೆಫ್ಟಿನೆಂಟ್ ಜನರಲ್ ಎನ್.ಎಸ್.ರಾಜಾ ಸುಬ್ರಮಣಿ (ನಿವೃತ್ತ) ಅವರನ್ನು ಕೇಂದ್ರ ಸರಕಾರ ನೇಮಕ ಮಾಡಿದೆ. ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್‌ರನ್ನು ನೇಮಕ ಮಾಡಿದೆ. ಮೇ 30ಕ್ಕೆ ಸಿಡಿಎಸ್ ಆಗಿ ತಮ್ಮ ಅಧಿಕಾರಾವಧಿಯನ್ನು ಜ.ಅನಿಲ್ ಚೌಹಾಣ್ ಪೂರ್ಣಗೊಳಿಸಲಿದ್ದಾರೆ.

### ಸೊಂಪಾದ ಪುಟಗಳು



ಮಾರಿಯೋ: ಬದುಕಿನ ಕಕ್ಕಿರಿದ ದೃಶ್ಯಗಳಿಗೆ ಬಣ್ಣ ಹಚ್ಚಿದ ಮಾಂತ್ರಿಕ
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಗಂಗಾಲಹರಿ ಸ್ತೋತ್ರವೂ ಜಗನ್ನಾಥ ಪಂಡಿತನ ಕಥೆಯೂ
ತಿಳಿರು ತೋರಣ
ಶ್ರೀವತ್ಸ ಜೋಶಿ 6

### ದಾರಿದೀಪೋಕ್ತಿ

ನಾವು ಜೀವನದಲ್ಲಿ ಸಾಧನೆ ಮಾಡಲು ಅಥವಾ ಮುಂದೆ ಬರಲು ಉಳಿದವರಿಗಿಂತ ಬುದ್ಧಿವಂತರಾಗಿರಬೇಕಾಗಿಲ್ಲ. ನಾವು ಉಳಿದವರಿಗಿಂತ ಹೆಚ್ಚು ಶಿಸ್ತುಬದ್ಧರಾಗಿದ್ದರೆ ಸಾಕು.

### ವಕ್ರತುಂಡೋಕ್ತಿ

ಜಗತ್ತು ಶೂನ್ಯ ಅನಿಸುವುದು ಯಾವಾಗ ಗೊತ್ತಾ, ನೂರು ಜನ ಸ್ನೇಹಿತರಿದ್ದರೂ, ಪೋಸ್ಟ್ ಮಾಡಿದ ಹತ್ತು ನಿಮಿಷದ ನಂತರ ಒಬ್ಬರೂ ಕಾಮೆಂಟ್ ಮಾಡದಿದ್ದಾಗ.

## ರಷ್ಯಾ, ಉಕ್ರೇನ್ ಕದನ ವಿರಾಮ: ಟ್ರಂಪ್

**ವಾಷಿಂಗ್ಟನ್:** ಇರಾನ್ ವಿರುದ್ಧವನ್ನು ಅಂತ್ಯಗೊಳಿಸಲು ಪರದಾ ಡುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ ರಷ್ಯಾ-ಉಕ್ರೇನ್ ನಡುವೆ 3 ದಿನಗಳ ತಾತ್ಕಾಲಿಕ ಕದನ ವಿರಾಮವನ್ನು ಘೋಷಿಸಿದ್ದಾರೆ. ಮೇ 9ರಿಂದ 11ರವರೆಗೆ ಕದನ ವಿರಾಮ ಘೋಷಿಸಲಾಗಿದೆ. ಉಭಯ ದೇಶಗಳ ನಾಯಕರೊಂದಿಗೆ ಮಾತುಕತೆ ನಡೆಸಿದ್ದು, ಪರಸ್ಪರ ಒಪ್ಪಿಗೆಯ ಮೇರೆಗೆ ಮೇ 9ರಿಂದ ಮೇ11ರವರೆಗೆ 3 ದಿನಗಳ ಕದನವಿರಾಮ ಘೋಷಿಸುತ್ತಿರುವುದಾಗಿ ಟ್ರಂಪ್ ಘೋಷಣೆ ಮಾಡಿದ್ದಾರೆ.

## 2 ಭೀಕರ ಅಪಘಾತ: ಆರು ಮಂದಿ ಸಾವು

**ಕುಣಿಗಲ್:** ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಶನಿವಾರ ಸಂಭವಿಸಿದ ಅಪಘಾತದಲ್ಲಿ 4 ಮಂದಿ ಮೃತಪಟ್ಟಿದ್ದಾರೆ.

ರಾಜ್ಯ ಹೆದ್ದಾರಿ 33 ಜಿಗಣೆ ಪಾಳ್ಯ ಬಳಿ ಭೀಕರ ಅಪಘಾತ ಸಂಭವಿಸಿದೆ. ಮೃತರನ್ನು ಮಂಡ್ಯದ ಶುಗರ್ ಕಾಲೊನಿಯ ನಿವಾಸಿ ಕುಮಾರ ನರಸಿಂಹಸ್ವಾಮಿಯ ಕುಟುಂಬಸ್ಥರು ಎಂದು ಗುರುತಿಸಲಾಗಿದೆ. ಇನ್ನು ಮಂಡ್ಯದಲ್ಲಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಶನಿವಾರ ನಡೆದ ಇನ್ನೊಂದು ಅಪಘಾತದಲ್ಲಿ ಕಾರು ಪಲ್ಟಿಯಾಗಿ ತಂದೆ ಮತ್ತು ಮಗ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹದಿಹರೆಯದ ಬಾಲಕಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಮೃತರನ್ನು ಕಿರಣ್ (40), ಕಿಶೋರ್ (15) ಎಂದು ಗುರುತಿಸಲಾಗಿದೆ.

### ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜಕೀಯ ರಂಗದಲ್ಲಿ ನಟರು

ಸುದ್ದಿ




### ಪ.ಬಂಗಾಳವನ್ನು ಗೆದ್ದ ಸಂತಸದ ನಡುವೆಯೇ ರಾಜ್ಯದಲ್ಲಿ ಬಿಎಸ್‌ವೈ ಅಭಿಮಾನೋತ್ಸವ

# ಅಭಿಮಾನದಲ್ಲಿ ಮಿಂದೆದ್ದ ಯಡಿಯೂರಪ್ಪ

### 4 ಲಕ್ಷಕ್ಕೂ ಅಧಿಕ ಅಭಿಮಾನಿಗಳಿಂದ ಜಯಘೋಷ, ಕೇಂದ್ರ ಸಚಿವ ಅಮಿತ್ ಶಾ ಉಪಸ್ಥಿತಿ

### ಯಡಿಯೂರಪ್ಪ ಈಗಲೂ ಬಿಜೆಪಿ ಮತಬ್ಯಾಂಕ್ ಎನ್ನುವ ಸಂದೇಶ ರವಾನಿಸುವ ಪ್ರಯತ್ನ

**ವಿಶ್ವವಾಣಿ ಸುದ್ದಿಮನೆ** ಚಿತ್ರದುರ್ಗ

ಮಮತಾ ಬ್ಯಾನರ್ಜಿಯ ಭದ್ರಕೋಟೆ ಎನಿಸಿದ್ದ ಪಶ್ಚಿಮ ಬಂಗಾಳವನ್ನು ಭೇದಿಸಿದ ಸಂಭ್ರಮದಲ್ಲಿರುವ ಬಿಜೆಪಿ, ಶನಿವಾರ ಚಿತ್ರದುರ್ಗದಲ್ಲಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಆಚರಿಸುವ ಮೂಲಕ, ರಾಜ್ಯದಲ್ಲೂ ನವೋತ್ಸಾಹ ತುಂಬಲು ಯತ್ನಿಸಿದೆ.

ಕೋಟೆನಾಡು ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವ ಸಮಾವೇಶಕ್ಕೆ ನಿರೀಕ್ಷೆಯಂತೆ ನಾಲ್ಕು ಲಕ್ಷಕ್ಕೂ ಅಧಿಕ ಜನ ಸೇರಿದ್ದರು. ಸಮಾವೇಶದಲ್ಲಿ ಸೇರಿದ್ದವರು ಯಡಿಯೂರಪ್ಪ, ಮೋದಿ ಪರ ಘೋಷಣೆ ಕೂಗಿದರು. ಮುಂದಿನ ಚುನಾವಣೆಯನ್ನೂ ಯಡಿಯೂರಪ್ಪ ನೇತೃತ್ವದಲ್ಲಿಯೇ ನಡೆಸಬೇಕೆಂಬ ಮಾತನ್ನು ನಾಯಕರ ಬಾಯಲ್ಲಿ ಹೇಳಿಸುವ ಮೂಲಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರಾಷ್ಟ್ರೀಯ ನಾಯಕರಿಗೆ ಸಂದೇಶ ರವಾನಿಸಲು ಯಶಸ್ವಿಯಾದರು.

ಈ ಸಮಾವೇಶದ ಮೂಲಕ ರಾಜ್ಯ ಬಿಜೆಪಿ ಯಲ್ಲಿ ಆಗಬಹುದಾದ ಮುಂದಿನ ಬದಲಾವಣೆ, ಚುನಾವಣಾ ತಯಾರಿಗೆ ಸಂಬಂಧಿಸಿದಂತೆ ಸಣ್ಣ ಸುಳಿವನ್ನಾದರೂ ಅಮಿತ್ ಶಾ ಬಿಟ್ಟುಕೊಡಲಿದ್ದಾರೆ ಎನ್ನುವ ಕುತೂಹಲ ಅನೇಕರಲ್ಲಿತ್ತು. ಆದರೆ ಸುಮಾರು 15ರಿಂದ 20 ನಿಮಿಷ ಮಾತನಾಡಿದ ಶಾ, ತಮ್ಮ ಇಡೀ ಭಾಷಣದಲ್ಲಿ ಯಡಿಯೂರಪ್ಪನವರ ಭವ್ಯ ಇತಿಹಾಸದ ಬಗ್ಗೆ ಮಾತನಾಡಿದರೇ ಹೊರತು, ರಾಜ್ಯ ಬಿಜೆಪಿ ಅಥವಾ ವಿಜಯೇಂದ್ರ ಅವರ ಭವಿಷ್ಯದ ಬಗ್ಗೆ ಪರೋಕ್ಷ ಸುಳಿವನ್ನೂ ಬಿಟ್ಟುಕೊಡದಿರುವುದು ಕೆಲವರಿಗೆ ನಿರಾಶೆ ಮೂಡಿಸಿತು.

ಇನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರಂಭಾಪುರಿ ಶ್ರೀಗಳು, ನಿರಂಜನನಾಥಪುರಿ ಶ್ರೀಗಳು, ನಿರ್ಮಲಾನಂದನಾಥ ಶ್ರೀಗಳು, ದಿಂಗಾಲೇಶ್ವರ ಸ್ವಾಮೀಜಿಗಳು ಯಡಿಯೂರಪ್ಪ ಅವರ ನಾಯಕತ್ವದ ಬಗ್ಗೆ ಹೊಗಳಿಕೆಯ ಮಾತುಗಳನ್ನು ಆಡುವ ಜತೆಜತೆಗೆ ಈ ನಾಯಕತ್ವವನ್ನು ಬಳಸಿಕೊಳ್ಳಬೇಕು ಎನ್ನುವ ಪರೋಕ್ಷ ಮಾತುಗಳು ವರಿಷ್ಠರ ಕಿವಿಗೆ ಬೀಳುವಂತೆ ನೋಡಿಕೊಂಡರು.

ಕೋಟೆಗಳ ನಾಡು ಚಿತ್ರದುರ್ಗದಲ್ಲಿ ಶನಿವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ನಡೆಯಿತು. ಕೇಂದ್ರ ಸಚಿವ ಅಮಿತ್ ಶಾ, ಕೇಂದ್ರ ಸಚಿವ ರಾಧಾಮೋಹನ್ ಅಗರ್ವಾಲ್, ಪ್ರಲ್ಹಾದ ಜೋಶಿ, ವಿಜಯೇಂದ್ರ ಪಾಲ್ಗೊಂಡಿದ್ದರು.

- ವಿವಿಧ ಸಮುದಾಯದ ಮಠಾಧೀಶರಿಂದ ಬಿಎಸ್‌ವೈ ಈಗಲೂ ಜನನಾಯಕ ಎಂಬ ಸಂದೇಶ
- ಪಶ್ಚಿಮ ಬಂಗಾಳದ ಗೆಲುವಿನ ಜಪ ಮಾಡಿದ ಅಮಿತ್ ಶಾ, ರಾಜ್ಯದ ಇತರೆ ನಾಯಕರು
- ಮುಂದಿನ ಚುನಾವಣೆಗೆ ವಿಜಯೇಂದ್ರ ನೇತೃತ್ವದ ಪರೋಕ್ಷ ಪ್ರಸ್ತಾಪ ಮಾಡಿದ ರಾಜ್ಯ ನಾಯಕರು
- ಬಹಿರಂಗ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳದ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಉಪಸ್ಥಿತಿ
- ವಿರೋಧಿ ಬಣದಲ್ಲಿ ಕಾಣಿಸಿಕೊಂಡಿದ್ದ ಮಾಜಿ ಸಂಸದ ಸಿದ್ದೇಶ್ವರ್ ಕೂಡ ಉತ್ಸವದಲ್ಲಿ ಹಾಜರ್

### ಮುಂದಿನ ನಾಯಕತ್ವದ ಸೂಚ್ಯ ಸಂದೇಶ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸಾರ್ವಜನಿಕ ಜೀವನಕ್ಕೆ ಕಾಲಿಟ್ಟು ಐವತ್ತು ವರ್ಷದ ಸಂಭ್ರಮದ ನೆಪದಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿದ್ದರೂ, ಇಡೀ ಕಾರ್ಯಕ್ರಮದ ಅಜೆಂಡಾ ಭೂತಕಾಲಕ್ಕಿಂತ, ಭವಿಷ್ಯದ ನಾಯಕತ್ವಕ್ಕೆ ಸಂಬಂಧಿಸಿದಂತೆ ಬಿಜೆಪಿಯಲ್ಲಿರುವ ಗೊಂದಲಗಳಿಗೆ ಉತ್ತರ ನೀಡುವಂತಿತ್ತು. ಕಾರ್ಯಕ್ರಮದಲ್ಲಿ ನೆರೆದಿದ್ದ ಬೃಹತ್ ಜನಸ್ತೋಮದ ಮೂಲಕ ಬಿಜೆಪಿಯ ಮುಂದಿನ ನಾಯಕತ್ವ ಯಾರದ್ದು ಎಂಬ ಸಂದೇಶವನ್ನು ಅಮಿತ್ ಶಾ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಸಮ್ಮುಖದಲ್ಲೇ ರವಾನಿಸಲಾಗಿದೆ.

### ಸರ್ವ ಜಾತಿ ಸ್ವಾಮೀಜಿಗಳ ಸಾನ್ನಿಧ್ಯ

ಯಡಿಯೂರಪ್ಪ ಆರಂಭದಿಂದಲೂ ಮಠಮಾನ್ಯಗಳೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಯಡಿಯೂರಪ್ಪನವರ ಸಂಕಷ್ಟದಲ್ಲಿದ್ದಾಗ ಲಿಂಗಾಯತ ಸ್ವಾಮೀಜಿಗಳು ಯಡಿಯೂರಪ್ಪ ಪರವಾಗಿ ಬ್ಯಾಟ್ ಬೀಸಿದ್ದರು. ಇದರ ಮುಂದುವರಿದ ಭಾಗ ಎನ್ನುವಂತೆ ಶನಿವಾರದ ಕಾರ್ಯಕ್ರಮದಲ್ಲಿಯೂ ನೂರಾರು ಮಠಾಧೀಶರು ಭಾಗ ವಹಿಸಿದ್ದರು. ಲಿಂಗಾಯತ, ಒಕ್ಕಲಿಗ, ಹಿಂದುಳಿದ ವರ್ಗ, ದಲಿತ ಹಾಗೂ ಬ್ರಾಹ್ಮಣ ಸಮುದಾಯದ ಪ್ರಮುಖ ಶ್ರೀಗಳು ಒಂದೇ ವೇದಿಕೆಯಲ್ಲಿದ್ದರು.

> ಹುಟ್ಟುವಾಗ ಚಿನ್ನದ ಚಮಚವನ್ನು ಇಟ್ಟುಕೊಂಡು ಹುಟ್ಟಿಲ್ಲ. ಆದರೆ ಐವತ್ತು ವರ್ಷ ನಾಡಿನ ಸೇವೆ ಮಾಡಿಕೊಂಡು ಬಂದಿದ್ದೇನೆ. ಅಭಿಮಾನೋತ್ಸವದ ಸಾಗರದಲ್ಲಿ ನನ್ನನ್ನು ತೇಲಿಸಿದ್ದೀರಾ.
> **ಯಡಿಯೂರಪ್ಪ** ಮಾಜಿ ಸಿಎಂ

> ಸಂಘರ್ಷದಲ್ಲಿಯೇ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಯಡಿಯೂರಪ್ಪ ಅವರ ಐದು ದಶಕದ ಈ ಸೇವೆ ಯುವಕರಿಗೆ ಮಾದರಿ. ದಕ್ಷಿಣ ಭಾರತದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಅವರ ಹೋರಾಟ ಅವಿಸ್ಮರಣೀಯ
> **ಅಮಿತ್ ಶಾ** ಗೃಹ ಸಚಿವ

> ನನಗೆ ಯಾವುದೇ ಸವಾಲು ಬಂದರೂ ಮೆಟ್ಟಿ ನಿಲ್ಲುವ ಶಕ್ತಿ ಸಿಗಲಿ ಎಂದು ಕಾರ್ಯಕ್ರಮದಲ್ಲಿ ನೆರೆದಿರುವ ಸರ್ವ ಶ್ರೀಗಳು ಆಶೀರ್ವಾದ ಮಾಡಲಿ. ನಿಮ್ಮ ಪ್ರೀತಿ, ವಿಶ್ವಾಸ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತೇನೆ.
> **ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

> ಹಿಂದೂ ಧರ್ಮ, ಸನಾತನ ಧರ್ಮದ ಉಳಿವಿಗಾಗಿ ಅಶ್ವಮೇಧದ ಕುದುರೆಯನ್ನು ಬಿಡಲು ನಾವು ಸಿದ್ಧರಾಗಿದ್ದೇವೆ. ಅದನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ ಎಂಬ ಅರಿವು ಎಲ್ಲರಿಗಿರಬೇಕು.
> **ಶ್ರೀನಿವಾಸ್ ಪೂಜಾರಿ** ಸಂಸದರು

> ರಾಜ್ಯದ ಆಡಳಿತ ಪಕ್ಷ (ಕಾಂಗ್ರೆಸ್)ದ ಸೂರ್ಯ ಮುಳುಗುತ್ತಿದೆ. ನಮ್ಮದು ಉದಯಿಸುತ್ತಿದೆ. ಎಲ್ಲರೂ ಒಂದಾಗಿ ಕೆಲಸ ಮಾಡುವ ಸಂಕಲ್ಪ ಮಾಡಿದರೆ ಮತ್ತೊಮ್ಮೆ ಬಿಜೆಪಿ ಸರಕಾರ ಬರುವುದು ನಿಶ್ಚಿತ.
> **ಬೊಮ್ಮಾಯಿ** ಮಾಜಿ ಸಿಎಂ

> ಈ ಹಿಂದೆ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಸರಕಾರ ಬಂದಿತ್ತು. ಮುಂದೆಯೂ ಅವರ ನೇತೃತ್ವದಲ್ಲಿಯೇ ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ.
> **ಪ್ರಲ್ಹಾದ ಜೋಶಿ** ಕೇಂದ್ರ ಸಚಿವ

### ತಮಿಳುನಾಡಿನಲ್ಲಿ ಸತತ 5 ದಿನಗಳ ಬಹುಮತದ ಕಸರತ್ತು ಮುಕ್ತಾಯ
### ಟಿವಿಕೆಗೆ ವಿಸಿಕೆ, ಮುಸ್ಲಿಂ ಲೀಗ್ ಬೆಂಬಲ, ಶಾಸಕರ ಸಂಖ್ಯೆ 120ಕ್ಕೇರಿಕೆ

# ಇಂದು ವಿಜಯ ಪ್ರಮಾಣ

**ಚೆನ್ನೈ:** ತಮಿಳುನಾಡಿನಲ್ಲಿ ಸತತ 5 ದಿನಗಳಿಂದ ನಡೆಯುತ್ತಿದ್ದ ಬಹುಮತದಾಟ ಅಂತ್ಯವಾಗಿದೆ. ಟಿವಿಕೆ ನಾಯಕ ಜೋಸೆಫ್ ವಿಜಯ್ ಸತತ ಮೂರು ದಿನ ರಾಜ್ಯಪಾಲ ರಾಜೇಂದ್ರ ಅರ್ಲೇಕರ್‌ರನ್ನು ಭೇಟಿ ಮಾಡಿದ್ದರೂ, 118 ಶಾಸಕರ ಬೆಂಬಲವಿರುವುದನ್ನು ಸಾಬೀತು ಮಾಡಲು ಆಗಿರಲಿಲ್ಲ. ಶುಕ್ರವಾರ ಎಲ್ಲ ಓಕೆ ಆಯಿತು ಎನ್ನುವಾಗ ವಿಸಿಕೆ ಪಕ್ಷ ಬೆಂಬಲವನ್ನು ಹಿಂಪಡೆದಿತ್ತು. ಶನಿವಾರ ವಿಸಿಕೆ ಮತ್ತು ಮುಸ್ಲಿಂ ಲೀಗ್ ಪಕ್ಷಗಳು ಬೇಷರತ್ ಬೆಂಬಲ ವ್ಯಕ್ತಪಡಿಸುವುದರೊಂದಿಗೆ ವಿಜಯ್‌ಗೆ ಒಟ್ಟು 120 ಶಾಸಕರ ಬೆಂಬಲ ಲಭಿಸಿತು.

ಈ ವೇಳೆ ಕೇರಳಕ್ಕೆ ಹೊರಟಿದ್ದ ರಾಜ್ಯಪಾಲ ಅರ್ಲೇಕರ್ ತಮ್ಮ ಪ್ರವಾಸ ರದ್ದುಗೊಳಿಸಿ ಲೋಕಭವನದಲ್ಲೇ ವಿಜಯ್‌ರನ್ನು ಭೇಟಿಯಾಗಿ ಪ್ರಮಾಣವಚನಕ್ಕೆ ಸಮ್ಮತಿ ಸೂಚಿಸಿದರು. ಭಾನುವಾರ ಬೆಳಗ್ಗೆ 10 ಗಂಟೆಗೆ ವಿಜಯ್ ಪ್ರಮಾಣವಚನ ಪಡೆಯುವುದು ಖಚಿತವಾಗಿದೆ. ಒಟ್ಟು ಐದು ದಿನಗಳಲ್ಲಿ 4 ಬಾರಿ ರಾಜ್ಯಪಾಲರನ್ನು ಭೇಟಿಯಾದ ಬಳಿಕ ವಿಜಯ್ ಅಂತೂ ಬಹುಮತ ಖಚಿತಪಡಿಸಿ ನಿಟ್ಟುಸಿರುಬಿಟ್ಟರು. → 8




### ಏನೇನಾಯ್ತು?

- ಶುಕ್ರವಾರ ಬೆಂಬಲ ಹಿಂಪಡೆದಿದ್ದ ವಿಸಿಕೆಯಿಂದ ಶನಿವಾರ ಬೇಷರತ್ ಬೆಂಬಲ ಘೋಷಣೆ
- ಮುಸ್ಲಿಂ ಲೀಗ್‌ನಿಂದಲೂ ಬೆಂಬಲ, ಟಿವಿಕೆ ಬೆಂಬಲಿಗ ಶಾಸಕರ ಸಂಖ್ಯೆ ಒಟ್ಟು 120ಕ್ಕೇರಿಕೆ
- ಬಹುಮತಕ್ಕಿದ್ದ ಅಡ್ಡಿ ನಿವಾರಣೆ, ಭಾನುವಾರ ಜೋಸೆಫ್‌ರಿಂದ ವಿಜಯ್ ಪ್ರಮಾಣ ಸ್ವೀಕಾರ
- ಶನಿವಾರ ಕೇರಳಕ್ಕೆ ಹೊರಟಿದ್ದ ರಾಜ್ಯಪಾಲ ಅರ್ಲೇಕರ್ ಪ್ರವಾಸ ರದ್ದು, ವಿಜಯ್ ಭೇಟಿ

### ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮದಲ್ಲಿ ಭಾಗಿ
### ರವಿಶಂಕರ್ ಗುರೂಜಿ ಜನ್ಮದಿನಕ್ಕೆ ಮೋದಿ ಅತಿಥಿ

# ಮೋದಿ ಇಂದು ಬೆಂಗ್ಳೂರಿಗೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಆರ್ಟ್ ಆಫ್ ಲಿವಿಂಗ್‌ನ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ನಗರದಲ್ಲಿ ಭದ್ರತೆ ಬಿಗಿಗೊಳಿಸಲಾಗಿದ್ದು, ಹಲವು ಪ್ರಮುಖ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಿ ಮಾರ್ಪಾಡು ಮಾಡಲಾಗಿದೆ.

ವಿಶ್ವವಿಖ್ಯಾತ ಆಧ್ಯಾತ್ಮಿಕ ಸಂಸ್ಥೆ ದಿ ಆರ್ಟ್ ಆಫ್ ಲಿವಿಂಗ್‌ಗೆ 45 ವರ್ಷ ಭರ್ತಿಯಾಗಿದೆ. ಈ ಐತಿಹಾಸಿಕ ಸಮಾಗಮವನ್ನು ಪ್ರಧಾನಿ ನರೇಂದ್ರಮೋದಿ ಉದ್ಘಾಟಿಸಲಿದ್ದಾರೆ. ಭಾನುವಾರ ನಡೆಯಲಿರುವ ಈ ಕಾರ್ಯಕ್ರಮವು ಸಂಸ್ಥೆಯ 45ನೇ ವಾರ್ಷಿಕೋತ್ಸವ ಮಾತ್ರವಲ್ಲದೆ, ಅದರ ಸಂಸ್ಥಾಪಕರಾದ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಜನ್ಮದಿನದ ಸಂಭ್ರಮವನ್ನೂ ಒಳಗೊಂಡಿದೆ. ಈ ಸಂಭ್ರಮಾಚರಣೆಯಲ್ಲಿ ವಿಶ್ವದ 182ಕ್ಕೂ ಹೆಚ್ಚು ದೇಶಗಳ ಜನರು ಆನ್‌ಲೈನ್ ಮತ್ತು ನೇರವಾಗಿ ಮೂಲಕ ಪಾಲ್ಗೊಳ್ಳಲಿದ್ದಾರೆ.

ಪ್ರಧಾನಮಂತ್ರಿ ಈ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡುವುದರ ಜೊತೆಗೆ ನೂತನವಾಗಿ ನಿರ್ಮಿಸಲಾದ ಅತ್ಯಾಧುನಿಕ ಧ್ಯಾನ ಮಂದಿರ ಲೋಕಾರ್ಪಣೆಗೊಳಿಸಲಿದ್ದಾರೆ. ಮಾನಸಿಕ ಆರೋಗ್ಯ, ಪ್ರಕೃತಿ ಸಂರಕ್ಷಣೆ, ಗ್ರಾಮೀಣಾಭಿವೃದ್ಧಿ ಮತ್ತು ಸಾಮಾಜಿಕ ಪರಿವರ್ತನೆಯಂತಹ ವರ್ಷ ಪೂರ್ತಿ ನಡೆಯುವ ಯೋಜನೆಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ.

ಶ್ರೀ ರವಿಶಂಕರ್ ಗುರೂಜಿ ಅವರ ನೇತೃತ್ವದಲ್ಲಿ 'ವಿಶ್ವ ಶಾಂತಿಗಾಗಿ ಜಾಗತಿಕ ಧ್ಯಾನ' ಮೇ 13ರಂದು ನಡೆಯಲಿದ್ದು, ಇದು ವಿಶ್ವಾದ್ಯಂತ ನೇರ ಪ್ರಸಾರವಾಗಲಿದೆ. ಲಕ್ಷಾಂತರ ಜನರು ಏಕಕಾಲದಲ್ಲಿ ಧ್ಯಾನದಲ್ಲಿ ತೊಡಗುವ ಮೂಲಕ ಶಾಂತಿಯ ಸಂದೇಶ ಸಾರಲಿದ್ದಾರೆ. ಈ ಕಾರ್ಯಕ್ರಮಕ್ಕೂ ಮೋದಿ ಚಾಲನೆ ನೀಡಲಿದ್ದಾರೆ. → 8

### ಪ್ರಧಾನಿ ಮೋದಿ ಸಮ್ಮುಖದಲ್ಲಿ ಸಿಎಂ ಆಗಿ ಸುವೇಂದು, ಸಚಿವರಾಗಿ ಇತರೆ ಐವರು ಪ್ರಮಾಣ
### ಬಿಜೆಪಿ ಸಂಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿಯ ನೆಲದಲ್ಲಿ ಮೊದಲ ಬಾರಿ ಅರಳಿದ ಕಮಲ

# ಬಂಗಾಳದಲ್ಲಿ ಕಮಲಪರ್ವ

> ಗುರುದೇವ ರವೀಂದ್ರನಾಥ ಟಾಗೋರರ ಜಯಂತಿಯಂದೇ ಬಂಗಾಳದಲ್ಲಿ ಬಿಜೆಪಿ ಅಧಿಕಾರ ಸ್ವೀಕರಿಸಿದೆ. ಇತಿಹಾಸದಲ್ಲಿ ಈ ದಿನ ಎಂದಿಗೂ ನೆನಪಿನಲ್ಲುಳಿಯುತ್ತದೆ. ಬಂಗಾಳದಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ. ಅದಕ್ಕೆ ಸಾಕ್ಷಿಯಾದ ಸಂಭ್ರಮ ನನ್ನದು.
> -**ನರೇಂದ್ರ ಮೋದಿ,** ಪ್ರಧಾನಿ

**ಕೋಲ್ಕತಾ:** ಪ.ಬಂಗಾಳದ ರಾಜಕೀಯ ಇತಿಹಾಸದಲ್ಲಿ ಕಮಲ ಪರ್ವ ಶುರುವಾಗಿದೆ. ಶನಿವಾರ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಬಂಗಾಳದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದ್ದಾರೆ. ಬಿಜೆಪಿಯ ಹುಟ್ಟಿಗೆ ಕಾರಣವಾದ ಡಾ.ಶ್ಯಾಮಪ್ರಸಾದ್ ಮುಖರ್ಜಿ ನೆಲದಲ್ಲಿ ಮೊದಲ ಬಾರಿ ಬಿಜೆಪಿ ಅಧಿಕಾರಕ್ಕೇರಿದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ರಾಜನಾಥ್ ಸಿಂಗ್ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು. ಸುವೇಂದು ಸರಕಾರದಲ್ಲಿ ಇಬ್ಬರು ಉಪಮುಖ್ಯಮಂತ್ರಿಗಳು ಇರುವ ಸಾಧ್ಯತೆಯಿದೆ.

ಕೋಲ್ಕತಾದ ಬ್ರಿಗೇಡ್ ಪಥಸಂಚಲನ ಮೈದಾನದಲ್ಲಿ ನಡೆದ ಅದ್ಧೂರಿ ಕಾರ್ಯಕ್ರಮದಲ್ಲಿ ಸುವೇಂದು ಜೊತೆಗೆ ದಿಲೀಪ್ ಘೋಷ್, ಅಗ್ನಿಮಿತ್ರ ಪೌಲ್, ಅಶೋಕ್ ಕೀರ್ತಾನಿಯಾ, ಕ್ಷುದಿರಾಮ ಟುಡೂ, ನಿಶೀಥ್ ಪ್ರಾಮಾಣಿಕ್ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಆರ್.ಎನ್.ರವಿ ಪ್ರಮಾಣ ವಚನ ಬೋಧಿಸಿದರು. ಇದಕ್ಕೆ ಎನ್‌ಡಿಎ ಆಡಳಿತದ 20 ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾದರು. ಪ್ರಮಾಣ ವಚನಕ್ಕೆ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ, ರವೀಂದ್ರನಾಥ ಟಾಗೋರ್ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಪ್ರಧಾನಿ ಮೋದಿ ಜತೆ ಪ.ಬಂಗಾಳ ನೂತನ ಸಿಎಂ ಸುವೇಂದು ಅಧಿಕಾರಿ.

**ಮುಖರ್ಜಿ ಕನಸು ನನಸು ಮಾಡಿದ ಸುವೇಂದು:** ಮೂಲತಃ ನಂದಿಗ್ರಾಮ ಚಳವಳಿಯ ಮೂಲಕ ಜನನಾಯಕರಾಗಿ ಹೊರಹೊಮ್ಮಿದ ಸುವೇಂದು ಅಧಿಕಾರಿ, ಒಂದು ಕಾಲದಲ್ಲಿ ಮಮತಾ ಬ್ಯಾನರ್ಜಿ ಅವರ ಬಲಗೈ ಬಂಟನಾಗಿದ್ದವರು. ನಂತರ ಬಿಜೆಪಿ ಸೇರಿ ಬಂಗಾಳದಾದ್ಯಂತ ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವಲ್ಲಿ ಯಶಸ್ವಿಯಾದರು. ಇವರ ಸಂಘಟನಾ ಚಾತುರ್ಯವನ್ನು ಅಮಿತ್ ಶಾ ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದರು. 'ಸೋಲಿಲ್ಲದ ಸರದಾರ' ಎನಿಸಿಕೊಂಡಿದ್ದ ಮಮತಾ ಬ್ಯಾನರ್ಜಿ ಅವರಿಗೆ ಅವರದ್ದೇ ನೆಲದಲ್ಲಿ ಸೋಲುಣಿಸಿದ ಸುವೇಂದು ಅಧಿಕಾರಿ, ಈಗ ಸೋನಾರ್ ಬಾಂಗ್ಲಾ' ನಿರ್ಮಾಣದ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಇತ್ತೀಚೆಗಷ್ಟೇ ಮುಕ್ತಾಯಗೊಂಡ ಬಂಗಾಳ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳನ್ನ ಗಳಿಸಿ ಅಧಿಕಾರದ ಗದ್ದುಗೆ ಹಿಡಿದಿದೆ. ಇನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) 80 ಸ್ಥಾನಗಳನ್ನು ಗೆದ್ದಿದೆ.

- ಗುರುದೇವ ರವೀಂದ್ರನಾಥ ಟಾಗೋರ್ ಜಯಂತಿಯಂದೇ ಅಧಿಕಾರಕ್ಕೇರಿದ ಬಿಜೆಪಿ
- ಕಮ್ಯೂನಿಸ್ಟರ ನಾಡಿನಲ್ಲಿ ಕೇಸರಿ ಬಾವುಟ ಹಾರಾಟ, ಮಮತಾ ಟಿಎಂಸಿ ಅಧಿಪತ್ಯ ಅಂತ್ಯ
- ಬ್ರಿಗೇಡ್ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಮಿತ್ ಶಾ, ರಾಜನಾಥ್ ಉಪಸ್ಥಿತಿ
- ಪ.ಬಂಗಾಳಕ್ಕೆ ಇಬ್ಬರು ಉಪಮುಖ್ಯಮಂತ್ರಿಗಳ ಆಯ್ಕೆ ನಿರೀಕ್ಷೆ, ಇನ್ನೂ ಘೋಷಣೆಯಾಗಿಲ್ಲ

### 98ರ ಮಖನ್‌ಲಾಲ್ ಪಾದ ಮುಟ್ಟಿ ನಮಸ್ಕರಿಸಿದ ಮೋದಿ

ಬಿಜೆಪಿ ಸಂಸ್ಥಾಪಕ ಡಾ.ಶ್ಯಾಮಪ್ರಸಾದ್ ಮುಖರ್ಜಿಯೊಂದಿಗೆ 1952ರಲ್ಲಿ ಕಾಶ್ಮೀರದ ಶ್ರೀನಗರದಲ್ಲಿ ತ್ರಿವರ್ಣ ಧ್ವಜ ಹಾರಿಸಲು ಹೋಗಿ ಬಂಧನಕ್ಕೊಳಗಾಗಿದ್ದ ಮಖನ್‌ಲಾಲ್ ಸರ್ಕಾರ್‌ಗೆ ಈಗ 98 ವರ್ಷ. ಶನಿವಾರ ಸುವೇಂದು ಪ್ರಮಾಣವಚನದ ವೇಳೆ ಮೋದಿ ಮಖನ್‌ಲಾಲ್ ಪಾದಮುಟ್ಟಿ ನಮಸ್ಕರಿಸಿ ಅವರ ಆಶೀರ್ವಾದ ಪಡೆದರು.

## ಐಎಫ್‌ಎಸ್: ಅಥಣಿಯ ಬಸವರಾಜ ದೇಶಕ್ಕೆ ಅಗ್ರ

**ಅಥಣಿ:** ಅತ್ಯಂತ ಕಠಿಣ ಪರೀಕ್ಷೆ ಯುಪಿಎಸ್‌ಸಿಯ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ಬೆಳಗಾವಿ ಜಿಲ್ಲೆಯ ಯುವಕ ಬಸವರಾಜ ಧರೆಪ್ಪ ಇಡೀ ದೇಶಕ್ಕೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. 1.5 ಎಕರೆ ಕೃಷಿ ಭೂಮಿ ಹೊಂದಿರುವ ಅಥಣಿ ತಾಲೂಕಿನ ಸವದಿ ಗ್ರಾಮದ ಧರೆಪ್ಪ ಕೆಂಪವಾಡ ಅವರ ಪುತ್ರನ ಸಾಧನೆಯಿಂದ ಇಡೀ ಗ್ರಾಮಸ್ಥರು ಸಂತಸಪಟ್ಟಿದ್ದಾರೆ. ಬಸವರಾಜ್ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಾದ ಸವದಿ ಗ್ರಾಮದಲ್ಲಿಯೇ ಪೂರೈಸಿದರು. 6ನೇ ತರಗತಿಯಿಂದ 10ನೇ ತರಗತಿಯವರೆಗೆ ಅಳಗವಾಡಿಯ ಮೊರಾರ್ಜಿ ವಸತಿ ಶಾಲೆಯಲ್ಲಿ ಶಿಕ್ಷಣವನ್ನು ಪಡೆದಿದ್ದಾರೆ.

## ನಾಳೆಯಿಂದ ಹೊಸ ಅಬಕಾರಿ ನೀತಿ: ಮತ್ತೆ ಮದ್ಯ ಬೆಲೆ ಹೆಚ್ಚಳ

**ಬೆಂಗಳೂರು:** ರಾಜ್ಯ ಸರಕಾರವು ಮದ್ಯದ ಮೇಲಿನ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದಿದೆ. ಆಲ್ಕೋಹಾಲ್ ಇನ್ ಬೆವರೇಜ್ (ಎಐಬಿ) ಆಧಾರಿತ ಹೊಸ ಅಬಕಾರಿ ನೀತಿ ಜಾರಿಗೆ ತರಲು ಅಂತಿಮ ಅಧಿಸೂಚನೆ ಹೊರಡಿಸಿದೆ. ಈ ಹೊಸ ನೀತಿ ಮೇ 11ರಿಂದ ರಾಜ್ಯಾದ್ಯಂತ ಜಾರಿಗೆ ಬರಲಿದೆ. ಹೊಸ ನೀತಿಯ ಪ್ರಕಾರ ಬ್ರಾಂಡಿ, ವಿಸ್ಕಿ, ರಮ್, ಜಿನ್, ಬಿಯರ್, ವೈನ್ ಸೇರಿದಂತೆ ವಿವಿಧ ಮದ್ಯಗಳಲ್ಲಿ ಇರುವ ಆಲ್ಕೋಹಾಲ್ ಪ್ರಮಾಣ ಆಧರಿಸಿ ತೆರಿಗೆ ವಿಧಿಸಲಾಗುತ್ತದೆ. ಪರಿಣಾಮ ಮದ್ಯದ ಬೆಲೆ ಶೇ.20 ಹೆಚ್ಚಳವಾಗುವ ನಿರೀಕ್ಷೆಯಿದೆ.

## ಸಮಾಚಾರ ಸಣ್ಣದಲ್ಲ

### ಅನಧಿಕೃತ ಹೋಂ-ಸ್ಟೇಗಳ ವಿರುದ್ಧ ಕಾನೂನು ಕ್ರಮ

**ಚಿಕ್ಕಬಳ್ಳಾಪುರ :** ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಅಧಿಕೃತ ಅನುಮೋದನೆ ಪಡೆಯದೇ ಇರುವ ಹೋಂ-ಸ್ಟೇಗಳು ಹಾಗೂ ರೆಸಾರ್ಟ್ ಗಳು ಅನಧಿಕೃತ ಚಟುವಟಿಕೆಗಳನ್ನು ತಕ್ಷಣವೇ ಸ್ಥಗಿತಗೊಳಿಸಬೇಕು. ಜಿಲ್ಲಾ ವ್ಯಾಪ್ತಿಯಲ್ಲಿ ಇರುವ ಸದರಿ ಹೋಂ-ಸ್ಟೇ ಹಾಗೂ ರೆಸಾರ್ಟ್ ಗಳನ್ನು ಕಾನೂನು ಬದ್ಧವಾಗಿ ಮುಂದುವರಿಸಲು ಆಸಕ್ತಿ ಇದ್ದಲ್ಲಿ ಇದರ ಮಾಲೀಕರು, ಅಗತ್ಯ ದಾಖಲೆಗಳೊಂದಿಗೆ ಕೂಡಲೇ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬೇಕು. ಆಮೂಲಕ ಕೂಡಲೇ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಅಂತಹ ಮಾಲೀಕರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಮಾಧ್ಯಮದ ಮೂಲಕ ತಿಳಿಸಿದ್ದಾರೆ.

### ದ್ವಿಚಕ್ರ ವಾಹನ ಕಳ್ಳತನ: ಆರೋಪಿ ಬಂಧನ

**ಶಿಡ್ಲಘಟ್ಟ :** ನಗರದ ಸಾರ್ವಜನಿಕ ಆಸ್ಪತ್ರೆ ಮುಂಭಾಗ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಶಿಡ್ಲಘಟ್ಟ ನಗರ ಪೊಲೀಸರು ಬಂಧಿಸಿ, ಕಳುವಾಗಿದ್ದ ಐದು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಸಾರ್ವಜನಿಕ ಆಸ್ಪತ್ರೆ ಬಳಿ ತಮ್ಮ ದ್ವಿಚಕ್ರ ವಾಹನ ಕಳುವಾಗಿರುವ ಕುರಿತು ಇದಾಯತ್ ಎಂಬವರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ಆರಂಭಿಸಿದರು. ಸಿಪಿಐ ಆನಂದ್ ಕುಮಾರ್ ಮಾರ್ಗದರ್ಶನದಲ್ಲಿ ಪಿಎಸ್ಐ ವೇಣುಗೋಪಾಲ್ ಹಾಗೂ ಸಿಬ್ಬಂದಿ ವಿಶೇಷ ಕಾರ್ಯಾಚರಣೆ ನಡೆಸಿದರು. ತನಿಖೆ ವೇಳೆ ಶ್ರೀನಿವಾಸಪುರ ಮೂಲದ ಸೈಯದ್ ಯಾಸಿನ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆತ ನಗರದ ವಿವಿಧ ಭಾಗಗಳಲ್ಲಿ ದ್ವಿಚಕ್ರ ವಾಹನ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದಾನೆ ಎಂದು ತಿಳಿದುಬಂದಿದೆ. ಆರೋಪಿಯಿಂದ ಕಳ್ಳತನವಾಗಿದ್ದ ಐದು ದ್ವಿಚಕ್ರ ವಾಹನಗಳನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿದ್ದಾರೆ. ಬಂಧಿತ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಪ್ರಕರಣ ಸಂಬಂಧ ಇನ್ನಷ್ಟು ತನಿಖೆ ಮುಂದುವರಿದಿದೆ.

### ಶ್ರೀಗಳ ಆಶೀರ್ವಾದ ಪಡೆದ ಶಾಸಕ ಉಮೇಶ್

**ಅರಸೀಕೆರೆ:** ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ನೂತನ ಶಾಸಕ ಉಮೇಶ್ ಮೇಟಿ ಸುಕ್ಷೇತ್ರ ಹಾರನಹಳ್ಳಿ ಕೋಡಿಮಠಕ್ಕೆ ಭೇಟಿ ನೀಡಿ ಡಾ, ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಜಿಗಳ ಆಶೀರ್ವಾದ ಪಡೆದರು. ಗುರುವಾರ ರಾತ್ರಿ ಮಠಕ್ಕೆ ಆಗಮಿಸಿದ ಉಮೇಶ್ ಮೇಟಿ ಶಿವಲಿಂಗಜ್ಜಯ ಹಾಗೂ ನೀಲಮ್ಮಜ್ಜಯ್ಯ ಅವರ ಗದ್ದುಗೆಗಳಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಪೀಠಾಧ್ಯಕ್ಷರಾದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ, ಮಹಾಸ್ವಾಮಿಜಿಗಳಿಗೆ ರಜತಾ ಕಿರೀಟ ಧಾರಣೆ ಮಾಡಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಚಿಕ್ಕಬಳ್ಳಾಪುರದ ಕನ್ನಡ ಭವನದಲ್ಲಿ ವಸಂತಚಿಟ್ಟೆಗಳು ಬೇಸಿಗೆ ಶಿಬಿರದ ಸಮಾರೋಪ | ಜಾನಪದ ಅಕಾಡೆಮಿ ಅಧ್ಯಕ್ಷರ ಹೇಳಿಕೆ

# ಶಿಕ್ಷಣದ ಜತೆಗೆ ಮಕ್ಕಳಿಗೆ ಸಂಸ್ಕಾರ ಅವಶ್ಯ

ವಿಶ್ವವಾಣಿ ಸುದ್ದಿಮನೆ ಚಿಕ್ಕಬಳ್ಳಾಪುರ

ಬುದ್ದಿಕಲಿಸಲು ಹೆತ್ತವರೇ ಮಕ್ಕಳಿಗೆ ಮೆಣಸಿನಕಾಯಿ ಘಾಟು ಹಾಕುತ್ತಿದ್ದರೂ ಆ ಕಾಲದಲ್ಲಿ ನಾವು ಸಾಯಲಿಲ್ಲ, ಈ ಕಾಲದಲ್ಲಿ ಹೊಡೆಯುವುದಿರಲಿ ಬುದ್ದಿ ಮಾತು ಹೇಳಿದರೂ ಆತ್ಮಹತ್ಯೆಗೆ ಶರಣಾಗುವ ಕಾಲಬಂದಿದೆ. ಇಂತಹ ಅಪಸವ್ಯಗಳಿಗೆ ಯಾರು ಕಾರಣ ಎಂಬದನ್ನು ಗಂಭೀರವಾಗಿ ಚಿಂತಿಸಬೇಕಿದೆ ಎಂದು ಖ್ಯಾತ ಚಿತ್ರಸಾಹಿತಿ ಗೀತರಚನೆಕಾರ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದರು.

ನಗರದ ಕನ್ನಡ ಭವನದಲ್ಲಿ ಸಕಲರಂಗ ಹೆಜ್ಜೆ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶನಿವಾರ ನಡೆದ ವಸಂತಚಿಟ್ಟೆಗಳು-26 ಒಂದು ತಿಂಗಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇದು ಮೊಬೈಲ್ ಕಾಲ ಮೋಹದ ಕಾಲ ನೆಲಮೂಲ ಭಾವನೆಗಳಿಗೆ ಕೊಳ್ಳಿಯಿಟ್ಟ ಕಾಲ ಇದಾಗಿದೆ.ಕೆರೆ-ಕುಂಟೆ ಬಾವಿ, ನದಿ, ಹಳ್ಳ, ಕಾಡು ಕಣಿವೆ ತೋಪು ಅರಣ್ಯ,ಬೆಟ್ಟ ಗುಡ್ಡ ಮಣ್ಣು ಮಳೆಯ ವಾಸನೆಯಂತಹ ಸಹಜ ಗುಣಗಳನ್ನು ಮಕ್ಕಳಿಗೆ ಪರಿಚಯ ಮಾಡಬೇಕೆಂಬ ಕನಿಷ್ಟ ಪ್ರಜ್ಞೆಯನ್ನು ನಾವು ಕಳೆದುಕೊಂಡಿದ್ದೇವೆ. ಪೋಷಕರಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ಶಿಕ್ಷಣ ಬೇಕು ಇದರೊಟ್ಟೊಗೆ ಸಂಸ್ಕಾರವೂ ಬೇಕು ಎಂಬುದನ್ನು ಮರೆಯಬೇಡಿ ಎಂದರು.

ನಗರದ ಕನ್ನಡ ಭವನದಲ್ಲಿ ವಸಂತಚಿಟ್ಟೆಗಳು ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಅವರು ಮಾತನಾಡಿದರು.

ಪೋಷಕರ ಮನದಾಸೆಗಳನ್ನು ಮಕ್ಕಳ ಮೇಲೆ ಹೇರುತ್ತಾ ಅವರನ್ನು ಶೋಕೇಸಿನ ಗೊಂಬೆಗಳಾಗಿಸಬೇಡಿ. ಒಳ್ಳೆಯದನ್ನು ಬಿತ್ತಿದರೆ ಒಳ್ಳೆಯದೇ ಬರುವಂತೆ ಸತ್ಯವನ್ನು ಬಿತ್ತೋಣ. ಸಮಾನತೆ ಸಾರುವ ಆರೋಗ್ಯವಂತ ಸಮಾಜ ಕಟ್ಟೋಣ ಎಂದರು.

ರಂಗ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವಿರುವ ಹಾಗೆ ನಾಳಿನ ಸಮಾಜವನ್ನು ನೋಡಲು ಆರೋಗ್ಯವಂತೆ ಮನಸ್ಸು ಮತ್ತು ಕಣ್ಣುಗಳನ್ನು ಕೊಡಲಿದೆ.ನಮ್ಮ ಸುತ್ತಮುತ್ತಲ ಪರಿಸರವನ್ನು ಆರೋಗ್ಯ ಪೂರ್ಣವಾಗಿ ಇಡಲು ಸಹಾಯ ಮಾಡಲಿದೆ.ಈ ದಿಸೆಯಲ್ಲಿ ಪರಂಪರೆ ಮತ್ತು ಸಂಸ್ಕೃತಿಯನ್ನು ಕಾಪಾಡುವ ಕೆಲಸ ವಸಂತ ಚಿಟ್ಟೆಗಳು 2026ಮಾಡುತ್ತಿರುವುದು ಸಂತೋಷ ತಂದಿದೆ ಎಂದರು.

ಖ್ಯಾತ ರಂಗಕರ್ಮಿ ರಂಗಾಯಣದ ಮಾಜಿ ನಿರ್ದೇಶಕರು ಸಿ. ಬಸವಲಿಂಗಯ್ಯ ಮಾತನಾಡಿ ಚಿಕ್ಕಬಳ್ಳಾಪುರದಂತಹ ಗಡಿ ಜಿಲ್ಲೆಯಲ್ಲಿ ದಿಲೀಪ್ ಅಂತಹ ಉದಯೋನ್ಮುಖ ರಂಗಕರ್ಮಿ ವಸಂತ ಚಿಟ್ಟೆಗಳು 2026 ಮೂಲಕ ಮಕ್ಕಳಿಗೆ ರಂಗಶಿಕ್ಷಣದ ಊಟ ಉಣಬಡಿಸುತ್ತಿರುವುದು ನಿಜಕ್ಕೂ ಸಂತೋಷ ತಂದಿದೆ. ಒಂದು ತಿಂಗಳ ಕಾಲ ವಸಂತ ಚಿಟ್ಟೆಗಳು-26 ಎಂಬ ಬೇಸಿಗೆ ಶಿಬಿರದ ಹೆಸರಿನಲ್ಲಿ ಮಕ್ಕಳಿಗೆ ಅಭಿನಯ, ಭಾಷಣಕಲೆ, ಚಿತ್ರಕಲೆ,ಹಾಡು ಕುಣಿತ, ನಾಟಕ ಹೀಗೆ ಹತ್ತು ಹಲವು ಚಟುವಟಿಕೆಗಳನ್ನು ಏಕಾಗ್ರತೆಯಿಂದ ಕಲಿಸಿರುವ ಇವರ ಸಾಹಸ ಮೆಚ್ಚಲೇಬೇಕು ಎಂದರು.

> ಪೋಷಕರ ಮನದಾಸೆಗಳನ್ನು ಮಕ್ಕಳ ಮೇಲೆ ಹೇರುತ್ತಾ ಅವರನ್ನು ಶೋಕೇಸಿನ ಗೊಂಬೆಗಳಾಗಿಸಬೇಡಿ.ಒಳ್ಳೆಯದನ್ನು ಬಿತ್ತಿದರೆ ಒಳ್ಳೆಯದೇ ಬರುವಂತೆ ಸತ್ಯವನ್ನು ಬಿತ್ತೋಣ. ಸಮಾನತೆ ಸಾರುವ ಆರೋಗ್ಯವಂತ ಸಮಾಜ ಕಟ್ಟೋಣ.
> -ಗೊಲ್ಲಹಳ್ಳಿ ಶಿವಪ್ರಸಾದ್, ಜಾನಪದ ಅಕಾಡೆಮಿ ಅಧ್ಯಕ್ಷ

ರಂಗಭೂಮಿ ಮೂಲತಃ ಸಮಷ್ಟಿ ಕಲೆ. ಲಲಿತಕಲೆಗಳನ್ನು ಒಳಗೊಂಡಿರುವ ರಂಗಭೂಮಿ ಮಕ್ಕಳನ್ನು ಸುಲಭವಾಗಿ ತಲುಪುತ್ತದೆ.ವಿಭಿನ್ನ ಚಟುವಟುಕೆಗಳ ಮೂಲಕ ಮಕ್ಕಳನ್ನು ಕ್ರಿಯಾಶೀಲರನ್ನಾಗಿಸುವುದಷ್ಟೇ ಅಲ್ಲ, ಅವರ ಮಾನಸಿಕ ಬೆಲವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿ ಸೃಜನಶೀಲತೆಯನ್ನು ಹೆಚ್ಚಿಸುತ್ತದೆ.ಇಂತಹ ಕೆಲಸವನ್ನು ದಿಲೀಪ್ ಮತ್ತವರ ತಂಡ ಮಾಡಿದೆ. ಇವು ಇನ್ನೂ ಹೆಚ್ಚೆಚ್ಚು ನಡೆಯಲಿ, ಗಡಿ ಜಿಲ್ಲೆಯಲ್ಲಿ ಕನ್ನಡ ಕಹಳೆ ಮೊಳಗಲಿ ಎಂದರು.

ಆಧುನಿಕತೆಯ ದಾಳಿಗೆ ಸಿಕ್ಕಿ ದೇಸೀ ಶಿಕ್ಷಣ ಮರೆಯಾಗುತ್ತಿರುವ ಈ ಕಾಲದಲ್ಲಿ ಗಡಿ ಜಿಲ್ಲೆಯಲ್ಲಿ ಮಕ್ಕಳನ್ನು ಕಟ್ಟಿಕೊಂಡು ನಾಟಕೋತ್ಸವ ಮಾಡುತ್ತಿರುವುದು ಸಾಹಸದ ಕೆಲಸವಾಗಿದೆ. ಏಕೆಂದರೆ ತಾಂತ್ರಿಕ ನೆಲೆಯಿಂದಾಗಿ ಕನ್ನಡ ರಂಗಭೂಮಿ ಬಿಕ್ಕಟ್ಟಿನಲ್ಲಿದೆ. ರಂಗಶಾಲೆಗಿಂತ ನಟರನ್ನು ತರಬೇತುಗೊಳಿಸುವ ಸಂಸ್ಥೆಗಳು ಬೇಕು ಎನ್ನುವುದು ಬಿ.ವಿ.ಕಾರಂತರ ಮಾತಾಗಿತ್ತು.ನಾಟಕವೆಂದರೆ ಶಾಸ್ತ್ರ. ಅಲ್ಲಿಕೆಲವರಿಗಷ್ಟೇ ಅವಕಾಶವಿರುತ್ತದೆ. ಆದರೆ ರಂಗಭೂಮಿಗೆ ಯಾರು ಬೇಕಾದರೂ ಬರಬಹುದು.ಈ ನಿಟ್ಟಿನಲ್ಲಿ ಸಕಲರಂಗಹೆಜ್ಜೆ ಟ್ರಸ್ಟ್ ಒಳ್ಳೆಯ ಕೆಲಸ ಮಾಡುತ್ತಿದೆ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಕುಮಾರ್ಮಾತನಾಡಿದರು. ಕಾರ್ಯಕ್ರಮದಲ್ಲಿ ಮಕ್ಕಳಿಂದ ಮೂಡಿಬಂದ ಕಂಸಾಳೆ ಮಾರಿ ಕುಣಿತ, ಮತ್ತು ಪಂಜರಶಾಲೆ,ಕಲ್ಯಾಣದ ಕೂಗು, ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ನಾಟಕಗಳು ಪ್ರೇಕ್ಷಕರ ಮನಸೂರೆಗೊಂಡವು.

ವೇದಿಕೆಯಲ್ಲಿ ರಂಗಕರ್ಮಿ ಸಿ.ಬಸವಲಿಂಗಯ್ಯ , ಸಾಹಿತಿ ಪಾತಮುತ್ತುಕದಹಳ್ಳಿ ಚಲಪತಿಗೌಡ, ಶಿಕ್ಷಕ ಸತೀಶ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಡಿ.ಎಂ. ರವಿಕುಮಾರ್,ಗಾಯಕ ಕುಮಾರ್ಚಿಕ್ಕಬಳ್ಳಾಪುರ ಇದ್ದರು. ಸಕಲರಂಗಹೆಜ್ಜೆ ಟ್ರಸ್ಟ್ ನ ದಿಲೀಪ್ ಕುಮಾರ್ಇತರರು ಇದ್ದರು.

## ವಜ್ರ ವಿಸ್ತಾರ ಸಾರಿಗೆ ಚನ್ನಪಟ್ಟಣದವರೆಗೆ ವಿಸ್ತರಣೆ

**ಚನ್ನಪಟ್ಟಣ:** ಕೆಂಪೇಗೌಡ ಬಸ್ ನಿಲ್ದಾಣ ದಿಂದ ರಾಮನಗರಕ್ಕೆ ಈಗಾಗಲೇ ಸಂಚರಿಸುತ್ತಿರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಜ್ರ ವಿಸ್ತಾರ ಹವಾನಿಯಂತ್ರಿತ ಸಾರಿಗೆಗಳನ್ನು ಸಾರ್ವ ಜನಿಕರ ಬೇಡಿಕೆಗೆ ಅನುಗುಣವಾಗಿ ಚನ್ನಪಟ್ಟಣದವರೆಗೆ ವಿಸ್ತರಿಸಲಾಗಿದೆ ಎಂದು ಶಾಸಕ ಸಿ.ಪಿ. ಯೋಗೇಶ್ವರ್ತಿಳಿಸಿದರು.

ಚನ್ನಪಟ್ಟಣ ಬಸ್ ನಿಲ್ದಾಣದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವತಿಯಿಂದ ಕೆಂಪೇಗೌಡ ಬಸ್ ನಿಲ್ದಾಣ -ರಾಮನಗರಕ್ಕೆ ಸಂಚರಿಸುತ್ತಿದ್ದ ವಜ್ರ ವಿಸ್ತಾರ ಹವಾನಿಯಂತ್ರಿತ ಸಾರಿಗೆ ಸೇವೆಯನ್ನು ಚನ್ನಪಟ್ಟಣದವರೆಗೆ ವಿಸ್ತರಿ ಸಿದ ಮಾರ್ಗಗಳನ್ನು ಉದ್ಘಾಟಿಸಿ ಮಾತನಾಡಿದರು. ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಹಾಗೂ ಹೊರವಲಯದ ಸಾರ್ವ ಜನಿಕ ಪ್ರಯಾಣಿಕರಿಗೆ ಉತ್ತಮ ಗುಣಮ ಟ್ಟದ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿದೆ. ಈ ಗುಣಮಟ್ಟವನ್ನು ಮತ್ತಷ್ಟು ಉತ್ಕೃಷ್ಟಗೊಳಿಸುವ ಸಲುವಾಗಿ ನಿರಂತರ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ 50 ಘಟಕಗಳಿಂದ ವಿವಿಧ ಮಾದರಿಯ ಬಸ್ಸುಗಳಲ್ಲಿ ಪ್ರತಿದಿನ 6,275 ಅನುಸೂಚಿಗಳಿಂದ 65,952 ಸುತ್ತುವಳಿ ಗಳನ್ನು 13.06 ಲಕ್ಷ ಕಿ.ಮೀ ಗಳಲ್ಲಿ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದ್ದು, ಸರಾಸರಿ 45 ಲಕ್ಷ ಪ್ರಯಾಣಿಕರು ಸಂಸ್ಥೆಯ ಸಾರಿಗೆ ಸೌಲಭ್ಯವನ್ನು ಪಡೆದು ಕೊಳ್ಳುತ್ತಿದ್ದಾರೆ. ಈ ಅನುಸೂಚಿಗಳಲ್ಲಿ 1,757 ಎಲೆಕ್ಟ್ರಿಕ್ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದರು.

ಚನ್ನಪಟ್ಟಣದಲ್ಲಿ ವಜ್ರ ವಿಸ್ತಾರ ಹವಾನಿಯಂತ್ರಿತ ಸಾರಿಗೆ ಸೇವೆಗೆ ಯೋಗೇಶ್ವರ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್, ಚನ್ನಪಟ್ಟಣ ನಗರಸಭೆ ಅಧ್ಯಕ್ಷ ನಾಗೇಶ್, ಚನ್ನಪಟ್ಟಣ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ರಂಗನಾಥ್, ಸಾರಿಗೆ ಅಧಿಕಾರಿ ಪುರುಷೋತ್ತಮ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ರಸ್ತೆ ಮೇಲೆ ಹರಿಯುತ್ತಿದೆ ಚರಂಡಿ ನೀರು

**ಶಿಡ್ಲಘಟ್ಟ:** ತಾಲೂಕಿನ ದಿಬ್ಬೂರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಿಬ್ಬೂರಹಳ್ಳಿ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ತೀವ್ರವಾಗಿದ್ದು, ಸಾರ್ವಜನಿಕರು ನಿತ್ಯ ಸಂಕಷ್ಟ ಅನುಭವಿಸುತ್ತಿದ್ದಾರೆ. ವಿಶೇಷವಾಗಿ ಬಾಗೇಪಲ್ಲಿ-ಚಿಂತಾಮಣಿ ಮುಖ್ಯ ರಸ್ತೆಯ ಮೇಲೆಯೇ ಚರಂಡಿ ನೀರು ಹರಿಯುತ್ತಿರುವುದು ಗ್ರಾಮ ಪಂಚಾಯಿತಿಯ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಗ್ರಾಮದ ಹಲವೆಡೆ ಚರಂಡಿಗಳು ತುಂಬಿ ಬ್ಲಾಕ್ ಆಗಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎನ್ನಲಾಗಿದೆ. ಕೆಲವರು ಚರಂಡಿಗಳನ್ನು ಮುಚ್ಚಿ ಅಕ್ರಮವಾಗಿ ಅಂಗಡಿಗಳನ್ನು ನಿರ್ಮಿಸಿರುವ ಪರಿಣಾಮ ನೀರು ಸರಿಯಾಗಿ ಹರಿಯದೇ ರಸ್ತೆಯ ಮೇಲೆಯೇ ಹರಿಯುತ್ತಿದೆ. ಇದರಿಂದ ವಾಹನ ಸವಾರರು ಹಾಗೂ ಪಾದಚಾರಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಮಳೆ ಬಂದಾಗ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತಿದ್ದು, ಚರಂಡಿ ನೀರು ಮನೆಗಳೊಳಗೆ ನುಗ್ಗುತ್ತಿದೆ. ಸುಮಾರು 30 ರಿಂದ 40 ಮನೆಗಳ ನಿವಾಸಿಗಳು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ದುರ್ವಾಸನೆ, ಸೊಳ್ಳೆಗಳ ಕಾಟ ಹಾಗೂ ಅಸ್ವಚ್ಛ ವಾತಾವರಣದಿಂದ ಸ್ಥಳೀಯರು ಬೇಸತ್ತಿದ್ದಾರೆ.

ಮೂಲಭೂತ ಸೌಕರ್ಯಗಳ ಕೊರತೆಯಿಂದ ನರಳುತ್ತಿರುವ ದಿಬ್ಬೂರಹಳ್ಳಿ ಗ್ರಾಮ.

ಈ ಕುರಿತು ಗ್ರಾಮ ಪಂಚಾಯಿತಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ''ಮತ ಕೇಳುವಾಗ ಮಾತ್ರ ಜನಪ್ರತಿನಿಧಿಗಳು ಬರುತ್ತಾರೆ. ಸಮಸ್ಯೆ ಹೇಳಿದರೆ ಸಾಬೂಬು ಹೇಳಿ ಕಾಲಹರಣ ಮಾಡುತ್ತಾರೆ'' ಎಂದು ಸ್ಥಳೀಯರು ಅಸಮಾಧಾನ ಹೊರಹಾಕಿದ್ದಾರೆ. ತಕ್ಷಣ ಚರಂಡಿ ಸ್ವಚ್ಛತೆ ನಡೆಸಿ, ಅಕ್ರಮ ನಿರ್ಮಾಣ ತೆರವುಗೊಳಿಸಿ ಸೂಕ್ತ ನೀರು ಹರಿವು ವ್ಯವಸ್ಥೆ ಕಲ್ಪಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

## ಸಾಲ ಸೌಲಭ್ಯ ಹಣ ಬಿಡುಗಡೆಗೆ ವಿಳಂಬ ಸಹಿಸಲ್ಲ: ಎಡಿಸಿ

**ಚಿಕ್ಕಬಳ್ಳಾಪುರ :** ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿವಿಧ ಯೋಜನೆಗಳಡಿ ಬ್ಯಾಂಕ್ಗಳ ಮೂಲಕ ಅನುಷ್ಠಾನವಾಗಲಿರುವ ಕೆಲವು ಸಾಲ ಸೌಲಭ್ಯಗಳ ಹಣ ಬಿಡುಗಡೆ ಪ್ರಕ್ರಿಯೆಯಲ್ಲಿ ಬಹಳ ವಿಳಂಬ ಮತ್ತು ನಿರ್ಲಕ್ಷ್ಯ ಧೋರಣೆ ತೋರಿರುವುದನ್ನು ಸಹಿಸುವುದಿಲ್ಲ ಎಂದು ಅಪರ ಜಿಲ್ಲಾಧಿಕಾರಿ ಡಾ. ಎನ್ ಭಾಸ್ಕರ್ಅವರು ಬ್ಯಾಂಕ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ನಗರ ಹೊರವಲಯ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರ ನಡೆದ ನಗರ ಪರದೇಶಗಳಲ್ಲಿನ ಬೀದಿ ಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯ ಕುರಿತು ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು. ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ 'ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ್‌ನಿಧಿ ಯೋಜನೆ'ಯಡಿ ವಿಶೇಷ ಕಿರು ಸಾಲ ಸೌಲಭ್ಯ ನೀಡುವ ಮಹತ್ವಾಕಾಂಕ್ಷಿ ಯೋಜನೆಯಡಿ ಈವರೆಗೆ ಜಿಲ್ಲೆಯಲ್ಲಿ ಒಟ್ಟು 4,973 ಅರ್ಜಿಗಳನ್ನು ಮಂಜೂರಾತಿ ನೀಡಿದ್ದು ಈ ಪೈಕಿ 4762 ಫಲಾನುಭವಿಗಳಿಗೆ ಬ್ಯಾಂಕುಗಳಿಂದ ಹಣ ಬಿಡುಗಡೆಯಾಗಿದೆ ಎಂದರು.

ನಗರ ಹೊರವಲಯ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯ ಕುರಿತು ಪ್ರಗತಿ ಪರಿಶೀಲನೆ ನಡೆಸಿ ಎಡಿಸಿ ಡಾ. ಎನ್ ಭಾಸ್ಕರ್ ಅವರು ಮಾತನಾಡಿದರು.

ಬಾಕಿ 211 ಅರ್ಜಿಗಳಿಗೆ ಬ್ಯಾಂಕ್ ಗಳಲ್ಲಿ ಎಲ್ಲಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಹಣ ಬಿಡುಗಡೆಯನ್ನು ಮಾತ್ರ ಬಾಕಿ ಇಟ್ಟಿರುವುದು ಸರಿಯಲ್ಲ. ಈ ಧೋರಣೆ ಜಿಲ್ಲೆಯ ವಿವಿಧ ಬ್ಯಾಂಕ್ ಗಳ ವ್ಯವಸ್ಥಾಪಕರ ನಿರ್ಲಕ್ಷ್ಯ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಸರಕಾರದ ಯಾವುದೇ ಯೋಜನೆಗಳಡಿ ಇಲಾಖೆಗಳಿಂದ ಮಂಜೂರಾದ ಸಾಲ ಸೌಲಭ್ಯಗಳನ್ನು ಕಾಲಮಿತಿಯೊಳಗೆ ಹಣ ಬಿಡುಗಡೆ ಮಾಡುವುದು ತಮ್ಮೆಲ್ಲರ ಆದ್ಯ ಕರ್ತವ್ಯ. ಯಾವುದೇ ಅರ್ಜಿದಾರರನ್ನು ಅನಗತ್ಯವಾಗಿ ಅಲೆದಾಡಿಸಬೇಡಿ, ಮುಂದಿನ ದಿನಗಳಲ್ಲಿ ಇಂತಹ ನಿರ್ಲಕ್ಷ್ಯಕ್ಕೆ ಆಸ್ಪದ ನೀಡಬಾರದು ಎಂದು ಖಡಕ್ ಎಚ್ಚರಿಕೆಯನ್ನು ಅಪರ ಜಿಲ್ಲಾಧಿಕಾರಿಗಳು ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅತಿಕ್ ಪಾಷ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಆರ್. ವೆಂಕಟೇಶರೆಡ್ಡಿ, ಕೌಶಲ್ಯಾಭಿವೃದ್ಧಿ ಅಧಿಕಾರಿ ಎಂ.ಪ್ರಸಾದ್, ಅಭಿಯಾನ ವ್ಯವಸ್ಥಾಪಕ ವೆಂಕಟಾಚಲಪತಿ ಸೇರಿದಂತೆ ಜಿಲ್ಲೆಯ ವಿವಿಧ ಬ್ಯಾಂಕುಗಳ ವ್ಯವಸ್ಥಾಪಕರು ಹಾಜರಿದ್ದರು.

## ಪತ್ತಿನ ಸಹಕಾರ ಸಂಘಕ್ಕೆ ನಿರ್ದೇಶಕರ ಆಯ್ಕೆ

**ಕೋಲಾರ:** ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನೌಕರರ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಎನ್. ಶ್ರೀನಿವಾಸ್ ಮತ್ತು ಫಯಾಜ್ ಅಹಮದ್ ಖಾನ್ ತಂಡದವರು ಬಹುಮತ ಸಾಧಿಸಿದ್ದಾರೆ. ಶನಿವಾರ ನಡೆದ ಚುನಾವಣೆಯಲ್ಲಿ ಕೆ.ಎಸ್.ಬೈರೆಡ್ಡಿ 423 ಮತ, ಆಜಾಮ್ ಪಾಷ 320, ಆರ್.ಚಂದ್ರ 409, ಎನ್.ಎಂ. ಚಂದ್ರಶೇಖರ್412, ಕೆ.ಎನ್.ಪ್ರತಾಪ್ 315, ಸಿ. ಮಮತಕಾಂತರಾಜು 346, ಮೈಬೂಬ ರಜಾಕಸಾಬ ಬೆಕಿನಾಳ 306, ಡಿ.ವೇದನಾಯಕಿ ಸೆಲ್ವಿ 310, ಎಂ.ವೆಂಕಟೇಶಪ್ಪ 386, ಪಿ.ವಿ.ಶಿವಪ್ರಸಾದ ಬಾಬು 335, ಎಸ್.ಸತೀಶ್ 338, ಜಿ.ಕೆ.ಸುನೀಲ್ ಕುಮಾರ್352, ಜಿ.ಎನ್.ಸುನೀಲ್ ಕುಮಾರ್344, ಎಂ. ಆನಂದಕುಮಾರ್263 ಮತಗಳನ್ನು ಪಡೆದುಕೊಂಡು ವಿಜೇತರಾದರು.

ಎಸ್.ಆಂಜನೇಯಪ್ಪ 195, ಕೆ.ಜಗದೀಶ್ ಕುಮಾರ್225, ಎನ್.ವಿ.ಜನಾರ್ಧನ್ 305, ಈ.ನಂದೀಶ್ 265, ವಿ.ನಂದೀಶ್ 222 ಮತಗಳನ್ನು ಪಡೆದುಕೊಂಡು ಸೋಲನ್ನು ಕಂಡರು.

ಅವಿರೋಧ ಆಯ್ಕೆ: ಶ್ರೀನಿವಾಸಪುರದ ಆರ್.ಕೆ. ಶ್ರೀನಿವಾಸಕುಮಾರ್,ಕೋಲಾರದ ಎಸ್.ಪ್ರವೀಣ್ ಕುಮಾರ್,ಜಿ.ಎಸ್.ಸುನೀಲ್, ಕೆ. ಮಂಜುಳನಾರಾಯಣಸ್ವಾಮಿ ಮತ್ತು ಕೆ.ಎನ್. ರವೂದೇವಿಸಂತೋಷ್ಕುಮಾರ್ಅವಿರೋಧ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ಬಾಲಕೃಷ್ಣಪ್ಪ ಕರ್ತವ್ಯ ನಿರ್ವಹಿಸಿದ್ದು ಸಹಕಾರ ಸಂಘದ ವ್ಯವಸ್ಥಾಪಕ ಕೆ.ವಿ.ಸಾಗರ್ ,ಅಕೌಂಟೆಂಟ್ ಮನೀಷ್, ಕ್ಲರ್ಕ್ ಸಂಧ್ಯಾ ಸಹಕರಿಸಿದರು.

ಬೆಸ್ಕಾಂ ನೌಕರರ ಪತ್ತಿನ ಸಹಕಾರ ಸಂಘಕ್ಕೆ ನಿರ್ದೇಶಕರು ಆಯ್ಕೆಯಾದರು.

## ಅದ್ದೂರಿ ದೇವಿಯ ಜಲಧಿ ಮಹೋತ್ಸವ

**ಮಧುಗಿರಿ :** ತಾಲೂಕಿನ ಕಸಬಾ ವ್ಯಾಪ್ತಿಯ ಭಕ್ತರಹಳ್ಳಿ ಗ್ರಾಮದಲ್ಲಿ ಕುಂಚಿಟಿಗರ (ಶೆಟ್ಟನವರು) ಕುಲದೇವತೆ ಅಮ್ಮಾಜಿ ಕಾವಲ್ಲೇಶ್ವರಿ ದೇವಿ ಹಾಗೂ ನರಸಿಂಹ ಸ್ವಾಮಿಯ ಜಲಧಿ ಮಹೋತ್ಸವ ಸಾವಿರಾರು ಮಂದಿ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ದೇವಾಲಯದಿಂದ ಮಂಗಳವಾದ್ಯಗಳೊಂದಿಗೆ ಉತ್ಸವ ಮೂರ್ತಿಗಳನ್ನು ಬಿಜವರ ಗ್ರಾಮದ ಕೆರೆಯಲ್ಲಿ ಶುಭ್ರಗೊಳಿಸಿ ಪೂಜೆ ಸಲ್ಲಿಸಿದರು. ಅಲ್ಲಿಂದ ಉತ್ಸವ ಮೂರ್ತಿಗಳನ್ನು ಮೆರವಣಿಗೆಯ ಮೂಲಕ ಗ್ರಾಮದಲ್ಲಿ ಮೆರವಣಿಗೆ ನಡೆಸಿ ಗುಡಿ ತುಂಬಿಸಿದರು. ಬುಕ್ಕಪಟ್ಟಣದಮ್ಮ, ಚೆನ್ನಪಟ್ಟಣದಮ್ಮ, ಬಲಿಕೊಂಡಮ್ಮ, ಮೂಗನಲಮ್ಮ ಸೇರಿದಂತೆ ಏಳು ಅಕ್ಕತಂಗಿಯರನ್ನು ಒಂದೇ ಗದ್ದಿಗೆಯಲ್ಲಿ ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸುವುದು ಜಾತ್ರೆಯ ವಿಶೇಷವಾಗಿತ್ತು. ಒಂದೇ ಗದ್ದಿಗೆಯಲ್ಲಿ ದೇವರನ್ನು ಭಕ್ತರು ಸರದಿ ಸಾಲಿನಲ್ಲಿ ಪೂಜೆ ಸಲ್ಲಿಸಿದರು. ಕುಂಚಿಟಿಗ ಜನಾಂಗದ 48 ಕುಲದವರನ್ನು ಆಹ್ವಾನಿಸಿ ತಾಂಬೂಲ ಪ್ರಸಾದ ವಿತರಿಸಿದರು.

## ಪಿಎಸ್ಐ ರೇಣುಕಾ ಯಾದವ್ ಕಾರ್ಯವೈಖರಿಗೆ ಪ್ರಶಂಸೆ

**ಶಿರಾ:** ಜಿಲ್ಲೆಯಲ್ಲಿ ಕರ್ತವ್ಯದಕ್ಷತೆ ಮೆರೆದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ನೇತೃತ್ವದಲ್ಲಿ ವಾರದ ಪೊಲೀಸ್ ಪ್ರಶಂಸನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಶಿರಾ ನಗರ ಪೊಲೀಸ್ ಠಾಣೆಯ ಪಿಎಸ್ಐ ರೇಣುಕಾ ಯಾದವ್ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಅವರಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶಿರಾ ಠಾಣೆಯ ಪೊಲೀಸ್ ಸಿಬ್ಬಂದಿ ವರ್ಗ ಕೂಡ ಅಭಿನಂದನೆ ತಿಳಿಸಿದೆ. ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಇತರ ಸಿಬ್ಬಂದಿಗೂ ಈ ಸಂದರ್ಭದಲ್ಲಿ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ಅಧಿಕಾರಿಗಳು, ಪೊಲೀಸ್ ಇಲಾಖೆಯಲ್ಲಿ ನಿರಂತರವಾಗಿ ಶ್ರಮಿಸುವ ಸಿಬ್ಬಂದಿಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಇಂತಹ ಗೌರವಗಳು ಸಿಬ್ಬಂದಿಯಲ್ಲಿ ಹೆಚ್ಚಿನ ಜವಾಬ್ದಾರಿತನ, ಉತ್ಸಾಹ ಮತ್ತು ಸೇವಾಭಾವನೆಯನ್ನು ವೃದ್ಧಿಸಲು ಸಹಕಾರಿಯಾಗುತ್ತವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಸಹೋದ್ಯೋಗಿಗಳು ಹಾಗೂ ಸಾರ್ವಜನಿಕರು ಪ್ರಶಸ್ತಿ ವಿಜೇತ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿ ಶುಭ ಕೋರಿದರು. ಇಲಾಖೆಯ ಈ ನವೀನ ಪ್ರಯತ್ನಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

> **ಗೌರವಗಳಿಂದ ಸೇವಾಭಾವನೆ ವೃದ್ಧಿ**
> ಪೊಲೀಸ್ ಇಲಾಖೆಯಲ್ಲಿ ನಿರಂತರವಾಗಿ ಶ್ರಮಿಸುವ ಸಿಬ್ಬಂದಿಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಗೌರವಗಳಿಂದ ಸೇವಾಭಾವನೆಯನ್ನು ವೃದ್ಧಿಸಲು ಸಹಕಾರಿಯಾಗುತ್ತವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ಶಿರಾ ನಗರ ಪೊಲೀಸ್ ಠಾಣೆಯ ಪಿಎಸ್ಐ ರೇಣುಕಾ ಯಾದವ್ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಅವರಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

**IN THE COURT OF THE CIVIL JUDGE & J.M.F.C. AT KORATAGERE**
**O.S. NO.108/2022**
**Plaintiff: Hanumanthaiah,**
**V/S**
**Defendant; Hanumanthrayappa & others.**
**Summons to Defendant No-4.**
**D-4; Ramakka w/o Venkateshaiah D/o Late Ramaiah, Aged about 59 yeares, R/at; Bodabadenahalli, Kasaba hobli, Koratagere taluk.**
Whereas the plaintiff above named has instituted the above suit against the above said defendant along with other defendants with respect of the suit schedule property, for the relief of declaration and permanent injunction. You are hereby summoned to appear in this court in person or by a pleader/advocate duly instrucated and able to answer relating to the above case on ;-22-06-2026 at 11-00 a.m in the forenoon, to answer the case and the day fixed for the final disposal of the case. You must be prepared to produce on that day all the witnesses and all the documents upon which you intend to rely in support of your case.
Take notice that in default of your appearance on the day before mentioned, the above case will be heard and determined in your absence.
**Suit Schedule Property**
**The land bearing old sy.No-30, which is newly phoded 30/2 Bodabadenahalli, Kasaba hobli, Koratagere taluk. totally measuring 03-30.00 guntas, assed at Rs-04.10ps, in which 01-00.00 acre which in my possession by virtue of land tribunal order in LRFCR-1813/1978-79 bounded by; East; govt. Halla. west; Remaining land of defendant's father, North; Land of Shrikantappa, South; Remaining land of defendant's father.Given under my hand and seal of this court on 29-04-2026**
**By order of the court**
**Chif Administrative Officer**
**PRL.CJ & J.M.F.C.court**
**At Koratagere.**
**Advocate for Appellants**
**H.C.Vrushabendra swamy BA.LLB**
**Near court complex**
**Koratagere taluk Tumkur dist.**

**IN THE COURT OF THE CIVIL JUDGE & J.M.F.C. AT KORATAGERE**
**C.Mis No: 126/2026.**
**Petitioners: 1. Nagamma w/o Late CHikkarangappa,** A/a 87 years. **2. Papamma w/o Late Dasappa,** A/a 63 years. **3. Rangamma w/o Hanumantharayappa,** A/a 67 years. r/o Baichapura, Holavanahlli hobli, Koratagere taluk, Tumkuru dist. **4. Rangamma w/o Late Thimmappa,** A/a 65 years. Kudurebyalys, Hosuru hobli, Gowribidanoru taluk, Chikkaballapura dist. **5. Muddamma w/o Late Lingappa,** A/a 62 years. Chikkamaloru, Kodugenahalli hobli, Madhugiri taluk, Tumkuru dist. **6. Dalappa s/o Late Dasappa,** A/a 36 years. 1, 2 and 6th petitioners are r/o Arasapura, Holavanahalli hobli, Koratagere taluk.
**V/S**
**Respondents:** The Thasildar, the Register, of birth and death, Koratagere Taluk.
**PUBLIC NOTIFICAION**
Whereas the petitioner have filed the above petition to obtain the death certificate of the 6th petitioner grand-father by name **Chikkarangappa s/o Thimmanayka**, died on 01-01-1975 at Arasapura, Holavanahalli hobli, Koratagere taluk. It is hereby notify that whoever has interest or objection to obtain the death certificates of the petitioner famile members may appear in person or through your advocate on; 25-06-2026 in the above case. Failing which the matter will be heard to be exparte.
**By order of the court**
**Sd/-,Shirastedar**
**Civil judge & J.M.F.C.court**
**Koratagere.**
**D.C.Shivaramaiah,**
**Viswanath.G.L.**
**Advocate. For petitioner.**
**Koratagere.**

**IN THE COURT OF THE CIVIL JUDGE & J.M.F.C. AT KORATAGERE**
**C.Mis No: 120/ 2026**
**Petitioners: 1. Narasimhaiah s/o Late Bheemaiah,** A/a 62 years. **2. Naveenkumar B.N s/o Narasimhaiah,** A/a 25 years. **3. Maruthi B.N s/o Narasimhaiah,** A/a 23 years. **4. Sagar. B.N s/o Narasimhaiah,** A/a 21 years. All are r/o Byrenahalli, Holavanahalli Hobil, Koratagere taluk.
**V/S**
Respondents: The Thasildar, The Register of birth and death, Koratagere Taluk.
**PUBLIC NOTIFICAION**
Where as the petitioner have filed the above petition to obtain the death certificate of the 2nd petitioners grand Father by name **Bheemaiah s/o Late Sannahanumaiah**, died on 20-08-2015, at Tumakuru dist, koratagere taluk, Holavanahalli hobli, Byrenahalli. is hereby notify that whoever has interest or objection to obtain the death certificates of the petitioner grand-Father may appear in person or through your advocate on; 22-06-2026 in the above case. Failing which the matter will be herd written mined in your absence.
**By order of the court**
**Sd/-,Shirastedar**
**Civil judge & J.M.F.C.court**
**Koratagere.**
**Thimmesh R.H**
**Advocate. For petitioner.**
**Koratagere.**

## ಸಮಾಚಾರ ಸಣ್ಣದಲ್ಲ

### ಸರಕಾರಿ ನೌಕರರಿಂದ ಅರ್ಜಿ ಆಹ್ವಾನ

**ಚಿಕ್ಕಬಳ್ಳಾಪುರ:** ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ 2026ನೇ ಎಸ್‌ಎಸ್‌ಎಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ.90% ಕ್ಕಿಂತ ಹೆಚ್ಚಿನ ಅಂಕ

ಪಡೆದ ರಾಜ್ಯ ಸರಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹ ವಿದ್ಯಾರ್ಥಿಗಳು ಈ ಕೆಳಗಿನ ಲಿಂಕ್ ಮುಖಾಂತರ ಅರ್ಜಿಯನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 25-05-2026. ಆನ್ ಲೈನ್‌ಲಿಂಕ್ ಎಚ್‌ಟಿಟಿಪಿಎಸ್: ಪವರ್ಮೀಡಿಯಾ ಡಾಟ್ ಇನ್ಫೋ ಮೂಲಕ ನೊಂದಾಯಿಸಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಬೇಕಾದ ಅರ್ಹತೆಗಳು ವಿದ್ಯಾರ್ಥಿಯು 2026 ಎಸ್‌ಎಸ್‌ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆಯಾಗಿರಬೇಕು. ವಿದ್ಯಾರ್ಥಿಯ ತಂದೆ/ತಾಯಿ ರಾಜ್ಯ ಸರದ ಯಾವುದಾದರೊಂದು ಇಲಾಖೆಯಲ್ಲಿ ಖಾಯಂ ಸರಕಾರಿ ನೌಕರರಾಗಿರಬೇಕು. ನಿಗಮ ಮಂಡಳಿ ಪ್ರಾಧಿಕಾರ, ವಿಶ್ವವಿದ್ಯಾಲಯ ಖಾಸಗಿ ಹಾಗೂ ಅನುದಾನಿತ ವಿದ್ಯಾಸಂಸ್ಥೆಯಲ್ಲಿ ನೇಮಕವಾಗಿರುವ ನೌಕರರು ಅರ್ಜಿ ಸಲ್ಲಿಸುವಂತಿಲ್ಲ ಎಂದು ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎ.ನಾರಾಯಣಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರೈತರಿಗೆ ಒಂದು ದಿನದ ತೋಟಗಾರಿಕೆ ತರಬೇತಿ

**ಚಿಂತಾಮಣಿ:** ತಾಲೂಕಿನ ಕಾಗತಿ ಗ್ರಾಮದಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಎನ್ ಆರ್‌ಡಿಎಸ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ರೈತರಿಗಾಗಿ ಹಮ್ಮಿಕೊಳ್ಳಲಾಗಿದ್ದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಚಿಂತಾಮಣಿ ತಾಲೂಕಿನ ಕಾಗತಿ ಗ್ರಾಮದ ಸಮೀಪವಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮದಲ್ಲಿ ರೈತರಿಗೆ ಆಧುನಿಕ ಕೃಷಿ ಪದ್ಧತಿಗಳ ಕುರಿತು ಮಾಹಿತಿ ನೀಡಲಾಯಿತು. ತೋಟಗಾರಿಕೆ ಇಲಾಖೆಯ ಪರವಾಗಿ ಸಾಧನೆ ಎಸ್ ಎ ಡಿ ಎಚ್ ಬಾಲಕೃಷ್ಣ ಸರ್‌ಅವರು ಹಾಗೂ ಎನ್ ಆರ್‌ಡಿ ಎಸ್ ಸಂಸ್ಥೆಯ ಪರವಾಗಿ ಕಿರಣ್ ಅವರು ಭಾಗವಹಿಸಿ ರೈತರಿಗೆ ಉಪಯುಕ್ತ ಮಾಹಿತಿ ನೀಡಿದರು. ಐ ಐ ಎಚ್ ಆರ್‌ಪರವಾಗಿ ಆಗಮಿಸಿದ್ದ ಡಾ. ಚೇತನ್ ಅವರು ಮಣ್ಣು ಪರೀಕ್ಷೆ ಹಾಗೂ ಕೃಷಿಯಲ್ಲಿ ಸಾವಯವ ಉತ್ಪನ್ನಗಳ ಬಳಕೆಯ ಮಹತ್ವದ ಕುರಿತು ರೈತರಿಗೆ ಸವಿಸ್ತಾರವಾಗಿ ವಿವರಿಸಿದರು. ಸಾವಯವ ಗೊಬ್ಬರಗಳ ಬಳಕೆ ಮತ್ತು ವೈಜ್ಞಾನಿಕ ಮಣ್ಣು ಪರೀಕ್ಷೆಯ ಮೂಲಕ ರೈತರು ಹೇಗೆ ತಮ್ಮ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು ಎಂಬ ಬಗ್ಗೆ ಈ ಕಾರ್ಯಕ್ರಮವು ಬೆಳಕು ಚೆಲ್ಲುವಲ್ಲಿ ಸಹಕಾರಿಯಾಯಿತು.

ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ | ಕೆರೆಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳಿ: ಸಚಿವ ಸುಧಾಕರ್

# ಸಮಗ್ರ ಅಭಿವೃದ್ಧಿಯೇ ನಮ್ಮ ಮೊದಲ ಆದ್ಯತೆ

**ಚಿಂತಾಮಣಿ:** ಜಿಲ್ಲೆಯ ಸಮಗ್ರ ಅಭಿವೃದ್ಧಿಯೇ ನಮ್ಮ ಮೊದಲ ಆದ್ಯತೆಯಾಗಿದ್ದು ಕುಡಿಯುವ ನೀರು, ರಸ್ತೆ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆ ತರಲು ನಾವು ಹತ್ತು ಹಲವು ಯೋಜನೆಗಳನ್ನು ರೂಪಿಸಿದ್ದೇವೆ ಎಂದು ಉನ್ನತ ಶಿಕ್ಷಣ ಹಾಗೂ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಹೇಳಿದರು.

ತಾಲೂಕಿನಲ್ಲಿ ಹಮ್ಮಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ತಾಲೂಕು ಚಿನ್ನಸಂದ್ರ ಗ್ರಾಮ ಪಂಚಾಯಿತಿ ಸೂಲದೇನಹಳ್ಳಿ ಗ್ರಾಮದ ಪರಿಶಿಷ್ಟಜಾತಿ ಕಾಲೋನಿಯ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಸುಮಾರು 60ಲಕ್ಷ ವೆಚ್ಚದ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಅಭಿವೃದ್ಧಿ ಕಾಮಗಾರಿಗಳ ಕುರಿತು ಮಾಧ್ಯಮದವರೊಂದಿಗೆ ಸವಿಸ್ತಾರವಾಗಿ ಮಾತನಾಡಿದ ಸಚಿವರು ಜಿಲ್ಲೆಯ ಹಳ್ಳಿಗಳಲ್ಲಿ ಎದುರಾಗಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಚಿವರು ಕಳವಳ ವ್ಯಕ್ತಪಡಿಸಿದರು.

ಉನ್ನತ ಶಿಕ್ಷಣ ಸಚಿವರಾಗಿ ಇಲಾಖೆಯಲ್ಲಿ ಅಮೂಲಾಗ್ರ ಬದಲಾವಣೆ ತರಲಾಗಿದೆ.ಅತಿಥಿ ಉಪನ್ಯಾಸಕರ ಸಮಸ್ಯೆ ಈಡೇರಿಸಲಾಗಿದೆ. ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಲು

ಚಿಂತಾಮಣಿ ತಾಲೂಕಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಉನ್ನತ ಶಿಕ್ಷಣ ಹಾಗೂ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್ ಮಾತನಾಡಿದರು.

ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಇತ್ತೀಚಿನ ರಾಜಕೀಯ ವಿದ್ಯಮಾನಗಳು ಹಾಗೂ ವಿರೋಧ ಪಕ್ಷಗಳ ಟೀಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು ನಾವು ಅಭಿವೃದ್ಧಿಯ ರಾಜಕಾರಣ ಮಾಡುತ್ತಿದ್ದೇವೆ. ಟೀಕೆಗಳಿಗೆ ಕೆಲಸದ ಮೂಲಕವೇ ಉತ್ತರ ನೀಡುತ್ತೇವೆ ಎಂದು ನೇರವಾಗಿ ನುಡಿದರು.

ಜಿಲ್ಲೆಯ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ತಕ್ಷಣವೇ ಸ್ಪಂದಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.ಯಾವುದೇ ಫಲಾಪೇಕ್ಷೆಯಿಲ್ಲದೆ ಜನ ಸಾಮಾನ್ಯರ ಕೆಲಸಗಳು ಆಗಬೇಕು ಎಂಬುದು ಸರಕಾರದ ಆಶಯ ಎಂದು ಅವರು ಹೇಳಿದರು.

ಚಿಂತಾಮಣಿ ನಗರದ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜು ಚಿಂತಾಮಣಿ ಸಂಪೂರ್ಣ ಕಟ್ಟಡಕ್ಕೆ ಬಣ್ಣ ಕೆಲಸ, ವಿದ್ಯುತ್ ಸಂಪರ್ಕ ಹಾಗೂ ಕೊಠಡಿಗಳಿಗೆ ಫ್ಯಾನ್ ಅಳವಡಿಕೆ ಹಾಗೂ ಕೆಲವು ದುರಸ್ಥಿ ಕಾಮಗಾರಿ ಅಲ್ಲದೆ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಚಿಂತಾಮಣಿ ನಗರದ ನೆಕ್ಕುಂದಿ ದೊಡ್ಡಕೆರೆಯನ್ನು ಆಳಗೊಳಿಸಿ ಸಾಮರ್ಥ್ಯವನ್ನು 31.80 ಎಂ.ಸಿ.ಎಫ್.ಟಿ ಯಿಂದ 75.00 ಎಂ.ಸಿ.ಎಫ್.ಟಿ ಗೆ

> ಎಚ್.ಎನ್.ವ್ಯಾಲಿ ಯೋಜನೆಯ ಮೂಲಕ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವ ಪ್ರಕ್ರಿಯೆಯ ಪ್ರಗತಿಯನ್ನು ಪರಿಶೀಲಿಸಲಾಗುತ್ತಿದೆ. ತಾಂತ್ರಿಕ ಅಡೆತಡೆಗಳನ್ನು ನಿವಾರಿಸಿ ಶೀಘ್ರವಾಗಿ ಜಿಲ್ಲೆಯ ಎಲ್ಲ ಕೆರೆಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು.
>
> -ಡಾ. ಎಂ.ಸಿ. ಸುಧಾಕರ್,
> ಜಿಲ್ಲಾ ಉಸ್ತುವಾರಿ ಸಚಿವ

ಹೆಚ್ಚಿಸುವುದು, ಮುಖ್ಯ ಏರಿಯನ್ನು ಬಲಪಡಿಸುವುದು ಹಾಗು ಇತರೆ ಪೂರಕ ಕಾಮಗಾರಿಗಳಿಗೆ ಕೂಡ ಶನಿವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ನಗರಸಭಾ ಅಧ್ಯಕ್ಷ ಜಗನ್ನಾಥ್,ಮಾಜಿ ಉಪಾಧ್ಯಕ್ಷೇ ರಾಣಿಯಮ್ಮ, ನಗರಾಭಿವೃದ್ಧಿ ಅಧ್ಯಕ್ಷ ಶ್ರೀನಾಥ್ ಬಾಬು,ಸದಸ್ಯ ಆರ್ ಎಂ ಜೆ ಶ್ರೀನಿವಾಸ್,ಮುಖಂಡ ಉಮೇಶ್,ಶೇಕ್ ಸಾಧಿಕ್ ರಜ್ವಿ, ಇಂತಿಯಾಸ್ ಪಾಷಾ,ಸಿಕಂದರ್ ,ಚಿನ್ನಸಂದ್ರ ನಾರಾಯಣಸ್ವಾಮಿ,ಇರ್ಷಾದ್,ಏಜಾಜ್ ,ಸಿ ಕೆ ಎಲ್ ಚಾಂದ್ ಪಾಷಾ,ದಾದಾಪೀರ್,ಲಾರಿ ಅಸೋಸಿಯೇಷನ್ ಬಾಬು,ಮಾಜಿ ನಗರಸಭಾ ಸದಸ್ಯ ಜಗದೀಶ್, ಶ್ರೀನಿವಾಸ್,ಜೈ ಭೀ ಮುರಳಿ ಇದ್ದರು.

ಕೈವಾರ-ಹುಲಗುಮ್ಮನಹಳ್ಳಿ ರಸ್ತೆ ಅಭಿವೃದ್ಧಿಗೆ ಚಾಲನೆ

## ಗ್ರಾಮೀಣ ಭಾಗದ ರಸ್ತೆ ಸುಧಾರಣೆಗೆ ಸರಕಾರ ಬದ್ಧ

**ಚಿಂತಾಮಣಿ:** ಕೈವಾರದಿಂದ ಹುಲಗುಮ್ಮನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಚಾಲನೆ ನೀಡಿದರು.

ಸುಮಾರು 56 ಲಕ್ಷಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಈ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವರು ಶಾಸ್ತ್ರೋಕ್ತವಾಗಿ ಗುದ್ದಲಿ ಪೂಜೆ ನೆರವೇರಿಸಿದರು.ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿದ್ದ ಈ ರಸ್ತೆ ಕಾಮಗಾರಿಯು ಈಗ ಸಾಕಾರಗೊಳ್ಳುತ್ತಿದ್ದು, ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ.

ನಂತರ ನಡೆದ ಸಭೆಯಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಸಚಿವರು ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ನಮ್ಮ ಸರಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ. ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರಿಂದ

ತಾಲೂಕಿನ ಕೈವಾರದಿಂದ ಹುಲಗುಮ್ಮನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಚಾಲನೆ ನೀಡಿದರು.

ವಿವಿಧ ಬೇಡಿಕೆಗಳ ಮನವಿಗಳನ್ನು ಸ್ವೀಕರಿಸಿ, ಅವುಗಳನ್ನು ಹಂತ ಹಂತವಾಗಿ ಈಡೇರಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನಾ ಸಮಿತಿಯ ಅಧ್ಯಕ್ಷರಾದ ಮುನಿ ನಾರಾಯಣಪ್ಪ,ಸಂತೇಕಲ್ಲಹಳ್ಳಿ ಮಹೇಶ್ ,ಶ್ರೀನಿವಾಸ್, ಚಿನ್ನಪ್ಪ, ಬಾಲರಾಜು, ಮಾಜಿ ಗ್ರಾಮ ಪಂಚಾಯತಿ ಸದಸ್ಯರಾದ ಮೌಲಾ, ದೇವರಾಜ್, ಸೇರಿದಂತೆ ಮತ್ತಿತರರು ಇದ್ದರು.

## ಬಿಸಿಲು ಹೆಚ್ಚಳ: ಮುನ್ನೆಚ್ಚರಿಕೆ ವಹಿಸಿ

**ಚಿಕ್ಕಬಳ್ಳಾಪುರ:** ಮುಂಬರುವ ಬೇಸಿಗೆ ದಿನಗಳಲ್ಲಿ ಸೂರ್ಯನ ಶಾಖ ದಿನದಿಂದ ದಿನಕ್ಕೆ ಹೆಚ್ಚಾಗಲಿರುವ ಹಿನ್ನೆಲೆಯಲ್ಲಿ ಶಾಖದ ಹೊಡೆತ ದಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮುಂಜಾಗ್ರತಾ ಕ್ರಮವಾಗಿ ಎಲ್ಲ ಸಾರ್ವಜನಿಕರಿಗೆ ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಕೆಲವು ಸಲಹೆಗಳನ್ನು ನೀಡಿದೆ.

ಸಾರ್ವಜನಿಕರು ಬಿಸಿಲು ದಿನಗಳಲ್ಲಿ ಕೊಡೆ,ಛತ್ರಿ, ಟೋಪಿ,ಹ್ಯಾಟ್, ಟವಲ್ ಬಳಸಬೇಕು ಹಾಗೂ ಸಾಧ್ಯವಾದಷ್ಟು ತಂಪಾದ ಸ್ಥಳಗಳಲ್ಲಿ ಉಳಿಯಲು ಪ್ರಯತ್ನಿಸಬೇಕು.ತೆಳುವಾದ ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸಿ, ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಮಾಡುವುದು ಒಳ್ಳೆಯದು. ಹತ್ತಿಯ ಅಥವಾ ಟರ್ಬನ್ ಟೋಪಿ ಹಾಗೂ ಕೂಲಿಂಗ್ ಗ್ಲಾಸ್ ಧರಿಸಬೇಕು.ಹಿರಿಯ ನಾಗರಿಕರಿಗೆ, ಮಕ್ಕಳಿಗೆ ಹೆಚ್ಚು ನೀರು ಕುಡಿಯಲು ಪ್ರೇರೆಪಣೆ ನೀಡಬೇಕು.ಬೆಳಗ್ಗೆ 11 ರಿಂದ ಸಂಜೆ 4 ರವರೆಗೆ ಹೊರಾಂಗಣ ದೈಹಿಕ ಚಟುವಟಿಕೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿ.ಸಾಕಷ್ಟು ನೀರು ಕುಡಿಯಿರಿ, ಮಜ್ಜಿಗೆ,ಎಳನೀರು ಮತ್ತು ಗ್ಲೂಕೋಸ್ (ಓ.ಆರ್.ಎಸ್) ನಂತಹ ದ್ರವ ಪದಾರ್ಥಗಳನ್ನು ಹೆಚ್ಚು ಉಪಯೋಗಿಸಬೇಕು.

ಕೊಠಡಿಯ ತಾಪಮಾನವನ್ನು ಕಡಿಮೆ ಮಾಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.ಹೀಟ್ ಸ್ಟ್ರೋಕ್ ಲಕ್ಷಣಗಳನ್ನು ಹೊಂದಿರುವ ವ್ಯಕ್ತಿಯನ್ನು ತಂಪಾದ ಜಾಗಕ್ಕೆ ಸ್ಥಳಾಂತರಿಸಬೇಕು.

ಹೀಟ್ ವೇವ್ ಸ್ಟ್ರೋಕ್‌ಗೆ ಒಳಗಾದ ವ್ಯಕ್ತಿಗೆ ಯಾವುದೇ

ಸುಧಾರಣೆ ಕಂಡುಬರದಿದ್ದರೆ. ಅವರನ್ನು ತಕ್ಷಣ ಆಸ್ಪತ್ರೆಗೆ ಸ್ಥಳಾಂತರಿಸಬೇಕು. ಪ್ರಾಣಿ,ಪಕ್ಷಿಗಳನ್ನು ನೆರಳನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ಇಡಬೇಕು.ತಾಪಮಾನ ಹಾಗೂ ಮುನ್ಸೂಚನೆ ಕುರಿತು ಮಾಹಿತಿ ನೀಡುವ ವ್ಯವಸ್ಥೆಯನ್ನು ಕೆಲಸದ ಸ್ಥಳಗಳಲ್ಲಿ ಅಳವಡಿಸುವುದು.ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳನ್ನು ಹಾಗೂ ಸಾಕು ಪ್ರಾಣಿಗಳನ್ನು ಬಿಡಬಾರದು.ಪ್ರಯಾಣ ಮಾಡುವ ಸಮಯದಲ್ಲಿ ನೀರನ್ನು ಜೊತೆಯಲ್ಲಿ ಕೊಂಡೊಯ್ಯುವುದು ಸೂಕ್ತ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಅಧ್ಯಕ್ಷ ಜಿ.ಪ್ರಭು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 113 ಕಿ.ಮೀ ಓಟದ ಸ್ಪರ್ಧೆಯಲ್ಲಿ ಪಿಡಿಒಗೆ ಪದಕ

**ತುಮಕೂರು:** ಭಾರತೀಯ ಸೇನೆಯ ನೇತೃತ್ವ ಹಾಗೂ ಉತ್ತರಾಖಂಡದ ಪ್ರವಾಸೋದ್ಯಮ ಇಲಾಖೆ ಸಹಯೋಗ ದೊಂದಿಗೆ ಸೂರ್ಯ ದೇವಭೂಮಿ ಚಾಲೆಂಜ್ 2.0 ಉತ್ತರಾಖಂಡ ರಾಜ್ಯದ ಪವಿತ್ರ ಹಿಮಾಲಯದ ಹಾದಿಗಳಲ್ಲಿ ಇತ್ತೀಚೆಗೆ ಆಯೋಜಿಸಿದ್ದ 113 ಕಿ.ಮೀ. ಬಹು ಹಂತದ ಸಹಿಷ್ಣುತೆಯ ಸವಾಲಿನ ಓಟದ ಸ್ಪರ್ಧೆಯಲ್ಲಿ ಗುಬ್ಬಿ ತಾಲೂಕು ಬೆಲವತ್ತ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುಬ್ಬರಾಜ ಅರಸ್ ವಿ.ಆರ್., ಪಾಲ್ಗೊಂಡು ಪದಕ ಗಳಿಸಿದ್ದಾರೆ.

ಭಾರತದ ವಿವಿಧ ಭಾಗಗಳಿಂದ 22 ರಾಜ್ಯಗಳಿಂದ 305 ಸ್ಪರ್ಧಿಗಳು ಭಾಗವಹಿಸಿದ್ದ, ರು, ಅದರಲ್ಲಿ 105 ಸ್ಪರ್ಧಿಗಳು ಸೇನೆಯಲ್ಲಿರುವವರು ಮತ್ತು 200 ಸ್ಪರ್ಧಿಗಳು ಸಾಮಾನ್ಯ ನಾಗರಿಕರು ಇದ್ದಂತಹ ಈ

ಸವಾಲಿನಲ್ಲಿ ದಕ್ಷಿಣ ಭಾರತದ ಕೆಲವೇ ಸ್ಪರ್ಧಿಗಳಲ್ಲಿ ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮ ಪಂಚಾಯಿತಿಯ ಪಿಡಿಒ ಸುಬ್ಬರಾಜ ಅರಸ್ ವಿ. ಆರ್. 113 ಕಿ.ಮೀ. ಓಟದ ಸ್ಪರ್ಧೆಯನ್ನು ಕ್ರಮವಾಗಿ ಯಶಸ್ವಿಯಾಗಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಿ ಪದಕ ಪಡೆದಿದ್ದಾರೆ.

ಸಮುದ್ರ ಮಟ್ಟದಿಂದ ಸುಮಾರು 12,400 ಅಡಿ ಎತ್ತರದವರೆವಿಗೂ ಓಡುವ ಸ್ಪರ್ಧೆ ಇದಾಗಿದೆ.

ಕಾರ್ಯಕ್ರಮದ ಮುಕ್ತಾಯದ ದಿನ ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ವಿಜೇತರಿಗೆ ಪದಕಗಳನ್ನು ವಿತರಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ವಿಜೇಂದರ್‌ಸಿಂಗ್ (ಶ್ರೇಷ್ಠ ಬಾಕ್ಸಿಂಗ್ ಪಟು) ಮತ್ತು ಸೇನೆಯ ಪ್ರಮುಖರು ಉಪಸ್ಥಿತರಿದ್ದರು.

## ಮೃತ್ಯುಂಜಯ ಶ್ರೀಗಳಿಗೆ ಗುರುವಂದನೆ ಇಂದು

**ಧನಂಜಯ್**, ಚಿಕ್ಕನಾಯಕನಹಳ್ಳಿ

ಸನ್ಯಾಸತ್ವ ಎನ್ನುವುದು ಕೇವಲ ಕಾವಿ ವಸ್ತ್ರವಲ್ಲ, ಅದು ಲೋಕದ ಕತ್ತಲೆಯನ್ನು ಓಡಿಸಿ ಬೆಳಕನ್ನು ಹರಿಸುವ ದೀಪವಿದ್ದಂತೆ. ಅಂತಹ ಬೆಳಕಿನ ಹಾದಿಯಲ್ಲಿ ಸಾಗುತ್ತಾ, ಕಾಯಕ ಮತ್ತು ದಾಸೋಹ ವನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡವರು ಗೋಡೆಕೆರೆ ಶ್ರೀಮಠದ ಶ್ರೀಗಳು. ಶ್ರೀಮದ್ ರಂಭಾಪುರಿ ವೀರ ಸಿಂಹಾಸನಾಧೀಶ್ವರ 1108 ಜಗದ್ಗುರು ಭೂಸುಕ್ಷೇತ್ರ ಗೋಡೆಕೆರೆ ಮಠದ ಚರಪಟ್ಟಾಧ್ಯಕ್ಷರಾದ ಶ್ರೀ ಮೃತ್ಯುಂಜಯ ದೇಶೀಕೇಂದ್ರ ಮಹಾಸ್ವಾಮಿಗಳಿಗೆ ಮೇ 10ರಂದು ಭಾನುವಾರ ಭಕ್ತಸಮೂಹವು ಭಕ್ತಿಪೂರ್ವಕ ಗುರುವಂದನೆಯನ್ನು ಸಲ್ಲಿಸುತ್ತಿದೆ.

**ತಾರುಣ್ಯದ ತ್ಯಾಗ - ಸನ್ಯಾಸತ್ವದ ಯೋಗ:**

ಕೇವಲ 22ನೇ ವಯಸ್ಸಿನಲ್ಲೇ ಲೌಕಿಕ ಬದುಕಿನ ಸಕಲ ಆಕರ್ಷಣೆ ಮತ್ತು ಸುಖಗಳನ್ನು ತ್ಯಜಿಸಿ ಸನ್ಯಾಸ ದೀಕ್ಷೆ ಪಡೆದವರು ಶ್ರೀಗಳು. ಶ್ರೀ ಬಸವಲಿಂಗ ಪ್ರಭುಗಳ ಮಾರ್ಗದರ್ಶನದಲ್ಲಿ ಗೋಡೆಕೆರೆ ಶ್ರೀಮಠದ ಪವಿತ್ರ ಜವಾಬ್ದಾರಿಯನ್ನು ಹೊತ್ತ ಶ್ರೀಗಳು, ಅಂದಿನಿಂದ ಇಂದಿನವರೆಗೆ ತಮ್ಮ ಗುರುಗಳ ಆಶೀರ್ವಾದದೊಂದಿಗೆ ಸಮಾಜದ ಉದ್ಧಾರಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ.




ಇಂದು 65ರ ಹರೆಯದಲ್ಲೂ ಅವರಲ್ಲಿರುವ ಅಧ್ಯಾತ್ಮದ ಕಾಂತಿ ಮತ್ತು ಸಮಾಜಸೇವೆಯ ಕಿಚ್ಚು ಕಿಂಚಿತ್ತೂ ಕಡಿಮೆಯಾಗಿಲ್ಲ.

**ಮಣ್ಣಿನ ಮಗನಂತೆ ಶ್ರಮಿಸುವ ಕಾಯಕ ಯೋಗಿ:**

ಶ್ರೀಗಳ ವ್ಯಕ್ತಿತ್ವದ ಅತ್ಯಂತ ದೊಡ್ಡ ಆಕರ್ಷಣೆಯೆಂದರೆ ಅವರ ಸರಳತೆ. ಮಠದ ಪೀಠ ಅಲಂಕರಿಸಿದರೂ ಸಹ, ಒಬ್ಬ ಸಾಮಾನ್ಯ ರೈತನಂತೆ ಮಠದ ತೋಟ-ಗದ್ದೆಗಳಲ್ಲಿ ಶ್ರಮಿಸುವ ಅವರ ಗುಣ 'ಕಾಯಕವೇ ಕೈಲಾಸ' ತತ್ವಕ್ಕೆ ಜೀವಂತ ಉದಾಹರಣೆಯಾಗಿದೆ. ಶ್ರಮ ಸಂಸ್ಕೃತಿಯನ್ನು ಕೇವಲ ಪ್ರವಚನದಲ್ಲಿ ಬೋಧಿಸದೆ, ಸ್ವತಃ ಜೀವನದಲ್ಲಿ ಅಳವಡಿಸಿಕೊಂಡಿರುವ ಶ್ರೀಗಳು ಭಕ್ತರಲ್ಲಿ ವಿಶೇಷ ಗೌರವದ ಸ್ಥಾನ ಪಡೆದಿದ್ದಾರೆ.

ಸೌಹಾರ್ದತೆಯ ನೆಲೆವೀಡು ಗೋಡೆಕೆರೆ' ಗೋಡೆಕೆರೆ ಶ್ರೀಮಠವು ಇಂದು ಸಾವಿರಾರು ಭಕ್ತರ ನಂಬಿಕೆಯ ಕೇಂದ್ರವಾಗಿ ಬೆಳೆಯಲು ಶ್ರೀಗಳ ನಿಷ್ಕಪಟ ಸೇವೆಯೇ ಕಾರಣ. ಇಲ್ಲಿ ಜಾತಿ-ಮತ -ಪಂಥಗಳ ಭೇದವಿಲ್ಲದೆ ಎಲ್ಲ ವರ್ಗದ ಜನರಿಗೂ ಸಮಾನ ಆದರ ಸಿಗುತ್ತದೆ. ಮಠದಲ್ಲಿ ನಡೆಯುವ ನಿರಂತರ ಅನ್ನದಾಸೋಹವು ಸಮಾಜದ ಹಸಿವು ನೀಗಿಸುವುದರ ಜತೆಗೆ ಮನುಕುಲದ ಪ್ರೀತಿ ಮತ್ತು ಸೌಹಾರ್ದತೆಯ ಸಂಕೇತವಾಗಿ ಹೊರಹೊಮ್ಮಿದೆ.

ಅಂತೆಯೇ, ಸ್ವಾಗತ ಸಮಿತಿಯ ಅಧ್ಯಕ್ಷ ಎಂ. ಎಂ. ಜಗದೀಶ್ ಅವರು, ಗುರುವಂದನಾ ಕಾರ್ಯಕ್ರಮವು ಶ್ರೀಗಳ ಕಾಯಕನಿಷ್ಠೆ ಮತ್ತು ಮಾರ್ಗದರ್ಶನಕ್ಕೆ ಭಕ್ತರು ಸಲ್ಲಿಸುತ್ತಿರುವ ಶ್ರದ್ಧಾಪೂರ್ವಕ ಕೃತಜ್ಞತೆಯಾಗಿದೆ, ಎಂದಿದ್ದಾರೆ.

ಈ ಲೋಕಕಲ್ಯಾಣದ ಹಾದಿಯಲ್ಲಿ ಪೂಜ್ಯ ಶ್ರೀಗಳ ಸಂಕಲ್ಪಗಳು ಮತ್ತಷ್ಟು ಯಶಸ್ವಿಯಾಗಲಿ. ಅವರಿಗೆ ಭಗವಂತನು ಸುದೀರ್ಘ ಆಯುಷ್ಯ, ಆರೋಗ್ಯ ಮತ್ತು ಶಕ್ತಿಯನ್ನು ಕರುಣಿಸಲಿ ಎಂಬುದು ನಾಡಿನ ಭಕ್ತಸಮೂಹದ ಹಾರೈಕೆ.

## ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೂ ಸ್ಪರ್ಧಾತ್ಮಕ ತರಬೇತಿ ಸಿಗಲಿ

**ಮೈಸೂರು:** ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೂ ಗುಣಮಟ್ಟದ ಸ್ಪರ್ಧಾತ್ಮಕ ತರಬೇತಿ ಸಿಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವಿಜಯನಗರ 3ನೇ ಹಂತದಲ್ಲಿ ಶ್ರೀ ಕಾಗಿನೆಲೆ ಕನಕಗುರುಪೀಠ ಶಾಖಾ ಮಠದ ವತಿಯಿಂದ ನಿರ್ಮಾಣವಾಗುತ್ತಿರುವ ಸ್ಪರ್ಧಾತ್ಮಕ ತರಬೇತಿ ಕೇಂದ್ರದ ನೂತನ ಕಟ್ಟಡದ ಕಾಮಗಾರಿಯನ್ನು ಇತ್ತೀಚೆಗೆ ಪರಿಶೀಲಿಸಿ ಮಾತನಾಡಿದರು.

ಸ್ಪರ್ಧಾತ್ಮಕ ತರಬೇತಿ ಕೇಂದ್ರಗಳು ಯಶಸ್ವಿಯಾಗಿ ನಡೆಯಬೇಕಾದರೆ ಮೂಲಭೂತ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ಮಾಡಿಕೊಡಬೇಕು. ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿಕೊಂಡು ಐ.ಎ.ಎಸ್., ಕೆ.ಎ.ಎಸ್. ತರಬೇತಿ ಪಡೆಯಲು ದೆಹಲಿ, ಹೈದರಾಬಾದ್, ಬೆಂಗಳೂರಿಗೆ ಹೋಗಲು ಸಾಧ್ಯವಾಗುವುದಿಲ್ಲ. ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಸಹ ಸರಕಾರದ ಉನ್ನತ ಹುದ್ದೆಗಳಿಗೆ ಆಯ್ಕೆಯಾಗಬೇಕು. ಅವರಿಗೆ ಗುಣಮಟ್ಟದ ತರಬೇತಿಗಳು ಸಿಗಬೇಕು ಎಂದು ಶ್ರೀ ಶಿವಾನಂದಪುರಿ ಮಹಾಸ್ವಾಮೀಜಿಗಳು ಈ ಕೇಂದ್ರವನ್ನು ನಿರ್ಮಿಸುತ್ತಿದ್ದಾರೆ. ಈ ಕಟ್ಟಡದ ಕಾಮಗಾರಿ ಇನ್ನು ನಾಲ್ಕು ತಿಂಗಳಲ್ಲಿ ಮುಗಿಸಿಕೊಡುವುದಾಗಿ ಗುತ್ತಿಗೆದಾರರಾದ ಶ್ರೀನಿವಾಸರಾವ್ ತಿಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಹಕಾರ, ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಎಂ. ರಾಮಯ್ಯರವರ ವಿಶೇಷ ಆಸಕ್ತಿಯಿಂದ ಕಾಗಿನೆಲೆ ಸಂಸ್ಥೆಯ ಕಾರ್ಯದರ್ಶಿ ಪುಟ್ಟಬಸವೇಗೌಡ ಹಾಗೂ ಇಂಜಿನಿಯರ್‌ಕುಮಾರಸ್ವಾಮಿರವರ ಉಸ್ತುವಾರಿಯಲ್ಲಿ ಕಟ್ಟಡದ ಕಾಮಗಾರಿ ಚೆನ್ನಾಗಿ ಮಾಡಿದ್ದಾರೆ ಎಂದ ಅವರು ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಂಡು ಯಶಸ್ಸನ್ನು ಕಾಣಬೇಕು ಎಂದರು.

ಈ ಸಂದರ್ಭದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಎಂ. ರಾಮಯ್ಯ, ಗುತ್ತಿಗೆದಾರರಾದ ಶ್ರೀನಿವಾಸರಾವ್, ಪುಟ್ಟಬಸವೇಗೌಡ, ಕುಮಾರಸ್ವಾಮಿ, ಡಾ. ನಾಗರಾಜ್, ಡಾ. ರೇಣುಕ, ಶೇಷಮೂರ್ತಿ, ಲೀಲಾವತಿ, ಮಂಜುನಾಥ್, ಪಲ್ಲವಿ, ಹರೀಶ್ ಇದ್ದರು.



## ಸಮಾಚಾರ ಸಣ್ಣದಲ್ಲ

### ಜೀಪು ಹರಿದು ವಿದ್ಯಾರ್ಥಿನಿ ಸಾವು

**ರಾಯಚೂರು:** ಮಹೀಂದ್ರಾ ಥಾರ್ ವಾಹನ ಹರಿದು ವಿದ್ಯಾರ್ಥಿನಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮೂವರ ಸ್ಥಿತಿ ಗಂಭೀರವಾಗಿರುವ ಘಟನೆ ಜಿಲ್ಲೆಯ ಸಿಂಧನೂರಿನಲ್ಲಿ ಘಟನೆ ನಡೆದಿದ್ದು, ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅರಗಿನಮರ ಕ್ಯಾಂಪ್‌ನ ವಿದ್ಯಾರ್ಥಿನಿ ಭೂಮಿಕಾ (17) ಮೃತ ದುರ್ದೈವಿ. ಮೇಘನಾ, ಮಹೇಶ್ವರಿ, ಜಹೀದಾ ಗಂಭೀರ ಗಾಯಗೊಂಡ ವಿದ್ಯಾರ್ಥಿನಿಯರು. ಕಾಲೇಜು ಮುಗಿದು ವಿದ್ಯಾರ್ಥಿನಿಯರು ಮನೆಗೆ ತೆರಳುತ್ತಿದ್ದರು, ಈ ವೇಳೆ ರಿವರ್ಸ್ ತೆಗೆದುಕೊಳ್ಳು ವಾಗ ಚಾಲಕನ ಅಜಾಗೂರಕತೆಯಿಂದ ವಾಹನ ವಿದ್ಯಾರ್ಥಿನಿಯರ ಮೇಲೆ ಹರಿದಿದೆ. ಓರ್ವ ವಿದ್ಯಾರ್ಥಿನಿ ಸ್ಥಳದಲ್ಲೇ ಸಾವನ್ನಪ್ಪಿದ್ರೆ, ಇನ್ನೂ ಮೂವರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಸದ್ಯ ಸಿಂಧನೂರು ಸಂಚಾರ ಠಾಣೆ ಪೊಲೀಸರು ವಾಹನ ಚಾಲಕನನ್ನ ವಶಕ್ಕೆ ಪಡೆದಿದ್ದಾರೆ.

### ಅಣ್ಣ-ತಮ್ಮ ನೀರುಪಾಲು

**ಕೋಲಾರ:** ಗಾರೆ ಕೆಲಸಕ್ಕೆಂದು ಬಂದಿದ್ದ ಅಣ್ಣ-ತಮ್ಮ ಈಜಲು ತೆರಳಿದ ವೇಳೆ ಕೆರೆಯಲ್ಲಿ ಮುಳುಗಿ ಮೃತಪಟ್ಟ ಘಟನೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಪಚ್ಚೂರ ಮಾಕಲಹಳ್ಳಿ ಬಳಿ ಸಂಭವಿಸಿದೆ. ಮೃತಪಟ್ಟ ಯುವಕರನ್ನು ರೋಣೂರು ಹೋಬಳಿ ವ್ಯಾಪ್ತಿಯ ಚಾಂಪಲ್ಲಿ ಗ್ರಾಮದ ನಿವಾಸಿಗಳಾದ ನರೇಂದ್ರ (25) ಹಾಗೂ ಚಂದನ್ (23) ಎಂದು ಗುರುತಿಸಲಾಗಿದೆ. ಮಧ್ಯಾಹ್ನದ ತೀವ್ರ ಬಿಸಿಲಿನ ತಾಪಮಾನದಿಂದಾಗಿ ಸಮೀಪದ ಕೆರೆಯಲ್ಲಿ ಈಜಲು ಇಳಿದಿದ್ದಾರೆ. ಈ ವೇಳೆ ನೀರಿನ ಆಳ ಅಂದಾಜಿಸಲು ಸಾಧ್ಯವಾಗದೆ ಇಬ್ಬರೂ ಮುಳುಗಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ರಾಯಲ್ಪಾಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಪ್ರಕರಣ ನಡೆದಿದೆ.

### ಲೋಕಾ ಬಲೆಗೆ ಬಿದ್ದ ಪಿಐ

**ಯಾದಗಿರಿ:** ಅಟ್ರಾಸಿಟಿ ಮತ್ತು ಹಲ್ಲೆ ಪ್ರಕರಣಗಳಲ್ಲಿ ಆರೋಪಿಯನ್ನು ಬಂಧಿಸದೆ ಇರುವುದಕ್ಕೆ ಹಾಗೂ ಬಿ ರಿಪೋರ್ಟ್ ಹಾಕಲು ಆರೋಪಿಯಿಂದ 1 ಲಕ್ಷ ಲಂಚ ಪಡೆದ ಆರೋಪದಡಿ ಗುರುಮಠಕಲ್ ಠಾಣೆ ಇನ್‌ಸ್ಪೆಕ್ಟರ್ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಪಿಐ ವೀರಣ್ಣ ದೊಡ್ಡಮನಿ ಲಂಚ ಪಡೆಯುವ ವೇಳೆ ಸಿಕ್ಕಿಬಿದ್ದಿದ್ದಾರೆ. ಗ್ರಾ.ಪಂ ಮಾಜಿ ಸದಸ್ಯ ಆನಂದ್ ನೀಡಿದ ದೂರಿನ ಅನ್ವಯ ದಾಳಿ ಮಾಡಿದ್ದಾರೆ. ಠಾಣೆಯಲ್ಲಿ ಲಂಚವಾಗಿ 1 ಲಕ್ಷ ರು . ಪಡೆಯುವಾಗ ವೀರಣ್ಣ ಅವರನ್ನು ವಶಕ್ಕೆ ಪಡೆದು ವಿಚಾರಣೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಚಿತ್ರದುರ್ಗ ಕೋಟೆ ವಿನ್ಯಾಸದ ಕಾರ್ಯಕ್ರಮ ಪ್ರವೇಶದ್ವಾರ ಆಕರ್ಷಣೆ | ಕಿಕ್ಕಿರಿದು ಸೇರಿದ್ದ ಲಕ್ಷಾಂತರ ಜನ

# ಬಿಎಸ್‌ವೈ ಅಭಿಮಾನೋತ್ಸವಕ್ಕೆ ಸಂಭ್ರಮದ ತೆರೆ

ನೆರ್ಲಹಳ್ಳಿ ರವಿಚಂದ್ರ

**ಚಿತ್ರದುರ್ಗ:** ಕರ್ನಾಟಕ ರಾಜಕಾರಣದ ರಾಜಾಹುಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಸುವರ್ಣ ಸಂಭ್ರಮ ಅಭಿಮಾನೋತ್ಸವ ಸಮಾವೇಶ ಅದ್ಧೂರಿಯಾಗಿ ಸಂಪನ್ನಗೊಂಡಿತು. ಇಡೀ ಕೋಟೆ ನಾಡು ಕೇಸರಿ ಮಯವಾಗಿತ್ತು, ಜನಸಾಗರವೇ ಹರಿದು ಬಂದು ಒಂದು ಹೊಸ ದಾಖಲೆಯನ್ನೇ ಬರೆಯಿತು.

ನಗರದ ಮಾದಾರ ಚೆನ್ನಯ್ಯ ಮಠದ ಸಮೀಪ ನಿರ್ಮಿಸಲಾಗಿದ್ದ ಬೃಹತ್ ವೇದಿಕೆಯು ಜನಮನ ಸೆಳೆಯಿತು. ಚಿತ್ರದುರ್ಗದ ಐತಿಹಾಸಿಕ ಏಳು ಸುತ್ತಿನ ಕೋಟೆಯ ವಿನ್ಯಾಸದಲ್ಲಿ ನಿರ್ಮಿಸಲಾಗಿದ್ದ ಭವ್ಯ ಪ್ರವೇಶ ದ್ವಾರಗಳು ಬಂದ ಅತಿಥಿಗಳನ್ನು ಮಂತ್ರಮುಗ್ಧರನ್ನಾಗಿಸಿದವು. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಹಾಗೂ ಯಡಿಯೂರಪ್ಪ ಅವರ ಗಗನಚುಂಬಿ ಕಟೌಟ್‌ಗಳು ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದ್ದವು. ರಾಜ್ಯದ ಮೂಲೆ ಮೂಲೆಗಳಿಂದ ಲಕ್ಷಾಂತರ ಅಭಿಮಾನಿಗಳು ಹಾಗೂ ಬಿಜೆಪಿ ಕಾರ್ಯಕರ್ತರು ಚಿತ್ರದುರ್ಗಕ್ಕೆ ಲಗ್ಗೆ ಇಟ್ಟಿದ್ದರು. ಹರಿದು ಬಂದ ಜನಸಾಗರವನ್ನು ನಿಯಂತ್ರಿಸಲು ಪೊಲೀಸರು ಹಾಗೂ ಸ್ವಯಂಸೇವಕರು ಹರಸಾಹಸ ಪಡಬೇಕಾಯಿತು. ಬಿಎಸ್‌ವೈ ಪರವಾದ ಜಯಘೋಷಗಳು ದಶದಿಕ್ಕುಗಳಲ್ಲೂ ಮೊಳಗಿದವು.

**ಊಟದ ವ್ಯವಸ್ಥೆ: 1,250 ಬಾಣಸಿಗರ ಕೈರುಚಿ:** ಅಭಿಮಾನೋತ್ಸವಕ್ಕೆ ಆಗಮಿಸಿದ ಅತಿಥಿಗಳಿಗೆ ಭರ್ಜರಿ ಭೋಜನದ ರಸದೌತಣ ನೀಡಲಾಯಿತು. ಊಟದ ವ್ಯವಸ್ಥೆಯು ಅತ್ಯಂತ ವ್ಯವಸ್ಥಿತವಾಗಿದ್ದು, ಸುಮಾರು 1,250ಕ್ಕೂ ಹೆಚ್ಚು ಬಾಣಸಿಗರು ಅಹೋರಾತ್ರಿ ಶ್ರಮಿಸಿ ಲಕ್ಷಾಂತರ ಜನರಿಗೆ ರುಚಿಕರ ಅಡುಗೆ ಸಿದ್ಧಪಡಿಸಿದ್ದರು. ಬಾಯಲ್ಲಿಟ್ಟರೆ ಕರಗುವ ತಾಜಾ ಮೈಸೂರ್ ಪಾಕ್ ವಿಶೇಷ ಆಕರ್ಷಣೆಯಾಗಿತ್ತು. ಬಿಸಿಬಿಸಿ ಟೊಮೆಟೊ ಬಾತ್, ವೆಜ್ ಪಲಾವ್ ಹಾಗೂ ಘಮಘಮಿಸುವ ಮೆಂತ್ಯ ಪಲಾವ್ ಜನಮನ ಸೆಳೆಯಿತು. ಬಿಸಿಲಿಗೆ ತಂಪಾದ ಪಾನೀಯಗಳು ಹಾಗೂ ಮೊಸರನ್ನದ ವ್ಯವಸ್ಥೆ ಮಾಡಲಾಗಿತ್ತು. ಇದು ಕೇವಲ ಒಂದು ರಾಜಕೀಯ ಸಮಾವೇಶವಾಗಿರದೆ, ಯಡಿಯೂರಪ್ಪ ಅವರ ಮೇಲಿರುವ ಜನರ ಪ್ರೀತಿ ಮತ್ತು ಗೌರವದ ಸಾಂಸ್ಕೃತಿಕ ಹಬ್ಬದಂತಿದೆ ಎಂದು ನೆರೆದಿದ್ದ ಅಭಿಮಾನಿಗಳು ಹರ್ಷ ವ್ಯಕ್ತಪಡಿಸಿದರು.ಒಟ್ಟಾರೆಯಾಗಿ, ಚಿತ್ರದುರ್ಗದಲ್ಲಿ ನಡೆದ ಈ ಅಭಿಮಾನೋತ್ಸವವು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ಉಳಿಯುವಂತೆ ಅದ್ಧೂರಿಯಾಗಿ ನೆರವೇರಿತು.

ನಗರದ ಮಾದಾರ ಚೆನ್ನಯ್ಯ ಮಠದ ಸಮೀಪ ನಡೆದ ಬಿಎಸ್‌ವೈ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಬಿಎಸ್‌ವೈ ಅವರ ಜೀವನ ಸಂಬಂಧಿತ ಕೃತಿಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಾರ್ಪಣೆ ಗೊಳಿಸಿದರು. ಈ ವೇಳೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ ಸೇರಿ ಹಲವರಿದ್ದರು.

### ಕಿಕ್ಕಿರಿದ ಜನ

ಕೋಟೆನಾಡು ಚಿತ್ರದುರ್ಗದಲ್ಲಿ ಶನಿವಾರ ನಡೆದ ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ರಾಜಕೀಯ ಸೇವೆಯ ಸಂಭ್ರಮಾಚರಣೆಯಿಂದ ನಡೆಯಿತ್ತು. ಯುಡಿಯೂರಪ್ಪ ಅಭಿಮಾನೋತ್ಸವ ಅಂಗವಾಗಿ ಆಯೋಜಿಸಲಾಗಿದ್ದ ಅಭಿಮಾನೋತ್ಸವ ಕಾರ್ಯಕ್ರಮವು ಅಪಾರ ಜನಸಾಗರದಿಂದ ಕೂಡಿತ್ತು. ಕಾರ್ಯಕ್ರಮದ ಸ್ಥಳವು ಬಿಜೆಪಿ ಕಾರ್ಯಕರ್ತರು ಮತ್ತು ಯುಡಿಯೂರಪ್ಪ ಅಭಿಮಾನಿಗಳಿಂದ ಕಿಕ್ಕಿರಿದು ತುಂಬಿತ್ತು.

### ಜಾತ್ರೆಯಂತೆ ಅಂಗಡಿಗಳ ಸಾಲು

ಅಭಿಮಾನೋತ್ಸವ ವೇದಿಕೆ ಮುಂಭಾಗದಲ್ಲಿ ಸಾಲು ಸಾಲು ಅಂಗಡಿಗಳು ಬಗೆಬಗೆಯ ತಿನಿಸುಗಳನ್ನು ಮಾರಾಟ ಮಾಡುತ್ತಿವೆ. ಹಲವು ವ್ಯಾಪಾರಿಗಳು ಮಜ್ಜಿಗೆ ಮಾರಾಟ ಮಾಡುತ್ತಿದ್ದಾರೆ. ಹಣ್ಣಿನ ವ್ಯಾಪಾರಿಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಅಂಗಡಿ ತೆರೆದಿದ್ದಾರೆ. ವೇದಿಕೆ ಮುಂಭಾಗದಲ್ಲಿ ಮಾತ್ರವಲ್ಲದೇ ಹಳೇ ರಾಷ್ಟ್ರೀಯ ಹೆದ್ದಾರಿಯಲ್ಲೂ ಜಾತ್ರೆಯ ರೀತಿ ವ್ಯಾಪಾರಿಗಳು ಅಂಗಡಿ ತೆರೆದಿದ್ದಾರೆ.

ಅಡುಗೆ ವ್ಯವಸ್ಥೆಯನ್ನು ಪರಿಶೀಲಿಸಿದ ರಾಜ್ಯ ಬಿಜೆಪಿ ನಾಯಕರು.

### ಅಂಬಾಸಿಡರ್ ಕಾರು ಮುಖ್ಯ ಆಕರ್ಷಣೆ

ಚಿತ್ರದುರ್ಗ ನಗರದಲ್ಲಿ ಅದ್ಧೂರಿಯಾಗಿ ನಡೆದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರರು ಬಳಸಿದ ಅಂಬಾಸಿಡರ್ ಕಾರನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಕಾರನ್ನು ಕಣ್ಣಾರೆ ಕಂಡ ಯಡಿಯೂರಪ್ಪ ಅವರ ಬೆಂಬಲಿಗರು, ಅವರ ಹೋರಾಟದ ದಿನಗಳನ್ನು ಮೆಲುಕು ಹಾಕಿಕೊಂಡರು. ಯಡಿಯೂರಪ್ಪರನ್ನು ಗುರುತಿಸುವಷ್ಟೇ ಈ ಕಾರನ್ನೂ ಜನ ಗುರುತಿಸುತ್ತಾರೆ. ಅಂದು ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಬಿಜೆಪಿಯನ್ನು ಹಳ್ಳಿ ಹಳ್ಳಿಗಳಿಗೂ ತಲುಪಿಸಲು ಯಡಿಯೂರಪ್ಪನ ವರಿಗೆ ಈ ಕಾರು ನೆರವಾಗಿದೆ. ಬಿಎಸ್‌ವೈ ಸೇರಿ ಪಕ್ಷದ ಅನೇಕ ಪ್ರಮುಖರು ಇದೇ ಕಾರಲ್ಲಿ ತೆರಳಿ ಪಕ್ಷದ ಪ್ರಚಾರ ಮಾಡಿದ್ದರು ಎಂದು ಬಿಎಸ್‌ವೈ ಅಭಿಮಾನಿಗಳು ಮಾತನಾಡಿಕೊಂಡರು. ಬಿಜೆಪಿ ಮುಖಂಡರು, ಯಡಿಯೂರಪ್ಪ ಅಭಿಮಾನಿಗಳು ಕಾರಿನ ವೀಕ್ಷಣೆ ಮಾಡಿದ್ದಲ್ಲದೆ ಅಂಬಾಸಿಡರ್ ಕಾರಿನ ಜತೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಚಿತ್ರದುರ್ಗ ಕೋಟೆ ವಿನ್ಯಾಸದಲ್ಲಿ ವೇದಿಕೆ ಮುಖ್ಯದ್ವಾರ.

### ಪೊಲೀಸ್ ಬಂದೋಬಸ್ತ್

ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಕೇಂದ್ರ ಸರಕಾರದ ಗೃಹ ಸಚಿವ ಅಮಿತ್ ಶಾ ಆಗಮಿಸಿದ ಹಿನ್ನೆಲೆ ಚಿತ್ರದುರ್ಗ ಜಿಲ್ಲಾ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಬಂದೋಬಸ್ತು ಮಾಡಲಾಗಿತ್ತು, ಅಡಿಷನಲ್ ಎಸ್ಪಿ-4, ಡಿವೈಎಸ್ಪಿ-17, ಪಿಐ-67, ಪಿಎಸ್‌ಐ-117, ಎಎಸ್‌ಐ-321, ಕಾನ್‌ಸ್ಟೆಬಲ್-1310, ಮಹಿಳಾ ಕಾನ್‌ಸ್ಟೆಬಲ್-159, ಗೃಹ ರಕ್ಷಕ ದಳ-755, ಕೆಎಸ್ ಆರ್‌ಪಿ ತುಕಡಿ -12, ಡಿಎಆರ್-14, ಸ್ಕ್ವಾರ್ಡ್-5, ಡಿಫೆನ್ಸ್-64 ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿತ್ತು. ಪೊಲೀಸ್ ಇಲಾಖೆ ಅಧಿಕಾರಿಗಳು ಬಿ.ಎಸ್.ವೈ ಅಭಿಮಾನೋತ್ಸವ ಕಾರ್ಯಕ್ರಮದ ವೇದಿಕೆ ಬಳಿ ಆಗಮಿಸಿ ತಪಾಸಣೆಯನ್ನು ನಡೆಸಿ ಆಹಿತಕರ ಘಟನೆ ನಡೆಯದಂತೆ ಕ್ರಮ ವಹಿಸಿದ್ದರು.



ವೇದಿಕೆ ಮುಂಭಾಗದಲ್ಲಿ ರಾರಾಜಿಸಿದ ಬಿಜೆಪಿ ನಾಯಕರ ಕಟೌಟ್‌ಗಳು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್ – 2021) PM-USHA (MERU)
E-mail: registrar@rcub.ac.in Phone No.: 0831-2565242
ಕುಲಸಚಿವರ ಕಾರ್ಯಾಲಯ
ಸಂ: ರಾಚವಿ/ಬೆಳಗಾವಿ/ಕುಸಕಾ/2026-27/641 ದಿನಾಂಕ:09.05.2026
-: ಟೆಂಡರ್ ಅಧಿಸೂಚನೆ (ಕೆ.ಪಿ.ಪಿ ಪೋರ್ಟಲ್‌ನಲ್ಲಿ):-
ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗಗಳಿಗೆ Basic and Applied Science Laboratory Equipment ಗಳನ್ನು PM-USHA MERU Scheme ಅಡಿಯಲ್ಲಿ ಖರೀದಿಸಲು ಮರುಟೆಂಟರ್ ಆಹ್ವಾನಿಸಲಾಗಿದೆ (No: RCUB/2025-26/IND0026/Call-2). ಟೆಂಡರ್‌ನ ಇ.ಎಮ್.ಡಿ ಮೊತ್ತ ರೂ. 1.65 ಲಕ್ಷಗಳಾಗಿದ್ದು, ಆಸಕ್ತರು https://kppp.karnataka.gov.in ಮೂಲಕ ದಿನಾಂಕ 25.05.2026 ರ ಸಂಜೆ 5.00 ಗಂಟೆಯೊಳಗಾಗಿ ಟೆಂಡರ್‌ಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಟೆಂಡರ್‌ನ ಅವಧಿ ವಿಸ್ತರಣೆ, ತಿದ್ದುಪಡಿ ಮತ್ತು ಇನ್ನಿತರೆ ಹೆಚ್ಚುವರಿ ಮಾಹಿತಿಗಳನ್ನು ಸದರಿ ಪೋರ್ಟಲ್‌ನಲ್ಲಿ ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್ www.rcub.ac.in ನಲ್ಲಿ ಬಿಡುಗಡೆ ಮಾಡಲಾಗುವುದು.
ಸಹಿ/-
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182-222943 Email ID: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಕೆ.ಪಿ.ಪಿ-ಪೋರ್ಟಲ್ ಮೂಲಕ)
ಐಎಫ್‌ಟಿ ಸಂಖ್ಯೆ. 12/2026-27 ದಿನಾಂಕ : 06.05.2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 20008 ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ 5054-80-190-0-01-132-ಕೆ.ಆರ್.ಡಿ.ಸಿ.ಎಲ್ ಸೇತುವೆಗಳ ಪುನಶ್ಚೇತನ/ದುರಸ್ಥಿ ಕಾಮಗಾರಿ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ ತಾಲ್ಲೂಕಿನಲ್ಲಿ ಮಲ್ಪೆ-ಮೊಳಕಾಲ್ಮೂರು ರಸ್ತೆ ರಾಜ್ಯ ಹೆದ್ದಾರಿ-65 ಸರಪಳಿ 165.75ಕಿ.ಮೀ ಯಲ್ಲಿರುವ ಭದ್ರಾನದಿ ಸೇತುವೆ ದುರಸ್ಥಿ/ಪುರ್ನವಸತಿ ನಿರ್ಮಾಣ ಕಾಮಗಾರಿ (ಇಂಡೆಂಟ್ ನಂ-33058) ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.156.62 ಲಕ್ಷ, ಮತ್ತು ಇ.ಎಂ.ಡಿ. ಮೊತ್ತ ರೂ.2.35 ಲಕ್ಷ. ಕಾಲಾವಧಿ 11 ತಿಂಗಳು ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ.
ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ http://kppp.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 07-05-2026 ರಿಂದ 14-05-2026 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 14-05-2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 15-05-2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ:16-05-2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/-
ವಾ.ಸಾ.ಸಂ.ಇ./ಶಿ/ನಂ.31-05/ ಝೀಂಕಾರ್/2026-27
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ಅಥಣಿಯ ಬಸವರಾಜ್ ಕೆಂಪವಾಡಗೆ ಅಖಿಲ ಭಾರತ ಮಟ್ಟದಲ್ಲಿ ಪ್ರಥಮ ರ‍್ಯಾಂಕ್

# ಐಎಫ್‌ಎಸ್ ಪರೀಕ್ಷೆಯಲ್ಲಿ ರೈತನ ಮಗ ದೇಶಕ್ಕೆ ಟಾಪರ್

**ಅಥಣಿ:** ಅತ್ಯಂತ ಕಠಿಣ ಪರೀಕ್ಷೆ ಯುಪಿಎಸ್‌ಸಿಯ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ಬೆಳಗಾವಿ ಜಿಲ್ಲೆ ಯುವಕ ಅಖಿಲ ಭಾರತ ಮಟ್ಟದಲ್ಲಿ ಇಡೀ ದೇಶಕ್ಕೆ ಪ್ರಥಮ ರ‍್ಯಾಂಕ್ ಪಡೆದು ರಾಜ್ಯದ ಕೀರ್ತಿ ಹೆಚ್ಚಿಸಿದ್ದಾರೆ.

1.5 ಎಕರೆ ಕೃಷಿ ಭೂಮಿ ಹೊಂದಿರುವ ಅಥಣಿ ತಾಲೂಕಿನ ಸವದಿ ಗ್ರಾಮದ ಧರೆಪ್ಪ ಕೆಂಪವಾಡ ಅವರ ಮಗ ಬಸವರಾಜ ಧರೆಪ್ಪ ಕೆಂಪವಾಡ ಅವರು ಈ ಸಾಧನೆ ಮಾಡಿದ್ದಾರೆ. ಸರಕಾರಿ ಶಾಲೆಯಲ್ಲಿ ಕಷ್ಟದಲ್ಲೇ ಓದಿದ ಇವರು ಈ ಅತ್ಯುನ್ನತ ಸಾಧನೆ ಮಾಡಿರುವುದಕ್ಕೆ ಸವದಿ ಗ್ರಾಮವೇ ಸಂತಸ ಪಟ್ಟಿದೆ.

ಬಸವರಾಜ್ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಾದ ಸವದಿ ಗ್ರಾಮದಲ್ಲಿಯೇ ಪೂರೈಸಿದರು. 6ನೇ ತರಗತಿಯಿಂದ 10ನೇ ತರಗತಿಯವರೆಗೆ ಅಳಗವಾಡಿಯ ಮುರಾರ್ಜಿ ವಸತಿ ಶಾಲೆಯಲ್ಲಿ ಶಿಕ್ಷಣವನ್ನ ಪಡೆದು, ನಂತರ ಜಮಖಂಡಿ ತಾಲೂಕಿನ ಕೊಣ್ಣೂರು ಎಲ್ಲಟ್ಟಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿದರು. ನಂತರ ನಾಲ್ಕು ವರ್ಷಗಳ ಕಾಲ ಬಿಎಸ್ಸಿ ಫಾರೆಸ್ಟ್ ಪದವಿ ವ್ಯಾಸಂಗ ಮಾಡಿದ ಬಸವರಾಜ ಐಎಎಸ್ ಪರೀಕ್ಷೆ ಪಾಸ್ ಮಾಡುವ ಕನಸು ಹೊಂದಿದ್ದಾರೆ. ಅದಕ್ಕಾಗಿ ಸತತ ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ವಿವಿಧ ಗ್ರಂಥಾಲಯಗಳಲ್ಲಿ ಅಭ್ಯಾಸ ಮಾಡಿದರು. ತದನಂತರ ಬೆಂಗಳೂರಿನಲ್ಲಿ ಯುಪಿಎಸ್ಸಿ ಪರೀಕ್ಷೆಗಾಗಿ ಕಠಿಣ ಸಿದ್ಧತೆ ನಡೆಸಿದ್ದರು.

> ಕಳೆದ ಬಾರಿ ಐಎಫ್‌ಎಸ್ ಪೂರ್ವಭಾವಿ ಪರೀಕ್ಷೆಯಲ್ಲೂ ಬಸವರಾಜ ಉತ್ತೀರ್ಣವಾಗಿರಲಿಲ್ಲ. ಆದರೆ, ಛಲ ಬಿಡದೆ ಓದಿ, ಈಗ ಇಡೀ ದೇಶಕ್ಕೆ ಮೊದಲ ಸ್ಥಾನ ಗಳಿಸಿದ್ದು ಖುಷಿ ತಂದಿದೆ. ಪ್ರಯತ್ನಪಟ್ಟರೆ ಯಾವುದೂ ಅಸಾಧ್ಯವಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ಐಎಎಸ್ ಅಧಿಕಾರಿಯಾಗಬೇಕು ಎಂಬ ಕನಸಿನೊಂದಿಗೆ ಅಧ್ಯಯನ ಮುಂದುವರಿಸಿದ್ದಾನೆ.
> -ಸಿದ್ದು ಕೆಂಪವಾಡ, ಬಸವರಾಜ ಸಹೋದರ

> ನನ್ನ ಸತತ ಪ್ರಯತ್ನ, ಕಠಿಣ ಪರಿಶ್ರಮದಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಮೊರಾರ್ಜಿ ವಸತಿ ಶಾಲೆಯಲ್ಲಿ ಕಲಿತ ನಾನು, ಒಬ್ಬ ರೈತನ ಮಗನಾಗಿ ಈ ಹಂತಕ್ಕೆ ತಲುಪಿದ್ದು, ನನಗೆ ಅತೀವ ಹೆಮ್ಮೆ ಮತ್ತು ಸಂತಸ ತಂದಿದೆ. ಸಾಧಿಸುವ ಛಲವಿದ್ದರೆ ಸಾಧನೆಗೆ ಬಡತನ ಅಡ್ಡಿಯಾಗುವುದಿಲ್ಲ.
> - ಬಸವರಾಜು ಕೆಂಪವಾಡ, ಐಎಫ್‌ಎಸ್‌ನಲ್ಲಿ ಪ್ರಥಮ ರ‍್ಯಾಂಕ್

**ಮೂವರು ಮಕ್ಕಳಿಗೆ ಉನ್ನತ ಶಿಕ್ಷಣ:** ವಿಶ್ವವಾಣಿ ಜತೆ ಮಾತನಾಡಿದ ಬಸವರಾಜು ಅವರ ತಂದೆ ಧರೆಪ್ಪ ಕೆಂಪವಾಡ ಮಗನ ಸಾಧನೆಗೆ ಹರ್ಷ ವ್ಯಕ್ತಪಡಿಸಿದರು. ನಮ್ಮದು ರೈತಾಪಿ ಕುಟುಂಬ, 1.5 ಎಕರೆ ಜಮೀನಿನಲ್ಲಿ ಪುಟ್ಟ ಸಂಸಾರ ಕಟ್ಟಿಕೊಂಡಿದ್ದೇವೆ. ನನಗೆ ಇಬ್ಬರು ಪುತ್ರಿಯರು ಮತ್ತು ಇಬ್ಬರು ಪುತ್ರರು ಸೇರಿ ನಾಲ್ಕು ಜನ ಮಕ್ಕಳಿದ್ದಾರೆ. ಮೊದಲನೆಯ ಮಗಳು ವಿದ್ಯಾ ಎಂಜಿನಿಯರಿಂಗ್ ಪದವಿ ಪಡೆದು ಈಗ ಬೆಂಗಳೂರಿನಲ್ಲಿ ಗಂಡನೊಂದಿಗೆ ನೌಕರಿ ಮಾಡುತ್ತಿದ್ದಾಳೆ. ಎರಡನೆಯ ಮಗ ಸಿದ್ದು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ಮೂರನೆಯ ಮಗಳು ರಾಜಶ್ರೀ ಎಂಜಿನಿಯರಿಂಗ್ ಪದವಿ ಮುಗಿಸಿದ್ದಾಳೆ. ಇನ್ನು ನಾಲ್ಕನೆಯ ಮಗ ಬಸವರಾಜು ಐಎಎಸ್ ಅಧಿಕಾರಿ ಆಗಬೇಕು ಎಂಬ ಕನಸು ಹೊಂದಿ ವಿದ್ಯಾಭ್ಯಾಸ ಮಾಡುತ್ತಿದ್ದನು. ಈ ದಿನ ಆತನು ಓದಿ ರಾಷ್ಟ್ರಮಟ್ಟದಲ್ಲಿ ಉನ್ನತ ಸಾಧನೆ ಮಾಡಿರುವುದು ನಮ್ಮೆಲ್ಲರಿಗೆ ಸಂತಸ ತಂದಿದೆ. ನಮಗೆ ಜಮೀನು ಕಡಿಮೆ ಇದ್ದರೂ ಮಕ್ಕಳ ಶಿಕ್ಷಣಕ್ಕೆ ಯಾವುದೇ ಕೊರತೆ ಮಾಡಿಲ್ಲ, ನಾನು ಬೇರೆಯವರ ಜಮೀನುಗಳನ್ನು ಪಾಲದ ರೂಪದಲ್ಲಿ ಮಾಡಿಕೊಂಡು ಮಕ್ಕಳಿಗೆ ಶಿಕ್ಷಣವನ್ನು ನೀಡಿದ್ದೇನೆ. ನನ್ನ ಶ್ರಮಕ್ಕೆ ಈ ಭೂತಾಯಿ ಮತ್ತು ಆ ದೇವರು ಕೃಪೆ ತೋರಿದ್ದಾನೆ. ಮಗ ಬಸವರಾಜು ಮಾಡಿರುವ ಸಾಧನೆ ನಮ್ಮ ಕುಟುಂಬಕ್ಕೆ ಅಷ್ಟೇ ಅಲ್ಲ, ಇಡೀ ಗ್ರಾಮವೇ ಹೆಮ್ಮೆ ಮತ್ತು ಸಂತಸ ಪಡುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

# ನೆಡುತೋಪು ನಿರ್ಮಿಸಲು 100 ಎಕರೆ ಸ್ವಾಧೀನ ಆಗಲಿ

ಅಧಿಕಾರಿಗಳ ಜತೆ ಸಚಿವ ಈಶ್ವರ್ ಖಂಡ್ರೆ ಚರ್ಚೆ ನಡೆಸಿದರು.

**ಬೆಂಗಳೂರು:** ಹಾಸನ ನಗರಕ್ಕೆ ಹೊಂದಿಕೊಂಡಂತೆ ಇರುವ ಶಾಂತಿಗ್ರಾಮ ಹೋಬಳಿಯ ಮಡೆನೂರಿನ ಸರ್ವೆ ನಂ.298ರಲ್ಲಿರುವ 100 ಎಕರೆ ಅರಣ್ಯ ಭೂಮಿಯನ್ನು ಕೂಡಲೇ ವಶಕ್ಕೆ ಪಡೆದು ನೆಡುತೋಪು ಬೆಳೆಸಲು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸೂಚಿಸಿದ್ದಾರೆ. ಬೆಂಗಳೂರಿನಲ್ಲಿ ಹಿರಿಯ ಅರಣ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬೇಲೂರು ಪ್ರವಾಸದ ವೇಳೆ ಹಾಸನದ ಕೃಷಿ ಸಂಶೋಧನಾ ಕೇಂದ್ರ ಮತ್ತು ಜೈವಿಕ ಇಂಧನ ಘಟಕದ ಸಮೀಪ ಇರುವ ಕೋಟ್ಯಂತರ ರು.ಬೆಲೆಬಾಳುವ ಭೂಮಿಯ ವೀಕ್ಷಣೆ ಮಾಡಿದ್ದು ಬೆಲೆ ಬಾಳುವ ಈ ಅರಣ್ಯ ಭೂಮಿ ಸಂರಕ್ಷಣೆಗೆ ಆದೇಶ ನೀಡಿದರು.

ನೂರು ಎಕರೆ ಭೂಮಿಯನ್ನು 2015-16ರಲ್ಲಿ ಅರಣ್ಯ ಇಲಾಖೆ ಪರವಾಗಿ ಮ್ಯುಟೇಷನ್ ಮಾಡಿ ಪಹಣಿ ಆಗಿರುತ್ತದೆ. ಆದಾಗ್ಯೂ ಇಲ್ಲಿ ಈವರೆಗೆ ಅರಣ್ಯೀಕರಣ ಮಾಡಿ ಉತ್ತಮ ಶ್ವಾಸತಾಣ ನಿರ್ಮಿಸದ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಅಲ್ಲದೆ, 2024ರಲ್ಲೇ ತಾವು ಸದರಿ ಜಮೀನನ್ನು ವಶಕ್ಕೆ ಪಡೆದು ಸ್ಥಳೀಯ ಪ್ರಭೇದದ ಗಿಡ ನೆಡುವಂತೆ ಸೂಚಿಸಿದ್ದರೂ ಈವರೆಗೆ ಕ್ರಮ ವಹಿಸದೆ ವಿಳಂಬ ಮಾಡಿರುವ ಬಗ್ಗೆ ವರದಿ ನೀಡಲು ಸಚಿವರು ಸೂಚಿಸಿದರು. 2015ರ ನಂತರ ಆಗಿರುವ ಎಲ್ಲ ಅರಣ್ಯ ಭೂಮಿ ಒತ್ತುವರಿ ತೆರವಿಗೆ ತಾವು ಹಲವು ಬಾರಿ ಸೂಚಿಸಿದ್ದರೂ ಕ್ರಮ ಏಕೆ ಆಗಿಲ್ಲ ಎಂದು ಪ್ರಶ್ನಿಸಿದ ಅವರು, ಪ್ರಸ್ತುತ ಖಾಲಿ ಇರುವ ಅರಣ್ಯ ಭೂಮಿಯನ್ನು ಕೂಡಲೇ ವಶಕ್ಕೆ ಪಡೆದು ಬೇಲಿ ಹಾಕಲು ಮತ್ತು ಒತ್ತುವರಿ ಆಗಿರುವ ಅರಣ್ಯ ಭೂಮಿ ತೆರವಿಗೆ ಕರ್ನಾಟಕ ಅರಣ್ಯ ಕಾಯಿದೆಯ ಸೆಕ್ಷನ್ 64 ಎ ಪ್ರಕ್ರಿಯೆ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತದಳ ಮತ್ತು ಸಾಮಾಜಿಕ ಅರಣ್ಯ) ಮನೋಜ್ ತ್ರಿಪಾಠಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶಿವಶಂಕರ್, ಡಿಸಿಎಫ್ ರವೀಂದ್ರ ಕುಮಾರ್ ಮತ್ತಿತರರು ಹಾಜರಿದ್ದರು.

ನಾಳೆಯಿಂದ ಅಬಕಾರಿ ಹೊಸ ತೆರಿಗೆ ನೀತಿ ಜಾರಿ | ಸ್ಥಳೀಯ ಮದ್ಯದ ಬ್ರ್ಯಾಂಡ್‌ಗಳಿಗೆ ಹಿನ್ನಡೆ

# ರಮ್, ಬ್ರಾಂಡಿ ಬೆಲೆ ಶೇ.20ರಷ್ಟು ಹೆಚ್ಚಳ ಸಾಧ್ಯತೆ

**ಬೆಂಗಳೂರು:** ರಾಜ್ಯ ಸರಕಾರವು ಮದ್ಯದ ಮೇಲಿನ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದು, ಆಲ್ಕೋಹಾಲ್ ಇನ್ ಬೇವರೇಜ್ (ಎಐಬಿ) ಆಧಾರಿತ ಹೊಸ ಅಬಕಾರಿ ನೀತಿ ಜಾರಿಗೆ ತರಲು ಅಂತಿಮ ಅಧಿಸೂಚನೆ ಹೊರಡಿಸಿದೆ. ಈ ಹೊಸ ನೀತಿ ಮೇ 11ರಿಂದ ರಾಜ್ಯಾದ್ಯಂತ ಜಾರಿಗೆ ಬರಲಿದೆ.

ಈ ಮೂಲಕ ಕಳೆದ 6 ದಶಕಗಳಿಂದ ಜಾರಿಯಲ್ಲಿದ್ದ ಬಲ್ಕ್ ಲೀಟರ್ ಆಧಾರಿತ ತೆರಿಗೆ ವ್ಯವಸ್ಥೆಗೆ ತೆರೆ ಬೀಳಲಿದೆ. ಕರ್ನಾಟಕವು ದೇಶದಲ್ಲೇ ಮೊದಲ ಬಾರಿಗೆ ಎಐಬಿ ಆಧಾರಿತ ತೆರಿಗೆ ನೀತಿ ಅನುಷ್ಠಾನಗೊಳಿಸುತ್ತಿರುವ ರಾಜ್ಯವಾಗಿದೆ.

ಸರಕಾರವು ಏಪ್ರಿಲ್ 18ರಂದು ಕರಡು ಅಧಿಸೂಚನೆ ಹೊರಡಿಸಿ ಸಾರ್ವಜನಿಕರಿಂದ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಿತ್ತು. ಬಂದ ಅಭಿಪ್ರಾಯಗಳನ್ನು ಪರಿಗಣಿಸಿದ ಬಳಿಕ ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕ) (2ನೇ ತಿದ್ದುಪಡಿ) ನಿಯಮಗಳು, 2026 ಅನ್ನು ಅಂತಿಮಗೊಳಿಸಲಾಗಿದೆ. ಹೊಸ ನೀತಿಯ ಪ್ರಕಾರ, ಬ್ರಾಂಡಿ, ವಿಸ್ಕಿ, ರಮ್, ಜಿನ್, ಬಿಯರ್, ವೈನ್ ಸೇರಿದಂತೆ ವಿವಿಧ ಮದ್ಯಗಳಲ್ಲಿ ಇರುವ ಆಲ್ಕೋಹಾಲ್ ಪ್ರಮಾಣ ಆಧರಿಸಿ ತೆರಿಗೆ ವಿಧಿಸಲಾಗುತ್ತದೆ. ಇದರಿಂದ ಈಗಿರುವ 16 ಅಬಕಾರಿ ಸ್ಲ್ಯಾಬ್‌ಗಳನ್ನು ಕಡಿತಗೊಳಿಸಿ ಕೇವಲ 8 ಸ್ಲ್ಯಾಬ್‌ಗಳಿಗೆ ಸೀಮಿತಗೊಳಿಸಲಾಗಿದೆ. ಅಬಕಾರಿ ಇಲಾಖೆಯ ಆದಾಯದಲ್ಲಿ ಪ್ರಮುಖ ಪಾತ್ರವಹಿಸುವ ಕಡಿಮೆ ದರದ ಮದ್ಯ ವಿಭಾಗದ ಮೇಲೆ ಈ ನೀತಿಯ ಪರಿಣಾಮ ಹೆಚ್ಚು ಕಾಣಿಸಿಕೊಳ್ಳಲಿದೆ ಎಂದು ಉದ್ಯಮ ಮೂಲಗಳು ತಿಳಿಸಿವೆ.

> ಇದು ಅಬಕಾರಿ ವ್ಯವಸ್ಥೆಯನ್ನು ಆಧುನೀಕರಿಸುವ ಹಾಗೂ ಸರಳಗೊಳಿಸುವ ಮುನ್ನೋಟದ ಹೆಜ್ಜೆಯಾಗಿದೆ. ಈ ಮೂಲಕ ಪ್ರೀಮಿಯಂ ಉತ್ಪನ್ನಗಳ ಬೆಳವಣಿಗೆಗೆ ಉತ್ತೇಜನ ಸಿಗಲಿದೆ.
> - ಸಂಜಿತ್ ಪಾಧಿ, ಇಂಟರ್‌ನ್ಯಾಷನಲ್ ಸ್ಪಿರಿಟ್ಸ್ ಆ್ಯಂಡ್ ವೈನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಿಇಒ

ವಿಶೇಷವಾಗಿ ಹೆಚ್ಚು ಮಾರಾಟವಾಗುವ 180 ಮಿಲಿ ಟೆಟ್ರಾ ಪ್ಯಾಕ್‌ಗಳ ವಿಸ್ಕಿ, ರಮ್, ಬ್ರಾಂಡಿ, ಜಿನ್ ಹಾಗೂ

ವೋಡ್ಕಾ ಬೆಲೆ ಕನಿಷ್ಠ 20% ಹೆಚ್ಚಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಇದೇ ವೇಳೆ ಪ್ರೀಮಿಯಂ ಮದ್ಯ ಬ್ರ್ಯಾಂಡ್‌ಗಳ ಬೆಲೆ ಶೇ.16 ರಿಂದ ಶೇ.20ವರೆಗೆ ಇಳಿಕೆಯಾಗುವ ಸಾಧ್ಯತೆ ಇದೆ. ಇದರಿಂದ ಬಹುರಾಷ್ಟ್ರೀಯ ಪ್ರೀಮಿಯಂ ಬ್ರ್ಯಾಂಡ್‌ಗಳಿಗೆ ಲಾಭವಾಗಬಹುದು, ಆದರೆ, ಸ್ಥಳೀಯ ಡಿಸ್ಟಿಲರಿಗಳು ಮತ್ತು ಪ್ರಾದೇಶಿಕ ಉತ್ಪಾದಕರಿಗೆ ಹಿನ್ನಡೆ ಉಂಟಾಗಬಹುದು ಎಂದು ಉದ್ಯಮ ವಲಯ ಆತಂಕ ವ್ಯಕ್ತಪಡಿಸಿದೆ.

# ಮದಕರಿ ನಾಡಲ್ಲಿ ಬಿಜೆಪಿ ನಾಯಕರ ಸಮಾಗಮ

## ರಾಜ್ಯ ರಾಜಕಾರಣದಲ್ಲಿ ಐತಿಹಾಸಿಕ ಕಾರ್ಯಕ್ರಮ | ನಾಡಿನ ಮೂಲೆಮೂಲೆಯಿಂದ ಆಗಮಿಸಿದ್ದ ಬಿಎಸ್‌ವೈ ಬೆಂಬಲಿಗರು

**ವಿಶ್ವವಾಣಿ ಸುದ್ದಿಮನೆ ಚಿತ್ರದುರ್ಗ**

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಾರ್ವಜನಿಕ ಜೀವನಕ್ಕೆ ಕಾಲಿಟ್ಟು ಐವತ್ತು ವರ್ಷ ಕಾಲಿಟ್ಟ ಹಿನ್ನೆಲೆಯಲ್ಲಿ ಕೋಟೆ ನಾಡು ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಭಿನ್ನ ಮತೀಯರು ಸೇರಿದಂತೆ ಸಾವಿರಾರು ನಾಯಕರು, ನೂರಾರು ಮಠಾಧೀಶರು, ಜಗದ್ಗುರುಗಳು ಸೇರಿದಂತೆ ವಿವಿಧ ಮಠಗಳ ಸ್ವಾಮೀಜಿಗಳು ಭಾಗವಹಿಸಿದ್ದರು.

ಸುದೀರ್ಘ ರಾಜಕೀಯ ಜೀವನ ಮತ್ತು ಸಾರ್ಥಕ ಜನ ಸೇವೆಯ ಯಡಿಯೂರಪ್ಪ ಅಭಿಮಾನೋತ್ಸವಕ್ಕೆ ನಾಡಿನ ಎಲ್ಲಾ ಮೂಲೆಗಳಿಂದಲೂ ಜನಸಾಗರವೇ ಹರಿದು ಬಂದಿದ್ದು, ಜನರ ಆದರಾಭಿಮಾನ, ಪ್ರೀತಿಯಲ್ಲಿ ಯಡಿಯೂರಪ್ಪ ಮಿಂದೆದ್ದರು. ಕೋಟೆನಾಡು ಚಿತ್ರದುರ್ಗದಲ್ಲಿ ಲಕ್ಷಾಂತರ ಜನರ ಸಮ್ಮುಖದಲ್ಲಿ ಯಡಿಯೂರಪ್ಪನವರ ಸಾರ್ಥಕ ಜನ ಸೇವೆಗೆ ಗೌರವ ಸಮರ್ಪಣೆ ಮಾಡಿ ನಾಡಿನ ಜನತೆಯ ಪರವಾಗಿ ಕೃತಜ್ಞತೆ ಹಾಗೂ ಅಭಿನಂದನೆ ಸಲ್ಲಿಸಲಾಯಿತು. ಬಿಎಸ್‌ವೈ ಅಭಿಮಾನೋತ್ಸವಕ್ಕೆ ಲಕ್ಷಾಂತರ ಜನ ಸೇರಿದ್ದು, ಕೋಟೆನಾಡು ಚಿತ್ರದುರ್ಗ ನವವಧುವಿನಂತೆ ಸಿಂಗಾರಗೊಂಡಿದೆ.

ಜನಸೇವೆಯನ್ನೇ ತಮ್ಮ ಉಸಿರಾಗಿಸಿ 4 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ಚುಕ್ಕಾಣಿ ಹಿಡಿದು ಜನಪರ ಕಾರ್ಯಕ್ರಮಗಳ ಜಾರಿ ಮೂಲಕ ರಾಜ್ಯ ರಾಜಕೀಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ದಕ್ಷಿಣ ಭಾರತದಲ್ಲಿ ಮೊದಲ ಬಾರಿ ಬಿಜೆಪಿಯ ಕಮಲ ಅರಳಲು ಕಾರಣರಾಗಿರುವ ಬಿ.ಎಸ್.ವೈ. ರವರನ್ನು ಬಿಜೆಪಿ ರಾಷ್ಟ್ರೀಯ ನಾಯಕರ ಸಮ್ಮುಖದಲ್ಲಿ ಅಭಿನಂದಿಸಿ ಗೌರವಿಸಲಾಯಿತು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ 5 ದಶಕದ ಸಾಧನೆಯ ಸಂಭ್ರಮ, ಅಭಿನಂದನೆ, ಗೌರವದ ಸಮರ್ಪಣಾ ಕಾರ್ಯಕ್ರಮಕ್ಕೆ ಲಕ್ಷಾಂತರ ಜನ ಸಾಕ್ಷಿಯಾಗಿ ತಮ್ಮ ನೆಚ್ಚಿನ ನಾಯಕನಿಗೆ ಪ್ರೀತಿ, ಗೌರವ ಸಮರ್ಪಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಚಿತ್ರದುರ್ಗದಲ್ಲಿ ಶನಿವಾರ ನಡೆದ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಲನೆ ನೀಡಿದರು. ಈ ವೇಳೆ ನಾಡಿನ ಹರಗುರುಚರಮೂರ್ತಿಗಳು ಸೇರಿದಂತೆ ಬಿಜೆಪಿ ರಾಜ್ಯ ನಾಯಕರು, ಕೇಂದ್ರ ಸಚಿವರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಬೃಹತ್ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಪ್ರಲ್ಹಾದ್ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯ ಉಸ್ತುವಾರಿ ಡಾ.ರಾಧಾಮೋಹನ್ ಅಗರ್‌ವಾಲ್, ಸಹ ಉಸ್ತುವಾರಿ ಸುಧಾಕರ ರೆಡ್ಡಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಡಿ.ವಿ.ಸದಾನಂದ ಗೌಡ, ಜಗದೀಶ ಶೆಟ್ಟರ್, ಬಿಎಸ್‌ವೈ ಅಭಿಮಾನೋತ್ಸವ ಸಮಿತಿಯ ಅಧ್ಯಕ್ಷ ಪ್ರಭಾಕರ್ ಕೋರೆ, ಮಾಜಿ ಉಪಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ, ಜಿ.ಎಂ.ಸಿದ್ದೇಶ್ವರ್, ಎ.ನಾರಾಯಣಸ್ವಾಮಿ, ಮಾಜಿ ಸಚಿವರಾದ ಬಿ.ಶ್ರೀರಾಮುಲು, ಸಿ.ಟಿ.ರವಿ, ಮಾಜಿ ಡಿಸಿಎಂ ಡಾ.ಅಶ್ವತ್ಥನಾರಾಯಣ, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಸಂಸದರು, ಶಾಸಕರು, ಜನಪ್ರತಿನಿಧಿಗಳು, ವಿವಿಧ ಮಠಗಳ ಮಠಾಧೀಶರು ಮತ್ತು ಗಣ್ಯರು ಉಪಸ್ಥಿತರಿದ್ದರು. ಲಕ್ಷಾಂತರ ಜನರು ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ನಾಡಿನ ಹಲವು ಮಠಗಳ ಮಠಾಧೀಶರು, ಸಾಧು ಸಂತರು ಭಾಗಿಯಾಗಿ ಬಿಎಸ್‌ವೈ ರವರಿಗೆ ಆಶೀರ್ವಾದ ಮಾಡಿದ್ದು ವಿಶೇಷವಾಗಿತ್ತು.

## ಸಮಾಚಾರ ಸಣ್ಣದಲ್ಲ

### ಯಡಿಯೂರಪ್ಪ ಮಹಾನ್ ಸಾಧಕರು

**ಚಿತ್ರದುರ್ಗ:** ಆರೆಸ್ಸೆಸ್ ಪ್ರಚಾರಕರಾಗಿ ಶಿಕಾರಿಪುರಕ್ಕೆ ಹೆಜ್ಜೆ ಹಾಕಿದ ಯಡಿಯೂರಪ್ಪ ಅವರು ಒಬ್ಬ ಮಹಾನ್ ಸಾಧಕ ಎಂದು ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ ಬಣ್ಣಿಸಿದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಅತ್ಯಂತ ಅದ್ಭುತವಾಗಿ ಕಾರ್ಯಕ್ರಮ ನಡೆಯುತ್ತಿದೆ. ಮದಕರಿ ನಾಯಕ, ಒನಕೆ ಓಬವ್ವನ ನಾಡಿದು. ಪ್ರಾಸ್ತಾವಿಕ ನುಡಿ ನನ್ನ ಜೀವನದ ಸಾರ್ಥಕ ಕ್ಷಣ. ಯಡಿಯೂರಪ್ಪ ಅವರ ದೃಷ್ಟಿಯಲ್ಲಿ ರಾಜಕಾರಣ ಎಂದರೆ ಜನಸಾಮಾನ್ಯರ ಪರ ಹೋರಾಟದ ಅಂಗಳ ಎಂದು ನುಡಿದರು. ಜೀತಪದ್ಧತಿ ವಿರೋಧಿಸಿದವರು. ವಿಧಾನಸೌಧದಲ್ಲಿ ಇದೇ ವಿಚಾರದಲ್ಲಿ ಗುಡುಗಿದವರು ಎಂದು ನೆನಪಿಸಿದರು. ಲಕ್ಷಾಂತರ ರೈತರ ಹೋರಾಟಕ್ಕೆ ನಿರಂತರ ಸಾಥ್ ಕೊಟ್ಟವರು ಎಂದರು. ಬಡವರು, ದುರ್ಬಲರು ಮತ್ತು ಹಿಂದುಳಿದ ಸಮಾಜದ ಬಗ್ಗೆ ಸದಾ ಜನಪರವಾಗಿ ನಡೆದುಕೊಂಡಿದ್ದರು. ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನ ನೀಡಿದ್ದರು. 15 ಲಕ್ಷ ಬಡವರ ಮಕ್ಕಳಿಗೆ ಸೈಕಲ್ ನೀಡಿದ್ದರು. ಮೋದಿಜೀ, ಯಡಿಯೂರಪ್ಪನವರ ಮಾರ್ಗದರ್ಶನದಲ್ಲಿ ನಮ್ಮ ಸಂಘಟನೆಯ ಅಶ್ವಮೇಧವನ್ನು ಬಿಡುತ್ತಿದ್ದೇವೆ. ಅದನ್ನು ತಡೆಯುವ ಶಕ್ತಿ ಯಾರಿಗೂ ಇರಲಾರದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

### ಬಿಎಸ್‌ವೈ ನೇತೃತ್ವದಲ್ಲಿ ಮತ್ತೆ ಬಿಜೆಪಿ ಅಧಿಕಾರ

**ಚಿತ್ರದುರ್ಗ:** ಬಿಎಸ್‌ವೈ ಅವರ ಜೀವನದಲ್ಲಿ ಜನರಿಗೆ ನೀಡಿದ ಸೇವೆಯ ಕುರಿತ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜೀ ಅವರ ಸಂದೇಶವನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಾಚಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಬಿಜೆಪಿ ಬೆಳವಣಿಗೆಗೆ ಅವರ ತ್ಯಾಗ, ಬೆವರಿನ ದುಡಿಮೆಯ ಕುರಿತು ಸಂದೇಶದಲ್ಲಿ ಮಾಹಿತಿ ನೀಡಿದ್ದನ್ನು ವಿವರಿಸಿದರು. ಕರ್ನಾಟಕದಲ್ಲಿ ಬಿಜೆಪಿಯ ಮೊದಲ ಮುಖ್ಯಮಂತ್ರಿಯಾದುದು, ಪ್ರತ್ಯೇಕ ಕೃಷಿ ಬಜೆಟ್ ನೀಡಿದ್ದನ್ನು ಮೋದಿ ಜೀ ಅವರು ವಿವರಿಸಿದ್ದನ್ನು ತಿಳಿಸಿದರು. ಯಡಿಯೂರಪ್ಪ ಅವರ ಸರಳತೆ, ಕಠಿಣ ಪರಿಶ್ರಮ, ಜನರ ಕಡೆ ಅವರ ಪ್ರೀತಿ, ರಾಜ್ಯದ ಏಳಿಗೆಗಾಗಿ ಅವರ ಶ್ರಮವನ್ನು ಮೋದಿಜೀ ಅವರು ತಮ್ಮ ಸಂದೇಶದಲ್ಲಿ ವಿವರಿಸಿದ್ದನ್ನು ತಿಳಿಸಿದರು. ಕಾರ್ಯಕರ್ತರಿಗೆ ಮತ್ತು ಜನಪ್ರತಿನಿಧಿಗಳಿಗೆ ಅವರ ಮಾರ್ಗದರ್ಶನ ಇರಲಿ ಎಂದು ತಿಳಿಸಿದ್ದನ್ನು ಗಮನಕ್ಕೆ ತಂದರು. ಮೋದಿಜೀ ಅವರು ಅತ್ಯಂತ ವಿಶ್ವಾಸಾರ್ಹ ಜಗತ್ತಿನ ನಾಯಕ. ಅವರು ಬಿಎಸ್‌ವೈ ಬಗ್ಗೆ ಅತ್ಯಂತ ಉತ್ತಮ ಸಂದೇಶ ನೀಡಿದ್ದಾರೆ ಎಂದರು. ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಅಧಿಕಾರ ಪಡೆದಿದೆ. ಎನ್‌ಡಿಎ 21 ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದೆ. ಕರ್ನಾಟಕದಲ್ಲೂ ಯಡಿಯೂರಪ್ಪನವರ ನೇತೃತ್ವದಲ್ಲಿ ಮತ್ತೆ ಬಿಜೆಪಿ ಅಧಿಕಾರ ಪಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



### ಅದ್ದೂರಿ ಪುರ ಪ್ರವೇಶ

ಬಿಎಸ್‌ವೈ ಅಭಿಮಾನೋತ್ಸವ ಮುನ್ನಾ ದಿನವಾದ ನಿನ್ನೆ ಸಂಜೆ ಮಾಜಿ ಸಿಎಂ ಯಡಿಯೂರಪ್ಪನವರ ಪುರ ಪ್ರವೇಶ ಅದ್ದೂರಿಯಾಗಿ ನಡೆಯಿತು. ಶುಕ್ರವಾರ ಸಂಜೆ ಯಡಿಯೂರಪ್ಪನವರು ಚಿತ್ರದುರ್ಗದ ಪ್ರವೇಶ ದ್ವಾರಕ್ಕೆ ಆಗಮಿಸುತ್ತಿದ್ದಂತೆಯೇ ಎರಡು ಜೆಸಿಬಿ ಮೂಲಕ ಹೂವಿನ ಸುರಿಮಳೆ ಸುರಿಸಲಾಯಿತು. ಪಟಾಕಿ ಸದ್ದು, ಕಲಾ ತಂಡಗಳ ಅದ್ದೂರಿ ಪ್ರದರ್ಶನ ಬಿಎಸ್‌ವೈರವರ ಪುರ ಪ್ರವೇಶವನ್ನು ಸ್ಮರಣೀಯವಾಗಿಸಿತು. ಒಂದು ಸಾವಿರಕ್ಕೂ ಹೆಚ್ಚು ಮಹಿಳೆಯರು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು. ಈ ಹಿಂದೆ ಯಡಿಯೂರಪ್ಪ ಬಳಸುತ್ತಿದ್ದ ಅಂಬಾಸಿಡರ್ ಕಾರು ಈ ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿತ್ತು.

### ನಿಮ್ಮ ಮನೆ ಮಗನಾಗಿ ನಿಂತಿರುವೆ

ನಾನು ಇಲ್ಲಿ ಕೇವಲ ರಾಜಕಾರಣಿಯಾಗಿ ನಿಂತಿಲ್ಲ, ಬದಲಿಗೆ ನಿಮ್ಮ ಮನೆ ಮಗನಾಗಿ ನಿಂತಿದ್ದೇನೆ. ಮದಕರಿ ನಾಯಕ, ಒನಕೆ ಓಬವ್ವನ ನಾಡು ಚಿತ್ರದುರ್ಗ, ಶರಣರು ನಡೆದಾಡುವ ತಪೋವನ ಇದು. ಇಲ್ಲಿ ಅಭಿಮಾನೋತ್ಸವ ಆಯೋಜಿಸಿರುವುದು ಅತೀವ ಖುಷಿ ನೀಡಿದೆ. ಕನ್ನಡ ನಾಡಿನ ಮೂಲೆ ಮೂಲೆಯಿಂದ ಹರಿದು ಬಂದಿರುವ ಅಭಿಮಾನದ ಸಾಗರದ ಮಧ್ಯೆ ನಿಂತಿರುವ ನನಗೆ ಅಕ್ಷರಶಃ ಮಾತು ಬರುತ್ತಿಲ್ಲ. 50 ವರ್ಷದ ರಾಜಕೀಯ ಜೀವನವನ್ನು ನಿಮ್ಮೊಂದಿಗೆ ಕಳೆದ ನನ್ನನ್ನು ಈ ಸಾಗರದಲ್ಲಿ ತೋಯಿಸಿ ಸಡಗರ ಪಡುತ್ತಿರುವುದಕ್ಕೆ ನಿಮಗೆ ಋಣಿಯಾಗಿದ್ದೇನೆ ಎಂದು ಬಿಎಸ್‌ವೈ ಹೇಳಿದರು.

## ಜನ ಸೇವೆಗೆ ಜೀವನ ಸಮರ್ಪಣೆ: ಯಡಿಯೂರಪ್ಪ

ಐವತ್ತು ವರ್ಷಗಳಿಂದ ನಾಡಿನ ಜನರ ಸೇವೆಗೆ ಜೀವನ ಸಮರ್ಪಣೆ ಮಾಡಿಕೊಂಡು ಬಂದಿದ್ದೇನೆ. ಹುಟ್ಟುವಾಗಲೇ ಚಿನ್ನದ ಚಮಚವನ್ನು ಬಾಯಿಯಲ್ಲಿ ಇಟ್ಟುಕೊಂಡು ಬಂದವನಲ್ಲ. ಸಾಮಾನ್ಯರಲ್ಲಿ ಸಾಮಾನ್ಯನಾಗಿ ಅನಿರೀಕ್ಷಿತವಾಗಿ ತಿರುವುಗಳ ನಡುವೆ ಬೆಳೆದವನು. ಅಭಿಮಾನೋತ್ಸವದ ಸಾಗರದಲ್ಲಿ ಜನರು ನನ್ನನ್ನು ತೇಲಿಸಿಬಿಟ್ಟದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಸಮಾವೇಶದಲ್ಲಿ ಮಾತನಾಡಿದ ಅವರು, ತಮ್ಮ ರಾಜಕೀಯ ಹೋರಾಟದ ಜೀವನವನ್ನು ನೆನಪು ಮಾಡಿಕೊಂಡರು. ಪಕ್ಷ ಸಂಘಟನೆ ಮಾಡಲು, ರಾಜ್ಯದ ಜನರ ಕಷ್ಟ ತಿಳಿಯಲು ನಿರಂತರ ಪ್ರವಾಸ ಮಾಡಿದ್ದೇನೆ. ನಿರಂತರ ಹೋರಾಟದ ಬದುಕೇ ಶಕ್ತಿ ನೀಡಿದೆ. ಬೂಕನಕೆರೆಯಲ್ಲಿ ಹುಟ್ಟಿ ಶಿಕಾರಿಪುರವನ್ನು ಕರ್ಮಭೂಮಿಯಾಗಿಸಿಕೊಂಡು ರೈತರ, ನೊಂದಜನರ, ಬಡವರ ಸಮಸ್ಯೆಗಳ ಪರಿಹಾರಕ್ಕಾಗಿ ದುಡಿದೆ. ಅಧಿಕಾರದಲ್ಲಿ ಇದ್ದಾಗ ತಾಯಂದಿರ, ಸಹೋದರಿಯರ ಕಣ್ಣೀರು ಒರೆಸುವಂತಹ ಯೋಜನೆಗಳನ್ನು ರೂಪಿಸಲು ಶ್ರಮಿಸಿದ್ದೇನೆ. ಭಾಗ್ಯಲಕ್ಷ್ಮಿ ಬಾಂಡ್ ಜಾರಿ ಮಾಡಿದ ಸಾರ್ಥಕ ಭಾವ ನನ್ನದು. ಸಾಧ್ಯವಾದಷ್ಟು ಅನ್ನದಾತರಿಗೆ ನೆರವಾಗುವ ಯೋಜನೆ ತಂದಿದ್ದೇನೆ. ರೈತರ ಬಜೆಟ್ ಅನ್ನು ಎಂದೂ ಮರೆಯುವುದಿಲ್ಲ. ಬಡ್ಡಿ ರಹಿತ ಸಾಲ, ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿದ್ದೇನೆ ಎಂದರು.

ಹೋರಾಟದ ಮತ್ತು ಸಂಘಟನೆಯನ್ನು ನಾನು ತಪಸ್ಸು ಎಂದು ಸ್ವೀಕರಿಸಿದವನು. ನನಗೆ ಆರ್‌ಎಸ್‌ಎಸ್ ಸಂಸ್ಕಾರ ನೀಡಿತು. ಅಧಿಕಾರಕ್ಕಾಗಿ ಎಂದು ಹೋರಾಟ ಮಾಡಲಿಲ್ಲ. ಮುಖ್ಯಮಂತ್ರಿ ಹುದ್ದೆಯನ್ನು ಕನಸಿನಲ್ಲೂ ಕಂಡಿರಲಿಲ್ಲ. ಪುರಸಭೆಯ ಹುದ್ದೆಯಿಂದ, ವಿರೋಧಪಕ್ಷದ ನಾಯಕ, ಮುಂದೆ ಮುಖ್ಯಮಂತ್ರಿಯಾದೆ. ಇದನ್ನೆಲ್ಲ ನಾಡಿನ ಜನರೇ ಬಯಸಿದ್ದರು. ನನ್ನ ರಾಜಕೀಯ ಜೀವನದ ಐವತ್ತು ವರ್ಷಗಳ ಪಯಣ ಸಾರ್ಥಕವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಅಭಿಮಾನೋತ್ಸವಕ್ಕೆ ರಾಜ್ಯದ ವಿವಿಧ ಮಠಾಧೀಶರು, ಸ್ವಾಮೀಜಿಗಳು ಬಂದಿದ್ದಾರೆ. ಇದು ಒಬ್ಬ ವ್ಯಕ್ತಿಯ ಸಂಭ್ರಮ ಅಲ್ಲ. ಶಿಕಾರಿಪುರದಿಂದ ವಿಧಾನಸೌಧದ ಮೆಟ್ಟಿಲುಗಳವರೆಗೆ ನನ್ನ ರಾಜಕೀಯ ಪ್ರಯಾಣವನ್ನು ವಿಶ್ರಾಂತಿ ಇಲ್ಲದ ಕಾರ್ಯಕರ್ತರ ರೂಪಿಸಿದರು. ಅವರೇ ನನಗೆ ಶಕ್ತಿ. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಇದು ನನ್ನ ಜೀವನದ ಪರ್ವದಿನ. ನಿಮ್ಮ ಅಭಿಮಾನದಲ್ಲಿ ತೇಲಿಸಿದ ನನ್ನ ಪ್ರೀತಿಯ ಕರುನಾಡ ಜನತೆಗೆ ಋಣಿಯಾಗಿದ್ದೇನೆ ಎಂದರು.

ಅಮಿತ್ ಶಾ ಜೀ ಅವರು ಎಷ್ಟೇ ಕಾರ್ಯ ಒತ್ತಡ ಇದ್ದರೂ ಇಲ್ಲಿಗೆ ಬಂದಿದ್ದಾರೆ. ದುರ್ಗದ ನೆಲದಲ್ಲಿ ವೀರ ಮದಕರಿ ನಾಯಕನಂತೆ ಅವರು ಕಂಗೊಳಿಸುತ್ತಿದ್ದಾರೆ. ಪಶ್ಚಿಮ ಬಂಗಾಳದ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದೆ. ಪ್ರಧಾನಿ ಮೋದಿ ಅವರೊಂದಿಗೆ ಹೆಗಲು ಕೊಟ್ಟು ಅಮಿತ್ ಶಾ ಜೀ ಅವರು ಕೆಲಸ ಮಾಡಿದ್ದಾರೆ. ಪ್ರಜಾಪ್ರಭುತ್ವಕ್ಕೆ ಬಂಗಾಳದಲ್ಲಿ ಜಯ ಸಿಕ್ಕಿದೆ. ಮೋದಿ ಅವರಿಗೆ ಜನರ ಪರವಾಗಿ ಅಭಿನಂದನೆಗಳು ಎಂದರು.

ಭಾರತ ನಂಬರ್ ಒನ್ ಸ್ಥಾನಕ್ಕೆ ಏರಲು ಮೋದಿ ಅವರು ಇನ್ನೂ ಹತ್ತು ದೇಶವನ್ನು ಮುನ್ನೆಡಸಬೇಕು. ಭವಿಷ್ಯದಲ್ಲಿ ಭಾರತದ ಕನಸು ಸಾಕಾರವಾಗಲಿ ಎಂದರು. ನಾನು ಜನರಿಗಾಗಿ ಹೋರಾಟ ಮಾಡಿದವ. ಕೊನೆ ಉಸಿರು ಇರುವವರೆಗೆ ವಿರಮಿಸುವುದಿಲ್ಲ. ದೇವರು ಶಕ್ತಿ ಕೊಟ್ಟಿರುವವರೆಗೆ ಜನರಿಗಾಗಿ ಕೆಲಸ ಮಾಡುತ್ತೇನೆ. ಇಲ್ಲಿಂದ ಊರುಗಳಿಗೆ ತೆರಳುವಾಗ ಜಾಗ್ರತೆ ವಹಿಸಿ. ನಾಮುಂದು ತಾಮುಂದು ಎಂದು ವಾಹನಗಳಲ್ಲಿ ಪೈಪೋಟಿ ಮಾಡದೆ ಜಾಗರೂಕತೆಯಿಂದ ವಾಪಸ್ ಹೋಗಿ ಎಂಬುದಾಗಿ ಮನವಿ ಮಾಡಿದರು.

## ನೀರು ನೀಡಿದ ಭಗೀರಥ ಬಿಎಸ್‌ವೈ: ಬೊಮ್ಮಾಯಿ

ರೈತ ನಾಯಕ ಯಡಿಯೂರಪ್ಪ ಅವರು ನೀರಿಲ್ಲದ ಜಿಲ್ಲೆಗಳಿಗೆ ನೀರು ನೀಡಿದ ಭಗೀರಥ ಎಂದು ಮಾಜಿ ಸಿಎಂ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರು ಬಣ್ಣಿಸಿದ್ದಾರೆ. ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ಯಡಿಯೂರಪ್ಪ ಅವರ ಹೆಸರಲ್ಲೇ ಶಕ್ತಿ ಇದೆ. ಇಡೀ ಕರ್ನಾಟಕದಲ್ಲಿ ಬಡವರ ಮನೆಯಲ್ಲಿ, ಮನದಲ್ಲಿ, ದೀನ ದಲಿತರ ಹೃದಯದಲ್ಲಿ ಯಾವುದಾದರೂ ಹೆಸರು ಮಿಡಿಯುತ್ತಾ ಇದ್ದರೆ ಅದು ಯಡಿಯೂರಪ್ಪ ಅವರದು ಎಂದರು. ಕೋಟೆ ನಾಡು, ಮದಕರಿ ನಾಯಕನ ಬೀಡು, ಬಿಸಿಲು ಮತ್ತು ಬರಗಾಲ ಪೀಡಿತ ಚಿತ್ರದುರ್ಗಕ್ಕೆ ಶಾಶ್ವತವಾಗಿ ನೀರು ಉಣಿಸಲು ಭದ್ರಾ ಮೇಲ್ದಂಡೆ ಯೋಜನೆ ಜಾರಿ ಮಾಡಿದವರು. ಮುಖ್ಯಮಂತ್ರಿಗಳಾದ ತಕ್ಷಣ ಮೊದಲ ನಿರ್ಧಾರವೇ ಬಿಸಿಲಿನ ನಾಡಿಗೆ ತಂಪು ನೀಡುವುದಾಗಿತ್ತು. ಅದಕ್ಕಾಗಿ ನಿರ್ಣಯ ಮಾಡಿದವರು. ವಾಣಿವಿಲಾಸ ಸಾಗರಕ್ಕೆ ಐದು ಟಿಎಂಸಿ ನೀರು ಕೊಟ್ಟವರು, ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯಲು ನೀರು ನೀಡಿದರು, ನೀರಾವರಿ ನೀರು ಒದಗಿಸಿದರು ಎಂದರು. ವಿರೋಧ ಪಕ್ಷದಲ್ಲಿ ಇದ್ದಾಗ ಹೋರಾಟ ಮಾಡಿದ ಬಿಎವೈ ಅವರು ಅಧಿಕಾರಕ್ಕೆ ಬಂದಾಗ ಆ ಹೋರಾಟದ ಬೇಡಿಕೆಗಳಿಗೆ ಕಾಯಕಲ್ಪ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಿದವರು ಎಂದರು. ಬಿಜಾಪುರದಲ್ಲಿ, ಶಿಗ್ಗಾಂವಿಯಲ್ಲಿ, ಚಾಮರಾಜ ನಗರದಲ್ಲಿ ಕೆರೆ ತುಂಬಿಸುವ ಯೋಜನೆಗಳಿಗೆ ಚಾಲನೆ ನೀಡಿದರು. ಗಂಗೆ ಮಾತೆಯನ್ನು ಭೂತಾಯಿಗೆ ಉಣಿಸಿ ರೈತರ ಬೆವರು ಸೇರಿದರೆ ಬಂಗಾರದ ಬೆಳೆ ಬೆಳೆಯಲು ಅವಕಾಶ ನೀಡಿದವರು ಯಡಿಯೂರಪ್ಪ ಎಂದರು.

### ಹುಟ್ಟು ಹೋರಾಟಗಾರ ಯಡಿಯೂರಪ್ಪ

ಕಾಗಿನೆಲೆ ಕನಕಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಮಾತನಾಡಿ, ಕರ್ನಾಟಕದ ಇತಿಹಾಸದಲ್ಲಿ ಸೇರುವ ಕಾರ್ಯಕ್ರಮ ಇದಾಗಿದೆ. ಯಡಿಯೂರಪ್ಪ ಅವರು ಹುಟ್ಟು ಹೋರಾಟಗಾರ. ಕರ್ನಾಟಕದಲ್ಲಿ ಬಿಜೆಪಿ ಕಟ್ಟಲು ಸೈಕಲ್ ಮೇಲೆ ಹೋದವರು. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಸಾಕಷ್ಟು ಶ್ರಮಿಸಿದವರು ಎಂದರು. ಕನಕದಾಸ ಜಯಂತಿಯನ್ನು ಸರಕಾರದ ವತಿಯಿಂದ ಆಚರಿಸಲು ಬಿಎಸ್‌ವೈ ಅವರ ಕೊಡುಗೆ ದೊಡ್ಡದಿದೆ. ಅವರ ಅಧಿಕಾರದ ಅವಧಿಯಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚು ಅನುದಾನ ನೀಡಿದರು. ಅಭಿವೃದ್ಧಿ ಕಾರ್ಯಕ್ಕೆ ಸಾಕಷ್ಟು ಅನುದಾನ ನೀಡಿದವರು ಎಂದು ವರ್ಣಿಸಿದರು.

### ಆರ್‌ಸಿಬಿ ರೀತಿಯೇ ಬಿಎಸ್‌ವೈ

ಕಾರ್ಯಕ್ರಮದಲ್ಲಿ ವಚನಾನಂದ ಸ್ವಾಮೀಜಿಗಳು ಮಾತನಾಡುತ್ತಾ, ಐಪಿಎಲ್ ನಡೆಯುತ್ತಿರುವ ಈ ಸಮಯದಲ್ಲಿ ಎಲ್ಲೆಡೆ ಆರ್‌ಸಿಬಿ ಕೂಗಿದೆ. ಆದರೆ ಚಿತ್ರದುರ್ಗದಲ್ಲಿ ಮಾತ್ರ ಬಿಎಸ್‌ವೈ ಬಿಎಸ್‌ವೈ ಎನ್ನುವ ಕೂಗಿದೆ. ಐದು ದಶಕಗಳ ಬಳಿಕವೂ, ಈ ಪ್ರಮಾಣದಲ್ಲಿ ಕಾರ್ಯಕರ್ತರು ಯಡಿಯೂರಪ್ಪ ಅವರ ಪರವಾಗಿ ನಿಂತಿರುವುದೇ ಅವರು ಮಾಡಿರುವ ಜನಪರ ಹೋರಾಟಗಳಿಗೆ ಸಾಕ್ಷಿ ಎಂದರು.

### ಅಮಿತ್ ಶಾ ಅವರೇ ಕರೆತಂದು ಸನ್ಮಾನ

ಕಾರ್ಯಕ್ರಮದಲ್ಲಿ ಅಮಿತ್ ಶಾ ಅವರು ಮಾತನಾಡುವ ಮೊದಲು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸನ್ಮಾನಿಸಲು ವಿಜಯೇಂದ್ರ ಸೇರಿದಂತೆ ಎಲ್ಲರೂ ಮುಂದಾದರು. ಅದಕ್ಕಾಗಿ ಪ್ರತ್ಯೇಕ ಖುರ್ಚಿಯನ್ನು ತರಿಸಿದರು. ಆದರೆ ಆ ಖುರ್ಚಿ ಬೇಡ, ಇರುವಲ್ಲಿಯೇ ಸನ್ಮಾನ ಮಾಡುವಂತೆ ಯಡಿಯೂರಪ್ಪ ಅವರು ಗದರಿದರು. ಕೊನೆಗೆ ಅಮಿತ್ ಶಾ ಅವರೇ ಕರೆತಂದು ಕೂರಿಸಿ ಸನ್ಮಾನಿಸಿದರು. ಇದಕ್ಕೂ ಮೊದಲು ವೇದಿಕೆಗೆ ಆಗಮಿಸುತ್ತಿದ್ದ ಯಡಿಯೂರಪ್ಪ ಅವರೊಂದಿಗೆ ಕೈ ಎತ್ತಿ ಅಮಿತ್ ಶಾ ಫೋಟೋ ಪೋಸ್ ಕೊಟ್ಟಿದ್ದು ವಿಶೇಷವಾಗಿತ್ತು.

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವವು ಒಂದು ಐತಿಹಾಸಿಕ ಕಾರ್ಯಕ್ರಮ. ದೇಶದಲ್ಲಿ ಮೊದಲು ಕೃಷಿ ಬಜೆಟ್ ನೀಡಿದ ನಾಯಕ, ಭವ್ಯ ರಾಮಮಂದಿರಕ್ಕೆ ಕರಸೇವಕರಾಗಿದ್ದ ಧೀಮಂತ ನಾಯಕ ಯಡಿಯೂರಪ್ಪ. ಅವರ ಮೇಲಿನ ಗೌರವದಿಂದ ರಾಜ್ಯದ ವಿವಿಧ ಭಾಗದಿಂದ ಮಠಾಧೀಶರು ಆಗಮಿಸಿದ್ದಾರೆ. 12ನೇ ಶತಮಾನ ಅನುಭವ ಮಂಟಪ ನೆನಪಿಗೆ ಬರುತ್ತೆ. ಸಾಮಾಜಿಕ ನ್ಯಾಯ, ಹಿಂದುತ್ವಕ್ಕೆ ಶಕ್ತಿ ತುಂಬಿದವರು ಯಡಿಯೂರಪ್ಪ.

- ಬಿ.ವೈ. ರಾಘವೇಂದ್ರ ಸಂಸದ

ಇತ್ತೀಚಿಗಷ್ಟೇ ನಡೆದ ಚುನಾವಣೆಯಲ್ಲಿ ಪಶ್ಚಿಮ ಬಂಗಾಳವನ್ನು ಬಿಜೆಪಿ ಅಭೂತಪೂರ್ವವಾಗಿ ಜಯಿಸಿದೆ. ಈ ಮೂಲಕ ದೇಶದ 21 ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಈ ಹಿಂದೆ ಬಿಎಸ್‌ವೈ ನೇತೃತ್ವದಲ್ಲಿ ರಾಜ್ಯದಲ್ಲಿಯೂ ಸರಕಾರ ಬಂದಿತ್ತು. ಮುಂದೆಯೂ ಅವರ ನೇತೃತ್ವದಲ್ಲಿಯೇ ಚುನಾವಣೆ ಎದುರಿಸಿ ಸರಕಾರ ರಚಿಸುವುದು ನಿಶ್ಚಿತ. ಹೋರಾಟ ಎಂದರೆ ಸಾಮಾಜಿಕ ಜಾಲತಾಣಕ್ಕೆ ಸೀಮಿತವಾಗಿದೆ. ಆದರೆ ರಾಜ್ಯ, ರಾಷ್ಟ್ರದಲ್ಲಿ ಹೋರಾಟದ ಕಿಚ್ಚು ಹತ್ತಿಸಿದ್ದು ಕರ್ನಾಟಕದ ರಾಜಾಹುಲಿ ಯಡಿಯೂರಪ್ಪ.

- ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ

ಬಿಜೆಪಿ ಅಂದರೆ ಏನು ಎನ್ನುವ ಸ್ಥಿತಿ ಕರ್ನಾಟಕದಲ್ಲಿದ್ದಾಗ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಯಡಿಯೂರಪ್ಪ. ಯಡಿಯೂರಪ್ಪ ಅವರು ಒಮ್ಮೆ ಒಪ್ಪಿಕೊಂಡರೆ ಅದೆಷ್ಟೇ ಕಷ್ಟವಾದರೂ, ಆ ಕೆಲಸವನ್ನು ಮಾಡಿಯೇ ಮುಗಿಸುತ್ತಾರೆ. ನಮ್ಮ ಸಮುದಾಯ(ಕುರುಬ) ಸಮಾಜ ಇಂದು ಹಬ್ಬದಂತೆ ಆಚರಿಸುತ್ತಿರುವ ಕನಕದಾಸ ಜಯಂತಿಯನ್ನು ಆಚರಿಸುವಂತೆ ಮಾಡಿದ್ದು ಇದೇ ಯಡಿಯೂರಪ್ಪ.

-ಶ್ರೀನಿರಂಜನಾನಂದ ಪುರಿ ಸ್ವಾಮೀಜಿ ಕನಕಗುರುಪೀಠ

ಯಡಿಯೂರಪ್ಪ ಅವರ ನಾಮದ ಬಲದಿಂದ ಕರ್ನಾಟಕದಲ್ಲಿ ಅದೆಷ್ಟೋ ಜನ ಶಾಸಕರಾಗಿದ್ದಾರೆ. ಸಚಿವರಾಗಿದ್ದಾರೆ. ಅಷ್ಟೇ ಏಕೆ ಬಸವರಾಜ ಬೊಮ್ಮಾಯಿ, ಸದಾನಂದಗೌಡ ಹಾಗೂ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಗಳೂ ಆಗಿದ್ದಾರೆ. ಯಾರನ್ನು ಜನ ಟೀಕಿಸಿದೇ ಬಿಟ್ಟಿಲ್ಲ. ಪ್ರಧಾನಿ ನರೇಂದ್ರ ಮೋದಿ, ಸಂವಿಧಾನ ಶಿಲ್ಪಿ ಅಂಬೇಡ್ಕರ್, ಯಡಿಯೂರಪ್ಪ, ಬುದ್ಧ, ಬಸವ ಸೇರಿದಂತೆ ಎಲ್ಲರನ್ನೂ ಟೀಕಿಸಿದ್ದಾರೆ.

-ಶ್ರೀ ವಚನಾನಂದ ಸ್ವಾಮೀಜಿ ಪಂಚಮಸಾಲಿ ಪೀಠ, ಹರಿಹರ

ತಮ್ಮನ್ನು ತಾವು ಸುಟ್ಟುಕೊಂಡು ಜನರಿಗೆ, ಪಕ್ಷಕ್ಕೆ ಒಳಿತನ್ನು ಬಯಸಿದ್ದು ಯಡಿಯೂರಪ್ಪನವರು. ಆನೆ, ಸಿಂಹಕ್ಕೆ ಯಾವುದೇ ಸಿಂಹಾಸನ ಬೇಡ. ಅವು ಕೂತ ಜಾಗವೇ ಸಿಂಹಾಸನವಾಗುತ್ತದೆ. ಅದೇ ರೀತಿ ಯಡಿಯೂರಪ್ಪ ಅವರೂ ಸಹ. ಈ ಸಮಾವೇಶಕ್ಕೆ ಆಗಮಿಸಿರುವ ಜನರನ್ನು ನೋಡಿದರೆ, ನಾಡಿನ ಜನರು ಈಗಲೂ ಯಡಿಯೂರಪ್ಪ ಅವರನ್ನು ಬಯಸುತ್ತಾರೆ ಎನ್ನುವುದು ನಿಶ್ಚಿತ.

- ಶ್ರೀದಿಂಗಾಲೇಶ್ವರ ಸ್ವಾಮೀಜಿ

## ತಂದೆ ಹಾದಿಯಲ್ಲಿಯೇ ಸಾಗುವೆ: ಬಿವೈವಿ

### ಸವಾಲುಗಳನ್ನು ಮೆಟ್ಟಿನಿಲ್ಲುವ ಶಕ್ತಿ ಸಿಗಲೆಂದು ಆಶೀರ್ವಾದ ಮಾಡುವಂತೆ ಜನತೆಗೆ ಮನವಿ

**ಚಿತ್ರದುರ್ಗ:** ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಜೀವನದ ಯಶೋಗಾಥೆಯನ್ನು ತೋರಿಸುವ ಜತೆಜತೆಗೆ, ಇಂದಿಗೂ ಕರ್ನಾಟಕ ಬಿಜೆಪಿಗೆ ಯಡಿಯೂರಪ್ಪ ಪ್ರಸ್ತುತ ಎನ್ನುವ ಸಂದೇಶ ರವಾನಿಸುವ ಜತೆಜತೆಗೆ, ತಂದೆಯ ಹಾದಿಯಲ್ಲಿಯೇ ನಾನು ಸಾಗುವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿರುವ ಮಾತು ಇದೀಗ ಬಹು ಚರ್ಚಿತ ವಿಷಯ.



ಕಾರ್ಯಕ್ರಮದಲ್ಲಿ ಮಾತನಾಡಿದ ಬಿ.ವೈ. ವಿಜಯೇಂದ್ರ, ಐವತ್ತರ ಸಂಭ್ರಮಕ್ಕೆ ಸಾಕ್ಷಿಯಾಗಲು ನಾಡಿನ ನೂರಾರು ಮಠಾಧೀಶರು, ಜಗದ್ಗುರುಗಳು ಆಗಮಿಸಿದ್ದಾರೆ. ಈ ಹಿಂದೆ ಯಡಿಯೂರಪ್ಪ ಅವರ ಸಂಕಷ್ಟ ಕಾಲದಲ್ಲಿ ಈ ಎಲ್ಲರೂ ಜತೆಗಿದ್ದರು. ಇದೀಗ ಸವಾಲುಗಳನ್ನು ಎದುರಿಸಲು ನಾನು ಸಿದ್ಧನಾಗಿದ್ದು, ಅದನ್ನು ಎದುರಿಸಲು ಶಕ್ತಿ ಸಿಗಲಿ ಎಂದು ಆಶೀರ್ವದಿಸಬೇಕು. ಇದರೊಂದಿಗೆ ಯಡಿಯೂರಪ್ಪನವರ ಮಗನಾಗಿ ನಿಮ್ಮ ಪ್ರೀತಿ, ವಿಶ್ವಾಸ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತೇನೆ ಎಂದರು.

ಬಿಎಸ್‌ವೈ ಅವರು ಅಧಿಕಾರಕ್ಕಾಗಿ ಹೋರಾಟ ಮಾಡಲಿಲ್ಲ. ಬದಲಿಗೆ ಜನರಿಗಾಗಿ ಹೋರಾಟ ಮಾಡಿದವರು. ತ್ಯಾಗ, ಪರಿಶ್ರಮ, ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ. ಅವರು, ಜನನಾಯಕರಾದವರು. ನನ್ನಂತರ ಅನೇಕರಿಗೆ ಪ್ರೇರಣೆಯಾದವರು. ಇಂದು ಈ ಅಭಿಮಾನೋತ್ಸವಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಜನರು ಬಂದಿರುವುದು ನೋಡಿದರೆ ಅವರ ಮೇಲೆ ಎಂತಹ ಅಭಿಮಾನ ಇದೆ ಎಂಬುದು ತಿಳಿಯುತ್ತದೆ. ಇದೊಂದು ಐತಿಹಾಸಿಕ ಕ್ಷಣ. ಅವರ 50 ವರ್ಷ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸುವ ಕ್ಷಣ ಎಂದರು.

ಬಿಎಸ್‌ವೈ ಅವರ ಹೋರಾಟಗಳನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಅವರು ತಮ್ಮ ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದ್ದಾರೆ. ಜೀವನದುದ್ದಕ್ಕೂ ಯಾವುದೇ ಸವಾಲುಗಳು ಬಂದರೂ ಬೆನ್ನು ತೋರಿಸಿ ಓಡಿ ಹೋದವರಲ್ಲ. ಯಾವುದೇ ರಾಜಕೀಯ ಷಡ್ಯಂತ್ರ, ಸವಾಲು ಬಂದರೂ ಅದನ್ನು ಧೈರ್ಯವಾಗಿ ಎದುರಿಸಿದವರು. ರಾಜ್ಯದ ಇತಿಹಾಸದಲ್ಲಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಸಿಎಂ ಯಡಿಯೂರಪ್ಪ ಅವರು, ರೈತರಿಗಾಗಿ ಬಜೆಟ್ ಮಂಡಿಸಿದವರು. ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಆರಂಭಿಸಿ ಹೆಣ್ಣು ಶಾಪ ಅಲ್ಲ ಎಂಬ ಭಾವನೆಯನ್ನು ಮೂಡಿಸಿದವರು. ರಾಜ್ಯದ ಎಲ್ಲ ಮಠಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬಿದವರು. ಜನರ ಅಪೇಕ್ಷೆಯಂತೆ, ಪ್ರೀತಿ ವಿಶ್ವಾಸ ಉಳಿಸಿಕೊಂಡು ಕೆಲಸ ಮಾಡುತ್ತೇನೆ. ಕಡಿಮೆ ಅವಧಿಯಲ್ಲಿ ಈ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. ನಿಮ್ಮೆಲ್ಲರ ಸಹಕಾರ ಇರಲಿ ಎಂದರು.

### ಒಂದೇ ವೇದಿಕೆಯಲ್ಲಿ ಸ್ವಾಮೀಜಿಗಳು

ಚುನಾಣಾ ಚಾಣಕ್ಯ ಎಂದೇ ಹೆಸರು ಪಡೆದಿರುವ ಗೃಹ ಅಮಿತ್ ಶಾ ಜೀ ಅವರು, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರಕಾರದ ಪ್ರಮಾಣ ವಚನ ಸಮಾರಂಭದಲ್ಲಿ ಭಾಗಿಯಾಗಿ ಪುಣ್ಯಭೂಮಿ ಚಿತ್ರದುರ್ಗಕ್ಕೆ ಬಂದಿದ್ದಾರೆ. ಅವರಿಗೆ ನಾಡಿನ ಜನತೆಯ ಪರವಾಗಿ ಧನ್ಯವಾದಗಳು. ಚಿತ್ರದುರ್ಗ ವೀರರ ಭೂಮಿ, ಮದಕರಿ ನಾಯಕ ಹಾಗೂ ಒನಕೆ ಓಬವ್ವನ ತ್ಯಾಗದ ಭೂಮಿ, ಅಲ್ಲದೇ ಸ್ವಾಮೀಜಿಗಳ ತಪೋಭೂಮಿ. ಇಂತಹ ನೆಲದಲ್ಲಿ ಅಭಿಮಾನೋತ್ಸವ ಆಚರಿಸಿದ್ದು ನಮ್ಮ ಪುಣ್ಯ. ಕರ್ನಾಟಕದ ಇತಿಹಾಸದಲ್ಲಿ ಇದೇ ಮೊದಲ ಬಾರಿ ಇಂತಹ ಸಮಾರಂಭದಲ್ಲಿ ಸ್ವಾಮೀಜಿಗಳು ಒಂದೇ ವೇದಿಕೆಯಲ್ಲಿ ಸೇರಿದ್ದಾರೆ ಎಂದು ವಿಜಯೇಂದ್ರ ಹರ್ಷವ್ಯಕ್ತಪಡಿಸಿದರು.

## ಬಿಎಸ್‌ವೈ ಜೀವನ ಯುವಕರಿಗೆ ಮಾದರಿ: ಶಾ

**ಚಿತ್ರದುರ್ಗ:** ಸಾಧಾರಣ ಕುಟುಂಬದಿಂದಲೇ ಬಂದ ಯಡಿಯೂರಪ್ಪನವರ ಕಳೆದ ಐದು ದಶಕದ ಜೀವನ ಹಾದಿ, ಹೋರಾಟಗಳು ಯುವಜನರಿಗೆ ಮಾದರಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅಮಿತ್ ಶಾ ಅವರು, ತಮ್ಮ ಭಾಷಣದ ಉದ್ದಕ್ಕೂ ಯಡಿಯೂರಪ್ಪ ಅವರ ರಾಜಕೀಯ ಜೀವನದ ಹಾದಿ, ಸಾರ್ವಜನಿಕ ಜೀವನದಲ್ಲಿ ನಡೆದ ಘಟನಾವಳಿಗೆ ಸೀಮಿತಗೊಂಡೇ ಮಾತನಾಡಿದರು. ಈ ಸಮಾವೇಶದ ಮೂಲಕ ಯಾವುದಾದರೂ ಸಂದೇಶ ರವಾನಿಸುತ್ತಾರೆ ಎನ್ನುವ ನಿರೀಕ್ಷೆ ಅನೇಕರಲ್ಲಿತ್ತು. ಆದರೆ ಕೇವಲ 15 ನಿಮಿಷಕ್ಕೆ ತಮ್ಮ ಭಾಷಣವನ್ನು ನಿಲ್ಲಿಸಿದ ಶಾ, ಎಲ್ಲಿಯೂ ರಾಜಕಾರಣದ ಸುಳಿವನ್ನು ಬಿಟ್ಟುಕೊಡಲಿಲ್ಲ ಎಂದರು.

ಯಡಿಯೂರಪ್ಪ ಅವರ 5 ದಶಕಗಳ ಸಾರ್ವಜನಿಕ ಜೀವನ, ಹೋರಾಟವು ಯುವಜನತೆಗೆ ಮಾದರಿ. ಜನಸೇವೆ, ರೈತರ ಕಲ್ಯಾಣಕ್ಕಾಗಿ ಅವರು ದುಡಿದವರು. ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಹಾಗೂ ನಾಲ್ಕು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಧೀಮಂತ ವ್ಯಕ್ತಿ ಎಂದು ಅಭಿಪ್ರಾಯಪಟ್ಟರು.

ಬಸ್ ಸಿಗದಿದ್ದರೆ ಸೈಕಲ್‌ನಲ್ಲೇ ಹಳ್ಳಿಗೆ ತೆರಳಿ ಬಿಜೆಪಿಯನ್ನು ಸದೃಢವಾಗಿ ಕಟ್ಟಿದರು. ಸಾವಿರಾರು ಕಿಮೀ ಪಾದಯಾತ್ರೆ ಮಾಡಿ ರೈತರ ಪರವಾಗಿ ಹೋರಾಟ ಮಾಡಿದವರು. ಈ ಮೂಲಕ ರೈತ ನಾಯಕರಾಗಿ ಹೊರಹೊಮ್ಮಿದರು. ಈ ಹೋರಾಟದ ಅವಧಿಯಲ್ಲಿ, ತಮ್ಮ ಸಿದ್ಧಾಂತದ ಪರವಾಗಿ ಗಟ್ಟಿಯಾಗಿ ನಿಂತು ಹೋರಾಟ ನಡೆಸಿದ್ದಕ್ಕೆ ಅನೇಕ ಸಮಯದಲ್ಲಿ ಜೈಲುವಾಸ ಅನುಭವಿಸಬೇಕಾಯಿತು ಎಂದರು.

ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯ ಮುಖ್ಯಮಂತ್ರಿಯ ಪದಗ್ರಹಣ ನಡೆದಿದೆ. ಇದೇ ದಿನ ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಸೇವೆಗೆ ಸಂಬಂಧಿಸಿದ ಕಾರ್ಯಕ್ರಮ ನಡೆಯುತ್ತಿದೆ. ವಿವೇಕಾನಂದರು, ಶ್ಯಾಮಪ್ರಸಾದ ಮುಖರ್ಜಿ ಮೊದಲಾದವರು ಹುಟ್ಟಿದ ನಾಡಿನಲ್ಲಿ ಹೊಸ ಶಕೆ ಆರಂಭವಾಗಿದೆ. 2014ರಿಂದ ಕರ್ನಾಟಕಕ್ಕೆ ಬರುತ್ತಿದ್ದೇನೆ. ಯಡಿಯೂರಪ್ಪ ಅವರ ವ್ಯಕ್ತಿತ್ವದಿಂದ ಎಲ್ಲ ಮತ-ಸಂಪ್ರದಾಯಗಳ ಸ್ವಾಮೀಜಿಗಳು ಇಲ್ಲಿದ್ದಾರೆ. ಯಡಿಯೂರಪ್ಪ ಅವರದು ಮಾದರಿ ಜೀವನ ಎಂದು ಮೆಚ್ಚುಗೆ ಸೂಚಿಸಿದರು. ಬಿಜೆಪಿ, ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದವರ ದಾಖಲೆ ಬರೆಯುವಾಗ ದೊಡ್ಡ ನಾಯಕರಾಗಿ ಯಡಿಯೂರಪ್ಪ ಅವರು ಇರುತ್ತಾರೆ. ಸಮಾಜವನ್ನು ಪ್ರೀತಿಸುವ ಯಡಿಯೂರಪ್ಪ ಅವರು ಹಸಿರು ಶಾಲಿನೊಂದಿಗೆ ಕೃಷಿ ಬಜೆಟ್ ಮಂಡಿಸಿದವರು ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರಗೃಹ ಸಚಿವ ಅಮಿತ್ ಶಾ ಅವರನ್ನು ಸನ್ಮಾನಿಸಲಾಯಿತು.

### ನಿಮ್ಮ ಘೋಷಣೆ ಇನ್ನೂ ಜೋರಾಗಲಿ

ಪಶ್ಚಿಮ ಬಂಗಾಳದಿಂದ ಅಮಿತ್ ಶಾ ಆಗಮಿಸುತ್ತಿದ್ದಂತೆ, ನೆರೆದಿದ್ದ ಲಕ್ಷಾಂತರ ಜನ ಉತ್ಸಾಹ ಜೋರಾಯಿತು. ಭಾಷಣಕ್ಕೆ ಆಗಮಿಸುತ್ತಿದ್ದಂತೆ ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಸೇರಿದಂತೆ ಕೆಲ ಘೋಷ ವಾಕ್ಯಗಳನ್ನು ಕೂಗಿದರು. ಆಗ ನೆರೆದಿದ್ದ ಲಕ್ಷಾಂತರ ಮಂದಿ ಘೋಷಣೆಗಳನ್ನು ಕ ೂಗಿದರು. ಆದರೆ ಈ ಸದ್ದು ಸಾಲುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಗೆದ್ದು ಅಧಿಕಾರಕ್ಕೆ ಬಂದಿದ್ದೇವೆ. ನಮ್ಮ ಕೂಗು ನೂರ್ಮಡಿಯಾಗಬೇಕು ಎಂದು ಹೇಳಿ ತಮ್ಮ ಭಾಷಣ ಆರಂಭಿಸಿದರು. ಅಮಿತ್ ಶಾ ಭಾಷಣ ಆರಂಭಿಸುತ್ತಿದ್ದಂತೆ, ನೆರೆದಿದ್ದವರು ಮೋದಿ ಮೋದಿ ಎಂದು ಕೂಗಿದರು. ಅದಕ್ಕೆ ಅಮಿತ್ ಶಾ ಭಾರತ್ ಮಾತಾ ಕೀ ಜೈ ಎಂದು ಭಾಷಣ ಆರಂಭಿಸಿದರು.

# ಮಾರಿಯೋ: ಬದುಕಿನ ಕಿಕ್ಕಿರಿದ ದೃಶ್ಯಗಳಿಗೆ ಬಣ್ಣ ಹಚ್ಚಿದ ಮಾಂತ್ರಿಕ

**ಮಾರಿಯೋ ಅವರ ಶೈಲಿಯು ಅತ್ಯಂತ ವಿವರಣಾತ್ಮಕ. ಒಂದು ಸಣ್ಣ ಚಿತ್ರದಲ್ಲಿ ನೂರಾರು ವಿಷಯಗಳನ್ನು ಅಡಗಿಸುತ್ತಿದ್ದರು. ಒಂದು ರೈಲ್ವೆ ಸ್ಟೇಷನ್ ಅಥವಾ ಗೋವಾದ ಹಳ್ಳಿಯ ಮಾರುಕಟ್ಟೆಯ ಚಿತ್ರವನ್ನು ಬಿಡಿಸುವಾಗ, ಅಲ್ಲಿನ ಪ್ರತಿಯೊಂದು ಸಣ್ಣ ವಸ್ತುಗಳನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸುತ್ತಿದ್ದರು. ಕಪ್ಪು ಮತ್ತು ಬಿಳಿ ಚಿತ್ರಗಳಲ್ಲಿ ಅವರು ತೋರುತ್ತಿದ್ದ ಜಾಣ್ಮೆ ಅದ್ಭುತ. ಅವರ ಬ್ರಷ್‌ಗೆ ಮನುಷ್ಯರ ಮುಖದ ಮೇಲಿನ ಸುಕ್ಕುಗಳಿಗಿಂತ ಅವರ ಅಂತರಂಗದ ವಿಚಿತ್ರ ತುಡಿತಗಳೇ ಹೆಚ್ಚಾಗಿ ದಕ್ಕುತ್ತಿದ್ದವು.**

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಭಾರತೀಯ ಕಾರ್ಟೂನ್ ಲೋಕದ ಅಪ್ರತಿಮ ಪ್ರತಿಭೆ, ಗೋವಾದ ಸಾಂಸ್ಕೃತಿಕ ರಾಯಭಾರಿ ಎಂದೇ ಹೆಸರಾದ ಮಾರಿಯೋ ಮಿರಾಂಡಾ ಬದುಕಿದ್ದಿದ್ದರೆ, ಮೊನ್ನೆ ಮೇ ಎರಡರಂದು ನೂರು ವರ್ಷ ಆಗುತ್ತಿತ್ತು. ತಮ್ಮ ಕುಂಚದ ಮೂಲಕ ದೇಶ-ವಿದೇಶಗಳನ್ನು ನಗಿಸಿದ ಅವರು ಭಾರತೀಯ ಕಲಾಲೋಕದ ಒಂದು ವಿಶಿಷ್ಟ ಅಧ್ಯಾಯ.

ಗೋವಾದ ಸುಂದರ ಪರಿಸರ, ಮುಂಬೈನ ಗಿಜಿಗುಡುವ ಬೀದಿಗಳು, ಮನುಷ್ಯನ ಸಹಜ ನಡೆವಳಿಕೆ, ಹಾವಭಾವ ಮತ್ತು ವರ್ತನೆಗಳನ್ನು ಅತ್ಯಂತ ಲವಲವಿಕೆಯಿಂದ ಚಿತ್ರಿಸಿದ ಮಿರಾಂಡಾ, ತಮ್ಮ ಮೋಹಕ ಗೆರೆಗಳಿಂದಲೇ ಸುಪರಿಚಿತರಾದವರು.

ನಾನು ಮಾರಿಯೋ ಅವರ ಚಿತ್ರಗಳನ್ನು ನೋಡಿದ್ದು ನನ್ನ ಕಾಲೇಜು ದಿನಗಳಲ್ಲಿ 'ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ' ಪತ್ರಿಕೆಯಲ್ಲಿ. ಅವರ ಕಾರ್ಟೂನ್‌ಗಳು ಕೇವಲ ಹಾಸ್ಯಕ್ಕೆ ಸೀಮಿತವಾಗಿರದೇ, ಅಂದಿನ ಸಮಾಜದ ಪ್ರತಿಬಿಂಬದಂತಿದ್ದವು. ಮೂಲತಃ ಗೋವಾದವರಾದ ಮಾರಿಯೋ ಅವರಿಗೆ ಮುಂಬೈ ನಾಡಿಮಿಡಿತ ಚೆನ್ನಾಗಿ ತಿಳಿದಿತ್ತು. ಮುಂದಿನ ಒಂದು ದಶಕದ ಕಾಲ ಪತ್ರಿಕೆಯ ಲೇಖನಗಳಿಗೆ ಮಾರಿಯೋ ವ್ಯಂಗ್ಯಚಿತ್ರಗಳು ಕೇವಲ ಸಾಥ್ ನೀಡಲಿಲ್ಲ, ಬದಲಿಗೆ ಆ ಲೇಖನಗಳ ಮೌಲ್ಯವನ್ನೇ ಹೆಚ್ಚಿಸಿದವು.

ಆ ಕಾಲದ ಪತ್ರಿಕೋದ್ಯಮದ ಕಟ್ಟುನಿಟ್ಟಾದ ಶ್ರೇಣಿ ವ್ಯವಸ್ಥೆಯಲ್ಲಿ ಮಾರಿಯೋ ಅಪವಾದವಾಗಿದ್ದರು. ಅತ್ಯಂತ ಕಿರಿಯ ಪತ್ರಕರ್ತ ಕೂಡ ಅವರ ಬಳಿ ಹೋಗಿ, 'ಮಾರಿಯೋ, ಲೇಖನ ಚಿಕ್ಕದಾಗಿದೆ, ಸ್ವಲ್ಪ ಜಾಗ ತುಂಬಲು ಚಿತ್ರ ಬಿಡಿಸಿಕೊಡಿ' ಎಂದು ಹೇಳಿದರೆ ಅವರು ಸ್ವಲ್ಪವೂ ಬೇಸರಿಸಿಕೊಳ್ಳುತ್ತಿರಲಿಲ್ಲ. ನಗುನಗುತ್ತಲೇ ಲೇಖನದ ಪಕ್ಕದಲ್ಲಿ ಒಬ್ಬ ದಪ್ಪನೆಯ ಹೆಣ್ಣುಮಗಳ ಅಥವಾ ಬಾಲಕ್ಕೆ ಪಟ್ಟಿ ಕಟ್ಟಿದ ನಾಯಿಯ ಚಿತ್ರ ಬಿಡಿಸಿ ಜಾಗ ತುಂಬುತ್ತಿದ್ದರು. ಹಾಗಂತ 'ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ'ದಲ್ಲಿ ಅವರ ಜತೆ ದಶಕಗಳ ಕಾಲ ಅಕ್ಕಪಕ್ಕದಲ್ಲಿಯೇ ಕುಳಿತು ಕೆಲಸ ಮಾಡಿದ ಹಿರಿಯ ಪತ್ರಕರ್ತೆ ಬಾಚಿ ಕರ್ಕಾರಿಯಾ ಬರೆದಿದ್ದಾರೆ.

ಮಾರಿಯೋ ಅವರಿಗೆ ಬಾಲ್ಯದಿಂದಲೇ ಗೋಡೆಗಳ ಮೇಲೆ ಚಿತ್ರ ಬಿಡಿಸುವ ಅಭ್ಯಾಸವಿತ್ತು. ಅಂದಿನ ಕಾಲದಲ್ಲಿ ಹೆಚ್ಚಿನ ಪೋಷಕರು ಗೋಡೆ ಹಾಳು ಮಾಡಿದ್ದಕ್ಕೆ ಬೈಯುತ್ತಿದ್ದರು. ಆದರೆ ಮಾರಿಯೋ ಅವರ ತಾಯಿ ವಿಭಿನ್ನವಾಗಿ ಯೋಚಿಸಿದರು. ಅವರು ಮಾರಿಯೋಗೆ 'ಒಂದು ಸುಂದರವಾದ ಡೈರಿಯನ್ನು ತಂದುಕೊಟ್ಟು, ನಿನಗೆ ಏನು ಅನಿಸುತ್ತದೆಯೋ ಅದನ್ನು ಈ ಡೈರಿಯಲ್ಲಿ ಬಿಡಿಸು' ಎಂದು ಪ್ರೋತ್ಸಾಹಿಸಿದರು. ಇದು ಮಿರಾಂಡಾ ಅವರ ವೃತ್ತಿಜೀವನದ ಮೊದಲ ಮೆಟ್ಟಿಲಾಯಿತು. ಅವರು ಸಾಯುವವರೆಗೂ ಅಂಥ ನೂರಾರು ಡೈರಿಗಳನ್ನು ನಿರ್ವಹಿಸುತ್ತಿದ್ದರು.

ಮಾರಿಯೋ ಅವರು ಚಿತ್ರಕಲೆಯಲ್ಲಿ ಯಾವುದೇ ಔಪಚಾರಿಕ ಪದವಿ ಅಥವಾ ಡಿಪ್ಲೊಮಾವನ್ನು ಪಡೆದವರಲ್ಲ, ಅವರಿಗೆ ಅವರೇ ಗುರು. ಅವರು ಮುಂಬೈನ ಸೇಂಟ್ ಕ್ಸೇವಿಯರ್ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರದಲ್ಲಿ ಪದವಿ ಪಡೆದಿದ್ದರು. ಕಲೆಯ ಬಗ್ಗೆ ಅವರಿಗೆ ಇದ್ದದ್ದು ಕೇವಲ ನೈಸರ್ಗಿಕ ಪ್ರತಿಭೆ ಮತ್ತು ತೀವ್ರವಾದ ವೀಕ್ಷಣಾ ಶಕ್ತಿ.

ಮಾರಿಯೋ ವೈಯಕ್ತಿಕ ಜೀವನದಲ್ಲಿ ಅತ್ಯಂತ ಸಂಕೋಚದ ಸ್ವಭಾವದವರಾಗಿದ್ದರು. ಪಾರ್ಟಿಗಳು ಅಥವಾ ಸಾರ್ವಜನಿಕ ಸಮಾರಂಭಗಳಲ್ಲಿ ಅವರು ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಬದಲಾಗಿ, ಒಂದು ಮೂಲೆಯಲ್ಲಿ ಕುಳಿತು ಅಲ್ಲಿನ ಜನರ ಚಲನವಲನಗಳನ್ನು ಗಮನಿಸುತ್ತಿದ್ದರು. ಅವರು ಅಂದು ಗಮನಿಸಿದ ವಿಷಯಗಳೇ ಮರುದಿನ ಪತ್ರಿಕೆಗಳಲ್ಲಿ ಅದ್ಭುತ ಕಾರ್ಟೂನ್‌ಗಳಾಗಿ ಹೊರಬರುತ್ತಿದ್ದವು.

ಮಿರಾಂಡಾ ಅವರು ಗೋವಾದಲ್ಲಿ ಹುಟ್ಟಿದರೂ, ಮುಂಬೈ ನಗರವನ್ನು ಪ್ರೀತಿಸುತ್ತಿದ್ದರು. ಮುಂಬೈನ ಸ್ಥಳೀಯ ರೈಲುಗಳು, ಅಲ್ಲಿನ ಬಸ್‌ಗಳು, ಟ್ರಾಫಿಕ್ ಮತ್ತು ಬ್ಯುಸಿ ಜನರ ಜೀವನವನ್ನು ಅವರು ಚಿತ್ರಿಸಿದ ರೀತಿ ಅಪೂರ್ವ. ಅವರು ಗೋವಾವನ್ನು ಹೊರಜಗತ್ತಿಗೆ 'ಬಣ್ಣ'ದ ಮೂಲಕ ಪರಿಚಯಿಸಿದರೆ, ಮುಂಬೈಯನ್ನು ಕಪ್ಪು-ಬಿಳುಪಿನಲ್ಲಿ ಪರಿಚಯಿಸಿದರು.

ಮಾರಿಯೋ ಲಂಡನ್‌ನಲ್ಲಿ ಇದ್ದಾಗ 'ಪಂಚ್' ನಿಯತಕಾಲಿಕದಲ್ಲಿ ಕೆಲಸ ಮಾಡಿದರು. ಅಲ್ಲಿನ ಹವಾಮಾನ ಮತ್ತು ಜನರ ಜೀವನಶೈಲಿ ಅವರನ್ನು ಎಷ್ಟು ಪ್ರಭಾವಿಸಿತ್ತೆಂದರೆ, ಅವರ ಆರಂಭಿಕ ಚಿತ್ರಗಳಲ್ಲಿ ಯುರೋಪಿಯನ್ ಶೈಲಿಯ ಪ್ರಭಾವ ಹೆಚ್ಚಾಗಿ ಕಂಡುಬರುತ್ತಿತ್ತು. ಆದರೆ ಭಾರತಕ್ಕೆ ಮರಳಿದ ನಂತರ, ಅವರು ತಮ್ಮದೇ ಆದ ವಿಶಿಷ್ಟ 'ಭಾರತೀಯ ಮಣ್ಣಿನ ವಾಸನೆ'ಯಿರುವ ಶೈಲಿಯನ್ನು ರೂಢಿಸಿಕೊಂಡರು.




ಮಾರಿಯೋ ಸೃಷ್ಟಿಸಿದ 'ಮಿಸ್ ಫೋನ್ಸೆಕಾ' ಎಂಬ ಪಾತ್ರವು ಕೇವಲ ಕಲ್ಪನೆಯಲ್ಲ, ಅಂದಿನ ಕಾಲದ ಕಾರ್ಪೊರೇಟ್ ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದ ಆಂಗ್ಲೋ-ಇಂಡಿಯನ್ ಮಹಿಳೆಯರ ನಡವಳಿಕೆಯನ್ನು ಗಮನಿಸಿ ಅವರು ಈ ಪಾತ್ರವನ್ನು ಸೃಷ್ಟಿಸಿದ್ದರು. ಈ ಪಾತ್ರವು ಎಷ್ಟು ಜನಪ್ರಿಯವಾಯಿತೆಂದರೆ, ಜನರು ನಿಜವಾಗಿಯೂ ಅಂಥ ವ್ಯಕ್ತಿ ಇದ್ದಾರೆ ಎಂದೇ ನಂಬಿದ್ದರು. ಅವರು ಕೇವಲ ಕಾರ್ಟೂನ್ ಬಿಡಿಸುತ್ತಿರಲಿಲ್ಲ, ಬದಲಾಗಿ ಅನೇಕ ಪುಸ್ತಕಗಳಿಗೆ ಚಿತ್ರಗಳನ್ನು ನೀಡುತ್ತಿದ್ದರು. ಖುಷ್ವಂತ್ ಸಿಂಗ್ ಅವರ ಬರಹಗಳಿಗೆ ಮಾರಿಯೋ ಅವರ ಚಿತ್ರಗಳು ಒಂದು ವಿಶೇಷ ಕಳೆಯನ್ನು ನೀಡುತ್ತಿದ್ದವು. ಸಿನಿಮಾ ಲೋಕದಲ್ಲೂ ಅವರ ಕಲೆಗೆ ಹೆಚ್ಚಿನ ಬೇಡಿಕೆಯಿತ್ತು, ಆದರೆ ಅವರು ಯಾವಾಗಲೂ ತಮ್ಮ ಸ್ವತಂತ್ರ ಕಲೆಗೆ ಮೊದಲ ಆದ್ಯತೆ ನೀಡುತ್ತಿದ್ದರು.

ಮಾರಿಯೋ ಅವರ ಶೈಲಿಯು ಅತ್ಯಂತ ವಿವರಣಾತ್ಮಕವಾಗಿತ್ತು. ಒಂದು ಸಣ್ಣ ಚಿತ್ರದಲ್ಲಿ ನೂರಾರು ವಿಷಯಗಳನ್ನು ಅವರು ಅಡಗಿಸುತ್ತಿದ್ದರು. ಒಂದು ರೈಲ್ವೆ ಸ್ಟೇಷನ್ ಅಥವಾ ಗೋವಾದ ಹಳ್ಳಿಯ ಮಾರುಕಟ್ಟೆಯ ಚಿತ್ರವನ್ನು ಬಿಡಿಸುವಾಗ, ಅಲ್ಲಿನ ಪ್ರತಿಯೊಂದು ಸಣ್ಣ ವಸ್ತುಗಳನ್ನು (ನಾಯಿ, ಬೆಕ್ಕು, ವ್ಯಕ್ತಿಯ ಚಪ್ಪಲಿ ಇತ್ಯಾದಿ) ಬಹಳ ಸೂಕ್ಷ್ಮವಾಗಿ ಚಿತ್ರಿಸುತ್ತಿದ್ದರು. ಕಪ್ಪು ಮತ್ತು ಬಿಳಿ ಚಿತ್ರಗಳಲ್ಲಿ ಅವರು ತೋರುತ್ತಿದ್ದ ಜಾಣ್ಮೆ ಅದ್ಭುತ. ನಂತರದ ದಿನಗಳಲ್ಲಿ ಬಣ್ಣದ ಚಿತ್ರಗಳಲ್ಲೂ ತಮ್ಮ ಛಾಪು ಮೂಡಿಸಿದರು. ನಗರ ಮತ್ತು ಗ್ರಾಮೀಣ ಬದುಕಿನ ಸಮಾಗಮ ಅವರ ಚಿತ್ರಗಳಲ್ಲಿ ಕೇಂದ್ರೀಕೃತವಾಗಿತ್ತು. ಮುಂಬೈನ ಗಡಿಬಿಡಿ ಜೀವನ ಮತ್ತು ಗೋವಾದ ಪ್ರಶಾಂತ ಜೀವನ ಇವೆರಡನ್ನೂ ಸಮಾನವಾಗಿ ಪ್ರೀತಿಸಿ ಚಿತ್ರಿಸಿದ ಕಲಾವಿದ ಇವರು.

'ಗೋವಾ ಎಂದರೆ ಮಾರಿಯೋ, ಮಾರಿಯೋ ಎಂದರೆ ಗೋವಾ' ಎನ್ನುವಷ್ಟು ಅವಿನಾಭಾವ ಸಂಬಂಧ ಅವರಿಗಿತ್ತು. ಗೋವಾದ ಕೆಫೆಗಳು, ಚರ್ಚುಗಳು, ಮದುವೆ ಸಮಾರಂಭಗಳು ಮತ್ತು ಅಲ್ಲಿನ ಜನರ ಜೀವನಶೈಲಿಯನ್ನು ಅವರು ತಮ್ಮ ಚಿತ್ರಗಳ ಮೂಲಕ ಜಗತ್ತಿಗೆ ಪರಿಚಯಿಸಿದರು. ಇಂದು ಗೋವಾಕ್ಕೆ ಹೋದರೆ, ಪಣಜಿಯ ಬೀದಿಗಳಲ್ಲಿ ಅಥವಾ ಹೋಟೆಲ್‌ಗಳಲ್ಲಿ ಅವರ ಚಿತ್ರಗಳು ಗೋಡೆಯ ಮೇಲೆ ರಾರಾಜಿಸುವುದನ್ನು ಕಾಣಬಹುದು.

ಗೋವಾದ ಲೌಟೋಲಿಮ್‌ನಲ್ಲಿರುವ ಅವರ ಕುಟುಂಬದ ಮನೆ ಸುಮಾರು 300 ವರ್ಷಗಳಿಗಿಂತಲೂ ಹಳೆಯದು. ಅದನ್ನು ಅವರು ಅತ್ಯಂತ ಕಾಳಜಿಯಿಂದ ಉಳಿಸಿಕೊಂಡಿದ್ದರು. ಆ ಮನೆಯಲ್ಲಿದ್ದ ಹಳೆಯ ಪೀಠೋಪಕರಣಗಳು, ವರ್ಣಚಿತ್ರಗಳು ಮತ್ತು ವಾಸ್ತುಶಿಲ್ಪವು ಅವರ ಕಲೆಯ ಮೇಲೆ ಅಪಾರ ಪ್ರಭಾವ ಬೀರಿದ್ದವು. ಅವರು ತಮ್ಮ ಕೊನೆಯ ದಿನಗಳನ್ನು ಈ ಐತಿಹಾಸಿಕ ಮನೆಯಲ್ಲೇ ಕಳೆದರು.

ಮಾರಿಯೋ ಮಿರಾಂಡಾ ಅವರು ಭಾರತೀಯ ವ್ಯಂಗ್ಯಚಿತ್ರ ಕಲೆಗೆ ನೀಡಿದ ಕೊಡುಗೆ ಅಪಾರ. ಅವರು ಕೇವಲ ಗೆರೆಗಳನ್ನು ಎಳೆಯುತ್ತಿರಲಿಲ್ಲ, ಆ ಗೆರೆಗಳಿಗೆ ಜೀವ ತುಂಬುತ್ತಿದ್ದರು. ಕಲೆಗೆ ಮಾರಿಯೋ ನೀಡಿದ ಕೊಡುಗೆಯನ್ನು ಪರಿಗಣಿಸಿ, ಅವರು ನಿಧನರಾದ ನಂತರ (2012 ರಲ್ಲಿ) ಭಾರತ ಸರಕಾರ ಅವರಿಗೆ ದೇಶದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮವಿಭೂಷಣ' ನೀಡಿ ಗೌರವಿಸಿತು.

ಮುಂಬೈನ ಪ್ರಸಿದ್ಧ 'ಕೆಫೆ ಮೊಂಡೆಗಾರ್'ಗೆ ಹೋದರೆ ಅಲ್ಲಿನ ಗೋಡೆಗಳ ಮೇಲೆ ಸುಂದರವಾದ ಕಾರ್ಟೂನ್‌ಗಳನ್ನು ಕಾಣಬಹುದು. 1990ರ ದಶಕದಲ್ಲಿ ಈ ಕೆಫೆಯ ಮಾಲೀಕರು ಮಿರಾಂಡಾ ಅವರಿಗೆ ಗೋಡೆಯ ಮೇಲೆ ಚಿತ್ರ ಬಿಡಿಸಲು ಕೇಳಿಕೊಂಡಾಗ, ಅವರು ಯಾವುದೇ ಸಂಭಾವನೆ ಪಡೆಯದೇ ಕೇವಲ ಸ್ನೇಹಕ್ಕಾಗಿ ಅದನ್ನು ಮಾಡಿಕೊಟ್ಟರು. ಇಂದು ಆ ಕೆಫೆಯು ಒಂದು ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ ಎಂದರೆ ಅದಕ್ಕೆ ಮಾರಿಯೋ ಅವರ ಕಲೆಯೇ ಪ್ರಮುಖ ಕಾರಣ.

ಮಾರಿಯೋ ಗೆರೆಗಳ ಲೋಕವನ್ನು ದಾಟಿ ಹೊರಬರುವುದು ಅಷ್ಟು ಸುಲಭವಲ್ಲ. ಅವರ ಚಿತ್ರಪಟಗಳೆಂದರೆ ಅದು ಕೇವಲ ಕಪ್ಪು ಶಾಯಿಯ ಆಟವಲ್ಲ. ಅದು ಕಿಕ್ಕಿರಿದ ಮುಂಬೈನ ಲೋಕಲ್ ಟ್ರೈನಿನ ಗಾಳಿಯಲ್ಲಿ ತೇಲಿಬರುವ ಬೆವರಿನ ವಾಸನೆ, ಮಳೆಗಾಲದ ಗೋವಾದ ಹಳೆಯ ಮಾಡಿನಿಂದ ತೊಟ್ಟಿಕ್ಕುವ ನೀರು ಮತ್ತು ಮಿಸ್ ಫೊನ್ಸೆಕಾಳ ಟೈಪ್‌ರೈಟರ್‌ನಿಂದ ಉದುರುವ ಅಕ್ಷರಗಳ ಸದ್ದು. ಮಾರಿಯೋ ಅವರ ಪ್ರತಿ ಚಿತ್ರವೂ ಒಂದು ಕಿರುಕಾದಂಬರಿಯನ್ನು ತನ್ನೊಡಲಲ್ಲಿ ಬಚ್ಚಿಟ್ಟುಕೊಂಡಿರುತ್ತದೆ. ಆ ಗೆರೆಗಳು ನಮ್ಮನ್ನು ನವಿರಾಗಿ ತಬ್ಬಿಕೊಳ್ಳುತ್ತವೆ, ಒಮ್ಮೊಮ್ಮೆ ನಮ್ಮದೇ ಅಸಂಗತ ಬದುಕನ್ನು ನೋಡಿ ನಾವೇ ಮುಗುಳ್ನಗುವಂತೆ ಮಾಡುತ್ತವೆ.

ಮಾರಿಯೋ ಅವರ ಬ್ರಷ್‌ಗೆ ಮನುಷ್ಯರ ಮುಖದ ಮೇಲಿನ ಸುಕ್ಕುಗಳಿಗಿಂತ ಅವರ ಅಂತರಂಗದ ವಿಚಿತ್ರ ತುಡಿತಗಳೇ ಹೆಚ್ಚಾಗಿ ದಕ್ಕುತ್ತಿದ್ದವು. ಅವರ ಚಿತ್ರಗಳಲ್ಲಿನ ಕಿಕ್ಕಿರಿದ ಜನಸಂದಣಿಯ ನಡುವೆಯೂ ಒಬ್ಬೊಬ್ಬರೂ ಎಷ್ಟು ಏಕಾಂಗಿ ಮತ್ತು ಎಷ್ಟು ಆತ್ಮೀಯರಾಗಿ ಕಾಣುತ್ತಿದ್ದರೆಂದರೆ, ಅದು ಅಪ್ಪಟ ಕಾವ್ಯದಂತಿತ್ತು. ಮಿಸ್ ಫೊನ್ಸೆಕಾಳ ಆ ಎತ್ತರದ ಕೇಶಾಲಂಕಾರ ಕೇವಲ ಒಂದು ಫ್ಯಾಷನ್ ಆಗಿರಲಿಲ್ಲ, ಅದು ಅಂದಿನ ಕಾಲದ ಮಹಾನಗರದ ಕನಸುಗಳಿಗೆ ಹಾಕಿದ ಒಂದು ಚೌಕಟ್ಟಾಗಿತ್ತು. ಅವರ ಕಲೆ ಎಂದರೆ ಮುಗಿಯದ ಸಂಜೆಗಳ ಹರಟೆ, ಬೀದಿಯಂಚಿನ ಕೆಫೆಯಲ್ಲಿ ಕುಳಿತು ಸುಮ್ಮನೆ ಹಾದುಹೋಗುವವರನ್ನು ಗಮನಿಸುವ ಸುಖ. ಅಲ್ಲಿ ರಾಜಕಾರಣಿಯ ದೊಡ್ಡ ಹೊಟ್ಟೆಯೂ ಒಂದು ಲಹರಿಯೇ, ಫೊನ್ಸೆಕಾಳ ಗಂಭೀರ ಮುಖವೂ ಒಂದು ಸಂಭ್ರಮವೇ.

ಕೊನೆಗೂ ಮಾರಿಯೋ ಉಳಿಸಿ ಹೋಗಿರುವುದು ಕೇವಲ ವ್ಯಂಗ್ಯಚಿತ್ರಗಳನ್ನಲ್ಲ, ಬದಲಿಗೆ ಬದುಕನ್ನು ಪ್ರೀತಿಸುವ ಒಂದು ಸುಂದರ ದೃಷ್ಟಿಕೋನವನ್ನು. ಅವರ ಗೆರೆಗಳು ಸದಾ ಒಂದಿಲ್ಲೊಂದು ಚಲನೆಯಲ್ಲಿರುವಂತೆ ಭಾಸವಾಗುತ್ತವೆ. ಬದುಕಿನ ಸಂಕಟಗಳನ್ನು ಹಾಸ್ಯದ ಲೇಪನದಲ್ಲಿ ಕರಗಿಸಿಬಿಡುವ ಆ ಕಲೆಗಾರಿಕೆ ನಮಗೆ ಇಂದಿಗೂ ಒಂದು ಆಸರೆ. ಅವರು ನಮ್ಮ ಕಣ್ಣಮುಂದೆ ಬಿಡಿಸಿದ ಆ ಗೋವಾ, ಆ ಮುಂಬೈ ಈಗ ಬದಲಾಗಿರಬಹುದು. ಆದರೆ, ಆ ಚಿತ್ರಗಳ ಒಳಗಿನ ಹಸಿವು, ಪ್ರೀತಿ ಮತ್ತು ಮುಗ್ಧತೆ ಮಾತ್ರ ಎಂದಿಗೂ ಮಾಸದ ಒಂದು ಮಧುರ ಸ್ಮೃತಿ.

ಮಾರಿಯೋ ಮಿರಾಂಡಾ ಎಂದರೆ ಅದು ನಮ್ಮೊಳಗಿನ ಅಮಾಯಕ ಕಲಾವಿದ ಈ ಲೋಕವನ್ನು ಬೆರಗಿನಿಂದ ನೋಡುವ ಒಂದು ಕಿಟಕಿ!

## ಬೆಂಜಮಿನ್ ಹಾಗೆ ಹೇಳಿದ್ದೇಕೆ?

ಅಮೆರಿಕದ ಖ್ಯಾತ ಬರಹಗಾರ, ವಿಜ್ಞಾನಿ, ಅನ್ವೇಷಕ, ರಾಜತಾಂತ್ರಿಕ ಹಾಗೂ ರಾಜಕೀಯ ತತ್ವಜ್ಞಾನಿ ಬೆಂಜಮಿನ್ ಫ್ರಾಂಕ್ಲಿನ್ ಆಗಾಗ ಒಂದು ಮಾತನ್ನು ಹೇಳುತ್ತಿದ್ದರಂತೆ - 'ನಾನು ನನ್ನನ್ನು ನಂಬುವುದಿಲ್ಲ.'

ಅವರ ಈ ಮಾತು ಮೇಲ್ನೋಟಕ್ಕೆ ವಿರೋಧಾಭಾಸದಂತೆ ಕಂಡರೂ, ಅದು ಅವರ ಯಶಸ್ಸಿನ ಮೂಲ ರಹಸ್ಯವಾಗಿತ್ತು ಎಂದು ಅನೇಕರು ಈಗಲೂ ವಿಶ್ಲೇಷಿಸುತ್ತಾರೆ. ಬೆಂಜಮಿನ್ ಫ್ರಾಂಕ್ಲಿನ್ ಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಆಡಿದ ಈ ಮಾತಿನ ಬಗ್ಗೆ ಇತ್ತೀಚೆಗೆ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ವಿಮರ್ಶಾತ್ಮಕವಾಗಿ ಬರೆದಿತ್ತು. ಫ್ರಾಂಕ್ಲಿನ್ ಯಾಕೆ ಈ ಮಾತನ್ನು ಹೇಳಿದ್ದಿರಬಹುದು ಎಂದು ವಿಮರ್ಶೆ ಮಾಡಿತ್ತು.

'ನಿನ್ನನ್ನು ನೀನು ನಂಬು, ಆಗಲೇ ಜಯ ಸಿಗುವುದು' ಎಂಬ ಮಾತನ್ನು ನಾವು ಕೇಳಿದ್ದೇವೆ. ಆದರೆ, ಫ್ರಾಂಕ್ಲಿನ್ ಹಾಗೆ ಹೇಳಿದ್ದೇಕೆ? ಪ್ರಾಯಶಃ ಅವರು ತಮ್ಮ ಮೇಲಿದ್ದ ಅಪನಂಬಿಕೆಯನ್ನು, ಅಹಂಕಾರವನ್ನು ಅಳಿಸುವ ಮತ್ತು ಜ್ಞಾನವನ್ನು ವೃದ್ಧಿಸುವ ಅಸ್ತ್ರವಾಗಿ ಹಾಗೆ ಹೇಳಿದ್ದಿರಬಹುದು.

ಮನುಷ್ಯನ ಯಶಸ್ಸಿಗೆ ಅತಿದೊಡ್ಡ ಶತ್ರು ಎಂದರೆ ಅದು 'ಬೌದ್ಧಿಕ ಅಹಂಕಾರ'. ನಾನು ಮಾಡಿದ್ದೇ ಸರಿ, ನನಗೆಲ್ಲವೂ ತಿಳಿದಿದೆ ಎಂಬ ಭಾವನೆ ಬಂದಾಗ ಕಲಿಕೆ ನಿಂತುಹೋಗುತ್ತದೆ. ಬೆಂಜಮಿನ್ ಫ್ರಾಂಕ್ಲಿನ್ ಅವರು ತಮ್ಮ ತಪ್ಪುಗಳನ್ನು ಪತ್ತೆ ಹಚ್ಚುವಲ್ಲಿ ಬಹಳ ಜಾಗರೂಕರಾಗಿದ್ದರು. ಅವರಿಗೆ ತಿಳಿದಿತ್ತು, ಮನುಷ್ಯ ಸಹಜವಾಗಿ ತಪ್ಪುಗಳಿಗೂ, ಪೂರ್ವಗ್ರಹಗಳಿಗೂ ಬಲಿಯಾಗುತ್ತಾನೆಂದು. ಈ 'ಸ್ವ-ಅಪನಂಬಿಕೆ' ಅವರನ್ನು ಸದಾ ಜಾಗರೂಕರಾಗಿರುವಂತೆ ಮಾಡಿದ್ದಿರಬಹುದು.

ಅವರು ತಮ್ಮನ್ನು ತಾವು ಸಂಪೂರ್ಣವಾಗಿ ನಂಬಿದ್ದರೆ, ಅವರು ಎಂದಿಗೂ ಅಷ್ಟು ದೊಡ್ಡ ಸಂಶೋಧಕ ಅಥವಾ ರಾಜತಾಂತ್ರಿಕರಾಗಲು ಸಾಧ್ಯವಾಗುತ್ತಿರಲಿಲ್ಲ. ತಮ್ಮಲ್ಲಿ ದೋಷಗಳಿವೆ ಎಂದು ತಿಳಿದಿದ್ದರಿಂದಲೇ ಅವರು ಆ ದೋಷಗಳನ್ನು ಸರಿಪಡಿಸಲು ಪ್ರಯತ್ನಿಸಿದರು.

ಫ್ರಾಂಕ್ಲಿನ್ ಅವರು ತಮ್ಮನ್ನು ತಾವೇ ತಿದ್ದಿಕೊಳ್ಳಲು ಹದಿಮೂರು ಸದ್ಗುಣಗಳ ಪಟ್ಟಿಯನ್ನು ಸಿದ್ಧಪಡಿಸಿದ್ದರು. ಅವರು ತಮ್ಮ ನೈತಿಕ ಶಕ್ತಿಯ ಮೇಲೆ ಅತಿಯಾದ ನಂಬಿಕೆ ಇಟ್ಟಿರಲಿಲ್ಲ, ಬದಲಾಗಿ, ತಾವು ದಾರಿ ತಪ್ಪಬಹುದು ಎಂದು ತಿಳಿದಿದ್ದರಿಂದ, ಪ್ರತಿದಿನ ತಮ್ಮ ನಡವಳಿಕೆಗಳನ್ನು ಟ್ರ್ಯಾಕ್ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದರು. 'ಇಂದು ನಾನು ಮಿತವಾಗಿ ಉಂಡೆನೇ? ಸಮಯ ವ್ಯರ್ಥ ಮಾಡಿದೆನೇ?' ಎಂದು ಅವರು ದಿನಚರಿಯಲ್ಲಿ ಗುರುತು ಹಾಕಿಕೊಳ್ಳುತ್ತಿದ್ದರು.

ತಮ್ಮ ಮೇಲೆ ಅವರಿಗಿದ್ದ ಈ 'ಅಪನಂಬಿಕೆ' ಅವರನ್ನು ಶಿಸ್ತಿನ ಕಡೆಗೆ ತಳ್ಳಿತು. ಶಿಸ್ತು ಅವರನ್ನು ಯಶಸ್ಸಿನ ಕಡೆಗೆ ನಡೆಸಿತು. ಫ್ರಾಂಕ್ಲಿನ್ ಅವರು ಚರ್ಚೆಗಳಲ್ಲಿ ಭಾಗವಹಿಸುವಾಗ 'ಖಂಡಿತ'ವಾಗಿಯೂ, 'ನಿಸ್ಸಂದೇಹ'ವಾಗಿ ಎಂಬಂಥ ಕಠಿಣ ಪದಗಳನ್ನು ಬಳಸುವುದನ್ನು ನಿಲ್ಲಿಸಿದ್ದರಂತೆ. ಬದಲಾಗಿ 'ನನಗೆ ಅನ್ನಿಸುವ ಮಟ್ಟಿಗೆ', 'ಸದ್ಯದ ಪರಿಸ್ಥಿತಿಯಲ್ಲಿ ಇದು ಸರಿಯಿರಬಹುದು' ಎಂಬ ಮೃದುವಾದ ಶೈಲಿಯನ್ನು ಅಳವಡಿಸಿಕೊಂಡಿದ್ದರಂತೆ.

ತಮ್ಮದೇ ಆದ ಅಭಿಪ್ರಾಯಗಳು ತಪ್ಪಿರಬಹುದು ಎಂಬ ಸಂದೇಹ ಅವರಿಗಿದ್ದ ಕಾರಣ, ಅವರು ಇತರರ ಮಾತುಗಳನ್ನು ಗಮನವಿಟ್ಟು ಕೇಳುತ್ತಿದ್ದರು. ಈ ನಮ್ರತೆಯೇ ಅವರನ್ನು ಅಮೆರಿಕದ ಇತಿಹಾಸದ ಶ್ರೇಷ್ಠ ರಾಜತಾಂತ್ರಿಕನನ್ನಾಗಿ ಮಾಡಿತು. ಫ್ರಾನ್ಸ್ ದೇಶದ ಬೆಂಬಲವನ್ನು ಅಮೆರಿಕಕ್ಕೆ ದೊರಕಿಸಿಕೊಡುವಲ್ಲಿ ಅವರ ಈ ಗುಣವೇ ಪ್ರಮುಖ ಪಾತ್ರ ವಹಿಸಿತು. ತಾನು ಹೇಳಿದ್ದೇ ಅಂತಿಮ ಎನ್ನುವವನು ಸ್ನೇಹಿತರನ್ನು ಕಳೆದುಕೊಳ್ಳುತ್ತಾನೆ. ಆದರೆ, ತನ್ನ ಆಲೋಚನೆಯಲ್ಲಿ ಬದಲಾವಣೆಗೆ ಅವಕಾಶ ನೀಡುವವನು ಜಗತ್ತನ್ನೇ ಗೆಲ್ಲುತ್ತಾನೆ.

ವಿಜ್ಞಾನಿಯಾದ ಫ್ರಾಂಕ್ಲಿನ್ ಸದಾ ಪ್ರಶ್ನಿಸುತ್ತಿದ್ದರು. ಮಿಂಚು ಮತ್ತು ವಿದ್ಯುತ್ ಎರಡೂ ಒಂದೇ ಎಂದು ಸಾಬೀತುಪಡಿಸಲು ಅವರು ನಡೆಸಿದ ಪ್ರಯೋಗಗಳು ಅವರ ಅನ್ವೇಷಣಾ ಮನೋಭಾವಕ್ಕೆ ಸಾಕ್ಷಿ. ವಿಜ್ಞಾನದಲ್ಲಿ ಏನನ್ನೂ ಕುರುಡಾಗಿ ನಂಬಬಾರದು. ಸಿದ್ಧಾಂತಗಳನ್ನು ಸಂಶಯದಿಂದ ನೋಡುವುದು ಮತ್ತು ಪ್ರಯೋಗದ ಮೂಲಕ ಸಾಬೀತುಪಡಿಸುವುದು ವಿಜ್ಞಾನದ ಧರ್ಮ. ಫ್ರಾಂಕ್ಲಿನ್ ತಮ್ಮ ಸ್ವಂತ ತಾರ್ಕಿಕ ಬುದ್ಧಿಯನ್ನೂ ಸಂಶಯದಿಂದ ನೋಡುತ್ತಿದ್ದರು. ಹೀಗಾಗಿ ಅವರು ಹೆಚ್ಚಿನ ಪ್ರಯೋಗಗಳನ್ನು ಮಾಡಿ ಸತ್ಯವನ್ನು ಕಂಡುಕೊಂಡರು.

ಬೆಂಜಮಿನ್ ಫ್ರಾಂಕ್ಲಿನ್ ಗೆದ್ದಿದ್ದು ತಮ್ಮ ಅತಿಯಾದ ಆತ್ಮವಿಶ್ವಾಸದಿಂದಲ್ಲ, ಬದಲಾಗಿ ತಮ್ಮ ಮಿತಿಗಳನ್ನು ಅರಿತುಕೊಂಡಿದ್ದರಿಂದ. 'ನಾನು ತಪ್ಪು ಮಾಡಬಹುದು' ಎಂಬ ಅರಿವು ಅವರನ್ನು ಸದಾ ತಿದ್ದಿಕೊಳ್ಳುವಂತೆ ಪ್ರೇರೇಪಿಸಿತು.

ಇಂದಿನ ಕಾಲದಲ್ಲಿ ನಮಗೆ ಇದು ದೊಡ್ಡ ಪಾಠ. ನಾವು ನಮ್ಮ ಆಲೋಚನೆಗಳು, ನಂಬಿಕೆಗಳು ಮತ್ತು ನಿರ್ಧಾರಗಳ ಬಗ್ಗೆ ಅತಿಯಾದ ಮಮಕಾರ ಹೊಂದಿದ್ದೇವೆ. ಆದರೆ, ಫ್ರಾಂಕ್ಲಿನ್ ಅವರಂತೆ ನಮಗೂ ನಮ್ಮ ಬಗ್ಗೆ ಸ್ವಲ್ಪ 'ಸಂದೇಹ' ಇದ್ದರೆ, ನಾವು ಇತರರ ಮಾತಿಗೆ ಬೆಲೆ ಕೊಡುತ್ತೇವೆ, ಹೊಸದನ್ನು ಕಲಿಯುತ್ತೇವೆ ಮತ್ತು ಅಂತಿಮವಾಗಿ ಯಶಸ್ಸಿನ ಹಾದಿಯಲ್ಲಿ ಸಾಗುತ್ತೇವೆ.

ತನ್ನನ್ನು ಗೆದ್ದವನು ಜಗತ್ತನ್ನೇ ಗೆಲ್ಲಬಲ್ಲ. ಆ ಗೆಲುವು ಶುರುವಾಗುವುದು ತನ್ನ ಮಿತಿಗಳ ಒಪ್ಪಿಗೆಯಿಂದ ಮಾತ್ರ. ಬೆಂಜಮಿನ್ ಫ್ರಾಂಕ್ಲಿನ್ ಅಮೆರಿಕದ ಡಾಲರ್ ನೋಟಿನ ಮೇಲೆ ಮಿಂಚುತ್ತಿರುವುದು ಅವರ ಬುದ್ಧಿವಂತಿಕೆಯಿಂದ ಮಾತ್ರವಲ್ಲ, ಅವರ ಈ ಅಪೂರ್ವ 'ಸ್ವಯಂ-ತಿದ್ದುಪಡಿ' ಗುಣದಿಂದಾಗಿ.

# ಗಂಗಾಲಹರಿ ಸ್ತೋತ್ರವೂ ಜಗನ್ನಾಥ ಪಂಡಿತನ ಕಥೆಯೂ

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅದೆಷ್ಟೋ ಅಮರಕವಿಗಳ ಅಜರಾಮರ ಕೃತಿಗಳು ರಚನೆಯಾದ ಹಿನ್ನೆಲೆ, ಕಥೆ-ವ್ಯಥೆಗಳು, ಹೀಗೆಯೇ ಕರುಣಾಜನಕವಾಗಿ ಇರುತ್ತವೆ. ''ಆ ಕೀರ್ತನಲೋನಿ ಪ್ರತಿ ಅಕ್ಷರಂ ವೆನುಕ ಆರ್ದ್ರತ ನಿಂಡಿ ಉಂದಿ ದಾಸು...'' ಎಂದು ಶಂಕರಾಭರಣಂ ಶಂಕರಶಾಸ್ತ್ರಿಗಳು ಹೇಳಿದಂತೆ. ಭಗವಂತನ ಆಸರೆಯ ಬಾಯಾರಿಕೆಯಿಂದ ಬಳಲಿ ಬೆಂಡಾದ ಭಕ್ತನ ಎದೆಯಾಳದಲ್ಲಿ ತನ್ನಿಂತಾನೇ ಗಂಗಾಜಲವಾಗಿ ಹೊರಹೊಮ್ಮುವ ಗೀತೆಯಂತೆ ಇರುತ್ತವೆ ಆ ಘನಘೋರ ಗಾಥೆಗಳು. ಹಿಂದಿನ ಕಾಲದ ಕವಿಗಳಲ್ಲಿ ಹೆಚ್ಚಿನವರೆಲ್ಲ ಹಾಸಿಹೊದೆಯುವಷ್ಟು ಕಷ್ಟಗಳಿದ್ದವರೇ. ''ಬ್ರೋಚೇವಾರೆವರುರಾ...'' ಕೃತಿಯನ್ನು ವಾಸುದೇವಾಚಾರ್ಯರು ರಚಿಸಿದ್ದೂ ಯಾವುದೋ ಕಷ್ಟಕರ ಸನ್ನಿವೇಶದಲ್ಲೇ ಇರಬಹುದು. ಆದ್ದರಿಂದಲೇ ''ನನ್ನನ್ನು ಕಾಪಾಡುವವರಾರಯ್ಯ'' ಎಂದು ರಘುವರನಲ್ಲಿ ಮೊರೆ. ತ್ಯಾಗರಾಜರು ಪಂಚರತ್ನ ಕೃತಿಗಳನ್ನು ರಚಿಸಿದ್ದು ತಮ್ಮ ಬಾಳಿನ ಕಷ್ಟದ ದಿನಗಳಲ್ಲೇ ಅಂತೆ. ಕನಕ-ಪುರಂದರರು, ಸರ್ವಜ್ಞ-ಅಲ್ಲಮರು, ಕೊನೆಗೆ ''ನೀ ಹೀಂಗ ನೋಡಬೇಡ ನನ್ನ...'' ಎಂದು ಬೆಂದ ಬೇಂದ್ರೆಯವರೂ ಅಷ್ಟೇ, ''ಬಂಗಾರವಿಲ್ಲದ ಬೆರಳು...'' ಎಂದ ನರಸಿಂಹ ಸ್ವಾಮಿಗಳಾದರೂ ಅಷ್ಟೇ. ಅವರ ಕೃತಿಗಳೆಲ್ಲ ಸುಖದ ಸುಪ್ಪತ್ತಿಗೆಯಿಂದ ಬಂದವುಗಳಲ್ಲ. ಕಷ್ಟಗಳ ಕುಲುಮೆಯಲ್ಲಿ ನಳನಳಿಸಿದ ರತ್ನಗಳು. ಆದ್ದರಿಂದಲೇ ''ಮೈಯನ್ನು ಹಿಂಡಿದರೂ ಸಿಹಿ ಕೊಡುವ ಕಬ್ಬು, ತೇಯುತಲಿದ್ದರೂ ಪರಿಮಳ ಬೀರುವ ಗಂಧ, ಉರಿದರೂ ಬೆಳಕು ಚೆಲ್ಲುವ ದೀಪ...'' ಎಂಬ ಬಣ್ಣನೆ ಇವರಿಗೆಲ್ಲ ಏಕಪ್ರಕಾರವಾಗಿ ಸರಿಹೊಂದುವುದು. ಕವಿಗಳ ಬದುಕಿನ ಕಥೆ-ವ್ಯಥೆಗಳನ್ನು ಅರಿತುಕೊಂಡಾಗ ನಮಗೆ ಅವರ ಕಾವ್ಯ ಇನ್ನಷ್ಟು ಹಿಡಿಸುತ್ತದೆ. ಅಬ್ಬಾ ಎಂತಹ ಕಷ್ಟಕಾರ್ಪಣ್ಯದಲ್ಲೂ ಇಷ್ಟೊಂದು ಮಧುರವಾದ, ಅರ್ಥವತ್ತಾದ, ಹೃದಯಂಗಮವಾದ ಕೃತಿಗಳನ್ನು ರಚಿಸಿದರಲ್ಲಾ ಎಂದು ಮನಮಿಡಿಯುತ್ತದೆ.

ಅಂತಹದೇ ರೋಮಾಂಚಕ ಹಿನ್ನೆಲೆಯಿರುವ ಕೃತಿ 'ಜಗನ್ನಾಥ ಪಂಡಿತನ ಗಂಗಾಲಹರಿ.' 52 ಶ್ಲೋಕಗಳಿರುವ ಒಂದು ಸಂಸ್ಕೃತ ಸ್ತೋತ್ರ. ಬೇಂದ್ರೆಯವರ ಗಂಗಾವತರಣಕ್ಕೂ ಇದೇ ಪ್ರೇರಣೆಯ ಸ್ತೋತ್ರ. ವೈಶಿಷ್ಟ್ಯವಿರುವುದು ಈ ಸ್ತೋತ್ರದಲ್ಲಲ್ಲ. ದೇವಾಧಿದೇವತೆಗಳ ಲಕ್ಷೋಪಲಕ್ಷ ಸ್ತೋತ್ರಗಳಂತೆಯೇ ಇದೂ ಒಂದು. ಪಾಂಡಿತ್ಯಪೂರ್ಣ ಸಂಸ್ಕೃತ ಭಾಷೆಯಲ್ಲಿ ಕವಿಕಲ್ಪನೆಗಳೆಲ್ಲ ಗರಿಗೆದರಿ ಮೂಡಿಬಂದಿರುವ ಗಂಗಾನದಿ ವರ್ಣನೆ, ಪೊರೆಯುವಂತೆ ಪ್ರಾರ್ಥನೆ ಅಷ್ಟೇ. ಆದರೆ, ಜಗನ್ನಾಥ ಪಂಡಿತನ ಬದುಕಿನ ಕಥೆ ಬಹಳ ಸ್ವಾರಸ್ಯವಾದದ್ದು. ಗಂಗಾಲಹರಿಯನ್ನು ಆತ ರಚಿಸಿದ ಸನ್ನಿವೇಶವಂತೂ ಹೃದಯಸ್ಪರ್ಶಿಯಾದದ್ದು. ನಾನಿದರ ಬಗ್ಗೆ ಮೊದಲಬಾರಿ ತಿಳಿದುಕೊಂಡಿದ್ದು ಕೆಲ ವರ್ಷಗಳ ಹಿಂದೆ ಇಲ್ಲಿನ 'ಭೂಮಿಕಾ' ಚರ್ಚಾಚಾವಡಿಯಲ್ಲಿ ಡಾ. ರವಿ ಹರಪ್ಪನಹಳ್ಳಿ ನಡೆಸಿಕೊಟ್ಟ ಒಂದು ಕಾರ್ಯಕ್ರಮದಲ್ಲಿ. ಡಾ. ರವಿ ವೃತ್ತಿಯಲ್ಲಿ ಜೀವವಿಜ್ಞಾನಿ, ಪ್ರವೃತ್ತಿಯಲ್ಲಿ ಸಾಹಿತ್ಯಾಸಕ್ತ. ಮುಖ್ಯವಾಗಿ ಬೇಂದ್ರೆ ಭಕ್ತ. ಆದ್ದರಿಂದಲೇ ಬೇಂದ್ರೆಯವರ ಗಂಗಾವತರಣ ಮತ್ತು ಜಗನ್ನಾಥ ಪಂಡಿತನ ಗಂಗಾಲಹರಿ ಎರಡನ್ನೂ ತುಲನಾತ್ಮಕವಾಗಿ ಪರಿಚಯಿಸಿದ್ದರು. ಆಮೇಲೆ ಕುತೂಹಲದಿಂದ ಅಂತರಜಾಲವನ್ನು ಮಥಿಸಿದಾಗ ಇನ್ನೊಬ್ಬ ಬೇಂದ್ರೆ ಭಕ್ತ ಹುಬ್ಬಳ್ಳಿ ನಿವಾಸಿ ಸುಧೀಂದ್ರ ದೇಶಪಾಂಡೆಯವರ 'ಸಲ್ಲಾಪ' ಬ್ಲಾಗ್‌ನಲ್ಲಿ ಗಂಗಾಲಹರಿ, ಜಗನ್ನಾಥ ಪಂಡಿತ, ಬೇಂದ್ರೆಯವರ ಮೇಲಾದ ಪರಿಣಾಮ...ಬಗೆಗೊಂದು ಪ್ರೌಢ ಲೇಖನವೂ ಓದಲಿಕ್ಕೆ ಸಿಕ್ಕಿತ್ತು.

ಹಾಗೆ ನಾನು ತಿಳಿದುಕೊಂಡಿದ್ದ ಜಗನ್ನಾಥ ಪಂಡಿತನ ಜೀವನಗಾಥೆಯ ಸಾರಾಂಶ ಇಷ್ಟು: ಕ್ರಿ.ಶ 17ನೇಯ ಶತಮಾನದಲ್ಲಿ ಬಾಳಿದ್ದ ಜಗನ್ನಾಥ ಪಂಡಿತ ಮೂಲತಃ ಆಂಧ್ರದವನು. ಅತಿಶಯ ಮೇಧಾವಿ, ಆದರೆ ಕಡುಬಡವ. ರಾಜಾಶ್ರಯ ಕೋರಿ ಉತ್ತರಭಾರತಕ್ಕೆ ವಲಸೆ ಹೋಗುತ್ತಾನೆ. ಮೊಘಲ್ ಚಕ್ರವರ್ತಿ ಷಹಜಹಾನನ ಆಸ್ಥಾನವನ್ನು ತಲುಪುತ್ತಾನೆ. ತನ್ನ ಪಾಂಡಿತ್ಯದಿಂದ ಅವನ ಮನಗೆಲ್ಲುತ್ತಾನೆ. ಚಕ್ರವರ್ತಿಯೊಡನೆ ಚದುರಂಗ ಆಡುವಷ್ಟು ಸಖ್ಯ-ಸಲುಗೆ ಬೆಳೆಸುತ್ತಾನೆ. ಆಟದಲ್ಲಿ ಷಹಜಹಾನನನ್ನು ಸೋಲಿಸುತ್ತಾನೆ. ಪಣವಾಗಿ ಅಲ್ಲಿ ಸೇವಕಿಯಾಗಿದ್ದ ಸುರಸುಂದರಿ ದಾಸೀಪುತ್ರಿ ಲವಂಗಿಯನ್ನೇ ಕೊಡುವಂತೆ ಕೇಳುತ್ತಾನೆ. ಹಠ ಹಿಡಿದು ಅವಳನ್ನೇ ಮದುವೆಯಾಗುತ್ತಾನೆ, ಹಾಯಾಗಿರುತ್ತಾನೆ. ಮುಂದೆ ಔರಂಗಜೇಬ ತಂದೆ ಷಹಜಹಾನನನ್ನು ಬಂಧಿಸಿದಾಗ ಜಗನ್ನಾಥ ಪಂಡಿತ ಮತ್ತು ಲವಂಗಿ ರಾಜ್ಯದಿಂದ ಹೊರಬೀಳುತ್ತಾರೆ. ಕಾಶೀಕ್ಷೇತ್ರಕ್ಕೆ ಹೋದಾಗ ಅಲ್ಲಿನ ಪಂಡಿತ ಸಮುದಾಯವು ಅವನನ್ನು ಜಾತಿಭ್ರಷ್ಟನೆಂದು ದೂರವಿಡುತ್ತದೆ. ಪ್ರತಿಭಾನ್ವಿತನಾದರೂ ಉದ್ಧಟತನದವನು ಅಂತಲೂ ಅವನ ಬಗ್ಗೆ ತಿರಸ್ಕಾರವಿರುತ್ತದೆ. ಅಂತಹ ಹತಾಶ ಪರಿಸ್ಥಿತಿಯಲ್ಲಿ ಜಗನ್ನಾಥ ಪಂಡಿತ ರಚಿಸಿದ್ದೇ 'ಗಂಗಾಲಹರಿ.' ಬದುಕಿನಲ್ಲಿ ಸಾಕಷ್ಟು ರೋಸಿಹೋಗಿ ಪ್ರಾಯಶ್ಚಿತ್ತದ ರೂಪದಲ್ಲಿ ಮಡದಿಯೊಂದಿಗೆ ಜಲಸಮಾಧಿ ಮಾಡಿಕೊಳ್ಳಲು ನಿಶ್ಚಯಿಸಿರುತ್ತಾನೆ. ಕಾಶಿಯಲ್ಲಿ ಗಂಗೆಯ ದಡದಲ್ಲಿ ಕುಳಿತು ಹಂಸಗೀತೆಯೆಂಬಂತೆ ಗಂಗಾಲಹರಿಯನ್ನು ಹಾಡುತ್ತಾನೆ. ಒಂದೊಂದು ಶ್ಲೋಕಕ್ಕೂ ಒಂದೊಂದು ಮೆಟ್ಟಲಿನಷ್ಟು ಏರುವ ಗಂಗೆ, 52ನೇಯ ಶ್ಲೋಕವಾಗುವಾಗ ಅವರಿಬ್ಬರನ್ನೂ ಕೊಚ್ಚಿಕೊಂಡು ಹೋಗುತ್ತಾಳೆ. ಮನಮಿಡಿಯುವ ದಾರುಣ ಕಥೆ.

ಇದೀಗ ನನಗೆ ಇನ್ನೊಂದು ಅಮೂಲ್ಯವಾದ ನಿಧಿ ಸಿಕ್ಕಿದೆ! ಪಂಢರೀನಾಥಾಚಾರ್ಯ ಗಲಗಲಿಯವರ ಕೃತಿ ''ಪಂಡಿತರಾಜ ಜಗನ್ನಾಥಕೃತ ಗಂಗಾಲಹರಿ. ಕನ್ನಡ ಅನುವಾದ: ''ಪಂ. ಪಂಢರೀನಾಥಾಚಾರ್ಯ ಗಲಗಲಿ''. ಬೇಂದ್ರೆಯವರ ಮುನ್ನುಡಿ ಇರುವ ಈ ಕೃತಿಯಲ್ಲಿ ಗಂಗಾಲಹರಿಯ ಮೂಲ ಸಂಸ್ಕೃತ ಶ್ಲೋಕಗಳ ಪಕ್ಕದಲ್ಲೇ ಅವುಗಳ ಸುಂದರ ಅನುವಾದ, ಕನ್ನಡದಲ್ಲಿ ಪದ್ಯರೂಪದಲ್ಲೇ ಇದೆ. ಜತೆಯಲ್ಲಿ 'ಮಂದಾಕಿನೀ ಅಭಿನಂದನೆ' ಎಂಬೊಂದು ಮೂರು ಚರಣಗಳ ಕನ್ನಡ ಪದ್ಯ, ಪಂಢರೀನಾಥಾಚಾರ್ಯರೇ ರಚಿಸಿದ್ದು, ''ರಾಜಕವಿಯ ಸಂಸ್ಕೃತದ ಸ್ವರ್ಣಭೂಮಿಯಲಿ ಹರಿದ ತೆರದಿ। ಗಂಗೆ ಎನ್ನ ಕನ್ನಡದ ಪಾತ್ರದಲ್ಲಿ ಹರಿದಳಂತೆ ಭರದಿ'' ಎಂದು ಉದ್ದೇಶವನ್ನು ದಾಖಲಿಸಿದ್ದು ಇದೆ. ಮಹಾಕವಿ ವಾಲ್ಮೀಕಿವಿರಚಿತ ಸಂಸ್ಕೃತ ಗಂಗಾಷ್ಟಕಮ್, ಅದರದೂ ಕನ್ನಡ ಅನುವಾದ ಪಂಢರೀನಾಥಾಚಾರ್ಯರೇ ಮಾಡಿದ್ದು ಕೂಡ ಇದೆ. ಮತ್ತು ಬಹುಮುಖ್ಯವಾಗಿ ಸುಮಾರು 30 ಪುಟಗಳಷ್ಟು ವಿಸ್ತಾರವಾಗಿ ಜಗನ್ನಾಥ ಪಂಡಿತನ ಕವಿಪರಿಚಯ ಇದೆ, ಸಂಸ್ಕೃತಭೂಯಿಷ್ಠ ಸಿರಿವಂತ ಕನ್ನಡದಲ್ಲಿ. ಅದನ್ನೋದುವುದೇ ಒಂದು ರೋಚಕ ಅನುಭವ. ಅದರ ಆಯ್ದ ಕೆಲ ಭಾಗಗಳನ್ನು ನೋಡೋಣ, ಆದರೆ ಮೊದಲಿಗೆ ಪಂಢರೀನಾಥಾಚಾರ್ಯ ಗಲಗಲಿಯವರ ಬಗೆಗೆ ಒಂದೆರಡು ಮಾತುಗಳು ಪ್ರಸ್ತುತವೆನಿಸುತ್ತವೆ. ಯಾರು ಪಂಢರಿನಾಥಾಚಾರ್ಯ ಗಲಗಲಿ ಎಂದು ಈಗಿನ ಜೆನ್-ಝೀಗಳಿಗೆ, ರೀಲ್ಸ್‌ಗಳಿಂದಲೇ ಜ್ಞಾನಾರ್ಜನೆ ಮಾಡುವವರಿಗೆ ಸುಲಭವಾಗಿ ತಿಳಿಸಬೇಕೆಂದರೆ 'ಅಲಖ್ ನಿರಂಜನ್' ಕಥಾವ್ಯಾಖ್ಯಾನ ರೀಲ್ ಖ್ಯಾತಿಯ ಅಮೆರಿಕ-ಕನ್ನಡಿಗ ತರುಣ ನವನೀತ ಗಲಗಲಿಯ ತಂದೆ ಅಮೆರಿಕ-ಕನ್ನಡಿಗ ಗೋಪಿನಾಥ ಗಲಗಲಿ; ಅವರ ತಂದೆಯೇ ದಿ. ಪಂಢರೀನಾಥಾಚಾರ್ಯ ಗಲಗಲಿ (1922-2015). ಇದು, ಮಿಥಿಲೆಯ ಪ್ರಜೆಗಳಿಗೆ ಸೀತಮ್ಮನ ಗಂಡನೆಂದೇ ಶ್ರೀರಾಮನ ಪರಿಚಯ ಮಾಡಿಕೊಟ್ಟಂತೆ. ಇನ್ನು ಸಾಂಪ್ರದಾಯಿಕ ರೀತಿಯಲ್ಲಿ ತಿಳಿಸುವುದಾದರೆ- ಪಂಢರೀನಾಥಾಚಾರ್ಯರು ಕರ್ನಾಟಕದ ಪ್ರಸಿದ್ಧ ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರು, ಪುರಾಣ ಪ್ರವಚನಕಾರರು ಮತ್ತು ಸಾಹಿತಿ. ಕನ್ನಡದ ಓದುಗರಿಗೆ ಸಂಸ್ಕೃತ ಪುರಾಣಗಳನ್ನು ಸರಳವಾಗಿ ತಲುಪಿಸಿದವರು. ವಿಜಯಪುರ ಜಿಲ್ಲೆಯ ಗಲಗಲಿಯಲ್ಲಿ ಜನಿಸಿ, ಗದುಗಿನಲ್ಲಿ ವೀರನಾರಾಯಣ ಸಂಸ್ಕೃತ ಪಾಠಶಾಲೆ ಪ್ರಾರಂಭಿಸಿ, ಹುಬ್ಬಳ್ಳಿಯ ವೇದ ಪುರಾಣ ಸಾಹಿತ್ಯಮಾಲಾ ಟ್ರಸ್ಟ್ ಮೂಲಕ ನೂರಾರು ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದವರು. 1983ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅದಕ್ಕೆ ಮೊದಲು ಭಾರತದ ಮೊತ್ತಮೊದಲ ರಾಷ್ಟ್ರಪತಿಯಿಂದ ಪದಕ, ಇನ್ನೂ ಅನೇಕ ಪ್ರಶಸ್ತಿ-ಪುರಸ್ಕಾರಗಳಿಗೆ ಪಾತ್ರರಾದ ಪ್ರಕಾಂಡಪಂಡಿತರು. ನಾನು ದಾವಣಗೆರೆಯಲ್ಲಿ ಎಂಜಿನಿಯರಿಂಗ್ ಓದುತ್ತ ಕೃಷ್ಣ ಹಾಸ್ಟೆಲ್‌ನಲ್ಲಿದ್ದಾಗ ಅಲ್ಲಿಗೊಮ್ಮೆ ಭೇಟಿ ನೀಡಿದ್ದರು. ಕಾಳಿದಾಸನ ಮೇಘದೂತ ಕಾವ್ಯದ ಬಗ್ಗೆ ಅವರದೊಂದು ಪ್ರವಚನ ಇತ್ತು. ''ಆಷಾಢಸ್ಯ ಪ್ರಥಮ ದಿವಸೇ...''



ಶ್ಲೋಕವನ್ನು ನಾನು ಮೊತ್ತಮೊದಲ ಬಾರಿಗೆ ಕೇಳಿದ್ದು ಪಂಢರೀನಾಥಾಚಾರ್ಯರ ಮುಖವಾಣಿಯಿಂದಲೇ.

ಜಗನ್ನಾಥ ಪಂಡಿತನ ಕವಿಪರಿಚಯ, ಆಚಾರ್ಯರು ಬರೆದಂತೆ ಆರಂಭವಾಗುವುದು ಹೀಗೆ: ''ಸಂಸ್ಕೃತ ಸೌರಾಷ್ಟ್ರದ ಗಿರಿನಾರ ಕಂದರಗಳಲ್ಲಿ ಜಗನ್ನಾಥ ಒಂದು ಸಿಂಹದ ಮರಿ. ಹುಟ್ಟಿದಂದಿನಿಂದಲೇ ಧೀಮಂತಿಕೆಯ ಹಮ್ಮು ಹೊಗರೇರಿ ಹೂಂಕರಿಸುತ್ತಲೇ ಇದ್ದ. ಆ ಕಾವ್ಯ ಕಂಠೀರವನಿಗೆ ಯಾರಿಂದಲೂ 'ನಾಭಿಷೇಕೋ ನ ಸಂಸ್ಕಾರಃ' ಆದರೂ ಅವನು ತನ್ನ ಎಳೆಯ ವಯಸ್ಸಿನಲ್ಲಿಯೇ ಪಾಂಡಿತ್ಯದ ಕಂಡೂತಿಯಿಂದ ವಾದಭೂಮಿಗೆ ಇಳಿದಾಗ ಅಲ್ಲಿನ ದರ್ಪದ ದಿಙ್‌ನಾಗಗಳೆಲ್ಲ ದಿಕ್ಕೆಟ್ಟು ಓಡಿದವು. ಪಂಡಿತರ ಪಲಾಯನವೇ ಅವನಿಗೆ ಗೀರ್ವಾಣಗಿರಿಗರ್ಭದಲ್ಲಿ ಸ್ವಯಮೇವ ಮೃಗೇಂದ್ರತೆಯ ಪಟ್ಟ ಕಟ್ಟಿ ಗೌರವದ ಗದ್ದುಗೆಯನ್ನಿತ್ತಿತ್ತು. ಸಂಸ್ಕೃತದ ಸುರಗಿರಿಯ ದೂರದ ದರಿಕೊರಿಗಳಲ್ಲಿ ಹಣಿಕೆ ಹಾಕಿದರೆ ಇಂದಿಗೂ ಆ ತುಂಟ ಹರಿಪತಿಯ ಅಕುಂಠ ಕಂಠನಾದ ಹೂಂಕರಿಸಿ ಬಂದು ದುಮ್ ದುಮಿಸಿದಂತಾಗುವುದು. ಅವನ ಶೈಶವ ಸಿಂಹನಾದವನ್ನು ಕೇಳಿಯೇ ಘನಪಂಡಿತ ಗಂಧ-ಗಜಗಳೆಲ್ಲ ಗಾಳಿಗರವಾದಂತೆ ಹೆದರಿ ಹುಚ್ಚೆದ್ದು ಹರಿದೋಡಿದಾಗ ತನ್ನ ನಖಶಿಖಾಂತ ಪಾಂಡಿತ್ಯವನ್ನು ಯಾರ ಮೇಲೆ ತೋರಲಿ? ಈ ವಿದ್ವತ್ತೆಯೆಲ್ಲ ಯಾರನ್ನೂ ಜಯಿಸದೇ ವ್ಯಯಿಸಿ ಹೋಗುವುದಲ್ಲ ಎಂದು ಕೊರಗಿ ಕನಲಿದ್ದಾನೆ ಈ ಕವಿ ಕಲಭ. ಆದರೆ ಕೈಗಾವುದೂ ಸಿಕ್ಕದಾಗ ಕಾನನದ ಕೋಡುಗಲ್ಲನ್ನೇ ಕಾಡಾನೆಯೆಂದು ಬಗೆದು, ತನ್ನ ಉಗುರಿನಿಂದ ಬಗಿದು, ಶೈಲ ಶಿಲಾಪದರು ಪದರುಗಳನ್ನೆಲ್ಲ ಸೀಳಿ ಹೋಳುಮಾಡುವ ಹರಿಮರಿಯಂತೆ ಜಗನ್ನಾಥನಾದರೂ ಆ ಪಂಡಿತರಾರೂ ಕಾಣದಾಗ ಅವರ ಪಾಂಡಿತ್ಯದ ಪ್ರತೀಕಗಳಂತಿರುವ ಅವರ ಗ್ರಂಥಗಳ ಮೇಲೆ ಎರಗಿದ್ದುಂಟು. ನ್ಯಾಯ, ವ್ಯಾಕರಣ, ಮೀಮಾಂಸಾ, ಸಾಹಿತ್ಯ ಮೊದಲಾದ ಶಾಸ್ತ್ರೀಯ ಸಂಸಾರದ ಸೀಮಾಪುರುಷರೆಂದೆನಿಸಿಕೊಂಡ ಮಹಾ ಪಂಡಿತರ ಕೃತಿಗಳನ್ನೆಲ್ಲ ತನ್ನ ನುಡಿಗೊಡಲಿಯಿಂದ ಕಡಿದೊಗೆದ ಪ್ರತಿಭಾ ಪರಶುರಾಮನಾಗಿದ್ದಾನೆ ಆ ಜಗನ್ನಾಥ. ಅಪ್ಪಯ್ಯ ದೀಕ್ಷಿತರಂಥ ಷಡ್‌ದರ್ಶನಾಚಾರ್ಯರಿಗೂ ಸೊಪ್ಪು ಹಾಕದೇ, ಭಟ್ಟೋಜಿ ದೀಕ್ಷಿತರಂಥ ಶಬ್ದಬ್ರಹ್ಮರ ಶಿಕ್ಷಾ-ಪ್ರೇಕ್ಷಾಗಳ ಪರಿವೆ ಇಲ್ಲದೇ, ಅವರ ಉದ್ಗ್ರಂಥಗಳನ್ನೆಲ್ಲ ಬಾರದ ಕಂತೆಗಳೆಂದು ಹರಿದು ತರಿದು ಅಕ್ಷರಶಃ ಖಂಡಿಸಿ ಹಾಕಿದ್ದಾನೆ. ರಸಗಂಗಾಧರ, ಮನೋರಮಾಕುಚ ಮರ್ದಿನೀ, ಚಿತ್ರಮೀಮಾಂಸಾ ಖಂಡನ ಮೊದಲಾದ ತನ್ನ ಗ್ರಂಥಗಳಲ್ಲಿ ಪ್ರಾಚೀನ ಶಾಸ್ತ್ರೀಯ ಪ್ರಪಂಚದ ಸನಾತನ ಸಾಂಪ್ರದಾಯಿಕ ಸಿದ್ಧಾಂತಗಳನ್ನೆಲ್ಲ ತನ್ನ ಬುದ್ಧಿಬಲದಿಂದ ವಿಧ್ವಂಸಗೊಳಿಸಿ ಧೀರ ವೀರಭದ್ರನಂತೆ ಪ್ರಜ್ಞಾತಾಂಡವಗೈದಿದ್ದಾನೆ. ವೀರ ವಿಶ್ವಾಮಿತ್ರನಂತೆ ತನ್ನ ಬೌದ್ಧಿಕ ಬ್ರಹ್ಮತೇಜಸ್ಸಿನಿಂದ ಭಾವಾಕಾಶದ ರಸನೀಲದಲ್ಲಿ ಪ್ರಜ್ಞಾನ ಘನವಾದ ಪ್ರತಿಸೃಷ್ಟಿಯೊಂದನ್ನು ನಿರ್ಮಿಸಿದ್ದಾನೆ.

ಆಂಧ್ರಪ್ರದೇಶದ ವೆಂಗಿನಾಡ ಎಂಬ ಅಡ್ಡಹೆಸರಿನ ತೈಲಂಗಬ್ರಾಹ್ಮಣ ಪೇರುಭಟ್ಟ-ಲಕ್ಷ್ಮೀ ದಂಪತಿಯ ಸುಪುತ್ರನಾಗಿ ಜನನ. ಸರ್ವಶಾಸ್ತ್ರ ಪಂಡಿತ ತಂದೆಯಲ್ಲಿಯೇ ವಿದ್ಯಾಭ್ಯಾಸ. ಮನೆಯಲ್ಲಿ ನಿತ್ಯ ದಾರಿದ್ರ್ಯ ತಾಂಡವ. ಆಗಿನ ಆಂಧ್ರದೇಶಾಧಿಪತಿಯನ್ನು ಹಾಡಿಹೊಗಳಿದರೂ ಆ ಅರಸಿಕ ಅರಸನಿಂದ ಉಪೇಕ್ಷೆ. ಸ್ವದೇಶ ಬಿಟ್ಟು ರಜಪುತಾನದಲ್ಲಿರುವ ಜಯಪೂರಕ್ಕೆ ವಲಸೆ. ಈತನ ಪಾಂಡಿತ್ಯ ಪ್ರತಿಭೆ ಕವಿತ್ವ ಕೌಶಲಗಳನ್ನು ಕಂಡ ಅಲ್ಲಿಯ ಜನರಿಂದ ಉದಾರಾಶ್ರಯ. ದೊಡ್ಡ ಪಾಠಶಾಲೆಯೊಂದರ ಸ್ಥಾಪನೆ. ನೂರಾರು ಶಿಷ್ಯರು. ಉತ್ತರದ ಎಷ್ಟೋ ಪಂಡಿತರಿಗೆ ಈತನ ಪ್ರತಿಷ್ಠೆ ಕಂಡು ಮತ್ಸರ. ಆ ಸಮಯದಲ್ಲೇ ಮುಸಲ್ಮಾನ ಧರ್ಮಗುರುವೊಬ್ಬನೊಡನೆ ವಾದ ಮಾಡಲೆಂದೇ ಅರಬ್ಬಿ ಭಾಷೆ ಕಲಿತು ಅಲ್ಲಿಯ ಗ್ರಂಥಗಳನ್ನೂ ಪಠಿಸಿ ಕೊನೆಗೂ ಆ ಕಾಜಿಯನ್ನು ಸೋಲಿಸಿ ಜಯದುಂದುಭಿ. ಅಂದಿನ ದಿಲ್ಲಿಸಮ್ರಾಟ ಜಹಾಂಗೀರ ಬಾದಶಹನಿಂದ ದಿಲ್ಲೀದರ್ಬಾರಕ್ಕೆ ಬರಲು ಆಮಂತ್ರಣ. ವಿದ್ವತ್ತೆಯಿಂದಾಗಿಯೇ ಸ್ಥಾನ ಪಡೆದು ಅರಮನೆಯಲ್ಲಿ ಅಧಿಷ್ಠಾನ ಹೊಂದಿ ಅಂತಃಪುರ ಪರಿವಾರ ವರ್ಗಕ್ಕೆಲ್ಲ ಕಣ್ಮಣಿ. ಜಹಾಂಗೀರ್, ರಾಣಿ ನೂರಜಹಾನ್, ಆಕೆಯ ಸಹೋದರ ಅಸಫಖಾನ್, ಮಗ ಷಹಜಹಾನ ಮತ್ತು ಆತನ ಮಗ ದಾರಾಶುಕ ಎಲ್ಲರೂ ಜಗನ್ನಾಥನಿಗೆ ಮಿತ್ರರೇ. ರಾಜಮಂದಿರದ ಚಂದ್ರಶಾಲೆಯಲ್ಲಿ ರತ್ನಗಂಬಳಿಯ ಮೇಲೆ ಷಹಜಹಾನನೊಡನೆ ಚದುರಂಗದಾಟ. ರಜಪೂತ ಸ್ತ್ರೀಯಲ್ಲಿ ಅರಸನಿಗೆ ಹುಟ್ಟಿದ್ದ ಅಪ್ರತಿಮ ಬೆಡಗಿ ಲವಂಗಿಯೊಡನೆ ಲಗ್ನ. ರಸಿಕಳಾಗಿ ಒಲಿದುಬಂದ ರಮಣಿ, ಮನದಲ್ಲಿ ಮೂಡಿದ ಬಯಕೆಗಳನ್ನೆಲ್ಲ ಕೂಡಲೇ ಪೂರೈಸುವಷ್ಟು ಸಂಪತ್ತು, ಪ್ರತಿಭೆ-ಪ್ರತಿಷ್ಠೆ, ರಾಜಭೋಗ-ರಸಯೋಗ. ಅವು ಜಗನ್ನಾಥನ ಉಚ್ಛ್ರಾಯ ದಿನಗಳು.

ಷಹಜಹಾನನ ಅಂತಿಮ ದಿನಗಳಲ್ಲಿ ಜಗನ್ನಾಥನ ಶೃಂಗಾರಜೀವನದ ಸಂಧ್ಯಾಕಾಲ ಪ್ರಾರಂಭವಾಯಿತು. ಪ್ರಿಯಮಿತ್ರ ಅಸಫಖಾನನೂ ತೀರಿಕೊಂಡನು. ದಾರಾಶುಕನ ಕೊಲೆಯಿಂದಂತೂ ಜಗನ್ನಾಥ ನೆಲೆ ತಪ್ಪಿದ ಹಕ್ಕಿಯಾದ. ಔರಂಗಜೇಬನ ಆಳ್ವಿಕೆ ಅವನ ಬಾಳಿನ ಬೆಳದಿಂಗಳಲ್ಲಿ ಬೆಂಕಿಯನ್ನೇ ಸುರಿದಿತ್ತು. ರಾಜೈಶ್ವರ್ಯವನ್ನೆಲ್ಲ ತೊರೆದ ಲವಂಗಿ ಕಷ್ಟಕಾಲದಲ್ಲೂ ಜಗನ್ನಾಥನ ಜತೆಯಾದಳು. ಊರೂರು ಅಲೆಯುತ್ತ ಕಾಶಿಗೆ ಆಗಮಿಸಿದರು. ಎಲ್ಲಿ ನೋಡಿದಲ್ಲೆಲ್ಲ 'ಯವನೀ ಸಂಸರ್ಗ ಪಾಂಸುಲ', 'ಹಿಂದೂ ಕುಲಕಲಂಕ', 'ಬ್ರಾಹ್ಮಣಾಧಮ', 'ಲವಂಗೀ ಲಂಪಟ' ದೂರ ಸರಿ, ತೊಲಗು! ಎಂದು ಧಿಕ್ಕಾರ. ಅಂಡಲೆದು ಹಸಿವೆಯಿಂದ ಕುಸಿದು, ಕೂಡಲು ಸ್ಥಳವಿಲ್ಲದೆ ನಿಲ್ಲಲು ನೆಲವಿಲ್ಲದೆ ರಾತ್ರಿಯಲ್ಲಿ ಗಂಗಾತಟಕ್ಕೆ ಬಂದರು. ಹೊದ್ದುಕೊಳ್ಳುವ ಅರಿವೆಯ ತುಂಡೊಂದನ್ನು ಅರ್ಧ ಹಾಸಿ ಅದನ್ನೇ ಹೊದ್ದುಕೊಂಡು ಹೊಟ್ಟೆಯಲ್ಲಿ ಕಾಲುಮಡಚಿಕೊಂಡು ಬಾಣನೆಟ್ಟಹಕ್ಕಿಯಂತೆ ಮುದುಡಿಕೊಂಡು ಮಲಗಿದರು. ಕಾಶಿಯಲ್ಲಿಯ ಅರುಣೋದಯ. ಕರ್ಮಠ ಅಪ್ಪಯ್ಯ ದೀಕ್ಷಿತರು ಗಂಗಾಸ್ನಾನ ಮುಗಿಸಿ ಹಿಂದಿರುಗುತ್ತಿದ್ದಾರೆ. ಜನರೆಲ್ಲ ಅವರಿಗೆ ಸಾಷ್ಟಾಂಗ ವಂದಿಸಿ ಸಾಗುತ್ತಿದ್ದಾರೆ. ಅಲ್ಲೇ ಮೂಲೆಯಲ್ಲಿ ಹರಕು ಅರಿವೆ ತುಣುಕೊಂದನ್ನು ಮೋರೆಯ ಮೇಲೆ ಎಳೆದುಕೊಂಡು ಇನ್ನೂ ಮಲಗಿದ್ದ ನಿರ್ಲಜ್ಜ ದಂಪತಿ ದೀಕ್ಷಿತರ ಕಣ್ಣಿಗೆಬಿದ್ದರು. ದೀಕ್ಷಿತರು ಜಗನ್ನಾಥನ ಗುರುತುಹಚ್ಚಿ ತಬ್ಬಿಬ್ಬಾದರು. ಉಗುಳುನುಂಗಿ ಅಧೀರ ಧ್ವನಿಯಲ್ಲಿ ''ಸುಖವಾಗಿ ಮಲಗು. ನೀನು ಮಲಗಿದರೂ ನಿನ್ನ ಮಗ್ಗುಲಲ್ಲೇ ತಾಯಿ ಗಂಗೆಯು ನಿಮ್ಮಂಥವರನ್ನೆಲ್ಲ ಉದ್ಧರಿಸಲು ನಿತ್ಯ ಜಾಗರೂಕಳೇ ಆಗಿ ಕುಳಿತಿದ್ದಾಳೆ'' ಎಂದಂದು ಗಡಿಬಿಡಿಯಿಂದ ಸಾಗಿದರು.

ಜಗನ್ನಾಥ ಎದ್ದುಕುಳಿತ. ಯಾವುದೋ ಅಶರೀರವಾಣಿ ಅವನಿಗೆ ತಾರಕಮಂತ್ರವನ್ನು ಉಪದೇಶಿಸಿದಂತಾಯ್ತು. ಅಶಕ್ತ ಮಗುವಿನ ಆರೈಕೆಗಾಗಿ ತಾಯಿ ಬೆಳಗಿನ ತನಕ ಎಚ್ಚರಿರುವಂತೆ ಇದ್ದಾಳೆ ಈ ಗಂಗಾಮಾತೆ. ಜಗತ್ತೆಲ್ಲ ಜಗನ್ನಾಥನನ್ನು ಜರೆದರೂ, ಸ್ವಕೀಯರೆಲ್ಲರೂ ತೊರೆದರೂ, ತಾಯ್ಗರುಳು ಮಾತ್ರ ತೊರೆಯುವುದು ಸಾಧ್ಯವಿಲ್ಲ. ''ಲವಂಗಿ, ಏಳು. ಒಮ್ಮೆ ಈ ತಾಯೊಡಲ ತಂಪಿಗಿಳಿದು ಈ ಜಗತ್ತಿನ ಜಂಜಾಟದಿಂದ ದೂರವಾಗುವಾ'' ಎಂದು ಎದ್ದನು. ಅವಮಾನದ ಅಗ್ನಿಕುಂಡದಲ್ಲಿ ಪ್ರತಿದಿನವೂ ಬೆಂದು ನಲುಗಿಹೋಗಿದ್ದ ಲವಂಗಿ ಜಲಸಮಾಧಿಗೆ ಸಿದ್ಧಳಾಗಿ ಎದ್ದುನಿಂತಳು. ಇಬ್ಬರೂ ತಾಯಿಯ ತೋಳಿನಾಸರೆಗಾಗಿ ಪಾವಟಿಗೆಗಳನ್ನು ಇಳಿಯತೊಡಗಿದರು. ಜನರೆಲ್ಲ ಆ ಪಾಪಪುರುಷ ತಮ್ಮ ಮಡಿಯಾದ ಮೈಮೇಲೆ ನೆರಳು ಹಾಕಿ ನೀರು ಮುಟ್ಟಿ ಗಂಗಾಜಲವನ್ನೇ ಮೈಲಿಗೆ ಮಾಡುವನೆಂದು ಕೂಗಿದರು. ''ಕೆಳಗಿಳಿಯಬೇಡ! ಗಂಗೆಯನ್ನು ಮುಟ್ಟಬೇಡ!'' ಎಂದು ಗದರಿಸಿದರು. ಗಾಬರಿಯಾದ ಜಗನ್ನಾಥ ಮೆಟ್ಟಿಲಮೇಲೆ ಕುಕ್ಕರಿಬಿದ್ದ. ಹಸಿವೆ, ಕಸಿವಿಸಿ, ಅವಮಾನಗಳು ಅವನ ಪ್ರಾಣಹೀರಲು ಮೇಲಾಟ ನಡೆಸಿದ್ದವು. ಲವಂಗಿ ನೀಡಿದ ಆರೈಕೆಯಿಂದ ತುಸು ಚೇತರಿಸಿಕೊಂಡ. ಮನಸ್ಸು ಪ್ರಶಾಂತವಾಗಿತ್ತು. ಹೃದಯದಲ್ಲಿಯ ರಾಗದ್ವೇಷ, ಕೋಪಕಾಲುಷ್ಯಗಳೆಲ್ಲ ಸುಟ್ಟು ಅಂತರಂಗವು ಗಂಗೆಯ ತರಂಗತಾಣದಂತೆ ನಿರ್ಮಲವಾಗಿತ್ತು. ಕರುಳೆಲ್ಲ ಕರಗಿ, ಶೋಕದಿಂದ ಕೊರಗಿ, ಹೃದಯವು ಮರುಗಿ, ಭಾವಾಕಾಶದಲ್ಲಿ ಭಕ್ತಿಪ್ರವಾಹ ಉಕ್ಕೇರಿತ್ತು. ''ತಾಯೀ, ನಿನ್ನ ಸ್ಪರ್ಶ ಭಾಗ್ಯವಿಲ್ಲದಿದ್ದರೂ ದರ್ಶನದ ಲಾಭವಾದರೂ ಆಯ್ತಷ್ಟೇ! ನಿನ್ನ ಜಲರಾಶಿಯ ಸೌಂದರ್ಯವಂತೂ ಸುಧೆಯಂತಿದೆ. ಈ ಜನ್ಮದಲ್ಲಿ ನಿನ್ನ ಸ್ನಾನ ಪಾನ ಸಿಗದಿದ್ದರೂ ಗಾನದರ್ಶನಗಳೇ ನನ್ನ ಪಾಲಿನ ಪರಮಭಾಗ್ಯ ಸಮೃದ್ಧ ಸೌಭಾಗ್ಯ!'' ಎನ್ನುತ್ತ ಒಂದೊಂದೇ ಶ್ಲೋಕವನ್ನು ಹಾಡತೊಡಗಿದನು. ಅವನ ಕರುಣಾಕ್ರಂದನಕ್ಕೆ ಆ ಜಲದಾಯಿಯ ಹೃದಯ ನೀರಾಯಿತು, ನೀರು ಹೃದಯವಾಯಿತು. ಶೋಕ-ಶ್ಲೋಕಗಳನ್ನು ಕೇಳಿದಂತೆಲ್ಲ ಆ ತಾಯಿಯ ಕರುಳು ಕರಗಿ ಕರುಣೆ ಉಕ್ಕೇರಿ ಬಂತು. ಒಂದೊಂದು ಪದ್ಯಕ್ಕೆ ಒಂದೊಂದು ಪಾವಟಿಗೆಯನ್ನು ಏರುತ್ತ ಆ ಮಹಾತಾಯಿಯು ಜಗನ್ನಾಥನು ಗಂಗಾಲಹರಿಯ ಕೊನೆಯ ಪದ್ಯವನ್ನು ಹಾಡಿದಾಗ 52ನೇಯ ಸೋಪಾನವನ್ನೇರಿ ತೆರೆತೋಳುಗಳಲ್ಲಿ ತನ್ನ ದುಃಖಾರ್ತ ಮಗುವನ್ನು ಎತ್ತಿಕೊಂಡು ಹೋಗಿಬಿಟ್ಟಳು. ಲವಂಗೀಸಹಿತ ಜಗನ್ನಾಥನು ಗಂಗೆಯಲ್ಲಿ ಜಲಸಮಾಧಿ ಹೊಂದಿದನು. ಪಂಢರೀನಾಥಾಚಾರ್ಯರ ಪುಸ್ತಕ ಓದುವುದಾದರೆ ಪಿಡಿಎಫ್ ಇಲ್ಲಿದೆ: **bit.ly/gangaalahari**

# ಸನ್ಯಾಸಿಯಷ್ಟೇ ಆತನ ಜನ್ಮದಾತರ ತ್ಯಾಗವೂ ದೊಡ್ಡದು

**ಯತಿಯಾಗಿ ಶಂಕರರು ನಡೆದು ತೋರಿಸಿದ 'ತಾಯಿಗಿಂತ ಹೆಚ್ಚು ಯಾವುದೂ ಇಲ್ಲ' ಎನ್ನುವ ಕ್ರಾಂತಿಕಾರಿ ಹೆಜ್ಜೆ ಆದರ್ಶವಾಗಿದೆ. ಪ್ರಾಯಶಃ ಅಲ್ಲಿಂದ ಮುಂದೆ ಯತಿಯಾದವನು ತಾಯಿಗೆ ಮಾತ್ರ ನಮಸ್ಕರಿಸಬಹುದು, ತಾಯಿಯ ಸೇವೆ ಮಾಡಬಹುದು ಎನ್ನುವ ರಿಯಾಯಿತಿ ದೊರೆತಿರಲಿಕ್ಕೆ ಸಾಕು. ಈಗ ಶಂಕರ, ಮಧ್ವ ಹಾಗೂ ರಾಮಾನುಜ ಸಂಪ್ರದಾಯಗಳಲ್ಲೂ ತಾಯಿಯಾದವಳು ಯತಿಯೊಬ್ಬರಿಂದ ನಮಸ್ಕಾರಕ್ಕೆ ಅರ್ಹಳು ಎನ್ನುವುದು ಸ್ವೀಕಾರಾರ್ಹ.**

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಕೆಲವೊಮ್ಮೆ ಸಮಾಜದಲ್ಲಿ ಜರುಗುವ ಅತ್ಯಂತ ಮೌಲ್ಯಯುತವಾದ ವಿಷಯಗಳು ಸುದ್ದಿಯಾಗುವುದೇ ಇಲ್ಲ, ಹಾಗೆ ನೋಡಿದರೆ ಇಂಥಾ ಮೌಲ್ಯಯುತವಾದ ಸುದ್ದಿಗಳಿಂದಲೇ ಸಮಾಜದಲ್ಲಿ ಪರಿವರ್ತನೆಯನ್ನು ನಿರೀಕ್ಷೆ ಮಾಡಲು ಸಾಧ್ಯ ಕೂಡಾ. ಮೊನ್ನೆ ದಾವಣಗೆರೆಯಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿಯವರು ಒಂದು ಮಾತು ಹೇಳುತ್ತಾರೆ, ಎಲ್ಲ ಮಠಾಧೀಶರ/ಸನ್ಯಾಸಿಗಳ ಪೂರ್ವಾಶ್ರಮದ ತಂದೆ-ತಾಯಿಯರನ್ನು ನೋಡಿಕೊಳ್ಳುವ ಜವಾಬ್ದಾರಿ ನಮ್ಮದು, ಅಂದರೆ ಸಮಾಜದ್ದು ಎನ್ನುತ್ತಾರೆ. ಇದು ಅತ್ಯಂತ ಅದ್ಭುತ ಪರಿಕಲ್ಪನೆ. ಈ ಸುದ್ದಿ ಎಷ್ಟು ಜನಜನಿತವಾಗಬೇಕಿತ್ತೋ ಅಷ್ಟು ಆಗಲೇ ಇಲ್ಲ.

ಕುಂಚಿಟಿಗ ಸಮೂದಾಯದ ವತಿಯಿಂದ ಭೋವಿ ಗುರು ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿಯವರ ಪೂರ್ವಾಶ್ರಮದ ಪಾಲಕರಿಗೆ ಕುಟೀರ ಸಮರ್ಪಣೆ ಕಾರ್ಯಕ್ರಮದಲ್ಲಿ ಅವರು ಇತರ ಸ್ವಾಮೀಜಿಯವರ ಜತೆ ಭಾಗವಹಿಸಿ ಮಾತನಾಡುತ್ತಿದ್ದರು. ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ ಮಾತನಾಡಿ, ಯಾವುದೇ ಪೀಠಾಧಿಪತಿಗಳ ಪೂರ್ವಾಶ್ರಮದವರು ಅನುಕೂಲವಂತರಾದರೂ ಗುರು ಪೀಠಕ್ಕೆ ಅಪವಾದ ತಪ್ಪಿದ್ದಲ್ಲ, ಹಾಗಾಗಿಯೇ ಸಾರ್ವಜನಿಕವಾಗಿ ದೊಡ್ಡ ಕಾರ್ಯಕ್ರಮದ ಮೂಲಕ ಪಾರದರ್ಶಕವಾಗಿ ಈ ಕುಟೀರ ಸಮರ್ಪಣೆಯ ಕೆಲಸ ಮಾಡುತ್ತಿದ್ದೇವೆ ಎಂದರು. ಎಲ್ಲವನ್ನೂ ತ್ಯಾಗಮಾಡಿ ಜೀವನವನ್ನು ಸಮೂದಾಯಕ್ಕೆ ಮುಡಿಪಾಗಿಟ್ಟ ಸ್ವಾಮೀಜಿಗಳ ಪೂರ್ವಾಶ್ರಮದ ಪಾಲಕರಿಗೆ ಮನೆ ನೀಡಿರುವ ಕಾರ್ಯ ಸ್ತುತ್ಯರ್ಹ ಎಂದು ಪತ್ರಕರ್ತ ರವಿ ಹೆಗಡೆಯವರು ಮಾತನಾಡಿದರು.

ವಾಸ್ತವವಾಗಿ, ಈ ಕೆಲಸವನ್ನು ನಾವು ಸಮಾಜ ಬಾಂಧವರು ಮಾಡಬೇಕಾಗಿತ್ತು, ಬದಲಿಗೆ ಸ್ವಾಮೀಜಿಯವರು ಮಾಡುವ ಮೂಲಕ ನಮಗೆ ಮುಜುಗುರವಾಗುವಂತಾಯ್ತು, ಆಗಿದ್ದು ಆಗಿ ಹೋಯ್ತು. ಆದರೆ ಇನ್ನು ಮುಂದೆ ಇದು ನಮ್ಮ ಕೆಲಸವಾಗಲಿದೆ ಎನ್ನುವ ಮಾತನ್ನು ಲಿಂಬಾವಳಿಯವರು ಆಡಿದರು.

ರಾಜಕಾರಣಿಗಳಾದರೂ ಒಮ್ಮೊಮ್ಮೆ ಇಂಥಾ ಒಳ್ಳೊಳ್ಳೇ ಮಾತನಾಡುವುದು ಅಥವಾ ಕೆಲಸ ಮಾಡುವುದಿದೆ, ಹಿಂದೆ ಕೋವಿಡ್ ಸಂದರ್ಭದಲ್ಲಿ ಮೃತರಾದ ಅನಾಥರುಗಳಿಗೆ ಮಾಜಿ ಉಪಮುಖ್ಯಮಂತ್ರಿ ಆರ್. ಅಶೋಕ್ ಅವರು ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಯಲ್ಲಿ ಪಿಂಡಪ್ರದಾನ ಮಾಡಿರುವುದು ನನಗಿನ್ನೂ ನೆಪಿನಲ್ಲಿದೆ. ಇಂಥವರು ಇವೆಲ್ಲವನ್ನೂ ಕೇವಲ ವೋಟಿಗಾಗಿ ಮಾಡುತ್ತಾರೆ ಎಂದು ನನಗಂತೂ ಅನ್ನಿಸುವುದಿಲ್ಲ. ಇರಲಿ, ವ್ಯಕ್ತಿಗತವಾದ ಜೀವನವನ್ನು ತ್ಯಾಗಮಾಡಿ ಆಧ್ಯಾತ್ಮಿಕವಾಗಿ ಸಮಾಜದ ಆರೋಗ್ಯ ಕಾಪಾಡುತ್ತಿರುವ ಸಂತ ಸನ್ಯಾಸಿಗಳ ಪಾಲಕರನ್ನು ಸಮಾಜ ನೋಡಿಕೊಳ್ಳಬೇಕು ಎನ್ನುವ ಕಲ್ಪನೆಯೇ ಅದ್ಭುತ ಹಾಗೂ ಸರ್ವಸಮಂಜಸವೂ ಆಗಿದೆ. ನನ್ನ ಪ್ರಕಾರ ಅರವಿಂದ ಲಿಂಬಾವಳಿಯವರು ಅಭಿನಂದನಾರ್ಹರು.

ಸಮುದಾಯ ಯಾವುದೇ ಇರಲಿ, ಸನ್ಯಾಸ ಎನ್ನುವುದು ಸುಲಭದ ಮಾರ್ಗವಲ್ಲ. ಸನ್ಯಾಸ ಸ್ವೀಕರಿಸುವವರು ತಮ್ಮ ಪೂರ್ವ ಸಂಬಂಧಗಳನ್ನೆಲ್ಲ ತೊರೆದು, ನಾಮರೂಪಗಳಿಂದ ಕೂಡಿರುವ ತನ್ನತನವನ್ನೂ ಬಿಟ್ಟು ಆತ್ಮಶ್ರಾದ್ಧ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ, ಸತ್ತ ನಂತರ ಮಕ್ಕಳು ಮಾಡಬೇಕಾದ ಉತ್ತರಕ್ರಿಯಾದಿ ಕರ್ಮಗಳನ್ನು ತನಗೆ ತಾನೇ ಮಾಡಿಕೊಳ್ಳುವ ಕೆಲಸವದು. ತನಗೆ ತಾನೇ ಅಂತ್ಯಸಂಸ್ಕಾರ ಮಾಡಿಕೊಳ್ಳುವ ಮೂಲಕ, ತನ್ನ ಜನ್ಮ ಸಂಬಂಧಿಯಾದ ಎಲ್ಲವನ್ನೂ ಕಡಿದುಕೊಳ್ಳುವ ಅತ್ಯಂತ ಅಪರೂಪದ ಪದ್ಧತಿ ಇದು.

ಭಾರತೀಯ ಮೂಲದ ಜೈನ ಹಾಗೂ ಬೌದ್ಧ ಧರ್ಮಗಳನ್ನು ಹೊರತುಪಡಿಸಿ ಇನ್ನಾವ ಧರ್ಮದಲ್ಲಿಯೂ ಈ ಮಟ್ಟದ ತ್ಯಾಗದ ಪರಿಕಲ್ಪನೆ ಇದ್ದಹಾಗಿಲ್ಲ. ಸನ್ಯಾಸ ದೀಕ್ಷೆಯ ನಂತರ ಗುರುಗಳಾದವರು ಹೊಸ ಹೆಸರಿನಿಂದ ಅವರನ್ನು ಸಮಾಜಕ್ಕೆ ಪರಿಚಯಿಸಬೇಕಾಗುತ್ತದೆ. ಅದಕ್ಕಾಗಿಯೇ, ದೀಕ್ಷೆ ಕೊಡುವ ಸಂದರ್ಭವನ್ನು ಹೊಸ ಸನ್ಯಾಸಿಗೆ ಪುನರ್‌ಜನ್ಮವೆಂತಲೂ ಹಾಗೂ ಅಂಥಾ ಶಿಷ್ಯರನ್ನು ಇಂಥವರ ಮಗ ಎಂದು ಗುರುತಿಸದೇ, ಇಂಥಾ ಗುರುಗಳ ಕರಕಮಲ ಸಂಜಾತರು, ಶಿಷ್ಯರು ಎನ್ನುವುದು. ಅಲ್ಲಿಂದ ಮುಂದೆ ಆತನಿಗೆ ದೀಕ್ಷೆ ಕೊಟ್ಟ ಗುರುಗಳೇ ತಂದೆಯೂ ತಾಯಿಯೂ ಆಗಿರುತ್ತಾನೆ. ಸನ್ಯಾಸ ದೀಕ್ಷೆಯ ಸಂದರ್ಭದಲ್ಲಿ ಸನ್ಯಾಸ ಸ್ವೀಕಾರ ಮಾಡಬೇಕಾದವನು ಉಟ್ಟ ಬಟ್ಟೆಯನ್ನೂ ಜಲಮೂಲದಲ್ಲಿ ತ್ಯಾಗಮಾಡಿ ಮೇಲೆದ್ದು ಬರೇಕಾಗುತ್ತೆ, ಆಮೇಲೆ ಆತನ ಗುರುಗಳು ಕೊಡುವ ಹೊಸ ಕಾಶಾಯ ಅಂದರೆ ಕಾವಿ ವಸ್ತ್ರವನ್ನು ಮಾತ್ರ ಧರಿಸಬೇಕಾಗುತ್ತದೆ. ಈ ಕಾಶಾಯ ವಸ್ತ್ರವನ್ನು ಹೊರತು ಪಡಿಸಿದರೆ ಆತನ ಆಸ್ತಿಯೆಂದರೆ ಅದು ದಂಡ ಹಾಗೂ ಕಮಂಡಲು ಮಾತ್ರವಾಗಿರುತ್ತದೆ.

ಗೃಹಸ್ಥಾಶ್ರಮಿಗಳು ಭಿಕ್ಷ ನೀಡಿದರೆ ಆಹಾರ, ಇಲ್ಲವಾದರೆ ಇಲ್ಲ. ಸನ್ಯಾಸಿಗಳಿಗೆ ಆಹಾರ ವಿಹಾರಗಳನ್ನೂ ಸೇರಿ ಎಲ್ಲದಕ್ಕೂ ಇನ್ನಿಲ್ಲದ ನಿಯಮಗಳಿವೆ. ಆತ ಜೀವನ ಪೂರ್ತಿ ಊರ್ಧ್ವರೇತಸ್ಕನಾಗಿದ್ದುಕೊಂಡು ಕಷ್ಟದ ಬ್ರಹ್ಮಚರ್ಯವನ್ನು ಪಾಲನೆ ಮಾಡಬೇಕಾಗುತ್ತದೆ. ಇನ್ನು ಪೂರ್ವಾಶ್ರಮದ, ಅಂದರೆ ತಮ್ಮ ತಾಯಿ-ತಂದೆಯರ ಅಥವಾ ಮೂಲ ಸಂಬಂಧಿಕರನ್ನೂ ಶಿಷ್ಯ-ಭಕ್ತರುಗಳನ್ನಾಗಿ ಮಾತ್ರ ನೋಡಬಹುದೇ ವಿನಃ, ಅವರ ಕುರಿತು ಪಕ್ಷಪಾತ ಧೋರಣೆಯನ್ನು ತಾಳುವ ಹಾಗಿಲ್ಲ. ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಪ್ರಸಿದ್ಧ ಮಠವೊಂದರಲ್ಲಿ,

ಅಲ್ಲಿನ ಕಿರಿಯ ಸ್ವಾಮೀಜಿಗಳು ಮಠಕ್ಕೆ ಬಂದವರಲ್ಲಿ ತಮ್ಮ ಪೂರ್ವಾಶ್ರಮದವರ ಯೋಗಕ್ಷೇಮವನ್ನು ವಿಚಾರಿಸಿದರು ಎನ್ನುವ ಒಂದೇ ಕಾರಣಕ್ಕೆ ಹಿರಿಯ ಸ್ವಾಮೀಜಿಗಳು ಅವರನ್ನು ತಮ್ಮ ಉತ್ತರಾಧಿಕಾರತ್ವದಿಂದ ಪದಚ್ಯುತಗೊಳಿಸುವ ಮಟ್ಟಕ್ಕೂ ಬಂದಿತ್ತು ಎನ್ನುವುದನ್ನು ನೆನಪು ಮಾಡಿಕೊಳ್ಳಬಹುದು. ಈಗೆಲ್ಲ ದೊಡ್ಡ ದೊಡ್ಡ ಮಠಮಾನ್ಯಗಳಲ್ಲಿ ಅಲ್ಲಿನ ಪೀಠಾಧಿಪತಿಗಳ ಹತ್ತಿರದ ಸಂಬಂಧಿಕರೇ ಮಠದ ಪಾರುಪತ್ಯ ನಡೆಸುತ್ತಿದ್ದಾರೆ ಎನ್ನುವುದು ಅಪವಾದವಷ್ಟೇ.

ಶಂಕರಾಚಾರ್ಯ ಪರಂಪರೆಯ ಯತಿಗಳಿಗಂತೂ ಮಠಾಮಾನ್ಯ ಎನ್ನುವ ಕಟ್ಟುನಿಟ್ಟಾದ ನೀತಿ-ನಿಯಮಗಳ ಸಂಗ್ರಹವನ್ನೇ ಭಗವತ್ಪಾದರು ರಚಿಸಿ ಇಟ್ಟಿದ್ದಾರಂತೆ. ಹಾಗೆ ಒಂದೊಂದು ಸಂಪ್ರದಾಯದ ಮಠಗಳಿಗೆ ಒಂದೊಂದು ನಿಯಮವಿರಲಿಕ್ಕೆ ಸಾಕು. ಒಂದು ಹೊತ್ತಿನ ಭಿಕ್ಷಾನ್ನ (ಭಿಕ್ಷೌಷಧಂ ಭುಜ್ಯತಾಂ- ಔಷಧಿಯ ಪ್ರಮಾಣದ ಆಹಾರ), ಅಧ್ಯಯನ-ಅಧ್ಯಾಪನ, ಧರ್ಮಪ್ರಸಾರ, ಸನಾತನ ವೇದ ಸಂಸ್ಕೃತಿಯ ರಕ್ಷಣೆ, ಜಾತಿಮತಗಳನ್ನು ಮೀರಿನಿಂತು, ಭೇದ-ಭಾವವೆಣಿಸದೇ ಎಲ್ಲರಲ್ಲೂ ಸಮಭಾವ ಹೊಂದಿರುವುದು ಇವೆಲ್ಲ ಒಬ್ಬ ಯತಿಯಾದವನಿಗೆ ಕರ್ತವ್ಯವೆಂದು ಹೇಳಲಾಗಿದೆ.

ಯತಿಯ ಧರ್ಮಕ್ಕಿಂತ ತಾಯಿ ದೊಡ್ಡವಳು ಎನ್ನುವುದನ್ನು ಸಾರುವ ಶಂಕರರು ತಮ್ಮ ತಾಯಿಯ ಅಂತ್ಯಸಂಸ್ಕಾರದ ಸಮಯದಲ್ಲಿ ಸಮಾಜದಿಂದ ಅನುಭವಿಸಿದ ಕೋಟಲೆಗಳನ್ನು ನಾವು ಕೇಳಿಯೇ ಇದ್ದೇವೆ. ಒಂದು ದಿನ ಶಂಕರರು ಪೂರ್ಣಾ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ, ಮೊಸಳೆ ಅವರ ಕಾಲನ್ನು ಹಿಡಿದು ಎಳೆದುಕೊಂಡು ಹೋಗಲು ಪ್ರಾರಂಭಿಸಿತು. ಅವರು ತನ್ನ ತಾಯಿಯನ್ನು ಬೇಡಿಕೊಂಡು ಸನ್ಯಾಸತ್ವಕ್ಕೆ ಅನುಮತಿಯಿತ್ತು ಪುನರ್‌ಜನ್ಮವಾದರೆ ಮೊಸಳೆ ತನ್ನನ್ನು ಬಿಡಬಹುದು ಹಾಗಾಗಿ ಅನುಮತಿ ನೀಡುವಂತೆ ಬೇಡಿಕೊಂಡರು. ಸನ್ಯಾಸಿಯಾದರೂ ಸಹ, ಕನಿಷ್ಠ ತನ್ನ ಮಗನನ್ನು ಜೀವಂತವಾಗಿ ಉಳಿಸಿಕೊಂಡಿರುವ ತೃಪ್ತಿ ತನಗೆ ಇರುತ್ತದೆ ಎಂದು ಆರ್ಯಾಂಬೆ ಭಾವಿಸಿದಳು. ಮತ್ತೊಂದೆಡೆ, ಮೊಸಳೆ ತನ್ನ ಮಗನನ್ನು ಬಿಡುಗಡೆ ಮಾಡದಿದ್ದರೆ, ತನ್ನ ಮಗ ತನ್ನ ದೇಹವನ್ನು ತಪಸ್ವಿಯಾಗಿಯಾದರೂ ತ್ಯಜಿಸುತ್ತಾನೆ ಎಂಬ ಅಂಶದಿಂದ ಅವಳು ಸಮಾಧಾನಗೊಂಡು ಆರ್ಯಾಂಬೆ ಶಂಕರರ ಕೋರಿಕೆಗೆ ಸಮ್ಮತಿಸಿದಳು.

ಮೊಸಳೆ ಶಂಕರನ ಮೇಲಿನ ತನ್ನ ಹಿಡಿತವನ್ನು ಸಡಿಲ ಮಾಡಿತು. ಶಂಕರರು ಈಗ ಸನ್ಯಾಸನನ್ನು ಅಪ್ಪಿಕೊಳ್ಳಲು ಮುಕ್ತನಾದರು ಮತ್ತು ಅವರ ತಾಯಿಯನ್ನು ಅವನ ಸಂಬಂಧಿಕರ ಆರೈಕೆಗೆ ಒಪ್ಪಿಸಿದನು. ಶಂಕರರ ನಿರ್ಧಾರದಿಂದ ಇನ್ನೂ ದುಃಖಿಸುತ್ತಿದ್ದ ಆರ್ಯಾಂಬೆ, ಶಂಕರರ ಕೋರಿಕೆಯ ಮೇರೆಗೆ ತನ್ನ ಒಪ್ಪಿಗೆ ಸನ್ಯಾಸ ಸ್ವೀಕರಿಸಲು ಮಾತ್ರ, ಆದರೆ ಸಂಬಂಧಿಕರು ಅವಳ ಅಂತ್ಯಕ್ರಿಯೆಗಳನ್ನು ಮಾಡಲು ಅನುಮತಿಸುವುದಿಲ್ಲ ಎಂದು ಹೇಳಿದಳು.

ಆದ್ದರಿಂದ, ತನ್ನ ತಾಯಿಯನ್ನು ಸಮಾಧಾನಪಡಿಸುವ ಸಲುವಾಗಿ, ಶಂಕರರು ತಾಯಿ! ನೀನು ನನ್ನ ಬಗ್ಗೆ ಯೋಚಿಸುವಾಗ, ನನ್ನ ಎಲ್ಲ ಕೆಲಸಗಳನ್ನು ತ್ಯಜಿಸಿ ನಿನ್ನ ಬಳಿಗೆ ಬರುತ್ತೇನೆ, ನೀನು ಹಗಲು, ರಾತ್ರಿ ಅಥವಾ ಅವುಗಳ ನಡುವೆ ನನ್ನ ಬಗ್ಗೆ ಯೋಚಿಸಿದಾಗ ನೀವು ಪ್ರಜ್ಞೆ ಹೊಂದಿದ್ದರೂ, ಪ್ರಜ್ಞಾಹೀನರಾಗಿದ್ದರೂ ನಿನ್ನಲ್ಲಿಗೆ ನಾನು ಬರುತ್ತೇನೆ ಹಾಗೂ ನೀವು ಮರಣಿಸಿದರೆ ನಿಮ್ಮ ಅಂತ್ಯಕ್ರಿಯೆಯನ್ನು ನಾನೇ ಮಾಡುತ್ತೇನೆ ಎಂದು ಭರವಸೆ ನೀಡಿ ಮುನ್ನಡೆದರು.

ಒಂದು ಸಮಯದಲ್ಲಿ ಆಚಾರ್ಯರಿಗೆ ತಮ್ಮ ತಾಯಿ ತನ್ನ ಕೊನೆಯ ದಿನಗಳನ್ನು ಕಳೆಯುತ್ತಿದ್ದಾಳೆ ಎಂಬ ಅಂತಃಪ್ರಜ್ಞೆ ಬಂದು ತಮ್ಮ ಶಿಷ್ಯರಿಗೆ ತಿಳಿಸಿ ಅವರು ತಕ್ಷಣವೇ ಕಾಲಾಡಿಗೆ ತೆರಳಿದರು. ಅವರು ಸನ್ಯಾಸಿಯಾಗಿದ್ದರೂ, ಅನಾಸಕ್ತಿಗೆ ಹೆಸರುವಾಸಿ ಯಾಗಿದ್ದರೂ, ಅವರ ತಾಯಿಯ ಪಾರ್ಥಿವ ಶರೀರವನ್ನು ನೋಡಿ ಅವರ ಹೃದಯ ಕುಗ್ಗಿತು. ಆಚಾರ್ಯರು ತಮ್ಮ ನೆರೆಹೊರೆಯವರನ್ನು ಮತ್ತು ಹಿಂದಿನ ಸಂಬಂಧಿಕರನ್ನು ಅಂತ್ಯಸಂಸ್ಕಾರಕ್ಕೆ ಸಹಾಯಕ್ಕಾಗಿ ಕರೆದಾಗ, ಅವರು ಅವರನ್ನು ಅವಹೇಳನ ಮಾಡಿದರು, ನೀನೊಬ್ಬ ಸನ್ಯಾಸಿ, ಅಂತಹ ವಿಧಿಗಳನ್ನು ಮಾಡಲು ನಿನಗೆ ಯಾವ ಹಕ್ಕಿದೆ? ಎನ್ನುತ್ತಾ ಮೃತ ದೇಹವನ್ನು ಸುಡಲು ಬೆಂಕಿಯನ್ನು ನೀಡಲು ಸಹ ನಿರಾಕರಿಸಿದರು. ಅವರ ನಿಲುವಿನಿಂದ ವಿಚಲಿತರಾಗದೆ, ಆಚಾರ್ಯರು ಸ್ವತಃ ತಮ್ಮ ಬಲಗೈಯಿಂದ ಬೆಂಕಿಯನ್ನು ಉತ್ಪಾದಿಸಿ ದಹನ ಕ್ರಿಯೆಯನ್ನು ಪೂರ್ಣಗೊಳಿಸಿದರು ಎಂದು ಮಾಧವೀಯ ಶಂಕರ ದಿಗ್ವಿಜಯ ತಿಳಿಸುತ್ತದೆ.

ಯತಿಯಾಗಿಯೂ ಶಂಕರರು ನಡೆದು ತೋರಿಸಿದ 'ತಾಯಿಗಿಂತ ಹೆಚ್ಚು ಯಾವುದೂ ಇಲ್ಲ' ಎನ್ನುವ ಕ್ರಾಂತಿಕಾರಿ ಹೆಜ್ಜೆ ಆದರ್ಶವಾಯಿತು. ಪ್ರಾಯಶಃ ಅಲ್ಲಿಂದ ಮುಂದೆ ಯತಿಯಾದವನು ತಾಯಿಗೆ ಮಾತ್ರ ನಮಸ್ಕರಿಸಬಹುದು, ತಾಯಿಯ ಸೇವೆ ಮಾಡಬಹುದು ಎನ್ನುವ ರಿಯಾಯಿತಿ ದೊರೆತಿರಲಿಕ್ಕೆ ಸಾಕು. ಈಗ ಶಂಕರ, ಮಧ್ವ ಹಾಗೂ ರಾಮಾನುಜ ಸಂಪ್ರದಾಯಗಳಲ್ಲೂ ತಾಯಿಯಾದವಳು ಯತಿಯೊಬ್ಬರಿಂದ ನಮಸ್ಕಾರಕ್ಕೆ ಅರ್ಹಳು ಎನ್ನುವುದು ಸ್ವೀಕಾರಾರ್ಹವಾಯಿತು. ಹಾಗಂತ ಈ ರಿಯಾಯಿತಿ ತಂದೆ, ಅಣ್ಣ ಅಕ್ಕಂದಿರಿಗಿಲ್ಲ, ಅವರೇ ಯತಿಗಳಿಗೆ ನಮಸ್ಕಾರ ಮಾಡಬೇಕು ಎನ್ನುವ ನಿಯಮವಿದೆ.

ಸನ್ಯಾಸಿಗಳಲ್ಲೂ ಅನೇಕ ವಿಧವಿದೆ. ಪೀಠಾಧಿಪತಿಗಳನ್ನು ಹಾಗೂ ಇತರ ಸನ್ಯಾಸಿಗಳನ್ನೂ ಬೇರೆ ಬೇರೆಯಾಗಿಯೇ ನೋಡುವುದಿದೆ. ಯಾವುದಾದರೂ ಪೀಠಕ್ಕೆ ಅಧಿಪತಿಯನ್ನಾಗಿ ಅಥವಾ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡುವಲ್ಲಿಯೂ ಅನೇಕ ವಿಧಾನಗಳನ್ನು ಅನುಸರಿಸುವ ಪದ್ಧತಿಯಿದೆ. ಅಲ್ಲಿ ಸಾಮಾನ್ಯವಾಗಿ ಹಿರಿಯ ಗುರುಗಳ ಆಯ್ಕೆಯೇ ಅಂತಿಮವಾಗುತ್ತದೆ. ಹಾಗೊಮ್ಮೆ ಹಿರಿಯ ಗುರುಗಳು ದೇಹತ್ಯಾಗ ಮಾಡಿದ ಮೇಲಾದರೆ, ಆ ಸಂಸ್ಥಾನದ ಆಡಳಿದ ನಡೆಸುವವರು, ವೇದಾಂತಾದಿ ಶಾಸ್ತ್ರಗಳನ್ನು ಅಧ್ಯಯನ ಮಾಡಿದವರ ಜಾತಕದಲ್ಲಿ ವೈರಾಗ್ಯಯೋಗ ಇದೆಯೋ ಎನ್ನುವುದನ್ನು ಪರಿಶೀಲಿಸಿ ಅಂತವರನ್ನು ಮುಂದಿನ ಪೀಠಾಧಿಪತಿಗಳನ್ನು ಆಯ್ಕೆ ಮಾಡುವ ಕ್ರಮವೂ ಇದೆ.

ಇಲ್ಲಿ ವೈರಾಗ್ಯ ವಿರಕ್ತಿಗಳೇ ಪ್ರಧಾನವಾಗುತ್ತದೆಯೇ ವಿನಃ ಯಾವ ವಶೀಲಿಯೂ ಕೆಲಸಕ್ಕೆ ಬರಲಾರದು. ವೈರಾಗ್ಯವನ್ನು ಯಾರೂ ತಂದು ಕೊಡುವುದಲ್ಲ, ಅದೊಂದು ಭಾವ, ಸ್ಥಿತಿ. ಅದು ತನ್ನಿಂದ ತಾನೇ ಜಾಗ್ರತವಾಗಬೇಕು.

ಆಗಮಾತ್ರ ಅದು ಸ್ಥಿರವಾಗಿ ನಿಲ್ಲಲಿಕ್ಕೆ ಸಾಧ್ಯವಾಗುತ್ತದೆ. ಅದಲ್ಲದಿದ್ದರೆ, ಕ್ಷಣಿಕವಾಗಿಬಿಡುತ್ತದೆ. ಈ ಥರದ ಕ್ಷಣಿಕ ವೈರಾಗ್ಯ ನಮ್ಮಂಥಾ ಸಾಮಾನ್ಯರಿಗೂ ಒಮ್ಮೊಮ್ಮೆ ಅನುಭವಕ್ಕೆ ಬರುತ್ತೆ. ಅಭಾವ ವೈರಾಗ್ಯ ಅಂದರೆ ನಮಗೆ ಯಾವುದೋ ಒಂದು ವಸ್ತು ಸಿಗದಿದ್ದಾಗ ಬೇಡಾ ಎನಿಸುವುದು, ಪ್ರಸೂತಿ ವೈರಾಗ್ಯ, ಅಂದರೆ ಹೆರಿಗೆಯ ಸಮಯದಲ್ಲಿ ಜೀವಕ್ಕೆ ಇಷ್ಟೊಂದು ನೋವು ತಿನ್ನುವುದಕ್ಕಿಂತ ಮಕ್ಕಳು ಬೇಡವೇಬೇಡಾ ಎನ್ನುವ ಭಾವ. ಇನ್ನೂ ಒಂದು ಥರಹದ ವೈರಾಗ್ಯವಿದೆ ಅದನ್ನು ಸ್ಮಶಾನ ವೈರಾಗ್ಯ ಎನ್ನುತ್ತಾರೆ. ಯಾರದ್ದಾದರೂ ಅಂತ್ಯಕ್ರಿಯೆಗೆ ಹೋದಾಗ ಜೀವನ ಇಷ್ಟೇ, ಒಂದು ದಿನ ಎಲ್ಲವನ್ನೂ ಬಿಟ್ಟು ಹೋಗಲೇ ಬೇಕಾಗುತ್ತದೆ, ಇನ್ನಾದರೂ ಜೀವನದಲ್ಲಿ ಸ್ವಾರ್ಥಕ್ಕಾಗಿ ಹೊಡೆದಾಡದೇ ಪರೋಪಕಾರಕ್ಕೆ ಮೀಸಲಿಡೋಣ ಎಂದೆನಿಸುವ ಭಾವ ಅದು. ಆದರೆ, ದಿನಕಳೆದಂತೆ ಮತ್ತೆ ಮಾಮೂಲಿನ ಸ್ವಾರ್ಥಪರವಾದ ಚಿಂತನೆಯಲ್ಲಿ ತೊಡಗುವುದು. ಹಾಗಾಗಿ ಈ ಕ್ಷಣಿಕ ಭಾವವನ್ನು ತಿಳಿದವರು ವೈರಾಗ್ಯದ ಆಭಾಸ ಎಂದಷ್ಟೇ ಗುರುತಿಸುತ್ತಾರೆ. ಆದರೆ ಸನ್ಯಾಸಿಗೆ ಹಾಗಲ್ಲ, ವಿಷಯಗಳಲ್ಲಿನ ವಿರಕ್ತಿ ಎನ್ನುವಂಥಾದ್ದು ನಿತ್ಯವೂ ಇರಬೇಕಾಗುತ್ತದೆ.

ಸಾಮಾನ್ಯವಾಗಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥಗಳೆಂಬ ಮೂರು ಪ್ರಾಥಮಿಕ ಆಶ್ರಮಗಳನ್ನು ಯಶಸ್ವಿಯಾಗಿ ದಾಟಿ ಆದಮೇಲೆ ಸನ್ಯಾಸಾಶ್ರಮ ಎನ್ನುದು ಶಾಸ್ತ್ರಗಳ ಮಾತು. ಆದರೆ, ನಮ್ಮ ಅನೇಕ ಗುರು ಪರಂಪರೆಗಳಲ್ಲಿ ಬಾಲ ವಟುಗಳನ್ನು ಗುರುಗಳನ್ನಾಗಿಸುವ ಪದ್ಧತಿಯೂ ಇದೆ, ಇನ್ನೂ ಏನೂ ಅರಿಯದ ಮುಗ್ಧ ಬಾಲಕರನ್ನು ಪೀಠಕ್ಕೆ ಆಯ್ಕೆಮಾಡಿದ ಉದಾಹರಣೆ ನಮ್ಮ ಮುಂದೆ ಸಾಕಷ್ಟಿದೆ. ಅದು ತಪ್ಪೋ ಸರಿಯೋ ಎನ್ನುವುದು ಇಲ್ಲಿ ಈಗ ಅಪ್ರಸ್ತುತ. ತಂದೆ-ತಾಯಿಗಳಿಗೆ ಅದೊಂದು ವೇದನೆಯ ಸಂದರ್ಭ ಇದು ಎನ್ನುವುದಂತೂ ಸತ್ಯ. ನನ್ನ ಪ್ರಕಾರ ಸನ್ಯಾಸಿಯಾದವನ ತ್ಯಾಗದಷ್ಟೇ ಅಥವಾ ಅದಕ್ಕಿಂತ ಒಂದು ತೊಲೆ ಹೆಚ್ಚು ತ್ಯಾಗ ಅವರ ಪಾಲಕರದ್ದಾಗಿರುತ್ತದೆ. ದೇಶ ರಕ್ಷಣೆಗಾಗಿ ಮಕ್ಕಳನ್ನು ಸೈನ್ಯಕ್ಕೆ ಸೇರಿಸುವಾಗ ಆಗುವ ನೋವೇ ಈ ಸಂದರ್ಭದಲ್ಲೂ ತಂದೆ-ತಾಯಿಗಳಿಗೆ ಆಗಲಿಕ್ಕೆ ಸಾಕು. ಸೈನ್ಯಕ್ಕೆ ಸೇರಿಸಿದರೂ ಆತ ತಮ್ಮ ಮಗನಾಗೇ ಇರುತ್ತಾನೆ, ವಿವಾಹ ಮಾಡಿಕೊಡುವಾಗಲೂ ಅಷ್ಟೇ, ಮಗಳು ಗಂಡನ ಮನೆಗೇ ಹೋದರೂ ಸಂಬಂಧ ಮಾತ್ರ ಹಾಗೆಯೇ ಉಳಿಯುತ್ತದೆ.

ಆದರೆ ಮಕ್ಕಳನ್ನು ಸನ್ಯಾಸಕ್ಕೆ ಕಳುಹಿಸುವಾಗ ಹಾಗಲ್ಲ, ಕರುಳ ಬಳ್ಳಿಯ ಸಂಬಂಧವನ್ನು ಕಡಿದುಕೊಳ್ಳುವ ಸಂದರ್ಭ. ಮಗ ತಮ್ಮ ಮುಂದೇ ಜೀವಂತವಾಗಿದ್ದರೂ, ಆತ ನಮ್ಮವನಲ್ಲ, ಅವನ ಮೇಲೆ ನಮಗೆ ಅಧಿಕಾರವಿಲ್ಲದ ಸ್ಥಿತಿ ಅದು, ಹಾಗಾಗಿ ತಂದೆ-ತಾಯಿಯರದ್ದೂ ಒಂದು ರೀತಿಯ ತ್ಯಾಗವೇ ಆಗುತ್ತದೆ. ಹಾಗಾಗಿ, ತನ್ನ ಸಂತಾನವನ್ನು ಸಮಾಜದ ಉದ್ಧಾರಕ್ಕೆ ತ್ಯಾಗಮಾಡಿದವರ ಅನು-ಆಪತ್ತಿನಲ್ಲಿ, ಆರ್ಥಿಕ ಅವಶ್ಯಕತೆಗಳಲ್ಲಿ ಭಾಗಿಯಾಗ ಬೇಕಾದ್ದು ಉಪಕಾರ ಸ್ಮರಣೆಯಾಗುವುದರಿಂದ ಸಮಾಜದ ಆದ್ಯಕರ್ತವ್ಯವಾಗುತ್ತದೆ. ಆ ಭಾಗ್ಯ, ಈ ಭಾಗ್ಯ ಎಂದು ವೋಟುಗಳಿಸುವ ತಂತ್ರಮಾಡುವ ರಾಜಕಾರಣಿಗಳ ನಡುವೆ, ಈ ಥರದ ಸಮ್ಯಕ್ ಚಿಂತನೆಗಳಿಂದಾಗಿ ನಮಗೆ ಅರವಿಂದ ಲಿಂಬಾವಳಿಯವರು ವಿಶಿಷ್ಟ ಹಾಗೂ ವಿಭಿನ್ನವಾಗಿ ಕಾಣುತ್ತಾರೆ.

# ಬೇಕಿರುವುದು ತಂತ್ರ ಕುತಂತ್ರ, ಹೀರೋಯಿಸಂ ಅಲ್ಲ!

**ಮೈತ್ರಿಕೂಟವನ್ನು ನಿಭಾಯಿಸುವಲ್ಲಿ ರಾಜಕೀಯ ಹಾಗೂ ಆಡಳಿತದಲ್ಲಿ ಅಪಾರ ಅನುಭವವುಳ್ಳ ದಿಗ್ಗಜರಾದ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪನವರಂತಹವರೇ ಸೋತಿದ್ದಾರೆ ಎನ್ನುವುದಕ್ಕಿಂತ ತಿಣುಕಾಡಿದ್ದಾರೆ. ಇನ್ನು ರಾಜಕೀಯ ಅನುಭವ ಇಲ್ಲದ ನಟ ಹೀರೋ ವಿಜಯ್ ಕುತಂತ್ರಿಗಳಿಗೆ ಯಾವ ಲೆಕ್ಕ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಡಿಎಂಕೆ ಮತ್ತು ಎಐಡಿಎಂಕೆ ಪಕ್ಷಗಳು ಹಿಂದೆ ನಡೆದುಕೊಂಡ ರೀತಿರಿವಾಜುಗಳನ್ನು ಬಲ್ಲವರೆಲ್ಲರೂ ಇದನ್ನು ಒಪ್ಪುತ್ತಾರೆ.**

ಚಕ್ರವ್ಯೂಹ
ಮಿರ್ಲೆ ಚಂದ್ರಶೇಖರ
vveditoped@gmail.com

ಸ್ವಾಮಿ ವಿವೇಕಾನಂದರು 1895ರಲ್ಲಿ ರಾಜಕೀಯದ ಬಗ್ಗೆ ಹೇಳಿರುವ ಮಾತು ನೆನಸಿಕೊಳ್ಳುವ ಸಮಯದಲ್ಲಿ ಇದ್ದೇವೆ, ನಾನು ಹೇಡಿಗಳೊಂದಿಗಾಗಲಿ ಅಥವಾ ರಾಜಕೀಯ ಅಸಂಬದ್ಧತೆಗಳೊಂದಿಗಾಗಲಿ ಸಂಬಂಧ ಹೊಂದಿಲ್ಲ, ನಾನು ಯಾವುದೇ ರಾಜಕೀಯವನ್ನು ನಂಬುವುದಿಲ್ಲ, ದೇವರು ಮತ್ತು ಸತ್ಯ ಮಾತ್ರ ಜಗತ್ತಿನ ರಾಜಕೀಯ, ಉಳಿದೆಲ್ಲವೂ ಕಸ. ಮತ್ತೇಮತ್ತೆ ಓದಿದಾಗಲೇ ಒಂದು ಲೆವೆಲ್‌ಗೆ ಅರ್ಥವಾಗಲಿಕ್ಕೆ ಸಾಧ್ಯ. ರಾಜಕೀಯದಲ್ಲಿ ಚುನಾವಣೆಗಳ ಸೋಲು-ಗೆಲವಿನಲ್ಲಿ ಒಮ್ಮೆ ಹೇಡಿ ಒಬ್ಬ ರಣಹೇಡಿ ಆಗುತ್ತಾನೆ, ಮತ್ತೊಮ್ಮೆ ರಣಶೂರನಾಗುತ್ತಾನೆ.

ಗೆದ್ದು ಶೂರನಾದವನು ಅಧಿಕಾರದ ಗದ್ದುಗೆ ಹಿಡಿಯುವಷ್ಟರಲ್ಲಿ ಏನೆಲ್ಲಾ ಕಸರತ್ತು ಮಾಡಬೇಕೆನ್ನುವುದು ತಮಿಳುನಾಡಿನ ರಾಜಕೀಯವನ್ನು ನೋಡಿದರೆ ಗೊತ್ತಾಗುವುದು. ತಮಿಳಿಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಅವಸ್ಥೆಯು ಜಯಬೇರಿ ಬಾರಿಸಿಯೂ ಅಧಿಕಾರದ ಪ್ರಮಾಣ ವಚನ ಸ್ವೀಕರಿಸುವುದಕ್ಕೆ ಸಂಖ್ಯಾಬಲದ ಕೊರತೆಯಿಂದ ಪರಿತಪಿಸುತ್ತಿದೆ. ಪ್ರಮಾಣವಚನ ನಾಳೆ ನಾಳೆ ಎನ್ನುತ್ತಲೇ ಇದ್ದಾರೆ ಕೊರತೆಯನ್ನು ತುಂಬಿಸಿಕೊಳ್ಳಲು ನಟ ವಿಜಯ್‌ರವರು ಹೆಣಗಾಡುತ್ತಿದ್ದಾರೆ. ಹೀರೋಯಿಸಂ ಬದಿಗಿಟ್ಟು ತಂತ್ರಗಾರಿಕೆಯನ್ನು ಪ್ರಯೋಗಿಸಿದ್ದಿದ್ದರೆ ಬಹುಶಃ ಇಷ್ಟೊತ್ತಿಗೆ ಯಶಸ್ವೀ ಆಗುತ್ತಿದ್ದರು. ರಾಜಕೀಯದ ಹೀರೋಗೂ ಸಿನಿಮಾದ ಹೀರೋಗೂ ವ್ಯತ್ಯಾಸವಿದೆ, ಸಿನಿಮಾದಲ್ಲಿ ಅಭಿನಯ ಒಂದನ್ನು ಬಿಟ್ಟು ಉಳಿದೆಲ್ಲವನ್ನೂ ಬೇರೆಯವರು ಕಟ್ಟಿಕೊಡುತ್ತಾರೆ. ರಾಜಕೀಯದಲ್ಲಿ ಅಭಿನಯದ ಜತೆಗೆ ಸಂಭಾಷಣೆ, ಸಾಹಿತ್ಯ, ನಿರ್ದೇಶನ, ಸಂಗೀತ, ನಿರ್ಮಾಣ ಎಲ್ಲವೂ ಒಬ್ಬರದ್ದೇ, ಸಮಯಾಸಂದರ್ಭಕ್ಕೆ ಬೇರೆಯವರು ಲಾಭಾಂಶ ಇದ್ದರೆ ಮಾತ್ರ ಸಹಕರಿಸುತ್ತಾರೆ ಮತ್ತು ಬೆನ್ನಿಗೆ ನಿಲ್ಲುತ್ತಾರೆ.

ಕಿಚಡಿ ಪಕ್ಷಗಳನ್ನು ನಂಬಿ ರಾಜಕೀಯಕ್ಕೆ ಪದಾರ್ಪಣೆ ಮಾಡಿದ ಮೊದಲ ಪ್ರಯತ್ನದಲ್ಲೇ 107 ಸ್ಥಾನಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆ ಪಕ್ಷವು ಅಧಿಕಾರ ನಡೆಸುವುದು ಸುಲಭವಲ್ಲ. ಪ್ರಮಾಣ ವಚನ ಸ್ವೀಕರಿಸಲು ಸಂಖ್ಯಾಬಲ 118 ಬೇಕಿರುವುದರಿಂದ ಒಂದಂಕಿ ಸ್ಥಾನವನ್ನು ಗಳಿಸಿರುವ ಸಣ್ಣಪುಟ್ಟ ಪಕ್ಷಗಳ ಸಹಾಯವನ್ನು ಬೇಡುತ್ತಿದೆ. ಆಂತರೀಕವಾಗಿ ಏನು ನಡೆಯುತ್ತಿದೆ ಎಂಬುದು ಪ್ರಶ್ನೆಯಾಗಿದೆ. ಕೊರತೆ ಇರುವ 11 ಶಾಸಕರಿಗಾಗಿ ಟಿವಿಕೆ ಪಕ್ಷವು ಇನ್ನಿಲ್ಲದ ಸರ್ಕಸ್ ಮಾಡುತ್ತಿದೆ. ಇಲ್ಲಿಯವರೆಗೂ ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಡಿಎಂಕೆ ನಡುವೆ ಹಂಚಿಹೋಗಿದ್ದ ಆಡಳಿತ, ಟಿವಿಕೆ ಮೂಲಕ ಹೊಸ ದಿಕ್ಕನ್ನು ಕಾಣುತ್ತಿದೆ. ಧೀರ್ಘಕಾಲ ತಿಂದುಂಡವರು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದೇ. ಇವರಿಬ್ಬರ ಒಳ ಏಟಿನಿಂದ ವಿಜಯ್‌ರವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ವಿಳಂಬವಾಗುತ್ತಿದೆ.

ಅಂದುಕೊಂಡಂತೆ ಕಿಚಡಿ ಪಕ್ಷಗಳನ್ನು ಸೇರಿಸಿಕೊಂಡು ಟಿವಿಕೆ ಅಧಿಕಾರಕ್ಕೆ ಬಂದರೆ ರುಚಿಕಂಡ ಬೆಕ್ಕುಗಳು ಸುಮ್ಮನಿರುತ್ತವೆಯೇ? ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ಆದರೂ ಟಿವಿಕೆ ಇರುವವರೆಗೂ ಉರಿಯುವ ಬೆಂಕಿಯಲ್ಲೇ ಆಡಳಿತ ನಡೆಸಬೇಕಾಗುತ್ತದೆ. ಏಕೆಂದರೆ ಅನುಭವ ಇರುವ ಹಾಗೂ ಅಧಿಕಾರ ಅನುಭವಿಸಿರುವ ಎರಡೂ ಪಕ್ಷಗಳು ಸರಕಾರವನ್ನು ಬೀಳಿಸುವುದಕ್ಕೆ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕಾಯುತ್ತಿರುತ್ತವೆ. ತಮಿಳರು ಟಿವಿಕೆ ಪಕ್ಷಕ್ಕೆ 107 ಕೊಟ್ಟವರು 118 ಕೊಡುವುದಕ್ಕೆ ಮನಸ್ಸು ಮಾಡಿದ್ದಿದ್ದರೆ ಮುಂದಿನ ಐದು ವರ್ಷಗಳು ತಮಿಳುನಾಡು ರಾಜ್ಯವು ನಿರುಮ್ಮಳವಾಗಿ ಉಸಿರಾಡುತ್ತಿತ್ತು.

ಎರಡು ಕಾಲುಗಳ ಪಕ್ಕ ಕೆಳಗೆ ಕುಳಿತಿರುವ ಪಕ್ಷಗಳು ಯಾವ ಕ್ಷಣದಲ್ಲಿಯಾದರೂ ಕೆಳಗೆ ಬೀಳುವಂತೆ ಕಾಲುಗಳನ್ನು ಎಳೆಯಬಹುದು.

ಕಾಂಗ್ರೆಸ್ ಪಕ್ಷದೊಂದಿಗೆ ಕೈಜೋಡಿಸಿ ಜನತಾದಳ ಪಕ್ಷದಿಂದ ಎಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ 2018-19ರಲ್ಲಿ ಆಡಳಿತಕ್ಕೆ ಬಂದ ಅಲ್ಪ ಅವಧಿಯಲ್ಲಿ ಸರಕಾರವು ಬಿದ್ದುಹೋಯಿತು. ಇಲ್ಲಿ ಮಾರ್ಗದರ್ಶನಕ್ಕೆ ಸುತ್ತಲೂ ಅನುಭವಿಗಳು ಇದ್ದಾಗ್ಯೂ ಆಡಳಿತ ನಡೆಸಲಾಗಲಿಲ್ಲ ಅಷ್ಟೊಂದು ತೀವ್ರತೆಯ

ಚಾಣುಕ್ಯನಂತವರು ಕೊಟ್ಟ ಒಳ ಏಟಿನಲ್ಲಿ ಇತ್ತು, ರಾಜಕೀಯದಲ್ಲಿ ಯಾವಾಗಲೂ ಕುತಂತ್ರಗಳೇ ಗೆಲ್ಲುವುದು. ತಮಿಳುನಾಡಿನ ನಟ ವಿಜಯ್ ಪರಿಸ್ಥಿತಿ ಮುಂದೆ ಹೇಗಾಗಬಹುದು, ಅಯ್ಯೋ ರಾಜಕೀಯವೇ ಬೇಡ ಎನ್ನುವ ತೀರ್ಮಾನಕ್ಕೂ ಬರಬಹುದು, ಇವರಿಗೆ ಕ್ಷೇತ್ರ ಹೊಸದು, ಹಳಬರ ಜತೆ ಹೆಣಗಾಡುವುದು ಕಷ್ಟ, ಗೆದ್ದದ್ದು ಎರಡು ಸ್ಥಾನವಾದರೂ ಒಂದು ಉಪಮುಖ್ಯಮಂತ್ರಿ ಮತ್ತೊಂದು ಮಂತ್ರಿ ಸ್ಥಾನ ಕೊಡಿ ಎಂದು ಜನಬೆಂಬಲ ಇಲ್ಲದೆ ಅರ್ಹತೆಯನ್ನು ಕಳೆದುಕೊಂಡಿರುವ ಸಣ್ಣ ಪಕ್ಷವೊಂದು ಈಗಲೇ ಕೇಳುತ್ತಿರುವಾಗ ಇಂಥಹವರ ಜತೆ ಸುಭದ್ರ ಸರಕಾರ ನಡೆಸಲು ಸಾಧ್ಯವಿದೆಯೇ?

ಸರಕಾರದಲ್ಲಿ ಸುತ್ತಲೂ ಪದೇಪದೆ ಕಿರುಕುಳ ಕೊಡುವ ಪಕ್ಷಗಳನ್ನು ಬೆಂಬಲಿಗರಾಗಿ ಇಟ್ಟುಕೊಂಡು ಸ್ವಚ್ಛ ಹಾಗೂ ಸುಭದ್ರವಾದ ಸರಕಾರವನ್ನು ತಮಿಳುನಾಡಿನ ಪ್ರಜೆಗಳು ಕಾಣಲಿಕ್ಕೆ ಆಗುತ್ತದೆಯೇ? ಟಿವಿಕೆ ಪಕ್ಷವು ಉತ್ಸಾಹದಲ್ಲಿ ಗೆಲ್ಲುವುದಕ್ಕಾಗಿ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ಸವಲತ್ತುಗಳನ್ನು ಹೀಡೇರಿಸುತ್ತಾರೆ ಎಂದು ನಂಬುವ ಬದಲು ಟಿವಿಕೆ ಗುರುತು ವಿಶಲ್ ಹಿಡಿದು ಸೀಟಿ ಹೊಡೆಯುತ್ತಾ ತಮ್ಮ ಪಾಡಿನ ಕೆಲಸ ಮಾಡಿಕೊಂಡು ಇರುವುದು ಒಳಿತು. ಅತಂತ್ರ ವಿಧಾನಸಭೆ ಎಂದಿಗೂ ಶಾಶ್ವತವಲ್ಲ, ಆಯಸ್ಸು ಕಡಿಮೆ ಎಂದು ಸಾಯುವುದೋ ಅದು ಕೂಡ ತಿಳಿಯದು. ನಿತ್ಯವೂ ಸತ್ತೇ ಬದುಕುವ ಪರಿಸ್ಥಿತಿ ಅತಂತ್ರ ವಿಧಾನಸಭೆಯಲ್ಲಿ. ನಮ್ಮ ಕರ್ನಾಟಕ ಇದರಲ್ಲಿ ತಮಿಳುನಾಡಿಗಿಂತ ಸೀನಿಯರ್.

ದ್ರಾವಿಡ ರಾಜಕಾರಣಕ್ಕೆ ಪರ್ಯಾಯವಾಗಿ ಯುವ ಮತದಾರರು ಬದಲಾವಣೆ ಬಯಸಿ ಜೋಸೆಫ್ ವಿಜಯ್‌ರವರನ್ನು ಗೆಲ್ಲಿಸಿದ್ದಾರೆ. ಚಿತ್ರರಂಗದ ವರ್ಚಸ್ಸು ಮತ್ತು ಅವರು ಇಟ್ಟುಕೊಂಡಿದ್ದ ತಳಮಟ್ಟದ ಜನಸಂಪರ್ಕ ಮತಗಳಾದವು, ಈ ಟ್ರೆಂಡ್ ನಿರಂತರವಾಗಿ ಇರುತ್ತದೆ ಎನ್ನಲಾಗದು. ಸಿನಿಮಾದಲ್ಲಿ ಯಶಸ್ಸು ಗಳಿಸಿದಂತೆ ಇಲ್ಲೂ ಕೂಡ ರಾಜ್ಯದ ಮುಖ್ಯಮಂತ್ರಿಯಾಗಿ ಯಶಸ್ಸು ಸಿಗಲಿ, ಅತಂತ್ರ ಸ್ಥಿತಿಯ ರಾಜಕೀಯದಲ್ಲಿ ಮೈಯೆಲ್ಲಾ ಕಣ್ಣಾಗಿದ್ದರೆ ಮಾತ್ರ ಸಾಧ್ಯ.

ಮೈತ್ರಿಕೂಟವನ್ನು ನಿಭಾಯಿಸುವಲ್ಲಿ ರಾಜಕೀಯ ಹಾಗೂ ಆಡಳಿತದಲ್ಲಿ ಅಪಾರ ಅನುಭವವುಳ್ಳ ದಿಗ್ಗಜರಾದ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪನವರಂತಹವರೇ ಸೋತಿದ್ದಾರೆ ಎನ್ನುವುದಕ್ಕಿಂತ ತಿಣುಕಾಡಿದ್ದಾರೆ ಎನ್ನಬಹುದು. ಇನ್ನು ರಾಜಕೀಯ ಅನುಭವ ಇಲ್ಲದ ನಟ ಹೀರೋ ವಿಜಯ್ ಕುತಂತ್ರಿಗಳಿಗೆ ಯಾವ ಲೆಕ್ಕ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಡಿಎಂಕೆ ಮತ್ತು ಎಐಡಿಎಂಕೆ ಪಕ್ಷಗಳು ಹಿಂದೆ ನಡೆದುಕೊಂಡ ರೀತಿರಿವಾಜುಗಳನ್ನು ಬಲ್ಲವರೆಲ್ಲರೂ ಇದನ್ನು ಒಪ್ಪುತ್ತಾರೆ. ರಾಜಕೀಯಕ್ಕೆ ಬೇಕಿರುವುದು ತಂತ್ರಕುತಂತ್ರಗಳೇ ಹೊರತು ಹೀರೋಯಿಸಂ ಅಲ್ಲ! ನಮ್ಮ ಇತಿಹಾಸ ಇದನ್ನು ಸ್ಪಷ್ಟವಾಗಿ ತಿಳಿಸಿದೆ. ಮತ್ತೊಮ್ಮೆ ವಿವೇಕಾನಂದರ ಮಾತುಗಳು; ದೇವರು ಮತ್ತು ಸತ್ಯ ಮಾತ್ರ ಜಗತ್ತಿನ ರಾಜಕೀಯ, ಉಳಿದೆಲ್ಲವೂ ಕಸ!

# ಸ್ವಚ್ಛವಾಗಿರೋ ಖಾಸಗಿ ಆಸ್ಪತ್ರೆ: Clean-ik

## ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಖಡಕ್ ಮಾತು, ವ್ಯಕ್ತಿತ್ವ, ಅಷ್ಟೇ ಖಡಕ್ ಚಿತ್ರಗಳು, ಇದು ನಿರ್ದೇಶಕ ಕೆ.ವಿ. ರಾಜು ಅವರ ಸ್ಟೈಲ್ ಆಗಿತ್ತು. ಜೀವನದುದ್ದಕ್ಕೂ ನೇರ ನಿಷ್ಠುರ ಎಂಬಂತೆ ಬದುಕಿದ್ದ ನಿರ್ದೇಶಕ ಅವರು. ಕೆ.ವಿ. ರಾಜು ಅಂದ್ರೆ ಕನ್ನಡ ಚಿತ್ರರಂಗದಲ್ಲಿ ಕ್ರಾಂತಿಕಾರಿ ಸಿನಿಮಾಗಳನ್ನು, ಹೊಸ ರೀತಿಯ ಅನುಭವ ಕೊಡುವ ಸಿನಿಮಾಗಳನ್ನು ಮಾಡಿದ ನಿರ್ದೇಶಕರ ಹೆಸರು. ಇಂದ್ರಜಿತ್, ಯುದ್ಧಕಾಂಡ, ಸಂಗ್ರಾಮ, ಕದನ, ನಂ.1, ಬೆಳ್ಳಿ ಮೋಡ ಗಳು, ನವಭಾರತ, ಯುದ್ಧ, ಓ ಗಂಡಸರೇ ನೀವೆಷ್ಟು ಒಳ್ಳೆಯವರು ಮುಂತಾದ ಹಲವು ವಿಭಿನ್ನ ಚಿತ್ರಗಳನ್ನು ನೀಡಿದವರು ರಾಜು. ಕೆ.ವಿ. ರಾಜು ಅವರು ಅನೇಕ ಅದ್ಭುತ ಚಿತ್ರಗಳನ್ನು ಕೊಟ್ಟಿದ್ದರೂ ಬಹುತೇಕರು ಅವರನ್ನು ಗುರುತಿಸೋದು ಅವರ 'ಹುಲಿಯಾ' ಚಿತ್ರದಿಂದಲೇ. ಇಂದಿನ ನಮ್ಮ ಆಧುನಿಕ ಪ್ರೇಕ್ಷಕರಿಗೆ ಇಷ್ಟವಾಗುವಂಥ ಸೋ ಕಾಲ್ಡ್ ಹೊಸ ಅಲೆಯ ಚಿತ್ರಗಳ ಸಂಸ್ಕೃತಿ ಕನ್ನಡ ಚಿತ್ರಗಳಲ್ಲಿ ಎಂದೋ ಶುರುವಾಗಿತ್ತು. ಅಂತಹ ಚಿತ್ರಗಳ ಸಾಲಿನಲ್ಲಿ ಕೇಳಿಬರೋ ಪ್ರಮುಖ ಚಿತ್ರ ಅಂದ್ರೆ ದೇವರಾಜ್, ಅರ್ಚನಾ ಅಭಿನಯದ ಹುಲಿಯಾ. ಆದರೆ, ಈಗಲೂ ಕೆ.ವಿ. ರಾಜು ಅವರ ಪ್ರಮುಖ ಮೂರು ಚಿತ್ರಗಳನ್ನು ಹೆಸರಿಸಿ ಅಂದ್ರೆ, ಕನ್ನಡದ ಪ್ರೇಕ್ಷಕ ಖಂಡಿತಾ ಹುಲಿಯಾ ಚಿತ್ರವನ್ನು ನೆನಪಿಸಿಕೊಳ್ಳುತ್ತಾನೆ. ಆ ಚಿತ್ರದ ಖದರ್ರೇ ಹಾಗೆ. ಇಂದಿಗೂ ಸದಭಿರುಚಿಯ ಚಿತ್ರಗಳನ್ನು ಇಷ್ಟಪಡುವ ಕನ್ನಡ ಪ್ರೇಕ್ಷಕನ ಮನಸ್ಸಿನಲ್ಲಿ ಹುಲಿಯಾ ಚಿತ್ರಕ್ಕೆ ಅಮೂಲ್ಯವಾದ ಜಾಗ ಇದೆ. ಈ ಚಿತ್ರದ ಕಥೆಯನ್ನು ನೋಡಿದರೆ ಅದು ಈಗ ಪರಭಾಷೆಯ ಚಿತ್ರರಂಗದವರು ಮಾಡುತ್ತಿರೋ ಕಥೆಗಳನ್ನ ರಾಜು

ಅಂದೇ ಮಾಡಿದ್ದರು ಅನಿಸಿದರೆ ತಪ್ಪಿಲ್ಲ. ಯಾಕಂದ್ರೆ ಇತ್ತೀಚೆಗೆ ತಮಿಳಿನಲ್ಲಿ ಬಂದ ಧನುಷ್ ಅಭಿನಯದ 'ಅಸುರನ್' ಚಿತ್ರ ಹೆಚ್ಚು ಕಮ್ಮಿ ಹುಲಿಯಾ ಚಿತ್ರದ ಧಾಟಿಯಲ್ಲೇ ಇತ್ತು. ಶೋಷಿತರ ಮೇಲೆ ನಡೆಯುವ ದೌರ್ಜನ್ಯದ ಕಥೆ ಹುಲಿಯಾ ಚಿತ್ರದ್ದು. ಒಂದೇ ವ್ಯತ್ಯಾಸ ಅಂದ್ರೆ ಕೆ.ವಿ. ರಾಜು ಈ ಚಿತ್ರವನ್ನು ಅತಿ ರಿಯಲಿಸ್ಟಿಕ್ ಆಗಿ ತೋರಿಸಿದ್ದರು. ಅಂದರೆ ಬಡವರು ತಿರುಗಿ ಬಿದ್ದು ಉಳ್ಳವರ ಮೇಲೆ ಸೇಡು ತೀರಿಸಿಕೊಳ್ಳೋದೆಲ್ಲಾ ನಿಜಜೀವನದಲ್ಲಿ ಆಗಲ್ಲ ಅನ್ನೋ ನಂಬಿಕೆಯಲ್ಲಿ ಕೆ.ವಿ. ರಾಜು ಈ ಚಿತ್ರದಲ್ಲಿ ಸ್ಯಾಡ್ ಎಂಡಿಂಗ್ ಇಟ್ಟಿದ್ದರು. ದೇವರಾಜ್ ಮತ್ತು ಅರ್ಚನಾ ಅವರ ಕುಟುಂಬ ಮೇಲ್ವರ್ಗದವರ ತುಳಿತಕ್ಕೆ ಸಿಕ್ಕು ನಾಶವಾಗುವ ಕಥೆ ಇಲ್ಲಿತ್ತು. ದೇವರಾಜ್ ಅವರ ಅಭಿನಯಕ್ಕೆ ಎಲ್ಲೆಡೆಯಿಂದ ಪ್ರಶಂಸೆ ಕೇಳಿಬಂದಿತ್ತು. ಅದರಲ್ಲೂ ನಟ ವಿಷ್ಣುವರ್ಧನ್ ಈ ಚಿತ್ರದಲ್ಲಿ ದೇವರಾಜ್ ಅವರು ರಸ್ತೆಯಲ್ಲಿ ನಿಂತು ಅಭಿನಯಿಸಿದ ಕ್ಲೈಮ್ಯಾಕ್ಸ್ ದೃಶ್ಯ ನೋಡಿ, ಅಲ್ರೀ, ಪಬ್ಲಿಕ್ ಪ್ಲೇಸ್‌ನಲ್ಲಿ ನಿಂತುಕೊಂಡು ಅಷ್ಟೊಂದು ಜನರ ಎದುರಿಗೆ ಅಂಥ ಪರ್ಫಾರ್ಮೆನ್ಸ್ ಕೊಡೋದು ಅಂದ್ರೆ, ಸುಮ್ನೆನಾ, ನನ್ನ ಕೈಲಂತೂ ಆಗ್ತಾ ಇರಲಿಲ್ಲ ಎಂದು ದೇವರಾಜ್ ಅಭಿನಯಕ್ಕೆ ಕ್ರೆಡಿಟ್ ಕೊಟ್ಟಿದ್ದರು. ಆದರೆ, ಇದೆಲ್ಲದರ ನಡುವೆಯೂ ವಿಶೇಷ ಅಂದ್ರೆ, ಆ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಸೋತು ಹೋಯಿತು, ನನಗೆ ಲಾಸ್ ಆಯಿತು, ಕ್ಲೈಮ್ಯಾಕ್ಸ್ ಬದಲಿಸಿ ಅಂತ ನಾನು ಹೇಳಿದ ಮಾತನ್ನು ಕೆ.ವಿ. ರಾಜು ಕೇಳಲಿಲ್ಲ, ಅನ್ನೋ ಚಿತ್ರದ ನಿರ್ಮಾಪಕ ಗೋವಿಂದು ಕೂಡ, ಯಾರಾದ್ರೂ ನಿಮ್ಮ ಹೆಸರೇನು? ಅಂತ ಯಾರಾದ್ರೂ ಕೇಳಿದ್ರೆ, ಗೋವಿಂದು, ಹುಲಿಯಾ ಗೋವಿಂದು ಅಂತಲೇ ಹೇಳ್ತಾರೆ. ಅದು ಆ ಚಿತ್ರದ ತಾಕತ್ತು.

## ಲೂಸ್ ಟಾಕ್ ▸▸ ಸ್ಯಾಂಡಲ್‌ವುಡ್ ಡೈರೆಕ್ಟರ್

- **ಏನ್ ಸಾರ್ ಹೆಂಗ್ ನಡೀತಿದೆ ನಿಮ್ಮ ಸಿನಿಮಾ ಶೂಟಿಂಗ್?**
- – ಅಯ್ಯೋ ಚಿತ್ರೀಕರಣ ಬರದಿಂದ ಸಾಗುತ್ತಿದೆ ಕಣ್ರೀ.
- **ರೀ ಅದು ಬರದಿಂದ ಅಲ್ಲ, ಭರದಿಂದ**
- – ರೀ ಸ್ವಾಮಿ ನಮ್ ಪ್ರೊಡ್ಯೂಸರ್ ಹತ್ರ ದುಡ್ಡಿಲ್ಲ, ಹಣದ ಕೊರತೆ ಇದೆ ಅದಕ್ಕೇ ಬರದಿಂದ ಸಾಗುತ್ತಿದೆ ಅಂತ ಹೇಳಿದ್ದು.
- **ಓ ಹಂಗೆ, ಆದ್ರೆ ಮೊನ್ನೆ ಶೂಟಿಂಗಿಗೆ ಅಂತ ರಾಜಸ್ತಾನಕ್ಕೆ ಹೋಗಿದ್ದಾಗ, ನಮ್ ಪ್ರೊಡ್ಯೂಸರ್ ದುಡ್ಡನ್ನ ನೀರಿನ್ ಥರ ಖರ್ಚು ಮಾಡಿದ್ರು ಅಂತಿದ್ರಿ!**
- – ಹೌದು ರೀ, ರಾಜಸ್ಥಾನದಲ್ಲಿ ನೀರಿನ್ ಥರ ಖರ್ಚ್ ಮಾಡಿದ್ರು ಅಂದ್ರೆ, ತುಂಬಾ ಕಡಿಮೆ ದುಡ್ಡು ಖರ್ಚು ಮಾಡಿದ್ರು ಅಂತ ಅಲ್ವಾ?
- **ಓಹೋ, ಯಾಕೋ ಡೈರೆಕ್ಟರ್ ಸಾಹೇಬ್ರು ಬರೀ ಇನ್‌ಡೈರೆಕ್ಟ್ ಆಗಿ ಮಾತಾಡ್ತಾ ಇದ್ದೀರ.**
- – ಏನ್ ಮಾಡೋದು ನಮ್ಮ ನಿರ್ಮಾಪಕರು ಏರಿಯಲ್ ಶಾಟ್ ತೆಗೆಯೋಕೂ ದುಡ್ಡು ಬಿಚ್ಚಲ್ಲ.. ಕಲೆ ಒಳ್ಳೆಯದೇ ನಿಜ, ಆದ್ರೆ ಸಿನಿಮಾ ಕಲೆಗೆ ಬೆಲೆ ಕಟ್ಟಲ್ಲಿಲ್ಲ ಅಂದ್ರೆ ಹೆಂಗೆ?
- **ಆದ್ರೂ 15 ದಿನ ಶೂಟಿಂಗ್ ಯಶಸ್ವಿಯಾಗಿ ಮುಗಿಸಿದ್ದೀರ ಅಲ್ವಾ?**
- – ಹೌದೌದು. ಅದೇ ದೊಡ್ಡ ಸಾಧನೆ. ಸಿನಿಮಾಗಳು ಬಿಡುಗಡೆ ಆದಮೇಲೆ ಯಶಸ್ವಿ 10ನೇ ದಿನ, 15ನೇ ದಿನ ಅಂತ ಹಾಕ್ಕೊತಾರಲ್ಲ, ಹಂಗೇ ನಾವು ಅಮೋಘ 15 ದಿನಗಳ ಶೂಟಿಂಗ್ ಮುಕ್ತಾಯ ಅಂತ ಪೋಸ್ಟರ್ ಹಾಕಿಸ್ಬೇಕು ಅಂದ್ಕೊಂಡಿದ್ದೀವಿ.

(ಕಾಲ್ಪನಿಕ ಸಂದರ್ಶನ)

## ನೆಟ್ ಪಿಕ್ಸ್

ಖೇಮು ಖೇಮುಶ್ರೀ ಯಾವುದೋ ವಿಷಯಕ್ಕೆ ಮುನಿಸಿಕೊಂಡು ಮನೆಯಲ್ಲಿ ದೊಡ್ಡ ಜಗಳ ಆಗಿತ್ತು. ಖೇಮು ಕೂಡಾ ಅವತ್ತು ತುಂಬಾ ಸಿಟ್ಟಲ್ಲಿದ್ದ. ಹಂಗಾಗಿ ಖೇಮುಶ್ರೀಯನ್ನು ಬಾಯಿಗೆ ಬಂದಂತೆ ಬಯ್ದ. ಖೇಮುಶ್ರೀ ಏನೂ ಕಡಿಮೆ ಇರಲಿಲ್ಲ. ಗಂಡನ ಮೇಲೆ ತಿರುಗಿ ಬಿದ್ದು ಅವನನ್ನು ಎಲ್ಲ ರೀತಿಯಲ್ಲೂ ಹೀಯಾಳಿಸಿದ್ದಳು. ಅದಕ್ಕೆ ಖೇಮುಗೆ ಸಿಕ್ಕಾಪಟ್ಟೆ ಬೇಜಾರಾಗಿ ಎದ್ದು ಗಾಡಿ ತಗೊಂಡು ಹೊರಗೆ ಹೋದ. ಹೋದ್ರೆ ಹೋಗ್ಲಿ ಅಂತ ಖೇಮುಶ್ರೀ ಸುಮ್ಮನಾದಳು. ಆದರೆ, ಎಷ್ಟೊತ್ತಾದರೂ ಖೇಮು ವಾಪಸ್ ಬರಲಿಲ್ಲ. ಊಟದ ಟೈಮಿಗೆ ಬರ್ತಾನೆ ಅಂತ ಕಾದು ಕೂತಿದ್ದ ಖೇಮುಶ್ರೀಗೆ ಕೊಂಚ ಗಾಬರಿ ಆಯ್ತು. ಹಂಗಾಗಿ ಗಂಡನಿಗೆ ಕಾಲ್ ಮಾಡಿದಳು. ಮೊದಲೆರಡು ಸಲ, ಖೇಮು ಕಾಲ್ ರಿಸೀವ್ ಮಾಡಲಿಲ್ಲ. ಆಮೇಲೆ ಮೂರ್ನಾಲ್ಕು ಸಲ ಆದ್ಮೆಲೆ ಕಾಲ್ ತೆಗೆದು ಖೇಮು ಏನು? ಅಂದ. ಸದ್ಯ ಅಂತ ಸಮಾಧಾನ ಪಟ್ಟುಕೊಂಡ ಖೇಮುಶ್ರೀ ಎಲ್ಲಿದ್ದೀರಾ? ಅಂತ ಕೇಳಿದಳು. ಅದಕ್ಕೆ ಖೇಮು ಸ್ವಲ್ಪ ಎಮೋಷನಲ್ ಆಗಿ ಮಾತನಾಡತೊಡಗಿದ 'ನಿಂಗೆ ನೆನಪಿದೆಯಾ, 5 ವರ್ಷದ ಹಿಂದೆ ಸಿಟಿ ಸೆಂಟರ್ ಅಲ್ಲಿರೋ ಜ್ಯೂವೆಲ್ಲರ್ಸ್ ಒಂದಕ್ಕೆ ಹೋಗಿದ್ವಿ ಅಲ್ಲಿ ನಿಂಗೊಂದು, ಡೈಮಂಡ್ ನೆಕ್ಲೇಸ್ ತುಂಬಾ ಇಷ್ಟ ಆಗಿತ್ತು. ಖೇಮುಶ್ರೀ ಎಕ್ಸೈಟ್ ಆಗಿ ''ಹೌದು, ಹೌದು ಅಂದ್ಳು.'' ಖೇಮು ಮುಂದುವರಿಸಿದ ಆದ್ರೆ ಅವತ್ತು ನನ್ನತ್ರ ದುಡ್ಡಿರಲಿಲ್ಲ. ಮುಂದೊಂದಿನ ಏನೇ ಆಗ್ಲಿ ಆ ನೆಕ್ಲೇಸ್‌ನ ನಾನು ನಿಂಗೆ ಕೊಡಿಸೇ ಕೊಡಿಸ್ತೀನಿ ಅಂತ ಹೇಳಿದ್ದೆ. ಖೇಮುಶ್ರೀ ಇನ್ನೂ ಎಕ್ಸೈಟ್ ಆಗಿ 'ಹೌದು, ನಿಜ, ತುಂಬಾ ಚೆನ್ನಾಗಿ ನೆನಪಿದೆ' ಅಂದ್ಳು. ಅದಕ್ಕೆ 'ಖೇಮು ಆ ಜ್ಯೂವೆಲ್ಲರಿ ಮುಂದಿರೋ ಬಾರಲ್ಲಿ ಕುಂತು ಕುಡಿತಾ ಇದ್ದೀನಿ. ಏನ್ ಕಾಲ್ ಮಾಡಿದ್ದು?' ಅಂತ ರೇಗಿದ.

## ಲೈನ್ ಮ್ಯಾನ್

- **ಭೂಗೋಳ ರಹಸ್ಯ**
- – ಭೂಮಿ 'ಗುಂಡು' ಗುಂಡಾಗಿದೆಯಂತೆ...ಅದಕ್ಕೇ ಬಡ್ಡಿಮಗಂದು ಟೈಟ್ ಆಗಿ 'ತಿರುಗುತ್ತೆ'.
- **ಮಿತ್ರರೇ ಅಂತ ಮಾತಾಡಿ ಮೋಸ ಮಾಡುವವರಿಗೆ**
- – Happy 'fraud' ship day
- **ಕುಡುಕರ ಸ್ವಗತ**
- – ಕುಡುಕರಿಗೆ ಒಂದು ಸೆಪರೇಟ್ ಧರ್ಮ ಬೇಕು..'ಪ್ರಜ್ಞಾವಂತ'ರ ಲೋಕ ನಮಗೆ ಪರಮ ಬೋರು.
- **ಮನೆ ಕೆಲಸದವಳು ಪಕ್ಕದ ಮನೆಯವರ ಬಗ್ಗೆ 'ಕಿವಿ' ಊದಿದರೂ ಅದು..**
- – 'ಬಾಯಿ' ಮಾತು
- **ಬ್ರೇಕ್ ಅಪ್, ಡೈವೋರ್ಸ್ ಆಗಿ ವಿದಾಯ ಹೇಳಿ ಹೋಗುವಾಗ ಒಬ್ಬರ ಮೇಲೆ ಒಬ್ಬರು ಸಿಟ್ಟಿನಿಂದ ಆಡುವ ಮಾತುಗಳು**
- – 'Bye' ಗುಳ
- **ರೈತರಿಗೆ ಬೆಳೆಯೋದಕ್ಕಿಂತ ಬೆಳೆದಿದ್ದನ್ನ ಮಾರೋದೇ ಕಷ್ಟ. ಅದೊಂಥರಾ..**
- – 'ಮಂಡಿ' ನೋವು
- **ನಶೆದಾತರಿಗೆ ತೋರಿಸೋ ತಾರತಮ್ಯ**
- – ಎಣ್ಣೆನ ಪರಮಾತ್ಮ ಅಂತ ಗೌರವದಿಂದ ಕರೀತೀವಿ. ಆದ್ರೆ ಸಿಗರೇಟ್‌ನ ಮಾತ್ರ ಸೇದಿದ ಮೇಲೆ ಕಾಲಲ್ಲಿ ಹೊಸಕಿ ಹಾಕ್ತೀವಿ.
- **ಅಸಂಬದ್ಧ ಸಂಬಂಧಗಳು**
- – ತರಕಾರಿ ಅಂಗಡಿಯಲ್ಲಿ ನಾವು, ಅಕ್ಕಾ ಈರುಳ್ಳಿ ಹೆಂಗೆ ರೇಟು? ಅಂತೀವಿ. ಅವ್ರು, 100 ರುಪಾಯಿಗೆ 6 ಕೆಜಿ ಅಣ್ಣಾ ಅಂತಾರೆ.
- **ಹೆಂಡ್ತಿ ಮಾಡಿದ ಕಬಾಬ್ ಚೆನ್ನಾಗಿಲ್ಲ ಅಂತ ಪತಿ ಆತ್ಮಹತ್ಯೆ**
- – ಅವ್ನ್ ಹೆಂಡ್ತಿ ಊರ್ ತುಂಬಾ ಫ್ಲೆಕ್ಸ್ ಹಾಕ್ಸಿದ್ದಾಳಂತೆ, 'ಮತ್ತೆ ಹುಟ್ಟಿ ಬಾ, ಬರ್ಬೇಕಾದ್ರೆ ಚಿಕನ್ ತಗೊಂಡ್ ಬಾ, ಈ ಸಲ ಕಬಾಬ್ ಚೆನ್ನಾಗ್ ಮಾಡ್ಕೊಡ್ತೀನಿ'
- **ತುಂಬಾ ಸ್ವಚ್ಛವಾಗಿರೋ ಖಾಸಗಿ ಆಸ್ಪತ್ರೆ**
- – Clean-ik

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:114

## ಸಮಾಚಾರ ಸಣ್ಣದಲ್ಲ

### ರಾಜ್ ಚಕ್ರವರ್ತಿ ರಾಜಕೀಯ ನಿವೃತ್ತಿ

**ಕೊಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿ ಅಧಿಕಾರದ ಗದ್ದುಗೆ ಏರುತ್ತಲೇ ಖ್ಯಾತ ಚಲನಚಿತ್ರ ನಿರ್ದೇಶಕ ರಾಜ್ ಚಕ್ರವರ್ತಿ ರಾಜಕೀಯಕ್ಕೆ ವಿದಾಯ ಘೋಷಿಸಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ದೀರ್ಘ ಬಂಗಾಳಿ ಸಂದೇಶವನ್ನು ಹಂಚಿಕೊಂಡಿರುವ ನಟ ರಾಜ್ ಚಕ್ರವರ್ತಿ, 'ಚಲನಚಿತ್ರ ನಿರ್ದೇಶಕರಾಗಿಯೂ ಹಾಗೂ ಶಾಸಕರಾಗಿಯೂ ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸಲು ಪ್ರಯತ್ನಿಸಿದ್ದಾಗಿ' ಹೇಳಿದ್ದಾರೆ. ಈ ಹಿಂದೆ ಟಿಎಂಸಿ ಅಭ್ಯರ್ಥಿ ರಾಜ್ ಚಕ್ರವರ್ತಿ ಮೇಲೆ ಬಿಜೆಪಿ ಕಾರ್ಯಕರ್ತರು ಕೆಸರು ಎರಚುತ್ತಿರುವ ವಿಡಿಯೋ ವ್ಯಾಪಕ ವೈರಲ್ ಆಗಿತ್ತು. ಟಿಎಂಸಿ ನಾಯಕರಾಗಿರುವ ರಾಜ್ ಚಕ್ರವರ್ತಿ ತಮ್ಮ ಅಧಿಕಾರಾವಧಿಯಲ್ಲಿ ಬಿಜೆಪಿ ಪರ ನಟರ ವಿರುದ್ಧ ಬಹಿರಂಗವಾಗಿ ತಾರತಮ್ಯ ಮಾಡಿ ಅವರನ್ನು ಚಿತ್ರರಂಗದಿಂದ ಶಾಶ್ವತವಾಗಿ ಹೊರದಬ್ಬಿರುವ ಆರೋಪ ಕೇಳಿಬಂದಿತ್ತು.

### ಬೋಟ್ ಬೆಂಕಿ ದುರಂತ: ಭಾರತೀಯ ಸಾವು

**ಟೆಹ್ರಾನ್:** ಹಾರ್ಮುಜ್ ಬಳಿ ಮರದ ಬೋಟ್‌ಗೆ ಬೆಂಕಿಗೆ ಆಹುತಿಯಾಗಿ ಮುಳುಗಿದ ಪರಿಣಾಮ ಭಾರತೀಯ ನಾವಿಕನೊಬ್ಬ ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಬೋಟ್‌ನಲ್ಲಿ 18 ಭಾರತೀಯ ಸಿಬ್ಬಂದಿ ಇದ್ದರು. ಬೋಟ್ ಪಕ್ಕದಲ್ಲೇ ಹಾದುಹೋಗುತ್ತಿದ್ದ ಹಡಗು ಅವರನ್ನು ರಕ್ಷಿಸಿದೆ. ಬೆಂಕಿ ಹೊತ್ತಿಕೊಳ್ಳಲು ನಿಖರ ಕಾರಣ ತಿಳಿದುಬಂದಿಲ್ಲ. ಗಾಯಗೊಂಡ ನಾವಿಕರು ದುಬೈನಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೋಟ್‌ನಿಂದ ರಕ್ಷಿಸಲ್ಪಟ್ಟ ಭಾರತೀಯ ನಾವಿಕರನ್ನು ನಮ್ಮ ಅಧಿಕಾರಿಗಳು ಭೇಟಿ ಮಾಡಿದ್ದಾರೆ. ನಾವು ಬೋಟ್ ಮಾಲೀಕರೊಂದಿಗೆ ಸಂಪರ್ಕದಲ್ಲಿದ್ದೇವೆ, ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುತ್ತೇವೆ ಎಂದು ದುಬೈನಲ್ಲಿರುವ ಭಾರತೀಯ ರಾಯಭಾರ ಕಚೇರಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ. ವಿಶ್ವದ ತೈಲ ಪೂರೈಕೆಯ ಪ್ರಮುಖ ಜಲ ಮಾರ್ಗ ಹಾರ್ಮುಜ್ ಮೇಲೆ ಇರಾನ್ ಹಿಡಿತ ಸಾಧಿಸಿದೆ. ಜಲಸಂಧಿಯಲ್ಲಿ ಇರಾನ್ ಮತ್ತು ಅಮೆರಿಕ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವ ಹೊತ್ತಲ್ಲೇ ಈ ಘಟನೆ ನಡೆದಿದೆ.

### ವಿಜಯ್ ಅಭಿಮಾನಿ ಆತ್ಮಹತ್ಯೆಗೆ ಯತ್ನ

**ಚೆನ್ನೈ:** ಟಿವಿಕೆ ಸ್ಥಾಪಕಾಧ್ಯಕ್ಷ ವಿಜಯ್ ಮುಖ್ಯ ಮಂತ್ರಿ ಪಟ್ಟಕ್ಕೇರಲು ಆಗುತ್ತಿರುವ ವಿಳಂಬದಿಂದ ಮನನೊಂದ ವ್ಯಕ್ತಿಯೊಬ್ಬ ಆತ್ಮಾಹುತಿಗೆ ಯತ್ನಿಸಿದ ದಾರುಣ ಘಟನೆ ತಮಿಳುನಾಡಿನ ತಿರುನಲ್ವೇಲಿಯಲ್ಲಿ ನಡೆದಿದೆ. ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ಟಿವಿಕೆ ನಿರಂತರ ಪ್ರಯತ್ನಗಳಲ್ಲಿ ತೊಡಗಿ ರುವ ಮಧ್ಯೆ ಇಸಕ್ಕಿ ಯಪ್ಪನ್ (40) ಬೇಸರ ದಿಂದ ಆತ್ಮಾಹುತಿಗೆ ಮುಂದಾಗಿದ್ದಾನೆ. ಚಿಕಿತ್ಸೆಗಾಗಿ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇಸಕ್ಕಿಯನ್ ವಿಜಯ್ ಅವರ ಅಪ್ಪಟ ಅಭಿಮಾನಿಯಾಗಿದ್ದಾನೆ. ಸುಮಾರು ನಾಲ್ಕು ತಿಂಗಳ ಹಿಂದೆ, ವಿಜಯ್ ಮುಖ್ಯಮಂತ್ರಿಯಾಗುವುದನ್ನು ನೋಡುವ ತನ್ನ ಮಹತ್ವಾಕಾಂಕ್ಷೆಯಿಂದ ಸಾರ್ವಜನಿಕ ಪ್ರದರ್ಶನವಾಗಿ ಆತ 16 ಅಡಿ ಉದ್ದದ ಭರ್ಜಿಯಿಂದ ತನ್ನ ಎರಡೂ ಕೆನ್ನೆಗಳನ್ನು ಚುಚ್ಚಿಕೊಂಡಿದ್ದ.

### ಒಂದೇ ಕುಟುಂಬದ ನಾಲ್ವರ ಸಾವು

**ಅಹಮದಾಬಾದ್:** ಗುಜರಾತ್ ನ ಖೇಡಾದ ಕಪಡ್ವಂಜ್ ತಾಲ್ಲೂಕಿನ ನರ್ಮದಾ ಮುಖ್ಯ ಕಾಲುವೆಯಲ್ಲಿ ಇಬ್ಬರು ಅಪ್ರಾಪ್ತ ಬಾಲಕಿಯರು ಸೇರಿದಂತೆ ಒಂದೇ ಕುಟುಂಬದ ನಾಲ್ವರು ಮುಳುಗಿ ಸಾವನ್ನಪ್ಪಿದ ಹೃದಯವಿದ್ರಾವಕ ಘಟನೆ ನಡೆದಿದ್ದು, ಸಾಮೂಹಿಕ ಆತ್ಮಹತ್ಯೆಯ ಸಾಧ್ಯತೆಯನ್ನು ತಳ್ಳಿಹಾಕುತ್ತಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

{ ಅರವಿಂದ ಕೇಜ್ರಿವಾಲ್ } ಆಪ್ ನಾಯಕ

**ಒಬ್ಬ ಪಂಜಾಬಿ ಪ್ರೀತಿಯಿಂದ ತನ್ನಲ್ಲಿರುವ ಎಲ್ಲವನ್ನೂ ನಿಮಗೆ ನೀಡುತ್ತಾನೆ, ಆದರೆ ನೀವು ಅವನನ್ನು ತಳ್ಳಿದರೆ, ಅವನು ಪೂರ್ಣ ಬಲದಿಂದ ಪ್ರತಿದಾಳಿ ಮಾಡುತ್ತಾನೆ. ಮೋದಿಜಿ, ಮುಂದುವರಿಯಿರಿ. ಇನ್ನಷ್ಟು ಇಡಿ ದಾಳಿಗಳನ್ನು ಮಾಡಿ. ಮುಂದಿನ ಚುನಾವಣೆಯಲ್ಲಿ ಬಿಜೆಪಿಯ ಎಲ್ಲ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.**

ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಸಿಎಂ ಆಗಿ ಪ್ರಮಾಣ ವಚನ ಸ್ವೀಕಾರ | ಮೋದಿ, ಅಮಿತ್ ಶಾ ಭಾಗಿ

# ಬಂಗಾಳದ ಸುವರ್ಣ ಯುಗ ಆರಂಭ: ಸುವೇಂದು

**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು, ಸೋನಾರ್ (ಸುವರ್ಣ) ಬಾಂಗ್ಲಾದ ದಿನಗಳು ಇಂದಿನಿಂದ ಅಧಿಕೃತವಾಗಿ ಪ್ರಾರಂಭವಾಗಿದೆ ಎಂದು ತಿಳಿಸಿದ್ದಾರೆ.

ಎಕ್ಸ್ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೋಲ್ಕತ್ತಾಗೆ ಸ್ವಾಗತಿಸುವ ಸಂದೇಶ ಹಾಕಿದ್ದ ಅಧಿಕಾರಿ, ಇದು ನಮ್ಮ ಸ್ಥಾಪಕ ಪಿತಾಮಹರ ಕನಸುಗಳ ಈಡೇರಿದ ದಿನ ಎಂದು ಬಣ್ಣಿಸಿದ್ದಾರೆ. ಇದು ದಶಕಗಳ ದುರಾಡಳಿತದ ಅಂತ್ಯ ಮತ್ತು ಅಭಿವೃದ್ಧಿ, ಶಾಂತಿ ಮತ್ತು ಸಮೃದ್ಧಿಯ ಡಬಲ್ -ಎಂಜಿನ್ ಯುಗದ ಆರಂಭವನ್ನು ಸೂಚಿಸುತ್ತದೆ. ಸೋನಾರ್ ಬಾಂಗ್ಲಾ ಯುಗ ಅಧಿಕೃತವಾಗಿ ಪ್ರಾರಂಭವಾಗುತ್ತದೆ ಎಂದು ಅಧಿಕಾರಿ ಪೋಸ್ಟ್ ಮಾಡಿದ್ದಾರೆ.

ದಶಕಗಳ ಪ್ರಯತ್ನಗಳ ಬಳಿಕ ಕೊನೆಗೂ ಪಶ್ಚಿಮ ಬಂಗಾಳದಲ್ಲಿ ಸರಕಾರ ರಚನೆ ಮಾಡಿರುವ ಬಿಜೆಪಿಯ ಮೊದಲ ಸಿಎಂ ಆಗಿ ಸುವೇಂದು ಅಧಿಕಾರಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು. ಕೊಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ರಾಜ್ಯಪಾಲ ಆರ್.ಎನ್ ರವಿ ಅವರು ಬಿಜೆಪಿಯ ಸುವೇಂದು ಅಧಿಕಾರಿಗೆ ಹುದ್ದೆ ಮತ್ತು ಗೌಪ್ಯತೆಯ ಪ್ರಮಾಣವಚನ ಬೋಧಿಸಿದರು. ಆ ಮೂಲಕ ಪಶ್ಚಿಮ ಬಂಗಾಳದಲ್ಲಿ ರಾಜ್ಯದಲ್ಲಿ ಹೊಸ ರಾಜಕೀಯ ಯುಗಕ್ಕೆ ಚಾಲನೆ ನೀಡಿದಂತಾಗಿದೆ.

ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ ಸೇರಿದಂತೆ ಕೇಂದ್ರ ಸಚಿವರು, ಎನ್‌ಡಿಎ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಹಿರಿಯ ಬಿಜೆಪಿ ನಾಯಕರು ಸೇರಿದಂತೆ ಗಣ್ಯ ರಾಜಕೀಯ ನಾಯಕರು ಉಪಸ್ಥಿತರಿದ್ದರು.

ಸುವೇಂದು ಅಧಿಕಾರಿ ಜೊತೆ ಇತರೆ ಐದು ಪ್ರಮುಖ ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಬಿಜೆಪಿ ಶಾಸಕರಾದ ದಿಲೀಪ್ ಘೋಷ್, ಅಗ್ನಿಮಿತ್ರಾ ಪಾಲ್, ಅಶೋಕ್ ಕೀರ್ತನಿಯಾ, ನಿಶಿತ್ ಪ್ರಮಾಣಿಕ್ ಮತ್ತು ಕ್ಷುದಿರಾಮ್ ತುಡು ಕೂಡ ರಾಜ್ಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ಪೈಕಿ ಅಗ್ನಿಮಿತ್ರಾ ಪಾಲ್ ಮತ್ತು ನಿಶಿತ್ ಪ್ರಮಾಣಿಕ್ ಅವರನ್ನು ಉಪಮುಖ್ಯಮಂತ್ರಿ ಸ್ಥಾನಕ್ಕೆ ಹೆಸರಿಸಲಾಗಿದೆ.

ಪ್ರಮಾಣ ವಚನ ಕಾರ್ಯಕ್ರಮಕ್ಕೆ ಜನಸಾಗರ

ಶನಿವಾರ ಈ ಸಮಾರಂಭವನ್ನು ವೀಕ್ಷಿಸಲು ರಾಜ್ಯದ ವಿವಿಧ ಭಾಗಗಳಿಂದ ಹಾಗೂ ದೇಶವಿದೇಶಗಳಿಂದಲೂ ಲಕ್ಷಾಂತರ ಸಂಖ್ಯೆಯಲ್ಲಿ ಬಿಜೆಪಿ ಬೆಂಬಲಿಗರು ಕೋಲ್ಕತ್ತಾಕ್ಕೆ ಹರಿದುಬಂದಿದ್ದರು. ಉತ್ತರ ಬಂಗಾಳ ಮತ್ತು ನೆರೆಯ ಜಾರ್ಖಂಡ್ ಸೇರಿದಂತೆ ಹಲವು ರಾಜ್ಯಗಳಿಂದಲೂ ಬೆಂಬಲಿಗರು ಆಗಮಿಸಿದ್ದರು. ದಶಕಗಳ ಕಾಲ ಎಡಪಕ್ಷ ಮತ್ತು ಕಳೆದ 15 ವರ್ಷಗಳಿಂದ ಟಿಎಂಸಿಯ ಭ ದ್ರಕೋಟೆಯಾಗಿದ್ದ ನಗರದ ಎಲ್ಲೆಡೆ ಬಿಜೆಪಿ ಧ್ವಜ ಮತ್ತು ಕೇಸರಿ ಧ್ವಜಗಳು ರಾರಾಜಿಸಿದವು. 294 ಸದಸ್ಯರ ವಿಧಾನಸಭೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆದ್ದು, ತೃಣಮೂಲ ಕಾಂಗ್ರೆಸ್‌ನ 15 ವರ್ಷದ ಆಡಳಿತಕ್ಕೆ ಅಂತ್ಯ ಹಾಡಿದೆ.

### ಕೊನೆಗೂ ದೀದಿ ಟಾಟಾ !

**ಹೋರಾಟಕ್ಕೆ ಹೆಸರುವಾಸಿಯಾದ ಪಶ್ಚಿಮ ಬಂಗಾಳ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಟಿಎಂಸಿ ಸೋಲನ್ನು ಒಪ್ಪಿಕೊಂಡಿರಲಿಲ್ಲ. ಆದರೆ ಶನಿವಾರ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ, ಮಮತಾ ಬ್ಯಾನರ್ಜಿ ಅವರು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನ ಬಯೋವನ್ನು ಬದಲಾಯಿಸಿದ್ದಾರೆ. ಇದು ದೀದಿ ಚುನಾವಣಾ ಸೋಲನ್ನು ಅಂತಿಮವಾಗಿ ಒಪ್ಪಿಕೊಂಡಿರುವ ಸಂಕೇತ ಎಂದು ಅನೇಕರು ಅಂದಾಜಿಸಿದ್ದಾರೆ.**

## ಶ್ಯಾಮ್‌ಪ್ರಸಾದ್ ಆಪ್ತನಿಗೆ ಗೌರವ

### ಹಿರಿಯ ಕಾರ್ಯಕರ್ತನ ಪಾದಕ್ಕೆ ನಮಸ್ಕರಿಸಿದ ಮೋದಿ

**ಕೋಲ್ಕತ್ತಾ:** 50ರ ದಶಕದಲ್ಲಿ ಜನಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ಅವರೊಂದಿಗೆ ಕಾಶ್ಮೀರದ ಶ್ರೀನಗರದಲ್ಲಿ ಭಾರತದ ಬಾವುಟ ಹಾರಿಸಿದ ಹಿರಿಯ ಕಾರ್ಯಕರ್ತ ಮಖನ್ ಲಾಲ್ ಸರ್ಕಾರ್ ಅವರು ಶನಿವಾರ ಸುವೇಂದು ಅಧಿಕಾರಿ ಅವರ ಪ್ರಮಾಣ ವಚನ ಸಮಾರಂಭದ ವೇದಿಕೆಯಲ್ಲಿ ಹಾಜರಿದ್ದು ಭಾವುಕ ಕ್ಷಣಗಳಿಗೆ ಸಾಕ್ಷಿಯಾದರು.

ವೇದಿಕೆಗೆ ಆಗಮಿಸುತ್ತಿದ್ದಂತೆ ಪ್ರಧಾನಿ ಮೋದಿ ಅವರು,98 ವರ್ಷದ ಮಖನ್‌ಲಾಲ್ ಸರ್ಕಾರ್ ಅವರ ಪಾದಮುಟ್ಟಿ ನಮಸ್ಕರಿಸಿದರು. ಬಳಿಕ ಶಾಲು ಹೊದಿಸಿ ಗೌರವಿಸಿ, ಪ್ರೀತಿಯ ಅಪ್ಪುಗೆ ನೀಡಿ ಶುಭ ಹಾರೈಸಿದರು. ಈ ನಡೆ ಅಲ್ಲಿ ನೆರೆದಿದ್ದ ಲಕ್ಷಾಂತರ ಜನರ ಮೆಚ್ಚುಗೆಗೆ ಪಾತ್ರವಾಯಿತು.

**ಮಖನ್‌ಲಾಲ್ ಸರ್ಕಾರ್ ಯಾರು?:** 98 ವರ್ಷದ ಮಖನ್‌ಲಾಲ್ ಸರ್ಕಾರ್ ಸರ್ಕಾರ್ ಅವರನ್ನು ಸ್ವಾತಂತ್ರ್ಯಾನಂತರದ ಭಾರತದ ರಾಷ್ಟ್ರೀಯವಾದಿ ಚಳವಳಿಯಲ್ಲಿ ತೊಡಗಿಸಿಕೊಂಡ ಆರಂಭಿಕ ಹಾಗೂ ತಳಮಟ್ಟದ ಕಾರ್ಯಕರ್ತರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. 1952ರಲ್ಲಿ ಕಾಶ್ಮೀರದಲ್ಲಿ ತ್ರಿವರ್ಣ ಧ್ವಜ ಹಾರಿಸುವ ಹೋರಾಟದಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿ ಅವರೊಂದಿಗೆ ಭಾಗವಹಿಸಿ ಸರ್ಕಾರ್ ಜೈಲುವಾಸ ಅನುಭವಿಸಿದ್ದರು. 1980ರಲ್ಲಿ ಬಿಜೆಪಿ ರಚನೆಯಾದ ನಂತರ, ಅವರನ್ನು ಪಶ್ಚಿಮ ದಿನಾಜ್‌ಪುರ, ಜಲ್ಪೈಗುರಿ ಮತ್ತು ಡಾರ್ಜಿಲಿಂಗ್ ಜಿಲ್ಲೆಗಳಿಗೆ ಸಂಘಟನಾ ಸಂಯೋಜಕರಾಗಿ ನೇಮಿಸಲಾಗಿತ್ತು. ಕೇವಲ ಒಂದೇ ವರ್ಷದೊಳಗೆ ಮಖನ್‌ಲಾಲ್ ಸರ್ಕಾರ್ ಅವರು ಸುಮಾರು 10,000 ಹೊಸ ಸದಸ್ಯರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1981ರಿಂದ ಸತತ 7 ವರ್ಷಗಳ ಕಾಲ ಅವರು ಜಿಲ್ಲಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಆ ಸಮಯದಲ್ಲಿ ಇದನ್ನು ಅಸಾಧಾರಣ ಸಾಧನೆ ಎಂದೇ ಪರಿಗಣಿಸಲಾಗಿತ್ತು. ಏಕೆಂದರೆ ಬಿಜೆಪಿ ನಾಯಕರು ಸಾಮಾನ್ಯವಾಗಿ 2 ವರ್ಷಗಳಿಗಿಂತ ಹೆಚ್ಚು ಕಾಲ ಯಾವುದೇ ಸಂಘಟನಾ ಹುದ್ದೆಯಲ್ಲಿ ಉಳಿಯುತ್ತಿರಲಿಲ್ಲ.

## ಸದ್ಯವೇ ಪೆಟ್ರೋಲ್, ಎಲ್‌ಪಿಜಿ ಬೆಲೆ ಏರಿಕೆ

**ದೆಹಲಿ:** ವಾಣಿಜ್ಯ ಸಿಲಿಂಡರ್ ಬೆಲೆ ಹೆಚ್ಚಳದಿಂದ ಈಗಾಗಲೇ ತತ್ತರಿಸಿರುವ ಜನಸಾಮಾನ್ಯರಿಗೆ ಶೀಘ್ರದಲ್ಲಿಯೇ ಮತ್ತೊಂದು ದೊಡ್ಡ ಶಾಕ್ ಕಾದಿದೆ.

ಜಾಗತಿಕ ಕಚ್ಚಾ ತೈಲ ಬೆಲೆಗಳು ಏರುತ್ತಿರುವುದರಿಂದ ತೈಲ ಮಾರುಕಟ್ಟೆ ಕಂಪನಿಗಳು ತಿಂಗಳಿಗೆ ಸುಮಾರು 30,000 ಕೋಟಿ ರೂ.ಗಳಷ್ಟು ಆರ್ಥಿಕ ನಷ್ಟವನ್ನು ಎದುರಿಸುತ್ತಿದ್ದು, ಮೇ 15ರ ಮೊದಲು ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಹೆಚ್ಚಿಸಲಾಗುವುದು ಎಂದು ಮೂಲಗಳು ತಿಳಿಸಿವೆ.



ಕೊಲ್ಲಿ ಯುದ್ಧದ ನಡುವೆ ಕಚ್ಚಾ ತೈಲ ಬೆಲೆಗಳು ಬ್ಯಾರೆಲ್‌ಗೆ ಸುಮಾರು 70 ಡಾಲರ್‌ನಿಂದ 126 ಡಾಲರ್‌ಗೆ ಏರಿದೆ. ಇಷ್ಟಾದರೂ ಭಾರತ ಇಲ್ಲಿಯವರೆಗೆ ಚಿಲ್ಲರೆ ಇಂಧನ ಬೆಲೆಗಳನ್ನುಸ್ಥಿರವಾಗಿರಿಸಿದೆ. ಸರಕಾರ ಮತ್ತು ತೈಲಕಂಪನಿಗಳು ಪ್ರಸ್ತುತ ಪೆಟ್ರೋಲ್‌ನಲ್ಲಿ ಪ್ರತಿ ಲೀಟರ್‌ಗೆ 24 ರೂ.ಗಳವರೆಗೆ ಭರಿಸುತ್ತಿವೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚಿನ ವಾರಗಳಲ್ಲಿ ಪೂರೈಕೆ ಅಡಚಣೆಗಳು, ಹಡಗು ಸಾಗಣೆ ಅಪಾಯಗಳು ಮತ್ತು ಮಧ್ಯಪ್ರಾಚ್ಯದಲ್ಲಿ ದೀರ್ಘಕಾಲದ ಅಸ್ಥಿರತೆಯ ಕಳವಳಗಳ ನಡುವೆ ಜಾಗತಿಕ ಕಚ್ಚಾ ತೈಲ ಬೆಲೆ ಏರುತ್ತಲೇ ಸಾಗಿದೆ. ವಿಶ್ವದ ಶೇ.20 ರಷ್ಟು ತೈಲ ಪೂರೈಕೆಯು ಹಾರ್ಮುಜ್ ಜಲಸಂಧಿ ಮೂಲಕವೇ ಸಾಗಲಿದ್ದು, ಇರಾನ್ ಮತ್ತು ಅಮೆರಿಕ ನಡುವಣ ತಿಕ್ಕಾಟದಿಂದ ಈ ಮಾರ್ಗ ಈಗಲೂ ಅಪಾಯಕಾರಿಯಾಗಿ ಉಳಿದಿದೆ. ಬೆಲೆ ಏರಿಕೆಗೆ ಅನುಮೋದನೆ ದೊರೆತರೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಲೀಟರ್‌ಗೆ ಸುಮಾರು 4ರಿಂದ 5 ರೂ.ಗಳಷ್ಟು ಹೆಚ್ಚಾಗಬಹುದು. ಆದರೆ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ 40ರಿಂದ 50 ರೂ.ಗಳಷ್ಟು ಹೆಚ್ಚಾಗಬಹುದು ಎನ್ನಲಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳಲಾಗಿದ್ದು 2022ರಿಂದ ಚಿಲ್ಲರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ.

ಆಪ್ ನಾಯಕರ ವಿರುದ್ಧ ಇಡಿ ಕಾರ್ಯಾಚರಣೆ

## ಪಂಜಾಬ್ ಸಚಿವನ ಮನೆ ಮೇಲೆ ಇಡಿ ದಾಳಿ: ಬಂಧನ

**ದೆಹಲಿ:** ಹೊಸದಾಗಿ ದಾಖಲಾಗಿರುವ ಹಣ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ ಶನಿವಾರ ಪಂಜಾಬ್ ಕೈಗಾರಿಕಾ ಸಚಿವ ಸಂಜೀವ್ ಅರೋರಾ ಮತ್ತು ಅವರೊಂದಿಗೆ ಸಂಪರ್ಕ ಹೊಂದಿದ್ದಾರೆ ಎನ್ನಲಾದ ಇತರರ ವಿರುದ್ಧ ಮತ್ತೆ ದಾಳಿ ನಡೆಸಿದೆ. ಸಂಜೀವ್ ಅರೋರಾ ಅವರನ್ನು ಇಡಿ ಮತ್ತೊಮ್ಮೆ ವಶಕ್ಕೆ ಪಡೆದಿದೆ.



ದಾಳಿಗೊಳಗಾದ ಐದು ಸ್ಥಳಗಳಲ್ಲಿ ಚಂಡೀಗಢದಲ್ಲಿರುವ ಅರೋರಾ ಅವರ ಅಧಿಕೃತ ನಿವಾಸವೂ ಸೇರಿದೆ. ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್ ಎಂಬ ಕಂಪನಿಯ ಕಚೇರಿಯೂ ಸೇರಿದಂತೆ ದೆಹಲಿ ಮತ್ತು ಗುರುಗ್ರಾಮ್ (ಹರಿಯಾಣ) ನಲ್ಲಿರುವ ಕಚೇರಿಗಳ ಮೇಲೆ ಇಡಿ ದಾಳಿ ನಡೆಸಿದೆ. ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ)ಯ ಕ್ರಿಮಿನಲ್ ವಿಭಾಗಗಳ ಅಡಿಯಲ್ಲಿ ಹೊಸ ಪ್ರಕರಣ ದಾಖಲಿಸಿದ ನಂತರ ಶೋಧಗಳನ್ನು ಪ್ರಾರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಏಪ್ರಿಲ್‌ನಲ್ಲಿ, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ)ಯಡಿ ಇಡಿ ಅರೋರಾ ಮತ್ತು ಅವರ ಸಂಬಂಧಿತ ಘಟಕಗಳ ಮೇಲೆ ದಾಳಿ ನಡೆಸಿತ್ತು. 62 ವರ್ಷದ ಅರೋರಾ, ಲುಧಿಯಾನ ಪಶ್ಚಿಮ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕರಾಗಿದ್ದಾರೆ. ದೆಹಲಿಯಲ್ಲಿರುವ ಅಸ್ತಿತ್ವದಲ್ಲಿಲ್ಲದ ಸಂಸ್ಥೆಗಳಿಂದ ಬಹು ನಕಲಿ ಜಿಎಸ್‌ಟಿ ಖರೀದಿ ಬಿಲ್‌ಗಳನ್ನು ಪಡೆಯಲಾಗಿದೆ ಎಂದು ಆರೋಪಿಸಲಾಗಿದೆ.

### ತಲೆ ಬಾಗಲ್ಲ: ಮಾನ್

**ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಈ ಕ್ರಮಕ್ಕೆ ಪ್ರತಿಕ್ರಿಯಿಸಿ, ಪಂಜಾಬ್, ಮೋದಿಯ ತಂತ್ರಗಳಿಗೆ ಎಂದಿಗೂ ತಲೆಬಾಗುವುದಿಲ್ಲ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇಡಿ-ಬಿಜೆಪಿಯ ಈ ಅನೈತಿಕ ಮೈತ್ರಿಯ ಅಂತ್ಯ ಪಂಜಾಬ್‌ನಿಂದ ಆರಂಭವಾಗಲಿದೆ ಎಂದು ಅವರು ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಇಡಿ ಕಳೆದ ಕೆಲವು ವಾರಗಳಲ್ಲಿ ಪಂಜಾಬ್‌ನಲ್ಲಿ ರಾಜಕೀಯವಾಗಿ ಸಂಪರ್ಕ ಹೊಂದಿರುವ ವ್ಯಕ್ತಿಗಳ ವಿರುದ್ಧ ಕಾರ್ಯಾಚರಣೆ ನಡೆಸಿದೆ.**

1,000 ಕೈದಿಗಳ ವಿನಿಮಯಕ್ಕೆ ನಿರ್ಧಾರ

## ರಷ್ಯಾ-ಉಕ್ರೇನ್ ಮಧ್ಯೆ ಮೂರು ದಿನಗಳ ಕದನ ವಿರಾಮ: ಟ್ರಂಪ್

**ವಾಷಿಂಗ್ಟನ್:** ಇರಾನ್ ವಿರುದ್ಧವನ್ನು ಅಂತ್ಯಗೊಳಿಸಲು ಪರದಾಡುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ ರಷ್ಯಾ-ಉಕ್ರೇನ್ ನಡುವೆ 3 ದಿನಗಳ ತಾತ್ಕಾಲಿಕ ಕದನ ವಿರಾಮವನ್ನು ಘೋಷಿಸಿದ್ದಾರೆ. ಮೇ 9ರಿಂದ 11 ರವೆಗೆ ಕದನ ವಿರಾಮ ಘೋಷಿಸಲಾಗಿದೆ.

ಉಭಯದೇಶಗಳ ನಾಯಕರೊಂದಿಗೆ ಮಾತುಕತೆ ನಡೆಸಿದ್ದು, ಪರಸ್ಪರ ಒಪ್ಪಿಗೆಯ ಮೇರೆಗೆ ಮೇ9ರಿಂದ ಮೇ11ರವರೆಗೆ 3 ದಿನಗಳ ಕದನವಿರಾಮ ಘೋಷಿಸುತ್ತಿರುವುದಾಗಿ ಡೊನಾಲ್ಡ್ ಟ್ರಂಪ್ ಟ್ರುತ್ ಸೋಶಿಯಲ್ ಮೂಲಕ ಘೋಷಣೆ ಮಾಡಿದ್ದಾರೆ.

ಈ ಕುರಿತು ಟ್ರುತ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, 2ನೇ ಮಹಾಯುದ್ಧದ ಕುರಿತಂತೆ ರಷ್ಯಾದಲ್ಲಿ ವಿಜಯ ದಿನವನ್ನು ಆಚರಿಸಲಾಗುತ್ತಿದೆ. ಯುದ್ಧದಲ್ಲಿ ಭಾಗಿಯಾಗಿದ್ದ ಉಕ್ರೇನ್‌ನಲ್ಲಿಯೂ ಆಚರಣೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ನನ್ನ ಕೋರಿಕೆಯ ಮೇರೆಗೆ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಉಕ್ರೇನಿಯನ್ ಅಧ್ಯಕ್ಷ ಝೆಲೆನ್ಸ್ಕಿ ಇಬ್ಬರೂ ಸಹ ಯುದ್ಧಕ್ಕೆ ಮೂರು ದಿನಗಳ ಕದನ ವಿರಾಮ ಜಾರಿ ಮಾಡಲು ಪರಸ್ಪರ ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಿದ್ದಾರೆ. ಈ ಕದನವಿರಾಮದ ಸಮಯದಲ್ಲಿ ಉಭಯದೇಶಗಳ ನಡುವಿನ ಎಲ್ಲಾ ರೀತಿಯ ಚಲನಶೀಲ ಚಟುವಟಿಕೆಗಳನ್ನು ಸ್ಥಗಿತಗೊಳಿಸುವುದರ ಜೊತೆಗೆ ಪರಸ್ಪರ ಎರಡೂ ದೇಶಗಳಲ್ಲಿ ಬಂಧಿಸಲಾಗಿರುವ ಯುದ್ಧ ಕೈದಿಗಳ ಪೈಕಿ ಪ್ರತಿ ದೇಶದಿಂದ 1,000 ಕೈದಿಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ ಎಂದು ಟ್ರಂಪ್ ಹೇಳಿದ್ದಾರೆ.

ಈ ಮಾಹಿತಿಯನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಸಹ ಅಧಿಕೃತವಾಗಿ ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಮೇ 9ರಿಂದ ಮೇ 11ರವರೆಗೆ ರಷ್ಯಾದೊಂದಿಗೆ ಕದನವಿರಾಮ ಮಾಡಿಕೊಳ್ಳುತ್ತಿದ್ದು, ಇದರ ಭಾಗವಾಗಿ ಯುದ್ಧದಲ್ಲಿ ಸೆರೆಯಾದ 1,000 ಕೈದಿಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಫಲಪ್ರದ ರಾಜತಾಂತ್ರಿಕ ಮಾತುಕತೆಗಳಲ್ಲಿ ಒಳಗೊಂಡಿರುವುದಕ್ಕೆ ಅಮೆರಿಕ ಅಧ್ಯಕ್ಷರು ಹಾಗೂ ಅವರ ತಂಡಕ್ಕೆ ನಾನು ಧನ್ಯವಾದ ಹೇಳುತ್ತೇನೆ ಎಂದು ಝೆಲೆನ್ಸ್ಕಿ ತಿಳಿಸಿದ್ದಾರೆ. ರಷ್ಯಾ ಸಹ ಈ ಕದನವಿರಾಮ ಘೋಷಣೆಯನ್ನು ಖಚಿತಪಡಿಸಿದೆ.

ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದ ಮಿಲಿಟರಿ ಸಲಹೆಗಾರನಿಗೆ ಅತ್ಯುನ್ನತ ಗೌರವ

## ರಾಜಾ ಸುಬ್ರಮಣಿ ರಕ್ಷಣಾ ಪಡೆ ನೂತನ ಮುಖ್ಯಸ್ಥ

**ದೆಹಲಿ:** ದೇಶದ ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರನ್ನಾಗಿ ಲೆಫ್ಟಿನೆಂಟ್ ಜನರಲ್ ಎನ್.ಎಸ್ ರಾಜಾ ಸುಬ್ರಮಣಿ (ನಿವೃತ್ತ) ಅವರನ್ನು ಕೇಂದ್ರ ಸರಕಾರ ನೇಮಕ ಮಾಡಿದೆ. ಇದಲ್ಲದೆ, ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನು ನೇಮಕ ಮಾಡಿದೆ.

ಮೇ 30 ರಂದು ಸಿಡಿಎಸ್ ಆಗಿ ತಮ್ಮ ಅಧಿಕಾರಾವಧಿಯನ್ನು ಪೂರ್ಣಗೊಳಿಸಲಿರುವ ಜನರಲ್ ಅನಿಲ್ ಚೌಹಾಣ್ ಅವರ ಸ್ಥಾನವನ್ನು ರಾಜಾ ಸುಬ್ರಮಣಿ ವಹಿಸಿಕೊಳ್ಳಲಿದ್ದಾರೆ. ಲೆಫ್ಟಿನೆಂಟ್ ಜನರಲ್ ಸುಬ್ರಮಣಿ ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ವರ್ಷ ಜುಲೈ 31 ರಂದು ಅವರು ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಸೇನೆಯಿಂದ ನಿವೃತ್ತರಾಗಿದ್ದರು.

ಯಾರು ಈ ಎನ್.ಎಸ್. ರಾಜಾ ಸುಬ್ರಮಣಿ ?

ಲೆಫ್ಟಿನೆಂಟ್ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅವರು ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಮಿಲಿಟರಿ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್ 1 ರಂದು ಅವರು ಈ ಜವಾಬ್ದಾರಿ ವಹಿಸಿಕೊಂಡಿದ್ದರು. ಅದಕ್ಕೂ ಮೊದಲು, ಜುಲೈ 2024 ರಿಂದ ಜುಲೈ 2025 ರವರೆಗೆ ಭೂಸೇನೆಯ ಉಪ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಮಾರ್ಚ್ 2023ರಿಂದ ಜೂನ್ 2024 ರವರೆಗೆ ಸೆಂಟ್ರಲ್ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿಯೂ ಕಾರ್ಯನಿರ್ವಹಿಸಿ ದಕ್ಷ ಅಧಿಕಾರಿಯಾಗಿ ಹೆಸರು ಪಡೆದಿದ್ದಾರೆ. ರಾಜಾ ಸುಬ್ರಮಣಿ ಅವರನ್ನು ಮೊದಲಿಗೆ 1985ರ ಡಿ. 14 ರಂದು ಗರ್ವಾಲ್ ರೈಫಲ್ಸ್‌ನ 8ನೇ ಬೆಟಾಲಿಯನ್‌ಗೆ ನಿಯೋಜಿಸಲಾಗಿತ್ತು.

**ರಾಜಾ ಸುಬ್ರಮಣಿ ಪಡೆದ ಗೌರವ, ಪದಕಗಳು**

ಭಾರತೀಯ ಸೇನೆಯಲ್ಲಿನ ಸುಬ್ರಮಣಿ ಅವರ 39 ವರ್ಷಗಳ ಸುದೀರ್ಘ ಮತ್ತು ನಿಷ್ಠಾವಂತ ಸೇವೆ ಪರಿಗಣಿಸಿ ಅವರಿಗೆ ಹಲವು ಪ್ರತಿಷ್ಠಿತ ಸೇನಾ ಗೌರವಗಳನ್ನು ನೀಡಲಾಗಿದೆ. ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ, ಸೇನಾ ಪದಕ ಮತ್ತು ವಿಶಿಷ್ಟ ಸೇವಾ ಪದಕ ಸೇರಿದಂತೆ ಹಲವು ಶೌರ್ಯ ಮತ್ತು ಸೇವಾ ಪದಕಗಳು ಅವರ ಮುಡಿಗೇರಿವೆ. ಮೇ 30 ರಂದು ಜನರಲ್ ಅನಿಲ್ ಚೌಹಾಣ್ ನಿವೃತ್ತರಾದ ಬಳಿಕ ಸುಬ್ರಮಣಿ ಅವರು ಅಧಿಕಾರ ಸ್ವೀಕರಿಸಲಿದ್ದಾರೆ.

'ಆಪರೇಷನ್ ರೈನೋ' ಭಾಗವಾಗಿ ಅಸ್ಸಾಂನಲ್ಲಿ ದಂಗೆ ನಿಗ್ರಹ, 16 ಗರ್ವಾಲ್ ರೈಫಲ್ಸ್ ಮತ್ತು ಜಮ್ಮು ಕಾಶ್ಮೀರದಲ್ಲಿ 168 ಪದಾತಿ ದಳ ಹಾಗೂ ಕೇಂದ್ರ ವಲಯದಲ್ಲಿ 17 ಪರ್ವತ ವಿಭಾಗವನ್ನು ಸವಾಲಿನ ಕಾರ್ಯಾಚರಣೆ ವೇಳೆಯೂ ಮುನ್ನಡೆಸಿದ್ದರು.

### ನೌಕಾಪಡೆಗೂ ಹೊಸ ಮುಖ್ಯಸ್ಥ

**ಮತ್ತೊಂದು ಪ್ರಮುಖ ಮಿಲಿಟರಿ ನೇಮಕಾತಿಯಲ್ಲಿ, ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನು ಭಾರತೀಯ ನೌಕಾಪಡೆಯ ಮುಂದಿನ ಮುಖ್ಯಸ್ಥರನ್ನಾಗಿ ನೇಮಿಕ ಮಾಡಲಾಗಿದೆ. ಅವರು ಪ್ರಸ್ತುತ ಪಶ್ಚಿಮ ನೌಕಾ ಕಮಾಂಡರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೇ 31 ರಂದು ನೌಕಾ ಸಿಬ್ಬಂದಿಯ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅಡ್ಮಿರಲ್ ಸ್ವಾಮಿನಾಥನ್ 1987 ರ ಜು.1 ರಿಂದ ಭಾರತೀಯ ನೌಕಾಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

## ಸಚಿವ ಪುತ್ರನ ವಿರುದ್ಧ ಪೋಕ್ಸೋ ಪ್ರಕರಣ

**ಹೈದರಾಬಾದ್:** 17 ವರ್ಷದ ಬಾಲಕಿ ಜೊತೆ ಒತ್ತಾಯಪೂರ್ವಕ ಅನೈತಿಕ ಸಂಬಂಧದಲ್ಲಿ ಇದ್ದ ಆರೋಪದ ಮೇಲೆ ಕೇಂದ್ರ ಸಚಿವ ಬಂಡಿ ಸಂಜಯ್ ಕುಮಾರ್ ಅವರ ಪುತ್ರನ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸ ಲಾಗಿದೆ. ಬಂಡಿ ಸಂಜಯ್ ಕುಮಾರ್ ಅವರ ಪುತ್ರ ಭಾಗೀರಥ್ ಅವರು ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಹೈದರಾಬಾದ್‌ನ ಪೆಟ್ ಬಶೀರಾಬಾದ್ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ತಮ್ಮ ವಿರುದ್ಧದ ಆರೋಪಗಳನ್ನು ಸ್ಪಷ್ಟವಾಗಿ ನಿರಾಕರಿಸಿದ ಭಾಗೀರಥ್ ಅವರು, ಹದಿಹರೆಯದ ಬಾಲಕಿ ಹಾಗೂ ಆಕೆಯ ಪೋಷಕರಿಂದ ಸುಲಿಗೆ ಮತ್ತು ಕ್ರಿಮಿನಲ್ ಬೆದರಿಕೆ ಆರೋಪ ಹೊರಿಸಿದ್ದಾರೆ. 17 ವರ್ಷದ ಬಾಲಕಿಯ ತಾಯಿಯ ಪ್ರಕಾರ, ಆಕೆಯ ಮಗಳ ಜೊತೆ ಸಂಬಂಧ ಹೊಂದಿದ್ದ ಸಂಜಯ್ ಕುಮಾರ್ ಅವರ ಮಗ ಭಾಗೀರಥ್, ಆಕೆಯ ಮೈಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ.

## ಶ್ವೇತಭವನದಲ್ಲಿ ಮೊಳಗಿದ ವೈದಿಕ ಪಠಣ

**ವಾಷಿಂಗ್ಟನ್:** ಸಾರ್ವತ್ರಿಕ ಶಾಂತಿಗಾಗಿ ಅಮೆರಿಕದ ಶ್ವೇತ ಭವನದಲ್ಲಿ ವೈದಿಕ ಪ್ರಾರ್ಥನೆ ಹಾಗೂ ಪಠಣ ಮೊಳಗಿತು..ರಾಷ್ಟ್ರೀಯ ಪ್ರಾರ್ಥನಾ ದಿನದಂದು ಅಮೆರಿಕದ ದೇವಾಲಯವೊಂದರ ಸ್ವಯಂಸೇವಕರೊಬ್ಬರು ಶ್ವೇತಭವನದ ಸಭಾಂಗಣದಲ್ಲಿ ಶಾಂತಿಗಾಗಿ ವೈದಿಕ ಪ್ರಾರ್ಥನೆಯ ಪಠಣ ಮಾಡಿದರು. ನ್ಯೂಜೆರ್ಸಿಯ ರಾಬಿನ್ಸ್ ವಿಲ್ಲೆಯಲ್ಲಿರುವ ಬೋಚಸನ್ವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ (ಬಿಎಪಿಎಸ್) ದೇವಾಲಯದ ಸ್ವಯಂಸೇವಕ ಶ್ವೇತಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 'ರಾಷ್ಟ್ರೀಯ ಪ್ರಾರ್ಥನಾ ದಿನದಂದು, ಅಮೆರಿಕದ ನಿರಂತರ ಪ್ರಾರ್ಥನೆ, ನಂಬಿಕೆ ಮತ್ತು ಸರ್ವಶಕ್ತ ದೇವರ ಮೇಲಿನ ನಂಬಿಕೆಯನ್ನು ಗೌರವಿಸುತ್ತೇವೆ. ದೇವರು ಜನರಿಗೆ ಮತ್ತು ನಮ್ಮ ದೇಶಕ್ಕೆ ದಯಪಾಲಿಸಿರುವ ಅಸಂಖ್ಯಾತ ಆಶೀರ್ವಾದಗಳನ್ನು ಎಂದಿಗೂ ಮರೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತೇವೆ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

## ಮೋದಿ ಇಂದು ಬೆಂಗ್ಳೂರಿಗೆ

← ಮೊದಲ ಪುಟದಿಂದ ಸಂಚಾರ ನಿರ್ಬಂಧ: ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ವಾಹನ ಸವಾರರ ಅನುಕೂಲಕ್ಕಾಗಿ ಬೆಂಗಳೂರು ಸಂಚಾರ ಪೊಲೀಸರು ಸಂಚಾರ ನಿರ್ಬಂಧ ಹಾಗೂ ಪರ್ಯಾಯ ಮಾರ್ಗಗಳ ಮಾಹಿತಿ ನೀಡಿದ್ದಾರೆ. ಎಚ್ಎಎಲ್ ವಿಮಾನ ನಿಲ್ದಾಣ ಎಕ್ಸಿಟ್ ರಸ್ತೆಯಲ್ಲಿ ಹಳೆಯ ವಿಮಾನ ನಿಲ್ದಾಣ ರಸ್ತೆಯಿಂದ ಡಿಜಿಸಿಎ ಕಚೇರಿವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. ಎಚ್‌ಎಎಲ್ ವಿಮಾನ ನಿಲ್ದಾಣ ಗೇಟ್ ನಂ.30 ರಸ್ತೆಯಲ್ಲಿ ಅಂಬ್ರೆಲಾ ಜಂಕ್ಷನ್‌ನಿಂದ ಗೇಟ್ ನಂ.30ರವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ನಿರ್ಬಂಧಿತ ರಸ್ತೆಗಳು: ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಎಸ್.ಡಿ ರಸ್ತೆ ಜಂಕ್ಷನ್‌ನಿಂದ ಟ್ರಿನಿಟಿ ಜಂಕ್ಷನ್‌ವರೆಗೆ. ಎಚ್‌ಎಎಲ್ ವಿಮಾನ ನಿಲ್ದಾಣ ಗೇಟ್ ನಂ.30 ರಸ್ತೆಯಲ್ಲಿ ಅಂಬ್ರೆಲಾ ಜಂಕ್ಷನ್‌ನಿಂದ ಗೇಟ್ ನಂ.30ರವರೆಗೆ, ಎಚ್‌ಎಎಲ್ ವಿಮಾನ ನಿಲ್ದಾಣ ಎಕ್ಸಿಟ್ ರಸ್ತೆಯಲ್ಲಿ ಹಳೆಯ ವಿಮಾನ ನಿಲ್ದಾಣ ರಸ್ತೆಯಿಂದ ಡಿಜಿಸಿಎ ಕಚೇರಿವರೆಗೆ ವಾಹನ ನಿಲುಗಡೆ ನಿಷೇಧಿಸಲಾಗಿದೆ.

**ಮೋದಿ ಅವರ ವರ್ಚಸ್ಸು, ಅವರ ಜಾಣ್ಮೆ, ಚಾಣಕ್ಯತನ ನಮಗೆ ಉಪಯೋಗವಾಗಿದೆ. ವಿಮಾನ ನಿಲ್ದಾಣಕ್ಕೆ ಬರುವ ಅವರು ಇಲ್ಲಿ 30 ನಿಮಿಷ ಕಾಲ ಭಾಷಣ ಮಾಡುತ್ತಾರೆ. ಈ ವೇಳೆ ಮೋದಿ ಅವರಿಗೆ ಮೈಸೂರು ಪೇಟ ತೊಡಿಸಿ, ರೇಷ್ಮೆ ಶಾಲು ಹೊದಿಸಿ ಗೌರವಿಸುತ್ತೇವೆ.**

**-ಆರ್.ಅಶೋಕ, ಪ್ರತಿಪಕ್ಷ ನಾಯಕ**

## ಇಂದು ವಿಜಯ ಪ್ರಮಾಣ

← ಮೊದಲ ಪುಟದಿಂದ ಈ ಮಧ್ಯೆ ತಮಿಳುನಾಡಿನಲ್ಲಿ ವಿಜಯ್ ಅಭಿಮಾನಿಗಳು ರಾಜ್ಯಪಾಲರ ವಿರುದ್ಧ ರೊಚ್ಚಿಗೆದ್ದಿದ್ದರು. ಮೇ 4ರ ಸೋಮವಾರ ಪ್ರಕಟವಾದ ಫಲಿತಾಂಶದಲ್ಲಿ ಟಿವಿಕೆ ಪಕ್ಷಕ್ಕೆ 108 ಸ್ಥಾನ ಲಭಿಸಿತ್ತು. ಇದರಲ್ಲಿ ವಿಜಯ್ 2 ಸ್ಥಾನ ಗೆದ್ದಿರುವುದರಿಂದ ಅದರಲ್ಲಿ ಒಂದನ್ನು ಮಾತ್ರ ಪರಿಗಣಿಸಲಾಗುತ್ತದೆ. ಹಾಗಾಗಿ ಅವರ ಬಳಿ 107 ಸ್ಥಾನವಿತ್ತು. ಕಾಂಗ್ರೆಸ್ ಬೆಂಬಲದೊಂದಿಗೆ ವಿಜಯ್ ಬೆಂಬಲಿಗ ಶಾಸಕರ ಸಂಖ್ಯೆ 112ಕ್ಕೇರಿತು. ಇದನ್ನಿಟ್ಟುಕೊಂಡು ಬುಧವಾರ ವಿಜಯ್ ಲೋಕಭವನಕ್ಕೆ ಹೋದಾಗ, ರಾಜ್ಯಪಾಲರು 118 ಶಾಸಕರ ಪಟ್ಟಿಯೊಂದಿಗೆ ಬನ್ನಿ ಎಂದರು. ಗುರುವಾರದ ಭೇಟಿಯಲ್ಲೂ ಅದೇ ಪುನರಾವರ್ತನೆಯಾಯಿತು. ಶುಕ್ರವಾರ 118 ಶಾಸಕರೊಂದಿಗೆ ವಿಜಯ್ ಹೋಗಿದ್ದರೂ ದಿಢೀರನೆ ವಿಸಿಕೆ ಬೆಂಬಲ ವಾಪಸ್ ಪಡೆಯಿತು. ಎಎಂಎಂಕೆ ಪಕ್ಷ ತನ್ನೊಬ್ಬ ಶಾಸಕನ ಸಹಿಯನ್ನು ನಕಲು ಮಾಡಲಾಗಿದೆ ಎಂದು ಆರೋಪಿಸಿತು. ಅಲ್ಲಿಗೆ ವಿಜಯ್‌ಗೆ ಇದ್ದ ಬೆಂಬಲ 116ಕ್ಕೆ ಕುಸಿಯಿತು. ಶನಿವಾರ ವಿಸಿಕೆ ಮತ್ತು ಐಯುಎಂಎಲ್ ಪಕ್ಷಗಳು ತಮ್ಮ 4 ಶಾಸಕರ ಬೆಂಬಲವನ್ನು ಅಧಿಕೃತವಾಗಿ ನೀಡಿದರು. ರಾಜ್ಯಪಾಲರು ವಿಜಯ್ ಬೆನ್ನು ತಟ್ಟಿ ಪ್ರಮಾಣವಚನಕ್ಕೆ ಸಮ್ಮತಿಸಿದರು.

ಇವೆಲ್ಲದರ ಪರಿಣಾಮ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳ

## ಕೇರಳ: ಸಿಎಂ ಆಯ್ಕೆಗೆ ಖರ್ಗೆ ನಿವಾಸದಲ್ಲಿ ಚರ್ಚೆ

**ಕೇರಳ ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದಂತೆ ಶನಿವಾರ ದೆಹಲಿಯ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ಬಿರುಸಿನ ಚರ್ಚೆ ನಡೆದಿದೆ. ರಾಹುಲ್ ಗಾಂಧಿ, ಕೇರಳ ಮುಖ್ಯಮಂತ್ರಿ ಆಕಾಂಕ್ಷಿಗಳಾದ ವೇಣುಗೋಪಾಲ್, ವಿ.ಡಿ.ಸತೀಶನ್, ರಮೇಶ್ ಚೆನ್ನಿತ್ತಲ ಮಾತುಕತೆಯಲ್ಲಿ ಭಾಗವಹಿಸಿದ್ದಾರೆ. ತೀವ್ರ ಪೈಪೋಟಿಯಿರುವುದರಿಂದ ಇನ್ನೂ ನಿರ್ಧಾರ ಪ್ರಕಟವಾಗಿಲ್ಲ.**

ಮೈತ್ರಿ ಮಾತುಕತೆ ಮೂಲೆಗುಂಪಾಗಿದೆ. ಕಾಂಗ್ರೆಸ್, ಸಿಪಿಐ, ಸಿಪಿಎಂ, ವಿಸಿಕೆ ಮತ್ತು ಐಯುಎಂಎಲ್ ಬೆಂಬಲದೊಂದಿಗೆ ಒಟ್ಟಾರೆ ಬೆಂಬಲಿಗ ಶಾಸಕರ ಸಂಖ್ಯೆ 121ಕ್ಕೇರಿದೆ. ಆರಂಭದಲ್ಲಿ ವಿಸಿಕೆ ಬೆಂಬಲ ನೀಡಿದ್ದರೂ, ವಿಜಯ್ ಪಕ್ಷದ ನಾಯಕರನ್ನು ನೇರವಾಗಿ ಭೇಟಿಯಾಗದೇ ವಾಟ್ಸ್‌ಆ್ಯಪ್‌ನಲ್ಲಿ ಮಾತುಕತೆ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಹಿಂದೆ ಸರಿದಿತ್ತು. ಶನಿವಾರ ಗೊಂದಲಗಳು ಇತ್ಯರ್ಥಗೊಂಡಿವೆ. ಟಿವಿಕೆ ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನಗೆ ವಿಸಿಕೆ ಮುಖ್ಯಸ್ಥ ತಿರುಮಾವಳವನ್ ಬೆಂಬಲ ಪತ್ರ ನೀಡಿದ್ದಾರೆ. ವಿಸಿಕೆ ಬೆಂಬಲ ವ್ಯಕ್ತವಾಗುತ್ತಿದ್ದಂತೆ ಟಿವಿಕೆ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮ ವ್ಯಕ್ತಪಡಿಸಿದ್ದಾರೆ.

## ಟಾಗೋರ್ ಭಾರತೀಯ ನಾಗರಿಕತೆಯ ಕಾಲಾತೀತ ಧ್ವನಿ

**ದೆಹಲಿ:** ರವೀಂದ್ರನಾಥ ಟಾಗೋರ್ ಅವರ ಜನ್ಮದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಗೌರವ ನಮನ ಸಲ್ಲಿಸಿದ್ದಾರೆ. ಟಾಗೋರ್ ಅವರನ್ನು ಭಾರತೀಯ ನಾಗರಿಕತೆಯ ಕಾಲಾತೀತ ಧ್ವನಿ ಎಂದು ಬಣ್ಣಿಸಿರುವ ಪ್ರಧಾನಿ, ಸಾಹಿತ್ಯ ಮತ್ತು ಸಂಸ್ಕೃತಿಗೆ ಅವರು ನೀಡಿದ ಅನನ್ಯ ಕೊಡುಗೆಯನ್ನು ಸ್ಮರಿಸಿದ್ದಾರೆ. ಬಂಗಾಳಿ ಕ್ಯಾಲೆಂಡರ್‌ನ 'ಪೊಚಿಸ್ ಬೋಯಿಶಾಖಿ' ದಿನದಂದು ಆಚರಿಸಲಾಗುವ ಈ ಸಂದರ್ಭದಲ್ಲಿ, ಗುರುದೇವ ಟಾಗೋರ್ ಒಬ್ಬ ಅಸಾಧಾರಣ ಪ್ರತಿಭೆಯ ಲೇಖಕ, ಚಿಂತಕ, ದಾರ್ಶನಿಕ ಮತ್ತು ಶ್ರೇಷ್ಠ ಶಿಕ್ಷಣತಜ್ಞರಾಗಿದ್ದರು ಎಂದು ಮೋದಿ ಅವರು ಶ್ಲಾಘಿಸಿದ್ದಾರೆ.

ಬಂಗಾಳಿ ಕ್ಯಾಲೆಂಡರ್‌ನ ವೈಶಾಖ ಮಾಸದ 25ನೇ ದಿನವಾದ 'ಪೊಚಿಸ್ ಬೋಯಿಶಾಖಿ ದಿನದಂದು ಆಚರಿಸಲಾಗುವ ರವೀಂದ್ರ ಜಯಂತಿಯ ಈ ವಿಶೇಷ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣ 'ಎಕ್ಸ್' ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಗುರುದೇವ ಟಾಗೋರ್ ಅವರು ಅಸಾಧಾರಣ ಪ್ರತಿಭೆಯುಳ್ಳ ಲೇಖಕ, ಚಿಂತಕ ಮತ್ತು ಕವಿಯಾಗಿದ್ದರು. ಅವರು ಅಪ್ರತಿಮ ದಾರ್ಶನಿಕ, ಶಿಕ್ಷಣ ತಜ್ಞ ಮತ್ತು ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ ಎಂದು ಶ್ಲಾಘಿಸಿದ್ದಾರೆ.

## ಸಮಾಚಾರ ಸಣ್ಣದಲ್ಲ

### ವ್ಯಸನ ಮುಕ್ತ ಕೇಂದ್ರಕ್ಕೆ ಡಿಸಿ ಶ್ರೀರೂಪ ಭೇಟಿ

**ಚಾಮರಾಜನಗರ:** ಜಿಲ್ಲಾಧಿಕಾರಿ ಶ್ರೀರೂಪ ಅವರು ಬುಧವಾರ ಚಾಮರಾಜನಗರ ಪಟ್ಟಣದಲ್ಲಿರುವ ಸ್ಪಂದನ ವ್ಯಸನ ಮುಕ್ತ ( ಡಿ-ಅಡಿಕ್ಷನ್) ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಪರಿಶೀಲಿಸಿದರು. ಕೇಂದ್ರದಲ್ಲಿದ್ದ ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿದ ಜಿಲ್ಲಾಧಿಕಾರಿಯವರು ಮದ್ಯಪಾನದಿಂದ ದೂರವಿದ್ದು ಆರೋಗ್ಯಕರ ಜೀವನ ನಡೆಸುವಂತೆ ಸಲಹೆ ನೀಡಿದರು. ಚಿಕಿತ್ಸೆ ಪೂರ್ಣಗೊಂಡ ಬಳಿಕ ತಮ್ಮ ಗ್ರಾಮಗಳಲ್ಲಿ ಇತರರಿಗೂ ಮದ್ಯವ್ಯಸನ ತ್ಯಜಿಸಲು ಪ್ರೇರಣೆ ನೀಡುವಂತೆ ಕರೆ ನೀಡಿದರು. ಪ್ರಸ್ತುತ ಕೇಂದ್ರದಲ್ಲಿ 12 ಮಂದಿ ವ್ಯಸನಮುಕ್ತಿಗಾಗಿ ಚಿಕಿತ್ಸೆ ಪಡೆಯುತ್ತಿದ್ದು, ಈ ಸಂದರ್ಭದಲ್ಲಿ ಕೇಂದ್ರದ ದಾಖಲೆಗಳನ್ನು ಪರಿಶೀಲಿಸಿ ಚಿಕಿತ್ಸಾ ಹಾಗೂ ಪುನರ್ವಸತಿ ಕಾರ್ಯಗಳ ಕುರಿತು ಜಿಲ್ಲಾಧಿಕಾರಿಯವರು ಮಾಹಿತಿ ಪಡೆದುಕೊಂಡರು. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಪಿ.ಚಂದ್ರಶೇಖರ್, ಆರೋಗ್ಯ ಸಿಬ್ಬಂದಿ ಭಾಗ್ಯ ಇತರರು ಇದ್ದರು.

### ಮಕ್ಕಳ ಪ್ರತಿಭೆ ಬೆಳವಣಿಗೆಗೆ ಪ್ರೋತ್ಸಾಹ ಅಗತ್ಯ

**ಚಾಮರಾಜನಗರ:** ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಪೊಲೀಸ್ ಕಲ್ಯಾಣ ಕಾರ್ಯಕ್ರಮದಡಿ ಆಯೋಜಿಸಲಾದ ''ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರ೩೬2026''ಕ್ಕೆ ಇಂದು ಡಿಎಆರ್‌ಕೇಂದ್ರಸ್ಥಾನ ಆವರಣದ ಪೊಲೀಸ್ ಭವನದಲ್ಲಿ ಚಾಲನೆ ನೀಡಲಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಬೇಸಿಗೆ ಶಿಬಿರದಲ್ಲಿ ವಿವಿಧ ಸಾಂಸ್ಕೃತಿಕ, ಕ್ರೀಡಾ ಹಾಗೂ ವ್ಯಕ್ತಿತ್ವ ವಿಕಸನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳು ಹೆಚ್ಚು ಪ್ರೋತ್ಸಾಹದಾಯಕ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅವರ ಜ್ಞಾನ ಮತ್ತು ಸಾಮರ್ಥ್ಯ ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಮಕ್ಕಳು ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ವಹಿಸಿ ತಮ್ಮ ಪ್ರತಿಭೆಯನ್ನು ಬೆಳಗಿಸಬೇಕು. ಶಿಬಿರಗಳು ಮಕ್ಕಳ ಆತ್ಮವಿಶ್ವಾಸ ಮತ್ತು ಕೌಶಲ್ಯ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಅವರು ಹೇಳಿದರು. ಹೆಚ್ಚುವರಿ ಪೊಲೀಸ್ ವರಿಷ್ಟಾಧಿಕಾರಿ ಎಂ.ಎನ್. ಶಶಿಧರ್,ಡಿವೈಎಸ್ಪಿ ಸೋಮಣ್ಣ, ಕಲಾವಿದರಾದ ಕಿರಣ್ ಗಿರ್ಗಿ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಇಂದು ಕೃತಕ ಕೈ-ಕಾಲು ಜೋಡಣಾ ಶಿಬಿರ

**ಚಾಮರಾಜನಗರ:** ರೋಟರಿ ಸಂಸ್ಥೆ ವತಿಯಿಂದ ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರವು ಮೇ 10 ರಂದು ನಡೆಯಲಿದೆ ಎಂದು ರೋಟರಿ ಸಂಸ್ಥೆಯ ಜಿಲ್ಲಾ ಮಾಜಿ ಗೌರರ್‌ಡಾ.ನಾಗಾರ್ಜನ್ ತಿಳಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ. ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ನಗರದ ಬಿ.ರಾಚಯ್ಯ.... ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಬೆಳಗ್ಗೆ 9-30 ಕ್ಕೆ ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ 100 ಮಂದಿ ನೋಂದಾಯಿಸಿಕೊಂಡಿದ್ದಾರೆ. ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ದಿವ್ಯಾಂಗರು ಶಿಬಿರದಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದರು.ರೋಟರಿ ಸಂಸ್ಥೆಯು ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು, ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿದ್ದು, ಜನರಿಗೆ ನೆರವಾಗುವ ಕಾರ್ಯಕ್ರಮ ಮಾಡುತ್ತಾ ಬರಲಾಗಿದೆ. ಅಂಗವಿಕಲ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ವಿಚಾರಿಸಿದಾಗ ಜಿಲ್ಲೆಯಲ್ಲಿ ಕೈ ಕಾಲು ತೊಂದರೆಯುಳ್ಳ ವಿಕಲಚೇನರು ಇದ್ದಾರೆ ಎಂದು ಮಾಹಿತಿ ನೀಡಿದರು.

### ಗೇಟ್‌ಮ್ಯಾನ್‌ಗೆ ಚಾಕು ಇರಿತ: ಬಂಧನ

**ಮದ್ದೂರು:** ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ರಾಜರಾಣಿ ಎಕ್ಸ್ ಪ್ರೆಸ್ ರೈಲಿನ ಚೈನ್ಲಿಂಕ್ ಎಳೆದ ದುಷ್ಕರ್ಮಿಗಳನ್ನು ಪ್ರಶ್ನಿಸಿದ ವೇಳೆ ಗೇಟ್‌ಮ್ಯಾನ್ನನ್ನು ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ನಗರದ ಎಚ್.ಕೆ.ವಿ ನಗರದ ಚನ್ನೇಗೌಡನದೊಡ್ಡಿ ಗ್ರಾಮದಲ್ಲಿ ಜರುಗಿದ್ದು ಸ್ಥಳೀಯ ಗ್ರಾಮಸ್ಥರು ದುಷ್ಕರ್ಮಿಗಳನ್ನು ಥಳಿಸಿ ಬಳಿಕ ಪೋಲೀಸರಿಗೆ ಒಪ್ಪಿಸಿದ್ದಾರೆ. ನಗರದ ಎಚ್.ಕೆ.ವಿ ನಗರದ ಚನ್ನೇಗೌಡನದೊಡ್ಡಿ ಗ್ರಾಮದ ರೈಲ್ವೆ ಗೇಟ್ ಮ್ಯಾನ್ಯಾಗಿ ಕಾರ್ಯನಿರ್ವಹಿಸುತ್ತಿದ್ದ ಕುರ್ಮಾ(36) ಚಾಕುವಿನ ಇರಿಕ್ಕೊಳಗಾದ ನೌಕರನಾಗಿದ್ದು ಈತನನ್ನು ಮದ್ದೂರು ತಾಲೂಕು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಮೈಸೂರು ಗೌಸಿಯಾ ನಗರ ಹಾಗೂ ಕ್ಯಾತಮಾರನಹಳ್ಳಿ ಬಡಾವಣೆಯ ನಿವಾಸಿಗಳಾದ ಮುಸ್ಕಾನ್ ಕುರೇಸಿ, ಸುಭಾವ್ ಕುರೇಸಿ, ಸುಹೇಬ್ಖಾನ್, ವಸೀಂ ಹಾಗೂ ಸುಜಾತ ರವರು ಕೃತ್ಯ ಎಸಗಿರುವ ದುಷ್ಕರ್ಮಿಗಳಾಗಿದ್ದು ಸ್ಥಳೀಯ ಸಾರ್ವಜನಿಕರು ಥಳಿಸಿದ ಪರಿಣಾಮವಾಗಿ ತೀವ್ರ ಅಸ್ವಸ್ಥಗೊಂಡ ದುಷ್ಕರ್ಮಿಗಳನ್ನು ಪೋಲೀಸರು ತಾಲೂಕು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿ ಹೆಚ್ಚಿನ ಮಾಹಿತಿ ಪಡೆಯುತ್ತಿದ್ದಾರೆ.

{ಡಿ.ಕೆ.ಶಿವಕುಮಾರ್ } ಡಿಸಿಎಂ

**ಬಿ.ಎಸ್.ಯಡಿಯೂರಪ್ಪ ಅವರಿಗೆ ಜನ್ಮದಿನವಿದ್ದರೆ ಶುಭವಾಗಲಿ. ಅವರು ರಾಜ್ಯಕ್ಕೆ ಸೇವೆ ಸಲ್ಲಿಸಿದ್ದಾರೆ, ಅವರಿಗೆ ಗೌರವ ನೀಡಬೇಕು. ಭಗವಂತ ಅವರಿಗೆ ಒಳ್ಳೆಯ ಆರೋಗ್ಯ ನೀಡಲಿ. ರಾಜಕೀಯವಾಗಿ ನಮ್ಮ ವಿಚಾರಧಾರೆಗಳು ಬೇರೆಯಾಗಿರಬಹುದು, ಆದರೆ ಅವರ ಸೇವೆಗೆ ಗೌರವವಿದೆ.**

ಚಾಮರಾಜನಗರ ಜಿಲ್ಲಾಡಳಿತ ಭವನದ ನೂತನ ಜಿಪಂ ಸಭಾಂಗಣದಲ್ಲಿ ಜಿಲ್ಲಾಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ | ಸಚಿವ ವೆಂಕಟೇಶ್ ಸೂಚನೆ

# ಕುಡಿವ ನೀರಿನ ಸಮಸ್ಯೆ ಆಗದಂತೆ ಕ್ರಮ ವಹಿಸಿ

**ಚಾಮರಾಜನಗರ:** ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆಯನ್ನು ಆದ್ಯತೆ ಮೇರೆಗೆ ಪರಿಹರಿಸಲು ಕ್ರಮ ವಹಿಸುವಂತೆ ಪಶುಸಂಗೋಪನೆ, ರೇಷ್ಮೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಸೂಚನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ನೂತನ ಜಿಲ್ಲಾ ಪಂಚಾಯತ್ ಕೆ.ಡಿ.ಪಿ ಸಭಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಬಾರಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಸಂಭವವಿದೆ. ಈ ನಿಟ್ಟಿನಲ್ಲಿ ಎಲ್ಲಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಮತ್ತು ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಜನರಿಂದ ಯಾವುದೇ ದೂರುಗಳು ಬಾರದಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಕ್ಷೇತ್ರಪ್ರವಾಸ ಸ್ಥಳ ಪರಿಶೀಲನೆ ನಡೆಸಿ ಸಮಸ್ಯೆ ಪರಿಹಾರಕ್ಕೆ ಆದ್ಯತೆ ನೀಡಬೇಕು. ಅಲ್ಲಿನ ವಾಸ್ತವ ಸ್ಥಿತಿಗತಿಗಳನ್ನು ಅರಿಯಬೇಕು. ಪೈಪ್ಲೈನ್ ಕಾಮಗಾರಿಗಳು ಬಾಕಿ ಉಳಿದಿದ್ದರೆ ಅದಷ್ಟು ಬೇಗ ಮುಗಿಸಬೇಕು. ಬೋರ್ವೆಲ್ಲಳಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದರೆ ರೀಬೋರ್‌ಮಾಡಿಸಬೇಕು. ಅವಶ್ಯವಿದ್ದರೆ ಟ್ಯಾಂಕರ್ಗಳಲ್ಲಿ ನೀರನ್ನು ನಿರಂತರವಾಗಿ ಪೂರೈಸಬೇಕು. ಇದಕ್ಕಾಗಿ ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಕ್ರಿಯಾಶೀಲ ಅಧಿಕಾರಿಗಳನ್ನು ಉಸ್ತುವಾರಿಯಾಗಿ ನೇಮಿಸಬೇಕು ಎಂದರು.

ಹನೂರು ತಾಲೂಕಿನ ಸಾಕಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ವಿವಿಧ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಿರುವ ಬಗ್ಗೆ ಆಯಾ ಸ್ಥಳದ ಜಿ.ಪಿ.ಎಸ್ ಛಾಯಾಚಿತ್ರ, ವಿಡಿಯೋಗಳನ್ನು ಸಂಗ್ರಹಿಸಿ ವರದಿ ಸಲ್ಲಿಸಬೇಕು. ಮುಂದಿನ ವಾರದಲ್ಲಿ ಸಮಸ್ಯೆ ಇರುವ ಗ್ರಾಮಗಳಿಗೆ ಭೇಟಿ ನೀಡಿ ಜನರಿಂದ ಅಹವಾಲು ಸ್ವೀಕರಿಸುವ ಕಾರ್ಯಕ್ರಮವಿದೆ. ಕುಡಿಯುವ ನೀರಿನ ಸಂಬಂಧ ಸಾರ್ವಜನಿಕರ ದೂರುಗಳಿಗೆ ಅಧಿಕಾರಿಗಳು ಯಾವುದೇ ಸಬೂಬು ಹೇಳಿದರೆ ಸಹಿಸುವುದಿಲ್ಲ. ಕುಡಿಯುವ ನೀರಿನ ಸಮಗ್ರ ವರದಿ ತಯಾರಿಸಿ ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ಸಚಿವ ಕೆ. ವೆಂಕಟೇಶ್ ಅವರು ನಿರ್ದೇಶನ ನೀಡಿದರು.

ಇದೇ ವೇಳೆ ಮಾತನಾಡಿದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಜಲಜೀವನ್ ಮಿಷನ್ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಿದರೆ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ತೆ ಎದುರಾಗುವುದಿಲ್ಲ. ಜೆ.ಎಂ. ಪೈಪ್ ಲೈನ್ ಕಾಮಗಾರಿಗಾಗಿ ಪ್ರತಿವರ್ಷ 5 ಕೋಟಿ ರೂ. ಅನುದಾನ ನೀಡುತ್ತಿದ್ದರೂ ಕಾಮಗಾರಿ ನಿರೀಕ್ಷಿತ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಪೈಪ್ಲೈನ್ ಸೋರುವಿಕೆ ತಡೆಗಟ್ಟಲು ಸಾಕಷ್ಟು ಅನುದಾನ ಖರ್ಚಾಗುತ್ತಿದೆ. ಕೆಲವೆಡೆ ಪೈಪ್ ಲೈನ್ ಕಾಮಗಾರಿ ಅಪೂರ್ಣವಾಗಿದೆ. ಕಾಮಗಾರಿ ಶೀಘ್ರವಾಗಿ ಪೂರ್ಣಗೊಳಿಸಲು ಮೊದಲ ಆದ್ಯತೆ ನೀಡಬೇಕು ಎಂದರು.

ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ರಮದಡಿ ಒಂದು ಕೆರೆಯಿಂದ ಮತ್ತೊಂದು ಕೆರೆಗೆ ಪೈಪ್ಲೈನ್ ಮೂಲಕ ನೀರು ಹರಿಸಬೇಕು. ಕಾಲುವೆ ಮೂಲಕ ನೀರು ಮತ್ತೊಂದು ಕೆರೆ ತಲುಪಲು 15ರಿಂದ 20 ದಿನ ಸಮಯ ಹಿಡಿದು ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಲಿದೆ. ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಈ ಬಗ್ಗೆ ತುರ್ತಾಗಿ ಗಮನ ಹರಿಸಿ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಶಾಸಕರಾದ ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಈ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶದ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಸರಕಾರಿ ಶಾಲೆಗಳಿಗೆ ಸರಕಾರ ಎಲ್ಲಾ ಅವಶ್ಯ ಸೌಲಭ್ಯಗಳನ್ನು ನೀಡುತ್ತಿದ್ದರೂ ಪರೀಕ್ಷೆಯಲ್ಲಿ ಸರಕಾರಿ ಶಾಲೆಗಳಿಗಿಂತ ಖಾಸಗಿ ಶಾಲೆಗಳ ಫಲಿತಾಂಶ ಉತ್ತಮವಾಗಿದೆ ಎಂದರು.

ಹನೂರು ಶಾಸಕ ಎಂ.ಆರ್. ಮಂಜುನಾಥ್ ಅವರು ಮಾತನಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಕೃಷಿ, ತೋಟಗಾರಿಕೆ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪಶುಸಂಗೋಪನೆ, ಅಬಕಾರಿ, ಸಾರಿಗೆ, ಗಣಿ, ಗ್ರಂಥಾಲಯ, ಕಾರ್ಮಿಕ ಮೀನುಗಾರಿಕೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲಿಸಿದರು.

ಇದೇ ವೇಳೆ ಈ ಬಾರಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಹಾಗೂ ಜನಗಣತಿ ಕಾರ್ಯ ಪೂರ್ಣಗೊಳಿಸಿದ ಅಧಿಕಾರಿಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಗುಂಡ್ಲುಪೇಟೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ವಿ.ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಜಿಲ್ಲಾ ಪಂಚಾಯತ್ ಕೆ.ಡಿ.ಪಿ ಅಧಿಕಾರೇತರ ಸದಸ್ಯರಾದ ಸಯ್ಯದ್ ಮುಸಾಯಿಲ್, ಶಂಕರಪ್ಪ, ಭವ್ಯಾ, ಮುನಿರಾಜು, ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ನೂತನ ಜಿಲ್ಲಾ ಪಂಚಾಯತ್ ಕೆ.ಡಿ.ಪಿ ಸಭಾಂಗಣದಲ್ಲಿ ಜಿಲ್ಲಾಮಟ್ಟದ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಸಚಿವ ಕೆ. ವೆಂಕಟೇಶ್ ಅವರು ಮಾತನಾಡಿದರು.

> **ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಕ್ಷೇತ್ರಪ್ರವಾಸ ಸ್ಥಳ ಪರಿಶೀಲನೆ ನಡೆಸಿ ಸಮಸ್ಯೆ ಪರಿಹಾರಕ್ಕೆ ಆದ್ಯತೆ ನೀಡಬೇಕು.**
>
> -ಕೆ.ವೆಂಕಟೇಶ್, ಸಚಿವ

## ನಾಟಕಗಳನ್ನು ನೋಡಿ ಪ್ರೋತ್ಸಾಹಿಸಿ: ಶಾಸಕ ಮಂಜು

ದೊಡ್ಡಯಾಚೇನಹಳ್ಳಿ ಗ್ರಾಮದಲ್ಲಿ ಕುರುಕ್ಷೇತ್ರ ಎಂಬ ಪೌರಾಣಿಕ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಬೇಬಿಬೆಟ್ಟದ ಶ್ರೀ ಶಿವಬಸವಸ್ವಾಮೀಜಿ ಅವರು ಮಾತನಾಡಿದರು.

**ಕೆ.ಆರ್.ಪೇಟೆ:** ರಂಗಕಲೆಯನ್ನು ಇನ್ನು ಜೀವಂತವಾಗಿಟ್ಟುಕೊಂಡು ಮುಂದಿನ ಪೀಳಿಗೆಗೆ ಕೊಡುಗೆ ನೀಡಲು ತಾಲೂಕಿನ ರಂಗ ಕಲಾವಿದರು ಶ್ರಮಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಹಾಗಾಗಿ ಸಾರ್ವಜನಿಕರು ನಾಟಕಗಳನ್ನು ನೋಡಿ ಪ್ರೋತ್ಸಾಹಿಸುವ ಮೂಲಕ ನಮ್ಮ ಸಂಸ್ಕೃತಿ ಪರಂಪರೆಯನ್ನು ಸಂರಕ್ಷಣೆ ಮಾಡಲು ಸಹಕಾರ ನೀಡಬೇಕು ಎಂದು ಶಾಸಕ ಎಚ್.ಟಿ.ಮಂಜು ಹೇಳಿದರು.

ಅವರು ತಾಲ್ಲೂಕಿನ ಬೂಕನಕೆರೆ ಹೋಬಳಿಯ ದೊಡ್ಡಯಾಚೇನಹಳ್ಳಿ ಗ್ರಾಮದಲ್ಲಿ ರಂಗದ ಹಬ್ಬ ಹಾಗೂ ಜಗಜ್ಯೋತಿ ಶ್ರೀ ಬಸವ ಜಯಂತಿ ಕಾರ್ಯಕ್ರಮದ ಅಂಗವಾಗಿ ಗ್ರಾಮದ ಶ್ರೀ ಬವೇಶ್ವರರ ಕೃಫಾ ಪೋಷಿತ ನಾಟಕ ಮಂಡಳಿ ಹಾಗೂ ಡಾ.ರಾಜ್ ರಂಗ ಕಲಾ ಸಂಘದ ವತಿಯಿಂದ ಆಯೋಜಿಸಿದ್ದ ''ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಾಟಕಗಳು ಸಮಾಜದ ಕನ್ನಡಿ ಇದ್ದಂತೆ. ರಂಗ ವೇದಿಕೆಯ ಮೇಲೆ ಪಾತ್ರದಾರಿಗಳ ಮೂಲಕ ತೋರಿಸುವ ಕಥೆಗಳು ಮತ್ತು ಪಾತ್ರಗಳು ಜನರ ಮನಸ್ಸಿಗೆ ನೇರವಾಗಿ ತಲುಪಿ ಬದಲಾವಣೆ ತರುತ್ತವೆ ಎಂದರು.

ಪಾಂಡವಪುರ ತಾಲೂಕಿನ ಬೇಬಿಬೆಟ್ಟದ ಶ್ರೀ ಶಿವಬಸವಸ್ವಾಮೀಜಿ ಮಾತನಾಡಿ, ಬಸವ ಪೌರಾಣಿಕ ನಾಟಕಗಳು ಕೇವಲ ದೇವರ ಕಥೆಯಲ್ಲ. ಇಂದಿನ ಬದುಕಿಗೆ ಬೇಕಾದ ನೈತಿಕ ದಿಕ್ಸೂಚಿ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಟಿ.ಎ.ಪಿ.ಸಿ.ಎಂ.ಎಸ್. ಸಂಸ್ಥೆಯ ಅಧ್ಯಕ್ಷ ಬಲದೇವ್, ತಾಲ್ಲೂಕು ವೀರಶೈವ-ಲಿಂಗಾಯಿತ ಮಹಾಸಭಾ ಅಧ್ಯಕ್ಷ ಸುಜೇಂದ್ರಕುಮಾರ್,ತಾಲೂಕು ವೀರಶೈವ ಮಹಾಸಭಾ ನಿರ್ದೇಶಕ ಮಂಚೀಬೀಡು ಬಸವಲಿಂಗಪ್ಪ, ಚೋಕನಹಳ್ಳಿ ಮಹಾದೇವಪ್ಪ, ಚೋಕನಹಳ್ಳಿ ಪ್ರಕಾಶ್, ರಾಜಶೇಖರ್, ದಯಾನಂದ್, ಪ್ರಭುಸ್ವಾಮಿ, ರುದ್ರಬಸಪ್ಪ, ರಮೇಶ್, ಶ್ರೀಧರ್, ಶಿವಮೂರ್ತಿ, ವಿಶ್ವನಾಥ್, ಕೃಷ್ಣಾಚಾರ್ ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹಾದೇವೇಗೌಡ, ತಾಲೂಕು ಯುವ ಜೆಡಿಎಸ್ ಉಪಾಧ್ಯಕ್ಷ ಬೇಲದಕೆರೆ ಮರೀಗೌಡ, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್, ಕಲಾವಿದರಾದ ತಂದ್ರೆ ಮಂಜು, ಹೊಸಹೊಳಲು ರಘು ಸೇರಿದಂತೆ ಹಲವು ಮುಖಂಡರು, ಕಲಾವಿದರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

## ಕೃಷಿ ಭೂಮಿಯಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ವಿರೋಧ

**ಮೈಸೂರು:** ಮೈಸೂರು ತಾಲೂಕಿನ ಗುಡುಮಾದನಹಳ್ಳಿಯ ಕೃಷಿ ಯೋಗ್ಯ ಭೂಮಿಯಲ್ಲಿ ಯಾವುದೇ ಕಾರಣಕ್ಕೂ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡುವುದು ಬೇಡ ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಮುಂದಾಗಿರುವ ಭೂಮಿಯಲ್ಲಿ ದಿನದ 24 ಗಂಟೆಯೂ ನೀರು ಲಭ್ಯವಿದ್ದು, ಹಸಿರು ವಲಯ ಎಂದು ಗುರುತಿಸಲಾಗಿದೆ. ಸದರಿ ಭೂಮಿ ಆಸ್ಪತ್ರೆ ನಿರ್ಮಾಣಕ್ಕೆ ಯೋಗ್ಯವಾಗಿಲ್ಲ ಎಂದರು.

ನಾವು ಆಸ್ಪತ್ರೆ ನಿರ್ಮಾಣಕ್ಕೆ ವಿರೋಧ ಮಾಡುತ್ತಿಲ್ಲ. ಬೇರೊಂದು ಸ್ಥಳದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ಒಮ್ಮೆ ಸಿಎಂ ಸಿದ್ದರಾಮಯ್ಯ ಸ್ಥಳ ಪರಿಶೀಲನೆ ಮಾಡಬೇಕು. ಆಗ ಅವರೇ ಮುಂದಾಗಿ ಬೇರೊಂದು ಸ್ಥಳದಲ್ಲಿ ಆಸ್ಪತ್ರೆ ನಿರ್ಮಾಣ ಮಾಡುವಂತೆ ಸೂಚಿಸುತ್ತಾರೆಂಬ ವಿಶ್ವಾಸವಿದೆ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ಪುತ್ರ ಯತೀಂದ್ರ ಕೂಡ ಈ ಬಗ್ಗೆ ಗಮನ ಹರಿಸಬೇಕು. ವಪರಿಸರಕ್ಕೆ ಮಾರಕವಾಗದಂತೆ ಆಸ್ಪತ್ರೆ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು.

**ಎಸ್ಐಆರ್‌ನಿಂದ ಬಿಜೆಪಿ ಗೆದ್ದಿದೆ:**

ಎಸ್ಐಆರ್‌ನಿಂದಾಗಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆದ್ದಿದೆ. ಪಶ್ಚಿಮ ಬಂಗಾಳದಂತೆ ಕರ್ನಾಟಕದಲ್ಲಿ ಆಗಲು ಬಿಡುವುದಿಲ್ಲ. ಎಸ್ಐಆರ್ ಮಾನ್ಯುಪ್ಲೇಟ್ ಮಾಡಲು ಬಿಡುವುದಿಲ್ಲ ಎಂದು ನಾಗೇಂದ್ರ ತಿಳಿಸಿದರು.

ಈ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಅವರು ವಿವಿಧ ಪ್ರಗತಿಪರ ಸಂಘಟನೆಗಳೊಂದಿಗೆ ಸಭೆ ನಡೆಸಬೇಕು ಎಂದು ಮನವಿ ಮಾಡಿದ್ದೆವು. ಅದರಂತೆ ನಿನ್ನೆ ಸಿಎಂ ಸಭೆ ನಡೆಸಿದ್ದಾರೆ. ರೈತ ಸಂಘಟನೆ ಪರವಾಗಿ ನಾನು ಭಾಗವಹಿಸಿದ್ದೆ. ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಅಕ್ರಮ ಮಾಡಿದ್ದಾರೆ. ಅಲ್ಪಸಂಖ್ಯಾತರು ಮತ್ತು ಇನ್ನಿತರ ಮತದಾರರ ಪಟ್ಟಿಯಲ್ಲಿ ಸಾಕಷ್ಟು ಜನರ ಹೆಸರುಗಳನ್ನು ಕೈ ಬಿಡಲಾಗಿದೆ ಎಂದು ಆರೋಪಿಸಿದರು.

**ಯತೀಂದ್ರ ರೈತರ ಭಾವನೆಗಳಿಗೆ ಸ್ಪಂದಿಸುತ್ತಿಲ್ಲ:**

ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡುವ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ, ಪುತ್ರ ಯತೀಂದ್ರ ರೈತರ ಭಾವನೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ರೈತ ಮುಖಂಡ ಉಗ್ರ ನರಸಿಂಹೇಗೌಡ ವಾಗ್ದಾಳಿ ನಡೆಸಿದರು.

ಅಧಿಕಾರ ಯಾರಿಗೂ ಶಾಶ್ವತವಲ್ಲ ಎಂಬುದನ್ನು ಸಿದ್ದರಾಮಯ್ಯ ಮತ್ತು ಯತೀಂದ್ರ ಅರ್ಥ ಮಾಡಿಕೊಳ್ಳಬೇಕು.

ಜನವಿರೋಧಿಗಳಿಗೆ ಜನರು ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್ ಡಿಎಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಜನರು ಬಹುಮತ ನೀಡಲಿಲ್ಲ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮತದಾರರು ಆಡಳಿತ ಪಕ್ಷಗಳನ್ನು ಸೋಲಿಸಿದ್ದಾರೆ. ಮುಂದೆ ರಾಜ್ಯದಲ್ಲೂ ಅಂತಹುದೇ ಪರಿಸ್ಥಿತಿ ಬರಲಿದೆ ಎಂದು ಎಚ್ಚರಿಕೆ ನೀಡಿದರು.

> **ನಾವು ಆಸ್ಪತ್ರೆ ನಿರ್ಮಾಣಕ್ಕೆ ವಿರೋಧ ಮಾಡುತ್ತಿಲ್ಲ. ಬೇರೊಂದು ಸ್ಥಳದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಿದರೆ ನಮ್ಮ ಅಭ್ಯಂತರವಿಲ್ಲ. ಒಮ್ಮೆ ಸಿಎಂ ಸಿದ್ದರಾಮಯ್ಯ ಸ್ಥಳ ಪರಿಶೀಲನೆ ಮಾಡಬೇಕು.**
>
> -ಬಡಗಲಪುರ ನಾಗೇಂದ್ರ, ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ

## ಮದ್ದೂರು ಉತ್ಸವ ಯಶಸ್ವಿ: ಅಭಿನಂದನೆ

**ಮದ್ದೂರು:** ಶ್ರೀ ಮದ್ದೂರಮ್ಮ ಜಾತ್ರಾಮಹೋತ್ಸವ ಹಾಗೂ ಶ್ರೀ ಉಗ್ರನರಸಿಂಹಸ್ವಾಮಿ ಬ್ರಹ್ಮರಥೋತ್ಸವದ ಅಂಗವಾಗಿ ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ''ಮದ್ದೂರು ಉತ್ಸವ-2026'' ಕಾರ್ಯಕ್ರಮ ಯಶಸ್ವಿಗೆ ಸಹಕರಿಸಿದ ಸಂಘ ಸಂಸ್ಥೆಯ ಪದಾಧಿಕಾರಿಗಳು, ಸಾರ್ವಜನಿಕರು, ಕಾರ್ಯಕರ್ತರು, ಮುಖಂಡರುಗಳಿಗೆ ಪಕ್ಷಾತೀತವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಅಭಿನಂದನೆ ಸಲ್ಲಿಸುವುದಾಗಿ ಶಾಸಕ ಕೆ.ಎಂ.ಉದಯ ತಿಳಿಸಿದ್ದಾರೆ.

ಮದ್ದೂರು ಉತ್ಸವದ ಅಂಗವಾಗಿ ಹತ್ತು ದಿನಗಳ ಕಾಲ ನಡೆದ ವಿವಿಧ ಕಾರ್ಯಕ್ರಮಗಳ ಕುರಿತಾಗಿ ಮಾಹಿತಿ ನೀಡಿದ ಶಾಸಕ ಕೆ.ಎಂ.ಉದಯ ನಗರ ವ್ಯಾಪ್ತಿಯಲ್ಲಿ ಮೈಸೂರು ದಸರಾ ಮಾದರಿಯ ದೀಪಾಲಂಕಾರ, ಮ್ಯಾರಾಥಾನ್ ನಡಿಗೆ, ಭಾರಿ ದನಗಳ ಜಾತ್ರೆ ಮತ್ತು ಉತ್ತಮ ರಾಸುಗಳಿಗೆ ಚಾಂಪಿಯನ್ ಮತ್ತು ನಗದು ಬಹುಮಾನ, ಉತ್ತಮ ಟಗರುಗಳಿಗೆ ನಗದು, ಕಬಡ್ಡಿ, ವಾಲಿಬಾಲ್ ಪಂದ್ಯಾವಳಿ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಇನ್ನಿತರ ಕಾರ್ಯಕ್ರಮಗಳ ಯಶಸ್ಸಿಗೆ ಶ್ರಮಿಸಿದ ಕಾರ್ಯಕರ್ತ ಬಂಧುಗಳಿಗೂ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಸರಕಾರಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸಂಗೀತ ರಸಸಂಜೆ ಕಾರ್ಯಕ್ರಮವು ಅಭೂತಪೂರ್ವ ಯಶಸ್ಸು ಗಳಿಸಿದ್ದು ಸಂಗೀತ ರಸದೌತಣ ಉಣಬಡಿಸಿದ್ದು ಸಂಗೀತ ಸಂಜೆ ಸಾರ್ವಜನಿಕರ ಮತ್ತು ಪ್ರೇಕ್ಷಕರ ಮನದಲ್ಲಿ ಶಾಶ್ವತವಾಗಿ ಬೇರೂರಿದೆ ಎಂದರು.

ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮದ್ದೂರು ಉತ್ಸವ ಕಾರ್ಯಕ್ರಮದಲ್ಲಿ ನಿರಂತರವಾಗಿ ಶ್ರಮಿಸಿದ ತಾಲೂಕು ಆಡಳಿತ, ತಾಲೂಕು ಮಟ್ಟದ ಅಧಿಕಾರಿಗಳು ಅದರಲ್ಲೂ ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ ಕಾರ್ಯಕ್ರಮ ಯಶಸ್ಸಿಗೆ ಹಗಲಿರುಳು ಶ್ರಮಿಸಿದ್ದಾರೆಂದರು.

ಮದ್ದೂರು ಉತ್ಸವ ಕಾರ್ಯಕ್ರಮದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ನಾಗರೀಕ ಬಂಧುಗಳಿಗೆ ಸಾರ್ವಜನಿಕರಿಗೆ ಪಕ್ಷಾತೀತವಾಗಿ ಅಭಿನಂದನೆ ಸಲ್ಲಿಸಲಿದ್ದು ಮುಂದಿನ ದಿನಗಳಲ್ಲಿ ತಮ್ಮ ಸಲಹೆ ಸಹಕಾರ ಇದೇರೀತಿ ಮುಂದುವರೆಯಲೆ ಅದು ಕೋರಿದರು.

## ಬಸವಣ್ಣ, ಅಂಬೇಡ್ಕರ್ ಆದರ್ಶ ಮೈಗೂಡಿಸಿಕೊಳ್ಳಿ

**ರಾಮನಗರ:** ಪ್ರಸ್ತುತ ಸಮಾಜವು ಅರಿವಿನ ಜತೆಗೆ ಡಾ.ಬಿ.ಆರ್.ಅಂಬೇಡ್ಕರ್- ಬಸವಣ್ಣರ ತತ್ವ೩ ಸಿದ್ಧಾಂತಗಳನ್ನು ಅನುಸರಿಸಿದಾಗ ಮಾತ್ರ ಸಮಾನತೆ, ನ್ಯಾಯ ಮತ್ತು ಸಹಬಾಳ್ವೆಯ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ನಿವೃತ್ತ ನ್ಯಾ.ನಾಗಮೋಹನ್ ದಾಸ್ ಅಭಿಪ್ರಾಯಪಟ್ಟರು.

ರಾಮನಗರ ನಗರಸಭಾ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಪುತ್ಥಳಿ ಅನಾವರಣಗೊಳಿಸಿ ಅವರು ಮಾತನಾಡಿದರು. ಅಂಬೇಡ್ಕರ್,ಬಸವಣ್ಣ, ಕುವೆಂಪು ಅವರ ಚಿತ್ರ ಇಟ್ಟುಕೊಂಡು ಜಾತಿ ರಾಜಕಾರಣ ಮಾಡುತ್ತಾರೆ. ಈ ದಾರ್ಶನಿಕರು ಜಾತಿಗೆ ಸೀಮಿತವಾದವರಲ್ಲ. ಅದನ್ನು ಮೀರಿ ಮಾನವ ಅಭ್ಯುದಯಕ್ಕೆ ಶ್ರಮಿಸಿದವರು ಎಂದರು. ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಶಶಿ ಮಾತನಾಡಿದರು. ಕಾರ್ಯಕ್ರ ಮದಲ್ಲಿ ಕನಕಪುರದ ದೇಗುಲ ಮಠದ ಡಾ. ಮುಮ್ಮಡಿ ನಿರ್ವಾಣ ಸ್ವಾಮೀಜಿ, ಮರಳೇಗವಿಮಠದ ಶಿವರುದ್ರ ಸ್ವಾಮೀಜಿ, ದೊಡ್ಡ ಮರಳವಾಡಿ ಮಠದ ಮೃತ್ಯುಂಜಯ ಸ್ವಾಮೀಜಿ, ಕೇತೋಹಳ್ಳಿಯ ಸಿದ್ದಲಿಂಗ ಸ್ವಾಮೀಜಿ, ಬಿಡದಿ ಚೌಕಿ ಮಠದ ಹುಚ್ಚಪ್ಪ ಸ್ವಾಮೀಜಿ, ಚನ್ನಪಟ್ಟಣ ವಿರಕ್ತ ಮಠದ ಶಿವರುದ್ರ ಸ್ವಾಮೀಜಿ, ಬೇವೂರು ಮಠದ ಮೃತ್ಯುಂಜಯ ಸ್ವಾಮೀಜಿ, ರೇವಣಸಿದ್ದೇಶ್ವರ ಬೆಟ್ಟದ ಮಠದ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿದ್ದರು.

ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ,ಬಮೂಲ್ ನಿರ್ದೇಶಕ ಪಿ. ನಾಗರಾಜ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವೈ.ಎಚ್. ಮಂಜು, ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷ ಕೆ. ಸತೀಶ್, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಎಚ್.ಎಸ್. ಯೋಗಾನಂದ್, ತಾಲ್ಲೂಕು ಅಧ್ಯಕ್ಷ ಪೊಲೀಸ್ ಶಂಕರಪ್ಪ, ವೀರಶೈವ ಸಂಘದ ತಾಲ್ಲೂಕಾಧ್ಯಕ್ಷ ಎಂ.ಆರ್. ಶಿವಕುಮಾರ ಸ್ವಾಮಿ ಇತರರು ಇದ್ದರು.

ರಾಮನಗರದ ನಗರಸಭೆ ಆವರಣದಲ್ಲಿ ನಿವೃತ್ತ ನ್ಯಾ.ನಾಗಮೋಹನ್ ದಾಸ್ ಅವರು ಬಸವೇಶ್ವರರ ಪುತ್ಥಳಿ ಅನಾವರಣಗೊಳಿಸಿದರು.

> **ಧಾರ್ಮಿಕ ನೆಲೆಗಟ್ಟನಲ್ಲಿ ಪರಿವರ್ತನೆ ವಿಶ್ವ ಕಂಡ ಶ್ರೇಷ್ಠ ಸಂತರಾದ ಬಸವಣ್ಣನವರು ಧಾರ್ಮಿಕ ನೆಲೆಗಟ್ಟನಲ್ಲಿ ಸಮಾಜದ ಪರಿವರ್ತನೆಗೆ ಶ್ರಮಿಸಿದರು.**
>
> -ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠ

ಕೊಡಗು ವಿಶ್ವವಿದ್ಯಾನಿಲಯದ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ಪ್ರತಿಭಾನ್ವೇಷಣೆಯ ಕಲೆಯ ಹಬ್ಬ ಕಲಾ ವೈಭವ ಉದ್ಘಾಟನೆ

## ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕಲೆ ಸಹಕಾರಿ: ಮೇಜರ್ ಪ್ರೊ.ರಾಘವ

**ಮಡಿಕೇರಿ:** ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕಲೆ ಸಹಕಾರಿಯಾಗಿದೆ, ಕಲೆಯ ಅನಾವರಣಕ್ಕೆ ಸೂಕ್ತ ವೇದಿಕೆ ಕಲ್ಪಿಸಿಕೊಡುವ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮೇಜರ್‌ಪ್ರೊ. ರಾಘವ ಬಿ. ಅವರು ಕರೆ ನೀಡಿದ್ದಾರೆ.

ನಗರದ ಕೊಡಗು ವಿಶ್ವ ವಿದ್ಯಾನಿಲಯದ ಫೀ.ಮಾ. ಕೆ.ಎಂ.ಕಾರ್ಯಪ್ಪ ಕಾಲೇಜು ವತಿಯಿಂದ ಕಾಲೇಜ್ ನಲ್ಲಿ ನಡೆದ ಪ್ರತಿಭಾನ್ವೇಷಣೆಯ ಕಲೆಯ ಹಬ್ಬ 'ಕಲಾ ವೈಭವ' ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕಲೆ ಸಹಕಾರಿಯಾಗಿದೆ. ಶಿಕ್ಷಣದ ಜೊತೆಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಕಾಲೇಜು ಶ್ರಮಿಸುತ್ತಿದ್ದು, ಕಲಾ ವೈಭವ ಇದರ ಒಂದು ಭಾಗವಾಗಿದೆ. ಇಂತಹ ವೇದಿಕೆಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದು ಕಿವಿಮಾತು ಹೇಳಿದರು.

ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ವಿದ್ಯಾರ್ಥಿಗಳ ರೂಪದಲ್ಲಿ ನೀಡುವ ಕಾರ್ಯವನ್ನು ನಿಸ್ವಾರ್ಥವಾಗಿ ಕಾಲೇಜುಗಳು ಮಾಡುತ್ತಿವೆ. ಎಲ್ಲರೂ ಕೈ ಜೋಡಿಸಿದರೆ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಕಾಲೇಜು ಕೂಡ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ಮೇಜರ್‌ಪ್ರೊ.ರಾಘವ ಬಿ. ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು ವಿದ್ಯಾರ್ಥಿ ಸಂಘದ ಸಂಚಾಲಕ ಡಾ.ಶ್ರೀಧರ್‌ಹೆಗಡೆ ಅವರು ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆಯ 'ಕಲಾ ವೈಭವ' ಕಾರ್ಯಕ್ರಮದ ಆಯೋಜನೆ ಇತರರಿಗೆ ಮಾದರಿಯಾಗಿದೆ ಮತ್ತು ಹೆಮ್ಮೆಯ ವಿಚಾರವಾಗಿದೆ ಎಂದು ಶ್ಲಾಘಿಸಿದರು.

ಕಲಾ ಲೋಕದಲ್ಲಿ 64 ಪ್ರಕಾರದ ಕಲೆಗಳಿದ್ದು, ಅದನ್ನು ಅಧ್ಯಯನ ಮಾಡಬೇಕು. ಇಂತಹ ವೇದಿಕೆಗಳ ಮೂಲಕ ಕೌಶಲವನ್ನು ಇತರರಿಗೂ ಪರಿಚಯಿಸಿ ಮುಂದಿನ ಪೀಳಿಗೆಗೂ ಇದನ್ನು ಹಸ್ತಾಂತರಿಸಬೇಕು ಎಂದು ಸಲಹೆ ನೀಡಿದರು.

ಕಲಾ ವಿಭಾಗದ ವಿದ್ಯಾರ್ಥಿಗಳು ಶೈಕ್ಷಣಿಕ ಕೀಳರಿಮೆ ಹೊಂದದೆ ಉನ್ನತ ಸಾಧನೆ ಮಾಡಬೇಕು ಎಂದರು.

ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಡಾ.ಕೃಷ್ಣ ಅವರು ಮಾತನಾಡಿ, ಕಾಲೇಜು ಪ್ರಗತಿ ಪಥದಲ್ಲಿ ಸಾಗಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿದೆ. ಕಾರ್ಯಪ್ಪ ಕಾಲೇಜ್ ನ ಚಟುವಟಿಕೆ ಜಿಲ್ಲೆಯ ಎಲ್ಲೆಡೆ ಪಸರಿಸಲು ಬೇರೆ ಕಾಲೇಜು ವಿದ್ಯಾರ್ಥಿಗಳ ಸಂಗಮದಿಂದ ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ ಡಾ.ನಯನ ಕಶ್ಯಪ್ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಪ್ರತಿಬಿಂಬಿಸಲು ಸೂಕ್ತ ವೇದಿಕೆಯ ಅಗತ್ಯವಿರುತ್ತದೆ, ಕೆಲವೊಮ್ಮೆ ವೇದಿಕೆ ಸಿಗದೆ ವಿದ್ಯಾರ್ಥಿಗಳು ವಂಚಿತರಾಗುತ್ತಾರೆ. ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ಪ್ರತಿಭೆಗಳಿಗೆ ಜೀವ ಕಳೆ ತುಂಬಿದಂತಾಗುತ್ತದೆ ಎಂದು ತಿಳಿಸಿದರು. ಸುಮಾರು 77 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸುತ್ತಾ ಬಂದಿರುವ ಫೀ.ಮಾ.ಕಾರ್ಯಪ್ಪ ಕಾಲೇಜು ಸಹಸ್ರಾರು ವಿದ್ಯಾರ್ಥಿಗಳಿಗೆ ಉನ್ನತ ಹುದ್ದೆಗಳ ಮೂಲಕ ಬದುಕನ್ನು ಕಟ್ಟಿಕೊಟ್ಟಿದೆ. ಇದು ಹೆಮ್ಮೆಯ ವಿಚಾರವೆಂದು ಹರ್ಷ ವ್ಯಯಕ್ತಪಡಿಸಿದರು.

**ಗಮನ ಸೆಳೆದ ಕಲಾ ವೈಭವ:**

ಕಾರ್ಯಕ್ರಮದಲ್ಲಿ ಸಮೂಹ ನೃತ್ಯ, ಹಾಡುಗಾರಿಕೆ, ನಾಟಕ, ಏಕ ಪಾತ್ರಾಭಿನಯ, ರಂಗೋಲಿ, ಫಯರ್‌ಲೆಸ್ ಕುಕ್ಕಿಂಗ್, ಚರ್ಚಾ ಕೂಟ ಸಹಿತ ವಿವಿಧ ಕಲೆಗಳ ಪ್ರದರ್ಶನ ಆಕರ್ಷಿಸಿತು. ಜಿಲ್ಲೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿ,ವಿದ್ಯಾರ್ಥಿನಿಯರು 'ಕಲಾ ವೈಭವ' ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡು ಗಮನ ಸೆಳೆದರು. ಅರ್ಥ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ತಿಪ್ಪೇಸ್ವಾಮಿ, ಕಾರ್ಯಕ್ರಮದ ಸಂಚಾಲಕಿ ಡಾ.ಎ.ಎನ್.ಗಾಯತ್ರಿ, ಇಂಗ್ಲೀಷ್ ವಿಭಾಗದ ಉಪನ್ಯಾಸಕಿ ಡಾ.ಡೀನಾ ಎಂ.ಪಿ, ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕಿ ಮೋನಿಕಾ ಎ.ಎನ್, ಸೂಕ್ಷ್ಮಾಣು ವಿಭಾಗದ ಉಪನ್ಯಾಸಕಿ ಡಾ.ಸೌಮ್ಯ ಕೃಷ್ಣಮೂರ್ತಿ, ಭೂಗೋಳ ವಿಭಾಗದ ಉಪನ್ಯಾಸಕಿ ಡಾ.ಬೈರವಿ, ವಿದ್ಯಾರ್ಥಿ ಸಂಘಟನೆಯ ಸಂಚಾಲಕಿ ಟಿ.ವಿ.ವರ್ಷ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ನಗರದ ಕೊಡಗು ವಿಶ್ವ ವಿದ್ಯಾನಿಲಯದ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು ವತಿಯಿಂದ ಕಾಲೇಜ್ ನಲ್ಲಿ ನಡೆದ ಪ್ರತಿಭಾನ್ವೇಷಣೆಯ ಕಲೆಯ ಹಬ್ಬ 'ಕಲಾ ವೈಭವ' ವನ್ನು ಮೇಜರ್‌ಪ್ರೊ.ರಾಘವ ಬಿ. ಅವರು ಉದ್ಘಾಟಿಸಿದರು.

> **ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ವಿದ್ಯಾರ್ಥಿಗಳ ರೂಪದಲ್ಲಿ ನೀಡುವ ಕಾರ್ಯವನ್ನು ನಿಸ್ವಾರ್ಥವಾಗಿ ಕಾಲೇಜುಗಳು ಮಾಡುತ್ತಿವೆ. ಎಲ್ಲರೂ ಕೈ ಜೋಡಿಸಿದರೆ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಕಾಲೇಜು ಕೂಡ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.**
>
> -ಪ್ರೊ.ರಾಘವ ಬಿ., ಮೇಜರ್

ಇಂದಿನ ಪಂದ್ಯ
ಆರ್‌ಸಿಬಿ vs ಮುಂಬೈ

ಸ್ಥಳ
ನಾರಾಯಣ್ ಸಿಂಗ್ ಸ್ಟೇಡಿಯಂ ರಾಯ್ಪುರ್

ಸಮಯ
ರಾತ್ರಿ 7.30

ನೇರಪ್ರಸಾರ
ಸ್ಟಾರ್ ಸ್ಪೋರ್ಟ್ಸ್

ಲೈವ್‌ಸ್ಟ್ರೀಮಿಂಗ್
ಜಿಯೊ ಹಾಟ್‌ಸ್ಟಾರ್

**ಆರ್‌ಸಿಬಿ**
- » ಪಾಟೀದಾರ್ ⏩ ನಾಯಕ
- » ಬೆಥೆಲ್
- » ಕೊಹ್ಲಿ
- » ಪಡಿಕ್ಕಲ್
- » ಜಿತೇಶ್ ⏩ ಕೀಪರ್
- » ಕೃನಾಲ್
- » ಶೆಫರ್ಡ್
- » ಭುವನೇಶ್ವರ್
- » ಸುಯಶ್
- » ರಾಸಿಖ್
- » ಹೇಜಲ್‌ವುಡ್

# ಆರ್‌ಸಿಬಿಗೆ ಇಂದು ಮುಂಬೈ ಎದುರಾಳಿ

**ರಾಯ್ಪುರ್:** ಐಪಿಎಲ್ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು ಈ ಬಾರಿ ತನ್ನ 2ನೇ ತವರು ರಾಯ್ಪುರ್‌ನ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮೊದಲ ಪಂದ್ಯವನ್ನಾಡಲು ಸಜ್ಜಾಗಿದ್ದು, ಇಂದು ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ಕಳೆದ ಎರಡು ಪಂದ್ಯಗಳಲ್ಲಿ ಸೋಲು ಕಂಡಿದ್ದ ಆರ್‌ಸಿಬಿ ಹ್ಯಾಟ್ರಿಕ್ ಸೋಲು ತಪ್ಪಿಸಿ ಮತ್ತೆ ಗೆಲುವಿನ ಹಳಿಗೆ ಮರಳುವ ವಿಶ್ವಾಸದಲ್ಲಿದೆ. ಈಗಾಗಲೇ 10 ಪಂದ್ಯಗಳನ್ನು ಆಡಿರುವ ಆರ್‌ಸಿಬಿ 6 ಪಂದ್ಯಗಳಲ್ಲಿ ಗೆದ್ದು 4ರಲ್ಲಿ ಸೋತಿದೆ. ಈ ಆವೃತ್ತಿಯ ಮೊದಲ ಪಂದ್ಯದಲ್ಲಿ ಅದು ಹೈದರಾಬಾದನ್ನು ಮಣಿಸಿ ಶುಭಾರಂಭ ಮಾಡಿತ್ತು. ಆ ನಂತರದ ಪಂದ್ಯದಲ್ಲಿ ಚೆನ್ನೈ ವಿರುದ್ಧ ಜಯ ಗಳಿಸಿದರೆ, 3ನೇ ಪಂದ್ಯದಲ್ಲಿ ರಾಜಸ್ಥಾನ ವಿರುದ್ಧ ಸೋತಿತ್ತು. 4ನೇ ಪಂದ್ಯದಲ್ಲಿ ಮುಂಬೈಯನ್ನು ಮತ್ತು 5ನೇ ಪಂದ್ಯದಲ್ಲಿ ಲಖನೌ ವಿರುದ್ಧ ಜಯ ಗಳಿಸಿತ್ತು. 6 ಪಂದ್ಯದಲ್ಲಿ ಆರ್‌ಸಿಬಿ ತಂಡವು ಡೆಲ್ಲಿಗೆ ಮಣಿದಿತ್ತು. ಆದರೆ 7ನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ, 8ನೇ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಗೆಲುವನ್ನು ಸಾಧಿಸಿತ್ತು. 9ನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಮತ್ತು ತನ್ನ 10ನೇ ಪಂದ್ಯದಲ್ಲಿ ಲಖನೌ ವಿರುದ್ಧವೂ ಸೋತಿತ್ತು.

ಮುಂಬೈನ ವಾಂಖೆಡೆ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದಿದ್ದ ಆರ್‌ಸಿಬಿ-ಮುಂಬೈ ನಡುವಿನ ಮುಖಾಮುಖಿಯಲ್ಲಿ ಆರ್‌ಸಿಬಿ ಗೆಲುವು ಸಾಧಿಸಿದ್ದ ಕಾರಣ ಆ ಸೋಲಿಗೆ ಮುಂಬೈ ಸೇಡು ತೀರಿಸಿಕೊಂಡೀತೇ ಎನ್ನುವುದು ಇಂದಿನ ಪಂದ್ಯದ ಕೌತುಕವಾಗಿದೆ. ಸತತ ಸೋಲಿನಿಂದ ಮುಂಬೈ ಚೇತರಿಸಿಕೊಂಡಿರುವ ಕಾರಣ ಆರ್‌ಸಿಬಿಗೆ ಕಠಿಣ ಸವಾಲು ಎದುರಾಗುವ ಸಾಧ್ಯತೆ ಇದೆ. ಆರ್‌ಸಿಬಿ ವಿರುದ್ಧದ ಹಿಂದಿನ ಪಂದ್ಯದಲ್ಲಿ ಗಾಯಗೊಂಡು ಅರ್ಧದಲ್ಲೇ ಪಂದ್ಯದಿಂದ ಹೊರ ನಡೆದಿದ್ದ ಆರಂಭಿಕ ಆಟಗಾರ ರೋಹಿತ್ ಶರ್ಮಾ ಸಂಪೂರ್ಣ ಚೇತರಿಕೆ ಕಂಡು ಮತ್ತೆ ತಂಡಕ್ಕೆ ಮರಳಿದ್ದಾರೆ. ಹಾರ್ದಿಕ್ ಪಾಂಡ್ಯ ಕೂಡ ಇಂದಿನ ಪಂದ್ಯದಲ್ಲಿ ಆಡುವ ಮೂಲಕ ಮತ್ತೆ ನಾಯಕತ್ವ ವಹಿಸಿಕೊಳ್ಳಲಿದ್ದಾರೆ. ಆರಂಭಿಕ ಹಂತದಲ್ಲಿ ಉತ್ತಮ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದ ಮೂಲಕ ಸತತ ಗೆಲುವು ಕಂಡಿದ್ದ ಆರ್‌ಸಿಬಿ ಇದೀಗ 2 ಪಂದ್ಯಗಳಲ್ಲಿ ಸತತವಾಗಿ ಸೋತಿದೆ. ಜಿತೇಶ್ ಶರ್ಮಾ ಬ್ಯಾಟಿಂಗ್ ವೈಫಲ್ಯ ಕಂಡಿದ್ದಾರೆ. ರೊಮಾರಿಯೊ ಶೆಫರ್ಡ್ ನಿರೀಕ್ಷಿತ ಪ್ರದರ್ಶನ ತೋರುತ್ತಿಲ್ಲ. ಫಿಲ್ ಸಾಲ್ಟ್ ಗಾಯಗೊಂಡು ಅಲಭ್ಯರಾದ ಕಾರಣ ಅವರ ಸ್ಥಾನಕ್ಕೆ ಬೆಥಲ್ ಬಂದರೂ, ಅವರು ತನಗೆ ಸಿಕ್ಕ ಅವಕಾಶ ಬಳಸಿಕೊಳ್ಳುತ್ತಿಲ್ಲ. ಹಾಗಾಗಿ ಮುಂಬೈ ವಿರುದ್ಧದ ಇಂದಿನ ಪಂದ್ಯ ಆರ್‌ಸಿಬಿ ಮಟ್ಟಿಗೆ ಮಹತ್ವದ್ದಾಗಲಿದೆ.

**ಮುಖಾಮುಖಿ**
ಒಟ್ಟು ಪಂದ್ಯಗಳು 35
ಮುಂಬೈ ಗೆಲುವು 19
ಆರ್‌ಸಿಬಿ ಗೆಲುವು 15



**ಮುಂಬೈ**
- » ಹಾರ್ದಿಕ್ ಪಾಂಡ್ಯ ⏩ ನಾಯಕ
- » ರಿಕಲ್ಟನ್ ⏩ ಕೀಪರ್
- » ನಮನ್ ಧೀರ್
- » ಸೂರ್ಯಕುಮಾರ್
- » ತಿಲಕ್ ವರ್ಮಾ
- » ವಿಲ್ ಜಾಕ್ಸ್
- » ಕಾರ್ಬಿನ್ ಬಾಷ್
- » ದೀಪಕ್ ಚಾಹರ್
- » ಬುಮ್ರಾ
- » ಗಜನ್ಫರ್
- » ರಘು ಶರ್ಮಾ

## ರಶೀದ್ ಖಾನ್ ಸ್ಪಿನ್ ಮೋಡಿಗೆ ರಾಯಲ್ಸ್ ತತ್ತರ | ಗಿಲ್, ಸುದರ್ಶನ್ ಅಬ್ಬರದ ಬ್ಯಾಟಿಂಗ್

# ರಾಜಸ್ಥಾನ ಮಣಿಸಿ 2ನೇ ಸ್ಥಾನಕ್ಕೇರಿದ ಗುಜರಾತ್

**ಜೈಪುರ:** ಶುಭಮನ್ ಗಿಲ್ ಅವರ ಅಬ್ಬರದ ಬ್ಯಾಟಿಂಗ್ ಹಾಗೂ ರಶೀದ್ ಖಾನ್ ಅವರ ಸ್ಪಿನ್ ಮೋಡಿಯ ಸಹಾಯದಿಂದ ಗುಜರಾತ್ ಟೈಟಾನ್ಸ್ ತಂಡವು ರಾಜಸ್ಥಾನ್ ರಾಯಲ್ಸ್ ವಿರುದ್ಧ 77 ರನ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಆ ಮೂಲಕ ಈ ಐಪಿಎಲ್ ಟೂರ್ನಿಯಲ್ಲಿ ಏಳನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಲಗ್ಗೆ ಇಟ್ಟಿತು. ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಜೈಸ್ವಾಲ್ ನಾಯಕತ್ವದ ರಾಜಸ್ಥಾನ ತಂಡವು ಶನಿವಾರ ಐದನೇ ಸ್ಥಾನಕ್ಕೆ ಕುಸಿಯಿತು.

ಇಲ್ಲಿನ ಸವಾಯಿ ಮಾನ್ಸಿನ್ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ನೀಡಿದ್ದ 230 ರನ್‌ಗಳ ಗುರಿಯನ್ನು ಬೆಂಬತ್ತಿದ ರಾಜಸ್ಥಾನ್ ರಾಯಲ್ಸ್ ತಂಡವು ರಶೀದ್ ಖಾನ್ ಸ್ಪಿನ್ ಮೋಡಿಗೆ ಮಕಾಡೆ ಮಲಗಿತು. ಆರಂಭಿಕ ಬ್ಯಾಟ್ಸ್‌ಮನ್ ವೈಭವ್ ಸೂರ್ಯವಂಶಿ (36 ರನ್, 16 ಎಸೆತ), ಧ್ರುವ್ ಜುರೆಲ್ (24 ರನ್, 10 ಎಸೆತ) ಹಾಗೂ ರವೀಂದ್ರ ಜಡೇಜಾ (38 ರನ್, 25 ಎಸೆತ) ಅವರು ಕೊಂಚ ಪ್ರತಿರೋಧ ತೋರಿದ್ದು ಬಿಟ್ಟರೆ, ಇನ್ನುಳಿದ ಬ್ಯಾಟ್ಸ್‌ಮನ್‌ಗಳು ಗುಜರಾತ್ ಬೌಲರ್‌ಗಳಿಗೆ ಶರಣಾದರು. ಅಂತಿಮವಾಗಿ ರಾಜಸ್ಥಾನ್ ರಾಯಲ್ಸ್ ತಂಡವು 16.3 ಓವರ್‌ಗಳಿಗೆ 152 ರನ್‌ಗಳಿಗೆ ಆಲ್ ಔಟ್ ಆಯಿತು.

ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದ ಗಿಲ್.

ರಶೀದ್ ಸ್ಪಿನ್ ಮೋಡಿ: ಪಂದ್ಯದಲ್ಲಿ ಅದ್ಭುತ ಬೌಲಿಂಗ್ ಪ್ರದರ್ಶನವನ್ನು ತೋರಿದ ರಶೀದ್ ಖಾನ್, ಕ್ರೀಸ್‌ನಲ್ಲಿ ನೆಲೆ ಕಂಡುಕೊಂಡಿದ್ದ ಧ್ರುವ್ ಜ್ಯುರೆಲ್, ರವೀಂದ್ರ ಜಡೇಜಾ ಅವರನ್ನು ನಿರ್ಣಾಯಕ ಹೊತ್ತಲ್ಲಿ ಔಟ್ ಮಾಡಿದರು. ನಂತರ ಡನೊವಾನ್ ಫೆರೇರಾ ಹಾಗೂ ಶುಭಮ್ ದುಬೆ ಅವರನ್ನೂ ಪೆವಿಲಿಯನ್‌ಗೆ ಕಳುಹಿಸಿದರು. ಆ ಮೂಲಕ ನಾಲ್ಕು ಓವರ್‌ಗಳ ಬೌಲಿಂಗ್‌ನಲ್ಲಿ 33 ರನ್ ನೀಡಿ 4 ವಿಕೆಟ್ ಪಡೆದ ಸಾಧನೆ ಮಾಡಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಜೇಸನ್ ಹೋಲ್ಡರ್ 3 ವಿಕೆಟ್ ಗಳಿಸಿದರೆ, ಕಗಿಸೊ ರಬಾಡ ಎರಡು ವಿಕೆಟ್ ಪಡೆದರು.

ಗುಜರಾತ್ ಭರ್ಜರಿ ಆರಂಭ: ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಗುಜರಾತ್ ಟೈಟಾನ್ಸ್ ತಂಡಕ್ಕೆ ಆರಂಭಿಕ ಆಟಗಾರರಾದ ಸಾಯಿ ಸುದರ್ಶನ್ ಹಾಗೂ ನಾಯಕ ಶುಭಮನ್ ಗಿಲ್ ಅಬ್ಬರದ ಅರ್ಧಶತಕಗಳ ಮೂಲಕ ಭರ್ಜರಿ ಆರಂಭವನ್ನು ತಂದುಕೊಟ್ಟಿದ್ದರು. ಅವರಿಬ್ಬರೂ ಸೇರಿ ಮೊದಲ ವಿಕೆಟ್‌ಗೆ 65 ಎಸೆತಗಳಲ್ಲಿ 118 ರನ್‌ಗಳನ್ನು ಕಲೆ ಹಾಕಿದರು. ಆ ಮೂಲಕ ಗುಜರಾತ್ 11ನೇ ಓವರ್‌ನಲ್ಲಿ ಒಂದು ವಿಕೆಟ್ ನಷ್ಟಕ್ಕೆ 118 ರನ್‌ಗಳನ್ನು ಗಳಿಸಿತು.

ಸುದರ್ಶನ್, ಗಿಲ್ ಅರ್ಧಶತಕ: ಆರಂಭಿಕ ಆಟಗಾರ ಸಾಯಿ ಸುದರ್ಶನ್ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ 36 ಎಸೆತಗಳಲ್ಲಿ 2 ಸಿಕ್ಸರ್ ಹಾಗೂ 6 ಬೌಂಡರಿಗಳೊಂದಿಗೆ 55 ರನ್ ಗಳಿಸಿದ ಬಳಿಕ ಯಶ್‌ರಾಜ್ ಪುಂಜಾಗೆ ವಿಕೆಟ್ ಒಪ್ಪಿಸಿದರು. ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು 17ನೇ ಓವರ್‌ವರೆಗೂ ಬ್ಯಾಟಿಂಗ್ ಮುಂದುವರಿಸಿದ ಶುಭ್‌ಮನ್ ಗಿಲ್, ರಾಜಸ್ಥಾನ ಬೌಲರ್‌ಗಳಿಗೆ ಬೆವರಿಳಿಸಿದರು, ಆಡಿದ 44 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 9 ಬೌಂಡರಿಗಳೊಂದಿಗೆ 84 ರನ್ ಗಳಿಸಿ ತಂಡದ ಮೊತ್ತವನ್ನು 180ರ ಗಡಿ ದಾಟಿಸಿ ವಿಕೆಟ್ ಒಪ್ಪಿಸಿದರು.

ಗಿಲ್ ಔಟ್ ಆದ ಬಳಿಕ ಕೊನೆಯವರೆಗೂ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದ ವಾಷಿಂಗ್ಟನ್ ಸುಂದರ್ ಕೇವಲ 20 ಎಸೆತಗಳಲ್ಲಿ ಮೂರು ಸಿಕ್ಸರ್ ಹಾಗೂ ಎರಡು ಬೌಂಡರಿಗಳೊಂದಿಗೆ ಅಜೇಯ 37 ರನ್ ಬಾರಿಸಿ ತಂಡದ ಮೊತ್ತವನ್ನು 230ರ ಸನಿಹಕ್ಕೆ ತೆಗೆದುಕೊಂಡು ಹೋದರು. ರಾಹುಲ್ ತೇವಾಟಿಯಾ 4 ಎಸೆತಗಳಲ್ಲಿ 14 ರನ್ ಗಳಿಸಿದರು. ಗುಜರಾತ್ ಟೈಟಾನ್ಸ್ ತನ್ನ ಪಾಲಿನ 20 ಓವರ್‌ಗಳಿಗೆ 4 ವಿಕೆಟ್ ನಷ್ಟಕ್ಕೆ 229 ರನ್‌ಗಳನ್ನು ಕಲೆ ಹಾಕಿತು.

ರಾಜಸ್ಥಾನ ತಂಡದ ಪರ ಬ್ರಿಜೇಶ ಶರ್ಮಾ ಎರಡು ವಿಕೆಟ್, ರವೀಂದ್ರ ಜಡೇಜಾ ಹಾಗೂ ಯಶ್‌ರಾಜ್ ಪುಂಜಾ ತಲಾ ಒಂದೊಂದು ವಿಕೆಟ್ ಪಡೆದರು.

### ಐಪಿಎಲ್-2026 ಅಂಕಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ಅಂಕ |
|---|---|---|---|---|
| ಹೈದರಾಬಾದ್ | 11 | 7 | 4 | 14 |
| ಗುಜರಾತ್ | 11 | 7 | 4 | 14 |
| ಪಂಜಾಬ್ | 10 | 6 | 3 | 13 |
| ಬೆಂಗಳೂರು | 10 | 6 | 4 | 12 |
| ರಾಜಸ್ಥಾನ್ | 11 | 6 | 5 | 12 |
| ಚೆನ್ನೈ | 10 | 5 | 5 | 10 |
| ಕೋಲ್ಕತಾ | 10 | 4 | 5 | 9 |
| ಡೆಲ್ಲಿ | 11 | 4 | 7 | 8 |
| ಮುಂಬೈ | 10 | 3 | 7 | 6 |
| ಲಖನೌ | 10 | 3 | 7 | 6 |

## ಸೂರ್ಯವಂಶಿ ಸಿಕ್ಸರ್ ದಾಖಲೆ

ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಘಟಾನುಘಟಿ ಬೌಲರ್‌ಗಳಿಗೆ ನಡುಕ ಹುಟ್ಟಿಸಿದ ವೈಭವ್ ಸೂರ್ಯವಂಶಿ ಹಲವು ದಾಖಲೆಗಳನ್ನು ಈ ಐಪಿಎಲ್‌ನಲ್ಲೂ ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ. ಇದೀಗ ಶನಿವಾರ ಅವರು ಮತ್ತೊಂದು ದಾಖಲೆಯನ್ನು ಬರೆದಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ 100 ಸಿಕ್ಸರ್‌ಗಳನ್ನು ಪೂರ್ಣಗೊಳಿಸಿದ 20 ವರ್ಷ ವಯಸ್ಸಿನೊಳಗಿನ ಬ್ಯಾಟ್ಸ್‌ಮನ್ ಎಂಬ ದಾಖಲೆಯನ್ನು ಅವರು ಬರೆದಿದ್ದು, ಆ ಮೂಲಕ ವೆಸ್ಟ್ ಇಂಡೀಸ್ ದಿಗ್ಗಜ ಕೈರೊನ್ ಪೊಲಾರ್ಡ್ ದಾಖಲೆಯನ್ನು ಮುರಿದಿದ್ದಾರೆ. ಪೊಲಾರ್ಡ್ 100 ಸಿಕ್ಸರ್‌ಗಳನ್ನು ಪೂರ್ಣಗೊಳಿಸಲು 843 ಎಸೆತಗಳನ್ನು ತೆಗೆದುಕೊಂಡಿದ್ದರು. ಆದರೆ ವೈಭವ್ ಸೂರ್ಯವಂಶಿ 100 ಸಿಕ್ಸರ್‌ಗಳನ್ನು ಪೂರೈಸಲು 514 ಎಸೆತಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ.

ರಶೀದ್ ಖಾನ್.

### ಸ್ಕೋರ್ ಬೋರ್ಡ್

**ಗುಜರಾತ್ 229/4 — 20 ಓವರ್**

| | | ರನ್ | ಎಸೆತ | 4s | 6s |
|---|---|---|---|---|---|
| ಸುದರ್ಶನ್ | ಸಿ ಆರ್ಚರ್, ಬಿ ಪೂಂಜಾ | 55 | 36 | 6 | 2 |
| ಗಿಲ್ | ಸಿ ದೇಶಪಾಂಡೆ, ಬಿ ಬ್ರಿಜೇಶ್ | 84 | 44 | 9 | 3 |
| ಬಟ್ಲರ್ | ಸಿ ಫೆರೀರಾ, ಬಿ ಜಡೇಜಾ | 13 | 10 | 1 | 1 |
| ಸುಂದರ್ | ನಾಟ್ ಔಟ್ | 37 | 20 | 2 | 3 |
| ಹೋಲ್ಡರ್ | ಸಿ ಜೈಸ್ವಾಲ್, ಬಿ ಬ್ರಿಜೇಶ್ | 7 | 7 | 1 | 0 |
| ತೆವಾಟಿಯಾ | ನಾಟ್ ಔಟ್ | 14 | 4 | 0 | 2 |

**ಬೌಲಿಂಗ್ ರಾಜಸ್ಥಾನ**

| | ಓವರ್ | ಮೇಡನ್ | ರನ್ | ವಿಕೆಟ್ |
|---|---|---|---|---|
| ಆರ್ಚರ್ | 3 | 0 | 46 | 0 |
| ದೇಶಪಾಂಡೆ | 4 | 0 | 52 | 0 |
| ಬ್ರಿಜೇಶ್ | 4 | 0 | 47 | 2 |
| ಪೂಂಜಾ | 4 | 0 | 37 | 1 |
| ಜಡೇಜಾ | 4 | 0 | 34 | 1 |
| ಫೆರೇರಾ | 1 | 0 | 11 | 0 |

ವಿಕೆಟ್ ಪತನ : 1/118, 2/150, 3/185, 4/205

**ರಾಜಸ್ಥಾನ 152/10 — 16.3 ಓವರ್**

| | | ರನ್ | ಎಸೆತ | 4s | 6s |
|---|---|---|---|---|---|
| ಜೈಸ್ವಾಲ್ | ಸಿ ಸಿಂಧು, ಬಿ ರಬಾಡ | 3 | 4 | 0 | 0 |
| ಸೂರ್ಯವಂಶಿ | ಸಿ ರಶೀದ್, ಬಿ ಸಿರಾಜ್ | 36 | 16 | 3 | 3 |
| ಜುರೆಲ್ | ಬಿ ರಶೀದ್ | 24 | 10 | 1 | 3 |
| ಹೆಟ್ಮೆಯರ್ | ಸಿ ಹೋಲ್ಡರ್, ಬಿ ರಬಾಡ | 6 | 7 | 1 | 0 |
| ಜಡೇಜಾ | ಎಲ್‌ಬಿಡಬ್ಲ್ಯು ರಶೀದ್ | 38 | 25 | 3 | 2 |
| ಫೆರೇರಾ | ಬಿ ರಶೀದ್ | 4 | 2 | 1 | 0 |
| ದುಬೆ | ಬಿ ರಶೀದ್ | 15 | 14 | 1 | 0 |
| ಶನಕ | ಸಿ ಗಿಲ್, ಬಿ ಹೋಲ್ಡರ್ | 16 | 11 | 2 | 0 |
| ಆರ್ಚರ್ | ಸಿ ಬಟ್ಲರ್, ಬಿ ಹೋಲ್ಡರ್ | 5 | 6 | 1 | 0 |
| ದೇಶಪಾಂಡೆ | ಸಿ ಸುಂದರ್, ಬಿ ಹೋಲ್ಡರ್ | 1 | 3 | 0 | 0 |
| ಬ್ರಿಜೇಶ್ | ನಾಟ್ ಔಟ್ | 1 | 1 | 0 | 0 |

**ಬೌಲಿಂಗ್ ಗುಜರಾತ್**

| | ಓವರ್ | ಮೇಡನ್ | ರನ್ | ವಿಕೆಟ್ |
|---|---|---|---|---|
| ಸಿರಾಜ್ 4 | | | 0 55 | 1 |
| ರಬಾಡ 3 | | | 0 33 | 2 |
| ಕಿಶೋರ್ 1 | | | 0 8 | 0 |
| ರಶೀದ್ 4 | | | 0 33 | 4 |
| ಸುಂದರ್ 2 | | | 0 10 | 0 |
| ಹೋಲ್ಡರ್ 2.3 | | | 0 12 | 3 |

ವಿಕೆಟ್ ಪತನ : 1/38, 2/40, 3/68, 4/87, 5/91, 6/113, 7/136, 8/141, 9/151, 10/152

ಪ್ಲೇಯರ್ ಆಫ್ ದಿ ಮ್ಯಾಚ್ ⏩ ರಶೀದ್ (ಗುಜರಾತ್)

# ಡೋಪಿಂಗ್ ಪರೀಕ್ಷೆ ತಪ್ಪಿಸಿಕೊಂಡ ಜೈಸ್ವಾಲ್, ಶಫಾಲಿಗೆ ನೋಟಿಸ್

**ದೆಹಲಿ:** ಡೋಪಿಂಗ್ ಪರೀಕ್ಷೆ ತಪ್ಪಿಸಿಕೊಂಡಿದ್ದಕ್ಕಾಗಿ ಭಾರತದ ಕ್ರಿಕೆಟಿಗರಾದ ಯಶಸ್ವಿ ಜೈಸ್ವಾಲ್ ಮತ್ತು ಶಫಾಲಿ ವರ್ಮಾ ಅವರಿಗೆ ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆ (ನಾಡಾ) ನೋಟಿಸ್ ನೀಡಿದೆ. ನಿಗದಿತ ಡೋಪಿಂಗ್ ಪರೀಕ್ಷೆ ಗಳಿಗೆ ಅವರು ಘೋಷಿತ ಸ್ಥಳಗಳಲ್ಲಿ ಹಾಜರಾಗದ ನಿಯಮದ ಅಡಿ ಯಲ್ಲಿ ನೋಟಿಸ್ ನೀಡಲಾಗಿದೆ. ಈ ಬೆಳವಣಿಗೆ ಬಗ್ಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೂ (ಬಿಸಿಸಿಐ)ಗೂ ಮಾಹಿತಿ ನೀಡಲಾಗಿದ್ದು, ಇಬ್ಬರೂ ಆಟಗಾರರಿಗೆ ತಮ್ಮ ಬಗ್ಗೆ ವಿವರಣೆ ನೀಡಲು ಅವಕಾಶ ನೀಡಲಾಗಿದೆ. ನಾಡಾದ ನೋಂದಾಯಿತ ಪರೀಕ್ಷಾ ಪೂಲ್ (ಆರ್‌ಟಿಪಿ) ಭಾಗವಾಗಿರುವ ಇಬ್ಬರು ಕ್ರಿಕೆಟಿಗರ ಮೊದಲ ಅಪರಾಧ ಇದಾಗಿದೆ.

**ನಿಯಮ ಏನು ಹೇಳುತ್ತದೆ:** ನಾಡಾದ ನೋಂದಾಯಿತ ಪರೀಕ್ಷಾ ಪೂಲ್‌ನಲ್ಲಿ ಸೇರಿಸಲಾದ ಕ್ರೀಡಾಪಟುಗಳು ಸ್ಪರ್ಧೆಯ ಹೊರಗಿನ ಡೋಪ್ ಪರೀಕ್ಷೆಗೆ ಲಭ್ಯವಿರುವ ನಿಗದಿತ ಸಮಯ ಮತ್ತು ಸ್ಥಳವನ್ನು ಒದಗಿಸ ಬೇಕಾಗುತ್ತದೆ. ಡೋಪಿಂಗ್ ನಿಯಂತ್ರಣ ಅಧಿಕಾರಿ ಮಾದರಿಗಳನ್ನು ಸಂಗ್ರಹಿಸಲು ಘೋಷಿತ ಅವಧಿಯಲ್ಲಿ ಆಗಮಿಸಬಹುದು ಮತ್ತು ನಿರ್ದಿಷ್ಟ ಸ್ಥಳದಲ್ಲಿ ಹಾಜರಿರದಿದ್ದರೆ ಡೋಪಿಂಗ್ ವಿರೋಧಿ ನಿಯಮಗಳ ಅಡಿ ಯಲ್ಲಿ ಪರೀಕ್ಷೆಯನ್ನು ತಪ್ಪಿಸಬಹುದು.

ನೋಟಿಸ್‌ಗಳ ಪ್ರಕಾರ, ಕಳೆದ ವರ್ಷ ಡಿಸೆಂಬರ್ 17ರಂದು ಡಿಸಿಒ ಯಶಸ್ವಿ ಅವರ ಡೋಪಿಂಗ್ ಪರೀಕ್ಷೆಯನ್ನು ನಡೆಸಲು ಪ್ರಯತ್ನಿಸಿದರು. ಆದರೆ ಶಫಾಲಿ ಅವರ ನಿಗದಿತ ಪರೀಕ್ಷೆಯು ನವೆಂಬರ್ 7ರಂದು ಇತ್ತು. ಎರಡೂ ಸಂದರ್ಭಗಳಲ್ಲಿ ಆಟಗಾರರು ಅವರು ಘೋಷಿಸಿದ ಸ್ಥಳಗಳಲ್ಲಿ ಕಂಡುಬಂದಿಲ್ಲ. ನಂತರ ಫೆಬ್ರವರಿ 18 ಮತ್ತು 20ರಂದು ಕ್ರಮವಾಗಿ ಆಟಗಾರರಿಂದ ವಿವರಣೆಗಳನ್ನು ಕೋರಿತು, ಆದರೆ ಇಬ್ಬರೂ ಪ್ರತಿಕ್ರಿಯಿಸಲಿಲ್ಲ. ಇದರಿಂದಾಗಿ ಅವರಿಬ್ಬರಿಗೆ ನೋಟಿಸ್ ನೀಡಲಾಗಿದೆ. ಒಂದು ಬಾರಿ ಪರೀಕ್ಷೆಗೆ ತಪ್ಪಿಸಿದರೆ ಅದು ಡೋಪಿಂಗ್ ವಿರೋಧಿ ಉಲ್ಲಂಘನೆಯಾಗುವುದಿಲ್ಲ.

### ಸದ್ಯ ಹಾಜರಾತಿ ಕಷ್ಟ

ಈ ಬೆಳವಣಿಗೆ ಇಬ್ಬರೂ ಆಟಗಾರರಿಗೆ ನಿರ್ಣಾಯಕ ಸಮಯದಲ್ಲಿ ಎದುರಾ ಗಿದ್ದು, ಜೈಸ್ವಾಲ್ ಪ್ರಸ್ತುತ ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ಪರ ಆಡುತ್ತಿ ದ್ದಾರೆ, ಫ್ರಾಂಚೈಸಿ ಇನ್ನೂ ಪ್ಲೇ-ಆಫ್ ಸ್ಥಾನಕ್ಕಾಗಿ ಪ್ರಯತ್ನಿಸುತ್ತಿದೆ. ಹಾಗೆಯೇ ಜೂನ್ 12ರಿಂದ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಪ್ರಾರಂಭವಾಗುವ ಮಹಿಳಾ ಟಿ 20 ವಿಶ್ವಕಪ್‌ಗೆ ಭಾರತ ಮಹಿಳಾ ತಂಡ ಸಿದ್ಧತೆ ನಡೆಸುತ್ತಿರುವಾಗ ಶಫಾಲಿ ವರ್ಮಾಗೆ ಈ ಸಂಕಷ್ಟ ಎದುರಾಗಿದೆ.

## ಎಐ ನಿರ್ಮಿತ ನಕಲಿ ಟಿಕೆಟ್‌ಗಳ ಮಾರಾಟ

# ಐಪಿಎಲ್ ವಂಚಕ ಜಾಲ ಪತ್ತೆ

**ಲಖನೌ:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದ ಟಿಕೆಟ್‌ಗಳನ್ನು ನಕಲಿ ಮಾಡಲು ಕೃತಕ ಬುದ್ಧಿಮತ್ತೆಯನ್ನು ಬಳಸುತ್ತಿದ್ದ ಅಂತರರಾಜ್ಯ ಗ್ಯಾಂಗ್ ಅನ್ನು ಲಖನೌ ಪೊಲೀಸರು ಬಂಧಿಸಿದ್ದಾರೆ. ಗುರುವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಲಖನೌ ಪಂದ್ಯದ ಸಮಯದಲ್ಲಿ, ಏಕಾನಾ ಕ್ರೀಡಾಂಗಣದ ಹೊರಗೆ ನಕಲಿ ಟಿಕೆಟ್‌ಗಳನ್ನು ಮಾರಾಟ ಮಾಡಿದ್ದಕ್ಕಾಗಿ ನಾಲ್ವರನ್ನು ಬಂಧಿಸಲಾಗಿದೆ. ಈ ಗ್ಯಾಂಗ್ ನಕಲಿ ಐಪಿಎಲ್ ಪಂದ್ಯದ ಟಿಕೆಟ್‌ಗಳನ್ನು ಸೃಷ್ಟಿಸಲು ಮತ್ತು ಸ್ಥಳದ ಗೇಟ್‌ಗಳಲ್ಲಿ ಕ್ರಿಕೆಟ್ ಅಭಿಮಾನಿಗಳಿಗೆ ಮಾರಾಟ ಮಾಡಲು ಚಾಟ್‌ಜಿಪಿಟಿ ಮತ್ತು ಗ್ರಾಫಿಕ್ ವಿನ್ಯಾಸ ಸಾಫ್ಟ್‌ವೇರ್ ಅನ್ನು ಬಳಸಿಕೊಂಡಿದೆ ಎಂದು ಆರೋಪಿಸಲಾಗಿದೆ. ಆರ್‌ಸಿಬಿ ಮತ್ತು ಲಖನೌ ಪಂದ್ಯದ ವೇಳೆ ಏಕಾನಾ ಕ್ರೀಡಾಂಗಣದಲ್ಲಿ ಒಬ್ಬ ವ್ಯಕ್ತಿಯೊಂದಿಗೆ ನಕಲಿ ಐಪಿಎಲ್ ಟಿಕೆಟ್ ಪತ್ತೆಯಾಗಿದೆ ಎಂದು ಡಿಸಿಪಿ (ಲಖನೌ ದಕ್ಷಿಣ) ಅಮಿತ್ ಕುಮಾರ್ ಆನಂದ್ ಪಿಟಿಐಗೆ ತಿಳಿಸಿ ದರು. ವಿಚಾರಣೆಯ ಸಮಯದಲ್ಲಿ, ಕ್ರೀಡಾಂಗಣದ ಹೊರಗೆ ಯಾರೋ ಟಿಕೆಟ್ ಮಾರಾಟ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಇದರ ನಂತರ, ಸೈಬರ್ ಸೆಲ್ ಲಖನೌ ಮತ್ತು ಸುಶಾಂತ್ ಗಾಲ್ಫ್ ಸಿಟಿ ಪೊಲೀಸ್ ತಂಡ ಕಾರ್ಯಾಚರಣೆ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿದೆ. ಅವರೆಲ್ಲರೂ ಛತ್ತೀಸ್‌ಗಢದ ದುರ್ಗ್ ಜಿಲ್ಲೆಯ ನಿವಾಸಿಗಳು ಎಂದು ಡಿಸಿಪಿ ಆನಂದ್ ಹೇಳಿದ್ದಾರೆ. ಮುಂಬೈನಲ್ಲಿ ಆನ್‌ಲೈನ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳನ್ನು ಬಂಧಿಸಲಾಗಿದ್ದು, ಅವರ ಮೊಬೈಲ್ ಫೋನ್‌ಗಳಲ್ಲಿ 8 ಕೋಟಿ ರು.ಗೂ ಹೆಚ್ಚಿನ ಡಿಜಿಟಲ್ ವಹಿವಾಟು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಇಂದು ಚೆನ್ನೈ-ಲಖನೌ ಹಣಾಹಣಿ

**ಚೆನ್ನೈ:** ಇಂದು ಇಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಲಖನೌ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಈಗಾಗಲೇ 10 ಪಂದ್ಯಗಳನ್ನು ಆಡಿರುವ ಋತುರಾಜ್ ಗಾಯಕ್ವಾಡ್ ನಾಯಕತ್ವದ ಚೆನ್ನೈ ತಂಡವು 5 ಪಂದ್ಯಗಳನ್ನು ಗೆದ್ದು, 5 ಪಂದ್ಯಗಳಲ್ಲಿ ಸೋತು 10 ಅಂಕಗಳೊಂದಿಗೆ 6ನೇ ಸ್ಥಾನದಲ್ಲಿದೆ. ರಿಷಬ್ ಪಂತ್ ನಾಯಕತ್ವದ ಲಖನೌ ತಂಡವು 10 ಪಂದ್ಯಗಳ ಪೈಕಿ ಕೇವಲ 3 ಪಂದ್ಯಗಳಲ್ಲಿ ಮಾತ್ರ ಗೆದ್ದು, 7ರಲ್ಲಿ ಸೋತು 6 ಅಂಕಗಳನ್ನು ಪಡೆದು ಕೊನೆಯ ಸ್ಥಾನದಲ್ಲಿದೆ.

**ಮುಖಾಮುಖಿ**
ಪಂದ್ಯಗಳು 6
ಲಖನೌ ಜಯ 3
ಚೆನ್ನೈ ಜಯ 2

ಚೆನ್ನೈ ತಂಡವು ಈ ಐಪಿಎಲ್ ಆವೃತ್ತಿಯ ಮೊದಲ ಮೂರ್ನಾಲ್ಕು ಪಂದ್ಯಗಳಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿ ಕ್ರಿಕೆಟ್ ಅಭಿಮಾನಿ ಗಳಿಂದ ತೀವ್ರ ಟೀಕೆಗೊಳಗಾಗಿತ್ತು. ಆದರೆ ಆ ಬಳಿಕ ಅದು ಪುಟಿದೆದ್ದು ಒಂದರ ಹಿಂದೆ ಪಂದ್ಯ ಗೆಲ್ಲುತ್ತಾ ಹೋಯಿತು. ಚೆನ್ನೈ ವಿರುದ್ಧದ ಮೊದಲ ಪಂದ್ಯದಲ್ಲಿ ರಾಜಸ್ಥಾನ್ ಗೆದ್ದರೆ, 2ನೇ ಪಂದ್ಯದಲ್ಲಿ ಪಂಜಾಬ್ ಗೆಲುವಿನ ನಗೆ ಬೀರಿತ್ತು. 3ನೇ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಚೆನ್ನೈ ಸೋತಿತ್ತು. ಆದರೆ 4ನೇ ಪಂದ್ಯದಲ್ಲಿ ಚೆನ್ನೈ ತಂಡವು ಕೋಲ್ಕತಾ ವಿರುದ್ಧ, 5ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಹಾಗೂ 6ನೇ ಪಂದ್ಯದಲ್ಲಿ ಮುಂಬೈ ವಿರುದ್ಧವೂ ಜಯ ಗಳಿಸಿ ಹ್ಯಾಟ್ರಿಕ್ ಗೆಲುವನ್ನು ತನ್ನದನ್ನಾಗಿಸಿತ್ತು. ಚೆನ್ನೈ ತಂಡವು 7ನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಸೋತರೆ, 8ನೇ ಪಂದ್ಯದಲ್ಲಿ ಮುಂಬೈ ಮತ್ತು 10ನೇ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಭರ್ಜರಿ ಗೆಲುವನ್ನು ಸಾಧಿಸಿತ್ತು.

ಲಖನೌ ತಂಡವು ತನ್ನ ಮೊದಲ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಸೋತು ನಿರಾಶೆ ಅನುಭವಿಸಿತ್ತು. ಆದರೆ 2ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಮತ್ತು 3ನೇ ಪಂದ್ಯದಲ್ಲಿ ಕೋಲ್ಕತಾ ವಿರುದ್ಧವೂ ಜಯ ಗಳಿಸಿತ್ತು. 4ನೇ ಪಂದ್ಯದಲ್ಲಿ ಗುಜರಾತ್, 5ನೇ ಪಂದ್ಯದಲ್ಲಿ ಆರ್‌ಸಿಬಿ, 6ನೇ ಪಂದ್ಯದಲ್ಲಿ ಪಂಜಾಬ್, 7ನೇ ಪಂದ್ಯದಲ್ಲಿ ರಾಜಸ್ಥಾನ್, 8ನೇ ಪಂದ್ಯ ದಲ್ಲಿ ಕೋಲ್ಕತಾ, 9ನೇ ಪಂದ್ಯದಲ್ಲಿ ಮುಂಬೈ ವಿರುದ್ಧ ಸೋತರೆ, ಗುರುವಾರ ನಡೆದ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಲಖನೌ ಡಕ್‌ವರ್ತ್ ಲೂಯಿಸ್ ನಿಯಮದಡಿ 9 ರನ್‌ಗಳ ಗೆಲುವನ್ನು ಸಾಧಿಸಿತ್ತು.

ನಾಕೌಟ್ ಹಂತ ಕ್ಕೇರಲು ಲಖನೌ ತಂಡಕ್ಕೆ ಇನ್ನು ಕನಿಷ್ಠ ಉಳಿದ ಪಂದ್ಯಗಳಿಂದ 10 ಅಂಕಗಳಾದರೂ ಬೇಕೇ ಬೇಕು. ಹಾಗಾಗಿ ಒಂದು ವೇಳೆ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಲಖನೌ ಸೋತರೆ ಅದರ ಪ್ಲೇಆಫ್ ಪ್ರವೇಶದ ಬಾಗಿಲು ಮುಚ್ಚಲಿದೆ.

**ಇಂದಿನ ಪಂದ್ಯ**
ಚೆನ್ನೈ vs ಲಖನೌ
ಸ್ಥಳ : ಚಿದಂಬರಂ ಕ್ರೀಡಾಂಗಣ, ಚೆನ್ನೈ
ಸಮಯ : ಅಪರಾಹ್ನ 3.30
ನೇರ ಪ್ರಸಾರ : ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್ : ಜಿಯೋ ಹಾಟ್‌ಸ್ಟಾರ್

## ರಾಜಸ್ಥಾನ ರಾಯಲ್ಸ್ ಖರೀದಿಸಿದ ಲಕ್ಷ್ಮಿ ಮಿತ್ತಲ್ | ಆಟಗಾರರೊಂದಿಗೆ ಸಂವಾದ

# ನವ ಮಾಲೀಕ ಮಿತ್ತಲ್ ರಾಯಲ್ ಆಟಗಾರರ ಭೇಟಿ

**ಜೈಪುರ:** ಶನಿವಾರದ ರಾಜಸ್ಥಾನ್ ರಾಯಲ್ಸ್ ಮತ್ತು ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯಕ್ಕೆ ಮುನ್ನ, ಜೈಪುರದ ಸವಾಯ್ ಮಾನ್ಸಿಂಗ್ ಕ್ರೀಡಾಂಗಣದಲ್ಲಿ ರಾಜಸ್ಥಾನ್ ಫ್ರಾಂಚೈಸಿಯ ಹೊಸ ಮಾಲೀಕ ಲಕ್ಷ್ಮಿ ಎನ್. ಮಿತ್ತಲ್ ತಂಡದ ಆಟಗಾರರನ್ನು ಭೇಟಿಯಾದರು. ತಂಡದ ನಾಯಕ ರಿಯಾನ್ ಪರಾಗ್ ಮತ್ತು ಯಶಸ್ವಿ ಜೈಸ್ವಾಲ್ ಅವರೊಂದಿಗೆ ದೀರ್ಘ ಮಾತುಕತೆ ನಡೆಸಿದರು.



ಇತ್ತೀಚೆಗಷ್ಟೇ ಉದ್ಯಮಿ ಲಕ್ಷ್ಮಿ ಎನ್. ಮಿತ್ತಲ್ ಮತ್ತು ಅವರ ಪುತ್ರ ಆದಿತ್ಯ ಮಿತ್ತಲ್ ಅವರು ಉದ್ಯಮಿ ಅದಾರ್ ಪೂನಾವಾಲಾ ಜತೆಗೂಡಿ ರಾಜಸ್ಥಾನ ರಾಯಲ್ಸ್ ಫ್ರಾಂಚೈಸಿಯ ಬಹುಪಾಲು ಷೇರನ್ನು ಖರೀದಿಸಿದ್ದಾರೆ. ಸುಮಾರು 15,600 ಕೋಟಿ ಮೊತ್ತಕ್ಕೆ ಈ ಷೇರುಗಳನ್ನು ಖರೀದಿ ಮಾಡಿತ್ತು. ಈ ಹಿಂದೆ ಅತ್ಯಧಿಕ ಮೊತ್ತದ ಬಿಡ್ ಸಲ್ಲಿಸಿದ್ದ ಕಲ್ ಸೊಮಾನಿ ರಾಬ್ ವಾಲ್ಟನ್ ಶೀಲಾ ಫೋರ್ಡ್ ಹ್ಯಾಂಪ್ ಕನ್ಸೋರ್ಷಿಯಂ (ಕಂಪನಿಗಳ ಒಕ್ಕೂಟ) ಖರೀದಿ ರೇಸ್‌ನಿಂದ ಹಿಂದೆ ಸರಿದ ಕಾರಣ ಮಿತ್ತಲ್ ಸಮೂಹ ಫ್ರಾಂಚೈಸಿಯನ್ನು ಖರೀದಿ ಮಾಡಿತು.

ಈ ಹಿಂದೆ ಕಲ್ ಸೊಮಾನಿ ನೇತೃತ್ವದಲ್ಲಿ ಅಮೆರಿಕದ ಮೂಲದ ಕಂಪನಿಗಳ ಒಕ್ಕೂಟವು ಸುಮಾರು 15,470 ಕೋಟಿ ಮೊತ್ತಕ್ಕೆ ಖರೀದಿಗೆ ಮುಂದಾಗಿತ್ತು, ಆದರೆ ವಿವಿಧ ಕಾರಣಗಳಿಂದ ಬಿಡ್ ಮುರಿದು ಬಿದ್ದಿತು.

ರಾಜಸ್ಥಾನ ರಾಯಲ್ಸ್ (ಪುರುಷರ ಫ್ರಾಂಚೈಸಿ), ಪಾರ್ಲ್ ರಾಯಲ್ಸ್ (ದಕ್ಷಿಣ ಆಫ್ರಿಕಾ ಲೀಗ್), ಬಾರ್ಬಾಡೋಸ್ ರಾಯಲ್ಸ್ (ಕೆರೀಬಿಯನ್ ಲೀಗ್) ಖರೀದಿ ಒಪ್ಪಂದದ ವ್ಯಾಪ್ತಿಯಲ್ಲಿ ಬರಲಿದೆ. ಈ ಒಪ್ಪಂದಕ್ಕೆ ಬಿಸಿಸಿಐ, ಸಿಸಿಐ ಮತ್ತು ಐಪಿಎಲ್ ಆಡಳಿತ ಮಂಡಳಿ ಮತ್ತು ಸಂಬಂಧಿತ ಕಾನೂನು ಸಂಸ್ಥೆಗಳ ಒಪ್ಪಿಗೆ ದೊರೆಯಬೇಕಿದೆ. ಒಪ್ಪಂದವು ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ವೇಳೆಗೆ ಅಂತಿಮಗೊಳ್ಳುವ ನಿರೀಕ್ಷೆಯಿದೆ.

ಒಪ್ಪಂದ ಪ್ರಕಾರ ಮಿತ್ತಲ್ ಕುಟುಂಬವು ರಾಜಸ್ಥಾನ ರಾಯಲ್ಸ್‌ನ ಅಂದಾಜು ಶೇ 75ರಷ್ಟು ಪಾಲು ಪಡೆಯಲಿದೆ. ಅದಾರ್ ಪೂನಾವಾಲಾ ಅವರು ಶೇ 18ರಷ್ಟು ಪಾಲು ಪಡೆಯಲಿದ್ದಾರೆ. ಉಳಿದ ಶೇ ರಷ್ಟು ಪಾಲನ್ನು ಹಿಂದಿನ ಆಡಳಿತ ಮಂಡಳಿಯಲ್ಲಿದ್ದ ಮನೋಜ್ ಬದಾಲೆ ಮತ್ತು ಇತರ ಹೂಡಿಕೆದಾರರು ಹೊಂದಲಿದ್ದಾರೆ. ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ ರಾಜಸ್ಥಾನ ರಾಯಲ್ಸ್ ಆಡಳಿತ ಮಂಡಳಿಯು ಲಕ್ಷ್ಮಿ ಎನ್.ಮಿತ್ತಲ್, ಆದಿತ್ಯ ಮಿತ್ತಲ್, ವನಿಶಾ ಮಿತ್ತಲ್‌ಭಾಟಿಯಾ, ಸೀರಂ ಇನ್‌ಸ್ಟಿಟ್ಯೂಟ್‌ನ ಸಿಇಒ ಅದಾರ್ ಪೂನಾವಾಲಾ ಮತ್ತು ಮನೋಜ್ ಬದಾಲೆ ಅವರನ್ನು ಹೊಂದಲಿದೆ.

## ಅಭಿಮಾನಿಗಳತ್ತ ಕೈ ಬೀಸಿದಾಗ ನಡೆದ ಘಟನೆ

# ರೋಹಿತ್ ವಾಚ್ ದೋಚಲು ಯತ್ನ

**ಮುಂಬೈ:** ಟೀಮ್ ಇಂಡಿಯಾದ ಮಾಜಿ ನಾಯಕ ರೋಹಿತ್ ಶರ್ಮಾ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಇಬ್ಬರು ಯುವ ಅಭಿಮಾನಿಗಳು ಅವರ ದುಬಾರಿ ಬೆಲೆಯ ವಾಚ್ ಕಸಿದುಕೊಳ್ಳಲು ಪ್ರಯತ್ನಿದ ಆಘಾತಕಾರಿ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. ವಿಡಿಯೊದ ನಿಖರವಾದ ಸಮಯ ಮತ್ತು ಸ್ಥಳವನ್ನು ಇನ್ನೂ ಪರಿಶೀಲಿಸಲಾಗಿಲ್ಲವಾದರೂ, ಈ ಘಟನೆ ಕ್ರಿಕೆಟ್ ಆಟಗಾರರಲ್ಲಿ ಆತಂಕ ಸೃಷ್ಟಿಸಿದೆ.

ವೈರಲ್ ಆಗಿರುವ ವಿಡಿಯೊ ಕ್ಲಿಪ್‌ನಲ್ಲಿ, ಭಾರತದ ಮಾಜಿ ನಾಯಕ ತಮ್ಮ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತು ಹೊರಗಡೆ ನೆರೆದಿದ್ದ ಅಭಿಮಾನಿಗಳತ್ತ ಕೈ ಬೀಸುತ್ತಿರುವುದು ಕಂಡುಬರುತ್ತದೆ. ಆರಂಭದಲ್ಲಿ ಅಭಿಮಾನಿಗಳು ಶಾಂತ ರೀತಿಯಲ್ಲಿ ವರ್ತಿಸಿದ್ದರು. ಆದರೆ ಆ ವೇಳೆ ಇಬ್ಬರು ಯುವಕರು ವಾಹನದ ಹತ್ತಿರ ಬಂದಾಗ ಅವರಿಬ್ಬರೂ ರೋಹಿತ್ ಕೈಯನ್ನು ಹಿಡಿಯಲು ಪ್ರಯತ್ನಿಸಿದರು. ಒಬ್ಬರು ಅವರ ಕೈಗಡಿಯಾರವನ್ನು ಎಳೆಯಲು ಪ್ರಯತ್ನಿಸುತ್ತಿರುವ ದೃಶ್ಯ ವಿಡಿಯೊದಲ್ಲಿದೆ. ಆ ವೇಳೆ ಎಚ್ಚೆತ್ತುಕೊಂಡ ರೋಹಿತ್ ಶರ್ಮಾ ತನ್ನ ಕಾರಿನ ಗ್ಲಾಸ್ ಮೇಲೆ ಸರಿಸಿ ಹುಡುಗರಿಗೆ ದೂರ ಸರಿಯುವಂತೆ ದೃಢವಾಗಿ ಸನ್ನೆ ಮಾಡಿದ್ದಾರೆ. ಕೆಲವು ಸಾಮಾಜಿಕ ಮಾಧ್ಯಮ ಬಳಕೆದಾರರು ರೋಹಿತ್ ಧರಿಸಿದ್ದ ಗಡಿಯಾರ ರೋಲೆಕ್ಸ್ ಜಿರಾಫೆ ಎಂದು ಹೇಳಿಕೊಂಡಿದ್ದು, ಅದರ ಮೌಲ್ಯ ಸುಮಾರು 3.25 ಕೋಟಿ ರು.ಗಳೆಂದು ವರದಿಯಾಗಿದೆ, ಆದರೆ ಇದನ್ನು ಅಧಿಕೃತವಾಗಿ ದೃಢಪಡಿಸಲಾಗಿಲ್ಲ.

**‘‘ನಾವು ಪ್ರಕೃತಿಯಿಂದ ಬೇರೆಯಲ್ಲ, ಅದರ ಒಂದು ಭಾಗ. ನಿಸರ್ಗ ಅಚ್ಚರಿಯ ಮತ್ತು ಉತ್ಸಾಹದ ದೊಡ್ಡ ಮೂಲ. ಅದು ಕಣ್ಣಿಗೆ ಕಾಣುವ ಅತ್ಯಂತ ಸುಂದರ ಲೋಕ. ಜ್ಞಾನ ಮತ್ತು ಚಿಂತನೆಗೆ ದೊಡ್ಡ ಪ್ರೇರಣೆ. ಬದುಕನ್ನು ಜೀವಿಸುವಂತಾಗಿಸುವ ಅನೇಕ ಸುಂದರ ಸಂಗತಿಗಳ ಮೂಲವೇ ಪ್ರಕೃತಿ’’ ಎಂದಿದ್ದಾನೆ ಡೇವಿಡ್ ಅಟೆನ್‌ಬರೋ. ಪರಿಸರವನ್ನು, ಪ್ರಕೃತಿಯನ್ನು, ವನ್ಯಜೀವಿಗಳನ್ನು ಚಿತ್ರಿಸುವುದೇ ತನ್ನ ಬದುಕು ಎಂದು ಪರಿಭಾವಿಸಿ, ಜೀವನವಿಡೀ ಅದರಲ್ಲೇ ತೊಡಗಿಕೊಂಡು, ಈ ಭೂಮಿಯಲ್ಲಿ ಅದೆಷ್ಟೋ ಜನರನ್ನು ಪರಿಸರಪ್ರೇಮಿಗಳನ್ನಾಗಿ ಪರಿವರ್ತಿಸಿದ ಈ ಖ್ಯಾತ ವನ್ಯಜೀವಿ ಛಾಯಚಿತ್ರಗಾರನಿಗೆ ಈಗ ನೂರು ವರ್ಷ ತುಂಬಿದೆ!**

» ಹರೀಶ್ ಕೇರ

# ಜಗದ ಜೀವಿಗಳ ಸಖ ಅಟೆನ್ ಬರೋ

ನೀವೇನಾದರೂ ಕರ್ನಾಟಕ ಅರಣ್ಯ ಇಲಾಖೆ ತಯಾರಿಸಿದ ‘ವೈಲ್ಡ್ ಕರ್ನಾಟಕ’ ಸಾಕ್ಷ್ಯಚಿತ್ರದ ಇಂಗ್ಲಿಷ್ ಆವೃತ್ತಿ ನೋಡಿದ್ದರೆ, ಅದರ ಹಿನ್ನೆಲೆಯಲ್ಲಿರುವ ನಿರೂಪಣೆಯ ಧ್ವನಿಯನ್ನು ಖಂಡಿತ ಮರೆಯಲಾರಿರಿ – ಅವರು ಒನ್ ಆಂಡ್ ಓನ್ಲೀ ಡೇವಿಡ್ ಅಟೆನ್‌ಬರೋ. ಜಗತ್ತು ಈ ವಾರ ಈ ಮನುಷ್ಯನನ್ನು ಮನತುಂಬಿ ಕೊಂಡಾಡುತ್ತಿದೆ. ಜೀವವೈವಿಧ್ಯವನ್ನೂ ಕಾಡನ್ನೂ ಬದುಕನ್ನೂ ಪ್ರೀತಿಸುವ ಎಲ್ಲರ ಹೃದಯಕ್ಕೆ ಖುಷಿಯ ಊಟೆಯನ್ನು ಹಲವು ರೀತಿ ಕೊಡಮಾಡಿದ ಈತನಿಗೆ ಮೊನ್ನೆ ನೂರು ವರ್ಷ ತುಂಬಿತು. ‘ವೈಲ್ಡ್ ಕರ್ನಾಟಕ’ಕ್ಕೆ ತನ್ನ ಸಮುದ್ರದ ಮೊರೆತದಂಥ ಧ್ವನಿ ನೀಡಿದಾಗ ಅವರಿಗೆ 94 ವರ್ಷ.

ವನ್ಯಜೀವಿ, ಪರಿಸರ, ಭೂಗ್ರಹ, ಜೀವಜಾತಿಗಳ ಕುರಿತ ನೂರಾರು ಸಾಕ್ಷ್ಯಚಿತ್ರಗಳನ್ನೂ ವಿಡಿಯೋಗಳನ್ನೂ ಮಾಡಿ ನಮ್ಮ ಅರಿವು ಹೆಚ್ಚಿಸಿದ ಡೇವಿಡ್, ಡಿಸ್ಕವರಿ, ನ್ಯಾಷನಲ್ ಜಿಯೊಗ್ರಾಫಿಕ್, ಬಿಬಿಸಿಗಳಿಗೆಲ್ಲ ಅಚ್ಚುಮೆಚ್ಚು. ನೀವು ಇದೊಂದು ವಿಡಿಯೋವನ್ನು ಮಿಸ್ ಮಾಡಿರಲು ಸಾಧ್ಯವೇ ಇಲ್ಲ– ಈಗಷ್ಟೇ ಮೊಟ್ಟೆಯೊಡೆದು ಹೊರ ಬಂದ ಸಮುದ್ರ ಇಗುವಾನಾದ ಮರಿಗಳನ್ನು ನೂರಾರು ಹಾವುಗಳು ಸಾಮೂಹಿಕವಾಗಿ ಬೆನ್ನಟ್ಟಿ ಬೇಟೆಯಾಡುವ ದೃಶ್ಯ. ಮೆಲ್ಲನೆ ತತ್ತಿಯೊಡೆದು ಕಣ್ಬಿಡುವ ಮರಿ, ಸುತ್ತಮುತ್ತ ಚಲನೆಯನ್ನೇ ಗ್ರಹಿಸಿ ಬೆನ್ನಟ್ಟುವ ಹಾವುಗಳು, ಮರಳು ದಿಬ್ಬಗಳು ಮತ್ತು ಬಂಡೆಗಳ ನಡುವೆ ರಣಭೀಕರ ಚೇಸ್ ಇದೆಲ್ಲ ಒಮ್ಮೆ ನೋಡಿದರೆ ಮರೆಯಲು ಸಾಧ್ಯವೇ ಇಲ್ಲದಂತೆ ಮೈ ರೋಮಾಂಚನಗೊಳಿಸುತ್ತದೆ. ಅದು ಡೇವಿಡ್ ‘ಬಿಬಿಸಿ ಅರ್ಥ್’ಗಾಗಿ ಚಿತ್ರಿಸಿದ ‘ಪ್ಲಾನೆಟ್ ಅರ್ಥ್’ ಸರಣಿಯ ‘ಐಲ್ಯಾಂಡ್ಸ್ ಎಪಿಸೋಡ್’ನ ಒಂದು ತುಣುಕು. ಹಾಲಿವುಡ್ ಫಿಲಂಗಳಲ್ಲಿ ಕೂಡ ಇಂಥ ಚೇಸಿಂಗ್ ದೃಶ್ಯ ಇರಲು ಸಾಧ್ಯವಿಲ್ಲ ಎಂಬುದು ಇದನ್ನು ನೋಡಿದವರ ಅಂಬೋಣ.

1926 ಮೇ 8ರಂದು ಇಂಗ್ಲೆಂಡ್‌ನಲ್ಲಿ ಜನಿಸಿದ ಡೇವಿಡ್ ಆಂಗ್ಲರ ಕ್ಲಾಸಿಕ್ ಸಭ್ಯತೆಯನ್ನು ಮನುಷ್ಯರಲ್ಲೂ ಪ್ರಾಣಿಗಳ ಜೊತೆಗೂ ರೂಢಿಸಿಕೊಂಡವರು. ಕಲಿತದ್ದೆಲ್ಲ ಕೇಂಬ್ರಿಜ್‌ನಲ್ಲಿ. ನೈಸರ್ಗಿಕ ವಿಜ್ಞಾನದ ಅಧ್ಯಯನ. 1947ರಿಂದ 1949ರವರೆಗೆ ರಾಯಲ್ ನೇವಿಯಲ್ಲಿ ಸೇವೆ. ಆದರೆ ಮನಸ್ಸೆಲ್ಲ ಹಸಿರು ಕಾಡು ವನ್ಯಜೀವಿಗಳತ್ತ. ನಂತರ ಬಿಬಿಸಿಗೆ ಸೇರಿ ಏಳು ದಶಕ ಪ್ರಸಾರ ವೃತ್ತಿಜೀವನ. ಮನುಷ್ಯ ಹೊರತುಪಡಿಸಿ ಅನ್ಯಜೀವಿಗಳ ಬದುಕಿನ ವೈಖರಿ ಅವರನ್ನು ಎಷ್ಟು ಒಳಗೊಂಡಿತ್ತು ಅಂದರೆ, ಇತ್ತೀಚಿನ ವರ್ಷಗಳಲ್ಲಿ ಲಂಡನ್‌ನಂಥ ದಟ್ಟ ಪಟ್ಟಣದ ನಡುವೆಯೇ ಇದ್ದ ಕಾಡುಪ್ರಾಣಿಗಳ ಬಗ್ಗೆಯೂ ಬರೆದಿದ್ದ ಚಿತ್ರೀಕರಿಸಿದ್ದ– ನಗರದ ಜಿಂಕೆಗಳಿಂದ ಹಿಡಿದು ಬೀದಿಯಲ್ಲೇ ಗೂಡು ಕಟ್ಟುವ ಪೆರೆಗ್ರಿನ್ ಫಾಲ್ಕನ್‌ಗಳವರೆಗೆ.

ಲೈಫ್ ಆನ್ ಅರ್ಥ್, ದಿ ಬ್ಲೂ ಪ್ಲಾನೆಟ್, ಪ್ಲಾನೆಟ್ ಅರ್ಥ್, ಫ್ರೋಜನ್ ಪ್ಲಾನೆಟ್, ಅವರ್ ಪ್ಲಾನೆಟ್, ಗೊರಿಲ್ಲಾ ಸ್ಟೋರಿ, ಓಶಿಯನ್ ಮೊದಲಾದವು ಅವರ ಪ್ರಖ್ಯಾತ ಡಾಕ್ಯುಮೆಂಟರಿಗಳು. ಆಸಕ್ತರಿಗೆ ಅವೆಲ್ಲವೂ ಯುಟ್ಯೂಬ್‌ನಲ್ಲೂ, ನೆಟ್‌ಫ್ಲಿಕ್ಸ್‌ನಂಥ ಒಟಿಟಿಗಳಲ್ಲೂ ಲಭ್ಯವಿವೆ. ಅಟೆನ್‌ಬರೋ ಪ್ರಾಣಿಗಳ ವರ್ತನೆಯನ್ನು ಚಿತ್ರಿಸುವ ಬಗೆಯನ್ನು ನೋಡಿಯೇ ತಿಳಿಯಬೇಕು. ‘ನೈಟ್ ಆನ್ ಅರ್ತ್’ ಎಂಬ ಸಾಕ್ಷ್ಯಚಿತ್ರ ಸರಣಿಯಲ್ಲಿ ಅವರು ರಾತ್ರಿ ವೇಳೆ ಪ್ರಾಣಿಗಳ ಚಲನವಲನ, ಬದುಕು ಹೇಗಿರುತ್ತದೆ ಎಂಬುದನ್ನು ದಂಗುಬಡಿಸುವಂಥ ಚಿತ್ರಿಕೆಗಳ ಮೂಲಕ ಕಾಣಿಸುತ್ತಾರೆ. ವನ್ಯಮೃಗಗಳ ಹೆಜ್ಜೆ ಸಪ್ಪಳ, ಸಣ್ಣ ಕೂಗು, ಮೆತ್ತಗಿನ ಚಲನೆ, ಬಿಸಿಯುಸಿರು ಎಲ್ಲವೂ ನಮ್ಮನ್ನು ಬಲು ಹತ್ತಿರದಿಂದ ತಾಕುವಂತೆ ಮಾಡುವ ಅವರ ದೃಶ್ಯೀಕರಣದ ವೈಖರಿಯೇ ಅನನ್ಯ.

## ಲ್ಯೂಕಾದಿಂದ ಇಂದಿನ ತನಕ

‘ಲೈಫ್ ಆನ್ ಅವರ್ ಪ್ಲಾನೆಟ್’ ಎಂಬ ರೋಮಾಂಚನಕಾರಿ ಫಿಲಂ ಸರಣಿ ನೆಟ್‌ಫ್ಲಿಕ್ಸ್‌ನಲ್ಲಿದೆ. ಭೂಮಿಯ ಮೇಲೆ ಲ್ಯೂಕಾ ಎಂಬ ಹೆಸರಿನ ಮೊತ್ತಮೊದಲ ಜೀವಕೋಶ ಸೃಷ್ಟಿಯಾದಂದಿನಿಂದ ಹಿಡಿದು ಈ ಕ್ಷಣದವರೆಗೂ ಜೀವಜಾಲ ಬೆಳೆದುಬಂದ ಬಗೆಯನ್ನು ನೀವದರಲ್ಲಿ ಕಾಣಬಲ್ಲಿರಿ. ಅದೇನೂ ಬೋರಿಂಗ್ ಜೀವಶಾಸ್ತ್ರ ವಿವರಣೆಯಲ್ಲ. ಒಂದು ಪತ್ತೇದಾರಿ ಸಿನಿಮಾದಂತೆ ನೋಡಿಸಿಕೊಂಡು ಹೋಗುತ್ತದೆ. ಅಟೆನ್‌ಬರೋನ ಸ್ಕ್ರಿಪ್ಟ್ ಹಾಗೂ ಚಿತ್ರಿಕೆಗಳು ಮಾರ್ಗನ್ ಫ್ರೀಮನ್‌ನ ಧ್ವನಿಯಲ್ಲಿ ಅಷ್ಟು ಜೀವಂತ. ‘ಇದುವರೆಗೂ ಭೂಮಿಯ ಮೇಲೆ ಹುಟ್ಟಿ ಬೆಳೆದ ಜೀವಜಾತಿಗಳಲ್ಲಿ ಇಂದು ನಮಗೆ ಕಂಡುಬರುವದು 1 ಶೇಕಡ ಮಾತ್ರ, ಉಳಿದ 99 ಶೇಕಡ ನಾಶವಾಗಿದೆ. ಐದು ಸಾಮೂಹಿಕ ಜೀವನಾಶಗಳು ಈ ಪ್ರಪಂಚದಲ್ಲಿ ಆಗಿಹೋಗಿವೆ’ ಎಂದು ನಿರುದ್ವಿಗ್ನವಾಗಿ ಅವರು ನಿರೂಪಿಸುತ್ತಾರೆ. ಡೈನೋಸಾರ್‌ಗಳ ಹೆಜ್ಜೆ ಸದ್ದು, ಬೇಟೆಯಾಡುವ ಪರಿ, ಆರ್ತನಾದ ಮತ್ತು ಅಬ್ಬರ ಎಲ್ಲವೂ ನಿಮ್ಮನ್ನು ಅಲುಗಾಡಿಸುತ್ತವೆ.

## ಮನೆಯಲ್ಲೇ ಪುಟ್ಟ ಮ್ಯೂಸಿಯಂ

ಚಿಕ್ಕವನಾಗಿದ್ದಾಗಲೇ ಡೇವಿಡ್‌ಗೆ ಕಲ್ಲುಗಳು, ಹಕ್ಕಿಗಳ ಮೊಟ್ಟೆಗಳು, ಪುರಾತನ ಜೀವಿಗಳ ಅವಶೇಷಗಳನ್ನು ಸಂಗ್ರಹಿಸುವ ಹುಚ್ಚು. ಮನೆಯೊಳಗೆ ಸಣ್ಣ ಮ್ಯೂಸಿಯಂ ಮಾಡಿಕೊಂಡಿದ್ದ. ಒಮ್ಮೆ ಅವನು ತಂಗಿಯ ಆಟದ ಗೊಂಬೆಗಳ ಜಾಗದಲ್ಲೇ ಕಪ್ಪೆಗಳನ್ನು ಇಟ್ಟುಬಿಟ್ಟಿದ್ದ. ಕಾಡುಜೀವಿಗಳ ಚಿತ್ರೀಕರಣ ಮಾಡುವಾಗ ಅನೇಕ ಅಪಾಯ ಎದುರಿಸಿದ್ದಾನೆ. ಒಮ್ಮೆ ವಿಷಕಾರಿ ಹಾವು ಅವನ ತುಂಬ ಹತ್ತಿರ ಬಂದಿತ್ತು. ಕ್ಯಾಮೆರಾ ಮುಂದೆ ಶಾಂತವಾಗಿ ನಿಂತ. ‘‘ಆ ಕ್ಷಣದಲ್ಲಿ ಹೃದಯ ಬಡಿತ ಹೆಚ್ಚಿತ್ತು’’ ಎಂದು ಹೇಳಿದ್ದ. ಅಂಟಾರ್ಟಿಕಾದಲ್ಲಿ ಚಿತ್ರೀಕರಣ ಮಾಡುವಾಗ ಭಾರಿ ಚಳಿ ಎದುರಿಸಬೇಕಾಯಿತು. ಕೆಲವೊಮ್ಮೆ ಕ್ಯಾಮೆರಾಗಳೇ ಕೆಲಸ ಮಾಡುತ್ತಿರಲಿಲ್ಲ. ಆದರೂ ಅವನು ಪೆಂಗ್ವಿನ್‌ಗಳ ಜೀವನವನ್ನು ಅದ್ಭುತವಾಗಿ ಚಿತ್ರೀಕರಿಸಿದನು. ಪೆಂಗ್ವಿನ್‌ಗಳು ಅವನ ಬೂಟಿನ ಲೇಸ್‌ಗಳನ್ನು ಕಚ್ಚುತ್ತಾ ಆಟವಾಡುತ್ತಿದ್ದವು.

1960ರ ದಶಕದಲ್ಲಿ ಟಿವಿಗಳು ಕಪ್ಪು–ಬಿಳುಪಿನಿಂದ ಬಣ್ಣಕ್ಕೆ ತಿರುಗಿದವು. ಡೇವಿಡ್ ಮೊದಲ ಬಾರಿಗೆ ಪ್ರಕೃತಿಯನ್ನು ಅದರೆಲ್ಲ ವರ್ಣವೈಭವದೊಂದಿಗೆ ತೋರಿಸಿದ. ಜನ ಮೊದಲ ಬಾರಿಗೆ ಕಾಡಿನ, ಹಸಿರಿನ, ಜೀವಜಾಲದ ನಿಜವಾದ ಬಣ್ಣಗಳನ್ನು ಟಿವಿಯಲ್ಲಿ ನೋಡಿ ಆಶ್ಚರ್ಯಪಟ್ಟರು.

## ಗೊರಿಲ್ಲಾ ತೋರಿದ ಪ್ರೀತಿ

ಯಾವ ಕಾಡು ಪ್ರಾಣಿಯೂ ಮನುಷ್ಯನನ್ನಾಗಲಿ ಬೇರೊಂದು ಜೀವಿಯನ್ನಾಗಲಿ ತನ್ನ ಕುಟುಂಬದ ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ಆದರೆ ಗೊರಿಲ್ಲಾಗಳು ಆತನ ಜೊತೆ ತುಂಬ ಪ್ರೀತಿಯಿಂದ ಎಂಬಂತೆ ವರ್ತಿಸಿದ ಒಂದು ಘಟನೆ ದಾಖಲಾಗಿದೆ. ಆಗ ಆತ ರುವಾಂಡದ ಕಾಡಿನಲ್ಲಿ ಗೊರಿಲ್ಲಾಗಳ ಕುಟುಂಬವೊಂದನ್ನು ಚಿತ್ರೀಕರಿಸುತ್ತಿದ್ದ. ಚಿತ್ರೀಕರಿಸುತ್ತ ತುಸು ಹತ್ತಿರ ಹೋದ. ಇದ್ದಕ್ಕಿದ್ದಂತೆ ಎರಡು ಗೊರಿಲ್ಲಾ ಮರಿಗಳು ಆತನ ಬಳಿ ಬಂದು ನೆಗೆದು, ಅವನ ತೊಡೆಯ ಮೇಲೇ ಕುಳಿತು ಬಹಳ ಕಾಲದ ಸಖನೋ ಎಂಬಂತೆ ಉರುಳಾಡತೊಡಗಿದವು. ಡೇವಿಡ್ ಮತ್ತು ಇಡೀ ಚಿತ್ರೀಕರಣ ತಂಡ ಸ್ತಂಭೀಭೂತವಾಯಿತು. ಪಕ್ಕದಲ್ಲೇ ಇದ್ದ ತಾಯಿ ಗೊರಿಲ್ಲಾ ಶಾಂತವಾಗಿಯೇ ಇತ್ತು. ತಾಯಿ ಏನು ಮಾಡುತ್ತದೋ ಎಂದು ತುಸು ಆತಂಕದಿಂದ ಅದರತ್ತ ನೋಡಿದ ಡೇವಿಡ್ ತಲೆಯನ್ನು ಒಂದು ಬಲಿಷ್ಠವಾದ ಕಪ್ಪು ಹಸ್ತ ತನ್ನ ಕಡೆ ತಿರುಗಿಸಿಕೊಂಡಿತು. ಡೇವಿಡ್‌ನ ಬಾಯಿಯೊಳಗೆ ತನ್ನ ಒಂದು ಬೆರಳನ್ನು ಹಾಕಿ ಪರಿಶೀಲಿಸಿತು. ಅದು ಗೊರಿಲ್ಲಾಗಳು ತಮ್ಮ ಆಪ್ತತೆಯನ್ನು ಪ್ರದರ್ಶಿಸುವ ರೀತಿ. ಡೇವಿಡ್ ಉಮ್ಮಳಿಸುವ ಭಾವಗಳೊಂದಿಗೆ ಮೌನವಾಗಿ ಕುಳಿತಿದ್ದ. ಮಾಡಿಕೊಂಡಿದ್ದ ಸ್ಕ್ರಿಪ್ಟ್ ಎಲ್ಲ ಮರೆತೇಹೋಗಿತ್ತು. ಹೊಸದೊಂದೇ ಭಾವುಕ ಲೋಕ ತೆರೆದುಕೊಂಡಿತ್ತು. ‘‘ಆ ಕ್ಷಣದಲ್ಲಿ, ನಾವೂ ಅವುಗಳೂ ಬೇರೆ ಜೀವಿಗಳಲ್ಲ ಅನ್ನಿಸಿತು’’ ಎಂದು ಡೇವಿಡ್ ನಂತರ ಹೇಳಿದ.

ಡೇವಿಡ್ ಕಾಡುಪ್ರಾಣಿಗಳ ಜೊತೆಗೆ ಎಷ್ಟು ಶಾಂತವಾಗಿ, ಹೆದರಿಕೆಯಿಲ್ಲದೆ ಬೆರೆಯುತ್ತಿದ್ದ ಎಂಬ ಬಗ್ಗೆ ಕತೆಗಳೇ ಇವೆ. ನ್ಯೂ ಗಿನಿಯಾದ ಕಾಡಿನಲ್ಲಿ ಬರ್ಡ್ ಆಫ್ ಪ್ಯಾರಡೈಸ್ ಎಂಬ ವಿಚಿತ್ರ ಹಕ್ಕಿಯನ್ನು ಚಿತ್ರೀಕರಿಸುತ್ತಿದ್ದ. ಈ ಹಕ್ಕಿ ಹೆಣ್ಣನ್ನು ಆಕರ್ಷಿಸಲು ವಿಚಿತ್ರ ನೃತ್ಯ ಮಾಡುತ್ತದೆ. ಸಾಮಾನ್ಯವಾಗಿ ಹೆಣ್ಣು ಹಕ್ಕಿ ಬಿಟ್ಟು ಬೇರೆ ಯಾರಿಗೂ ಈ ನೃತ್ಯ ಕಾಣಿಸದು. ಆದರೆ ಒಂದು ಹಕ್ಕಿ ಡೇವಿಡ್ ಮುಂದೆಯೇ ಕುಣಿಯಲು ಶುರುಮಾಡಿತು. ‘‘ಅದು ನನ್ನನ್ನೇ ಇಂಪ್ರೆಸ್ ಮಾಡಲು ಬಂದಂತೆ ಕಾಣುತ್ತಿತ್ತು’’ ಎಂದ. ದಕ್ಷಿಣ ಅಮೆರಿಕಾದ ಕಾಡಿನಲ್ಲಿ ಸ್ಲಾತ್ ಎಂಬ ಸೋಮಾರಿ ಪ್ರಾಣಿಯಿದೆ. ಅದು ಕೆಲವೊಮ್ಮೆ ಮರದಲ್ಲಿ ಕುಳಿತರೆ ವಾರಗಟ್ಟಲೆ ಅಲ್ಲಾಡುವುದಿಲ್ಲ. ಇಂಥ ಒಂದು ಸ್ಲಾತ್ ಒಮ್ಮೆ ಇವನ ಕೈ ಹಿಡಿದು ಬಹಳ ಹೊತ್ತು ಬಿಡಲೇ ಇಲ್ಲ. ಇಡೀ ಚಿತ್ರತಂಡ ಅದು ಕೈಬಿಡಲು ಗಂಟೆಗಟ್ಟಲೆ ನಗುತ್ತಾ ಕಾಯಬೇಕಾಯ್ತು. ಆಫ್ರಿಕಾದಲ್ಲಿ ಚಿತ್ರೀಕರಣ ಮಾಡುವಾಗ ಒಂದು ತುಂಟ ಕಪಿ ಅವರ ಮೈಕ್ರೋಫೋನ್ ಹಿಡಿದು ಓಡಿಬಿಟ್ಟಿತು. ಇಂಡೋನೇಷ್ಯಾದಲ್ಲಿ ಕೊಮೊಡೋ ಡ್ರಾಗನ್ ಎಂಬ ಜಗತ್ತಿನ ಅತಿ ದೊಡ್ಡ ಹಲ್ಲಿಹಾವು, ಇವನ ತುಂಬ ಹತ್ತಿರಕ್ಕೆ ಬಂದಾಗ, ಎಲ್ಲರೂ ಸ್ವಲ್ಪ ಹೆದರಿದರು. ಆದರೆ ಡೇವಿಡ್ ಶಾಂತವಾಗಿ ನಿಂತಿದ್ದರು. ‘‘ಅದರ ಕಣ್ಣುಗಳಲ್ಲಿ ಪುರಾತನ ಜಗತ್ತಿನ ಹೊಳಪು ಕಾಣಿಸಿತು’’ ಎಂದನಾತ! ಅದಕ್ಕೆ ಕಾರಣ ಅದು ಬಹಳ ಪುರಾತನ ಜೀವಿ. ತಿಮಿಂಗಿಲದ ಬಹಳ ನಿಕಟವಾಗಿ ಹಾದು ಹೋದಾಗ, ಅದು ಜಲಪಾತದಂತೆ ನೀರನ್ನು ಚಿಮ್ಮಿಸಿದಾಗ, ವಿಷಕಾರಿ ದೊಡ್ಡ ಜೇಡವನ್ನು ಚಿತ್ರೀಕರಿಸಲು ಅದನ್ನು ಕೈ ಮೇಲೆ ಹಿಡಿದಾಗ ಕೂಡ ಡೇವಿಡ್ ಶಾಂತನಾಗಿಯೇ ಇದ್ದನಂತೆ.

ಡೇವಿಡ್ ಅವನ ಸಹೋದರ ರಿಚರ್ಡ್ ಅಟೆನ್‌ಬರೋನಂತೆ (ಇವನನ್ನು ನೀವು ‘ಜುರಾಸಿಕ್ ಪಾರ್ಕ್’ನಲ್ಲಿ ನೋಡಿದ್ದೀರಿ) ಸಿನಿಮಾ ನಟ ಹಾಗೂ ನಿರ್ದೇಶಕ ಆಗುವುದಿತ್ತು. ಆದರೆ ಡೇವಿಡ್‌ನ ಹಲ್ಲು ಮುಂದಕ್ಕಿದೆ ಎಂಬ ಕಾರಣಕ್ಕೆ ನಟನಾಗುವುದು ತಪ್ಪಿಹೋಯಿತಂತೆ! ಅದರಿಂದ ವೈಲ್ಡ್‌ಲೈಫ್ ಚಿತ್ರೀಕರಣಕ್ಕೆ ಒಳ್ಳೆಯದೇ ಆಯಿತು.

ಇವನ ಮೇಲಿರುವ ಒಂದೇ ಟೀಕೆ ಎಂದರೆ, ಭೂಮಿಯನ್ನು ಸುಂದರವಾಗಿ ತೋರಿಸಿದಷ್ಟು, ಅದರ ಮೇಲೆ ಮಾನವರಿಂದ ಆಗುತ್ತಿರುವ ದೌರ್ಜನ್ಯಗಳ ಬಗ್ಗೆ ತೋರಿಸಿಲ್ಲ ಎಂದು. 2020ರಲ್ಲಿ ಬಿಡುಗಡೆಯಾದ ‘ಎ ಲೈಫ್ ಆನ್ ಅವರ್ ಪ್ಲಾನೆಟ್’ ಚಿತ್ರದಲ್ಲಿ ಅದನ್ನೂ ಡೇವಿಡ್ ಮಾಡಿದ್ದಾನೆ. ಅಲ್ಲಿ ಆತ ಕೇವಲ ಸಮಸ್ಯೆಗಳನ್ನೇ ಹೇಳದೇ, ಅವುಗಳಿಗೆ ಪರಿಹಾರಗಳನ್ನೂ ವಿವರಿಸಿದ. ಪ್ರಕೃತಿ ಎದುರಿಸುತ್ತಿರುವ ಎರಡು ದೊಡ್ಡ ಸಂಕಟಗಳಾದ ಹವಾಮಾನ ಬದಲಾವಣೆ, ಜೀವ ವೈವಿಧ್ಯದ ಕುಸಿತ ಮತ್ತು ಜೀವಿಗಳ ನಾಶದ ಬಗ್ಗೆ, ಇವುಗಳನ್ನು ಸರಿಪಡಿಸಲು ಪ್ರತಿಯೊಬ್ಬರೂ ಹೇಗೆ ಪಾತ್ರ ವಹಿಸಬಹುದು ಎಂಬ ಬಗ್ಗೆ ಮಾತಾಡಿದ.

‘‘ಡೇವಿಡ್ ಪ್ರಾಣಿಗಳನ್ನು ಸಹಜೀವಿಗಳಂತೆ ನೋಡಿದರು’’ ಎಂಬುದು ಅವನ ಜೊತೆ ಕೆಲಸ ಮಾಡಿದವರು ಹೇಳುವ ಮಾತು. ‘‘ನಾವು ಪ್ರಕೃತಿಯಿಂದ ಬೇರೆಯಲ್ಲ, ಅದರ ಒಂದು ಭಾಗ. ನಿಸರ್ಗ ಅಚ್ಚರಿಯ ಮತ್ತು ಉತ್ಸಾಹದ ದೊಡ್ಡ ಮೂಲ. ಅದು ಕಣ್ಣಿಗೆ ಕಾಣುವ ಅತ್ಯಂತ ಸುಂದರ ಲೋಕ. ಜ್ಞಾನ ಮತ್ತು ಚಿಂತನೆಗೆ ದೊಡ್ಡ ಪ್ರೇರಣೆ. ಬದುಕನ್ನು ಜೀವಿಸುವಂತಾಗಿಸುವ ಅನೇಕ ಸುಂದರ ಸಂಗತಿಗಳ ಮೂಲವೇ ಪ್ರಕೃತಿ’’ ಎಂಬುದು ಡೇವಿಡ್‌ನ ಮೂಲಮಂತ್ರ.

### ಹಲವು ದಾಖಲೆಗಳ ಸರದಾರ

**ಡೇವಿಡ್‌ನ ಹೆಸರಿನಲ್ಲಿ ದಾಖಲೆಗಳ ಮೇಲೆ ದಾಖಲೆಗಳೇ ಇವೆ. ಯುದ್ಧಗ್ರಸ್ತ ಇರಾಕ್, ಇರಾನ್, ತಾಂಜಾನಿಯಾದ ದಟ್ಟ ಕಾಡುಗಳು ಇಲ್ಲೆಲ್ಲೋ ಹೋಗಿ ಚಿತ್ರೀಕರಿಸಿದ್ದಾನೆ. ಅಪಾಯಕಾರಿ ಸಮುದ್ರದಾಳ, ಗುಹೆಗಳು ಯಾವುದನ್ನೂ ಇವನು ಬಿಟ್ಟಿಲ್ಲ. ಇವನು ಭೂಮಿಯ, ಇಲ್ಲಿನ ಜೀವಜಗತ್ತಿನ ಚೆಲುವನ್ನೆಲ್ಲ ಮೊಗೆಮೊಗೆದು ತೋರಿಸಿದ್ದರಿಂದಲೇ ಮುಂದಿನ ತಲೆಮಾರಿಗಳು ಭೂಗ್ರಹವನ್ನು ಪ್ರೀತಿಸುವವರಾದರು. ಡೇವಿಡ್‌ನನ್ನು ಆರಾಧಿಸುವ ಫಿಲಂಮೇಕರ್‌ಗಳು ಹುಟ್ಟಿಕೊಂಡರು.**

---

» ನಾಗರಾಜ ವೈದ್ಯ

# ತನ್ನನ್ನು ತಾನೇ ನುಂಗಲಿದೆಯೇ ಎಐ?

**ಮುಂದೊಂದು ದಿನ, ಮನುಷ್ಯ ಬರೆದ ಅಪ್ಪಟ ಲೇಖನಗಳಿಗೆ, ತೆಗೆದ ಫೋಟೋಗಳಿಗೆ ಚಿನ್ನದ ಬೆಲೆ ಬರಲಿದೆ. ನಾವು ಮಣ್ಣಿನಲ್ಲಿ ಬಿದ್ದು, ಬೆಳೆ ಬೆಳೆದು, ಬಿಸಿಲಿನಲ್ಲಿ ಬೆಂದು ಬರೆಯುವ ಅನುಭವಕ್ಕೂ, ಎಸಿ ರೂಮಿನಲ್ಲಿ ಕುಳಿತು ಡೇಟಾ ಸಂಸ್ಕರಿಸಿ ಎಐ (ಕೃತಕ ಬುದ್ಧಿಮತ್ತೆ) ಮೂಲಕ ಬರೆಯುವ ಬರಹಕ್ಕೂ ಇರುವ ವ್ಯತ್ಯಾಸವೇ ಈ ‘ಅಸಲಿ ಜ್ಞಾನ’. ಎಐಗೆ ಜೀವಂತ ಅನುಭವಗಳಿಲ್ಲ, ಅದಕ್ಕೆ ಕೇವಲ ಪದಗಳ ಪೋಣಿಸುವಿಕೆ, ಚಿತ್ರದ ನಕಲು ತೆಗೆಯುವುದು, ಟ್ಯೂನ್‌ನ್ನು ಕಾಪಿ ಮಾಡುವುದು ಮಾತ್ರ ಗೊತ್ತು.**

ಸಂತ ಶಿಶುನಾಳ ಶರೀಫರು ಅಂದೇ ಹಾಡಿದ್ದರು, ‘ಕೋಡಗನ ಕೋಳಿ ನುಂಗಿತ್ತಾ ನೋಡವ್ವ ತಂಗಿ...’ ಎಂದು. ‘ಅಸಾಧ್ಯವಾದುದು ಸಾಧ್ಯವಾಯಿತು’ ಎನ್ನುವ ಬೆರಗು ಆ ಸಾಲಿನ ಹಿಂದಿದೆ. ಇಂದು ಟೆಕ್ ಲೋಕದಲ್ಲಿ ಅಕ್ಷರಶಃ ಇಂತಹದ್ದೇ ಒಂದು ವಿಚಿತ್ರ ವಿದ್ಯಮಾನ ನಡೆಯುತ್ತಿದೆ! ನಾವು ಸೃಷ್ಟಿಸಿದ ಕೃತಕ ಬುದ್ಧಿಮತ್ತೆ (ಎಐ) ಎನ್ನುವ ಕೋಳಿ, ಈಗ ತನ್ನನ್ನು ಸೃಷ್ಟಿಸಿದ ಮೂಲಗಳನ್ನೇ ನುಂಗಿ, ತನ್ನನ್ನೇ ತಾನು ಅರಗಿಸಿಕೊಳ್ಳಲು ಹೊರಟಿದೆ.

ಇದನ್ನು ತಾಂತ್ರಿಕವಾಗಿ ‘ಮಾಡಲ್ ಕೊಲ್ಯಾಪ್ಸ್’ ಎನ್ನುತ್ತಾರೆ. ಕೇಳಲು ಸಣ್ಣ ವಿಷಯದಂತೆ ಕಂಡರೂ, ಮುಂದಿನ ಐದಾರು ವರ್ಷಗಳಲ್ಲಿ ಇಡೀ ಇಂಟರ್ನೆಟ್ ಸಾಮ್ರಾಜ್ಯವನ್ನೇ ಕುಸಿಯುವಂತೆ ಮಾಡುವ ತಾಕತ್ತು ಈ ‘ಡಿಜಿಟಲ್ ರೋಗ’ಕ್ಕಿದೆ. ಇದರ ಹಿಂದಿನ ತಾಂತ್ರಿಕ ಗುಟ್ಟು ಮತ್ತು ಅಪಾಯಗಳನ್ನು ನಾವು ಆಳವಾಗಿ ತಿಳಿಯಬೇಕಿದೆ.

ಮೊದಲಿಗೆ ಎಐ ಕೆಲಸ ಮಾಡುವ ರೀತಿಯನ್ನು ಅರ್ಥಮಾಡಿಕೊಳ್ಳಬೇಕು. ಯಾವುದೇ ಒಂದು ಎಐ ಮಾಡೆಲ್ ಹುಟ್ಟಿದ ತಕ್ಷಣ ಬುದ್ಧಿವಂತವಾಗಿರುವುದಿಲ್ಲ. ಅದಕ್ಕೆ ಕೋಟ್ಯಂತರ ಪುಟಗಳ ಮಾಹಿತಿಯನ್ನು ‘ತಿನ್ನಿಸಬೇಕಾಗುತ್ತದೆ’. ಈ ಮಾಹಿತಿಯನ್ನು ನಾವು ‘ಟ್ರೈನಿಂಗ್ ಡೇಟಾ’ ಎನ್ನುತ್ತೇವೆ. ಈವರೆಗೆ ಈ ಡೇಟಾ ಮನುಷ್ಯರು ಬರೆದ ಪುಸ್ತಕಗಳು, ವಿಕಿಪೀಡಿಯಾ ಲೇಖನಗಳು ಮತ್ತು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡ ಅಪ್ಪಟ ಮನುಷ್ಯ ಸಹಜ ಆಲೋಚನೆಗಳಿಂದ ಬರುತ್ತಿತ್ತು.

## ಇಂಟರ್ನೆಟ್‌ನಲ್ಲಿ ಅಸಹಜ ಮಾಹಿತಿ

2022ರವರೆಗೆ ಇಂಟರ್ನೆಟ್ ಎನ್ನುವುದು ಮಾನವ ಸೃಷ್ಟಿತ ಮಾಹಿತಿಯ ಕೆರೆಯಾಗಿತ್ತು. ಆದರೆ ಎಐ ಕ್ರಾಂತಿ ಶುರುವಾದ ಮೇಲೆ ಕಥೆ ಬದಲಾಯಿತು. ಈಗ ಇಂಟರ್ನೆಟ್‌ನಲ್ಲಿರುವ ಶೇ. 70ರಷ್ಟು ಕಂಟೆಂಟ್ ಅನ್ನು ಎಐ ಮೂಲಕವೇ ಸೃಷ್ಟಿಸಲಾಗುತ್ತಿದೆ. ಅಂದರೆ, ಹೊಸ ಎಐ ಮಾಡೆಲ್‌ಗಳಿಗೆ ತರಬೇತಿ ನೀಡಲು ಈಗ ‘ಮನುಷ್ಯ ಸಹಜ’ ಡೇಟಾ ಸಿಗುತ್ತಿಲ್ಲ. ಅದರ ಬದಲಿಗೆ ಎಐ ಸೃಷ್ಟಿಸಿದ ಹಳೆಯ ಡೇಟಾವನ್ನೇ ಬಳಸಲಾಗುತ್ತಿದೆ.

ಇದು ಅಕ್ಷರಶಃ ಜೀವಶಾಸ್ತ್ರದ ‘ಇನ್–ಬ್ರೀಡಿಂಗ್’ ಇದ್ದಂತೆ. ಒಂದೇ ರಕ್ತಸಂಬಂಧದ ನಡುವೆ ಸಂತಾನೋತ್ಪತ್ತಿ ನಡೆಯುತ್ತಾ ಹೋದರೆ ಹುಟ್ಟುವ ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲವಾಗಿರುತ್ತಾರೆ. ಎಐ ಕೂಡ ಅಷ್ಟೇ; ಎಐ ಬರೆದದ್ದನ್ನೇ ಓದಿ ಕಲಿಯುವ ಮುಂದಿನ ತಲೆಮಾರಿನ ಎಐ, ಮೂಲ ಬುದ್ಧಿವಂತಿಕೆಯನ್ನು ಕಳೆದುಕೊಂಡು ‘ದಡ್ಡ’ವಾಗುತ್ತಾ ಹೋಗುತ್ತದೆ. ಎಐ ಎನ್ನುವುದು ಮೂಲತಃ ಒಂದು ಸಂಖ್ಯಾಶಾಸ್ತ್ರದ ಆಟ. ಇದು ಲಕ್ಷಾಂತರ ಸಾಧ್ಯತೆಗಳಲ್ಲಿ ಯಾವುದು ಹೆಚ್ಚು ಬಾರಿ ಸಂಭವಿಸುತ್ತದೆ ಎಂಬುದನ್ನು ನೋಡಿ ಉತ್ತರ ನೀಡುತ್ತದೆ. ಮನುಷ್ಯ ಬರೆದ ಡೇಟಾದಲ್ಲಿ ವಿಚಿತ್ರಗಳು, ಅಪರೂಪದ ಆಲೋಚನೆಗಳು ಮತ್ತು ತಪ್ಪುಗಳೂ ಇರುತ್ತವೆ. ಆದರೆ ಎಐ ಈ ‘ಅಪರೂಪದ ಸಾಧ್ಯತೆ’ಗಳನ್ನು (ಔಟ್‌ಲೈಯರ್ಸ್) ತೆಗೆದುಹಾಕಿ, ಕೇವಲ ‘ಸರಾಸರಿ’ ವಿಷಯಗಳ ಮೇಲೆ ಗಮನ ಹರಿಸುತ್ತದೆ.

## ತುದಿಯಲ್ಲಿ ಸೃಜನಶೀಲತೆ!

ತಾಂತ್ರಿಕ ಭಾಷೆಯಲ್ಲಿ ಹೇಳುವುದಾದರೆ, ಡೇಟಾ ಡಿಸ್ಟ್ರಿಬ್ಯೂಷನ್‌ನಲ್ಲಿ ‘ಟೈಲ್ಸ್’ ಅಂದರೆ ತುದಿಗಳು ಬಹಳ ಮುಖ್ಯ. ಮನುಷ್ಯನ ಸೃಜನಶೀಲತೆ ಇರುವುದೇ ಆ ತುದಿಗಳಲ್ಲಿ. ಆದರೆ ಎಐ ತರಬೇತಿ ಪಡೆಯುವಾಗ ಈ ತುದಿಗಳನ್ನು ಕತ್ತರಿಸಿ ಹಾಕುತ್ತದೆ. ಎಐ ಸೃಷ್ಟಿಸಿದ ಡೇಟಾವನ್ನೇ ಮತ್ತೆ ಮತ್ತೆ ಬಳಸಿದಾಗ, ಪ್ರತಿ ಬಾರಿಯೂ ಮಾಹಿತಿ ಸಂಕುಚಿತಗೊಳ್ಳುತ್ತಾ ಹೋಗುತ್ತದೆ. ಇದು ಪುನರಾವರ್ತಿತವಾಗುತ್ತಾ ಹೋಗಿ, ಕೊನೆಗೆ ಕೇವಲ ಒಂದು ಸಪ್ಪೆ, ಅರ್ಥಹೀನ ಮಾಹಿತಿ ಮಾತ್ರ ಉಳಿಯುತ್ತದೆ. ಇದನ್ನು ಇನ್ನಷ್ಟು ಸರಳವಾಗಿ ವಿವರಿಸಬೇಕೆಂದರೆ, ಒಂದು ಅಸಲಿ ಫೋಟೋವನ್ನು ಜೆರಾಕ್ಸ್ ತೆಗೆದಾಗ ಅದು ಸ್ವಲ್ಪ ಮಸುಕಾಗುತ್ತದೆ. ಆ ಮಸುಕಾದ ಜೆರಾಕ್ಸ್ ಪ್ರತಿಯನ್ನೇ ಬಳಸಿ ಇನ್ನೊಂದು ಜೆರಾಕ್ಸ್ ತೆಗೆದರೆ ಅಕ್ಷರಗಳು ಕಾಣದಂತಾಗುತ್ತವೆ. ಹತ್ತನೇ ಪ್ರತಿಯ ಹೊತ್ತಿಗೆ ಕೇವಲ ಕಪ್ಪು ಮಸಿ ಮಾತ್ರ ಉಳಿದಿರುತ್ತದೆ. ‘ಮಾಡಲ್ ಕೊಲ್ಯಾಪ್ಸ್’ ಎನ್ನುವುದು ಸಾಫ್ಟ್‌ವೇರ್ ಲೋಕದಲ್ಲಿ ನಡೆಯುತ್ತಿರುವ ಇಂತಹದ್ದೇ ಪ್ರಕ್ರಿಯೆ.

ಎಐ ಮಾಹಿತಿಯನ್ನು ಸಂಸ್ಕರಿಸುವಾಗ ಅದನ್ನು ‘ಟೋಕನ್’ಗಳಾಗಿ ವಿಭಾಗಿಸುತ್ತದೆ. ಎಐ ತನ್ನದೇ ಡೇಟಾವನ್ನು ತಿನ್ನಲು ಆರಂಭಿಸಿದಾಗ, ಈ ಟೋಕನ್‌ಗಳ ನಡುವಿನ ಸಂಬಂಧಗಳು ದುರ್ಬಲಗೊಳ್ಳುತ್ತವೆ. ಒಂದು ಪದದ ನಂತರ ಯಾವ ಪದ ಬರಬೇಕು ಎನ್ನುವ ತಾರ್ಕಿಕ ಶಕ್ತಿ ಎಐಗೆ ಕುಂದುತ್ತದೆ. ಉದಾಹರಣೆಗೆ, ಹಸು ಹಾಲು ಕೊಡುತ್ತದೆ ಎನ್ನುವುದು ಹಸು ಹುಲ್ಲು ಕೊಡುತ್ತದೆ ಎಂದು ಬದಲಾಗಲು ಹೆಚ್ಚು ಸಮಯ ಬೇಕಿಲ್ಲ. ಇಂದು ಇಂಟರ್ನೆಟ್ ‘ಸಿಂಥೆಟಿಕ್ ಡೇಟಾ’ ಅಥವಾ ಕೃತಕ ಮಾಹಿತಿಯಿಂದ ತುಂಬಿ ತುಳುಕುತ್ತಿದೆ. ಇದು ಪರಿಸರ ಮಾಲಿನ್ಯಕ್ಕಿಂತಲೂ ಅಪಾಯಕಾರಿ. ಅಪ್ಪಟ ಜ್ಞಾನದ ಕೆರೆಗೆ ಎಐ ಎನ್ನುವ ಚರಂಡಿ ನೀರು ಸೇರುತ್ತಿದೆ. ಈ ನೀರನ್ನು ಕುಡಿದು ಬೆಳೆಯುವ ಮುಂದಿನ ಮಾಡೆಲ್‌ಗಳು ಕೇವಲ ಸುಳ್ಳು ಸುದ್ದಿಗಳನ್ನು ಮತ್ತು ಭ್ರಮೆಗಳನ್ನು (ಹ್ಯಾಲುಸಿನೇಷನ್ಸ್) ಸತ್ಯವೆಂದು ನಂಬಿ ನಮಗೆ ಉಣಬಡಿಸುತ್ತವೆ.

## ಅಜೀರ್ಣವಾಗುತ್ತಿರುವ ಅಲ್ಗಾರಿದಂ

ಎಐ ಮಾಡೆಲ್‌ಗಳಿಗೆ ಅತಿಯಾದ ಡೇಟಾ ಸಿಕ್ಕಾಗ ‘ಅಜೀರ್ಣ’ವಾಗುತ್ತದೆ. ಅದನ್ನು ‘ಓವರ್‌ಫಿಟ್ಟಿಂಗ್’ ಎನ್ನುತ್ತಾರೆ. ಆದರೆ ತನ್ನದೇ ಡೇಟಾವನ್ನು ಓದಿದಾಗ ಅದು ತನ್ನ ಸ್ವಂತ ತಪ್ಪುಗಳನ್ನು ‘ಪರಮ ಸತ್ಯ’ ಎಂದು ಭಾವಿಸಿಬಿಡುತ್ತದೆ. ಇದು ಅಲ್ಗಾರಿದಂಗಳಲ್ಲಿ ಒಂದು ರೀತಿಯ ಹಠಮಾರಿತನವನ್ನು ತರುತ್ತದೆ. ಒಮ್ಮೆ ತಪ್ಪು ಹಾದಿ ಹಿಡಿದರೆ ಅದನ್ನು ಸರಿಪಡಿಸುವುದು ಬಹುತೇಕ ಅಸಾಧ್ಯ. ವಿಶ್ವವಿಖ್ಯಾತ ಚಿತ್ರಕಲೆಗಳನ್ನು ಗಮನಿಸಿ. ಅಲ್ಲಿ ಒಬ್ಬ ಕಲಾವಿದನ ವಿಶಿಷ್ಟ ಶೈಲಿ ಇರುತ್ತದೆ. ಆದರೆ ಎಐ, ಅಂತಹ ಲಕ್ಷಾಂತರ ಚಿತ್ರಗಳನ್ನು ನೋಡಿ ಒಂದು ಸರಾಸರಿ ಚಿತ್ರ ಬಿಡಿಸುತ್ತದೆ. ಈಗ ಆ ಎಐ ಚಿತ್ರವನ್ನೇ ನೋಡಿ ಇನ್ನೊಂದು ಎಐ ಕಲಿಯಲು ಶುರು ಮಾಡಿದರೆ, ಕಲೆ ಎನ್ನುವುದು ಮಾಯವಾಗಿ ಕೇವಲ ಬಣ್ಣಗಳ ರಾಶಿ ಮಾತ್ರ ಉಳಿಯುತ್ತದೆ. ಎಐ ತನ್ನ ಸೃಜನಶೀಲತೆಯ ಕುತ್ತಿಗೆಯನ್ನು ತಾನೇ ಹಿಸುಕಿಕೊಳ್ಳುತ್ತಿದೆ.


▸▸ 4ನೇ ಪುಟಕ್ಕೆ

# ಪುಸ್ತಕ ವಿಮಾನ

## ಮಾಗಿದ ಮನದ ಆಪ್ತ ಅನುಭವಗಳು

» ಡಾ.ಪೂರ್ಣಿಮಾ ಸುಧಾಕರ ಶೆಟ್ಟಿ, ಮುಂಬೈ

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಹಿರಿಯ ಪ್ರಾಧ್ಯಾಪಕರಾಗಿರುವ ಪ್ರೊ.ಜಿ.ಎನ್ ಉಪಾಧ್ಯ ಅವರು ರಚಿಸಿರುವ ಈ ಪ್ರಬಂಧ ಸಂಕಲನ ತನ್ನ ಹೂರಣದಿಂದ ಗಮನ ಸೆಳೆಯುತ್ತದೆ. ಅವರು ನೂರಕ್ಕೂ ಹೆಚ್ಚು ಕೃತಿಗಳಿಗಿಂದ ಭಿನ್ನವಾಗಿ ಮೂಡಿಬಂದ ಪ್ರಬಂಧ ಸಂಕಲನವಾಗಿದೆ. ಈ ಕೃತಿಯಲ್ಲಿ 13 ಪ್ರಬಂಧಗಳು ಇವೆ. ಅಭ್ಯಾಸ ಬಲ, ದನ ಕಾಯೋ ಕಾಯಕ, ಗಾದೆ ತಿಳಿದವ ಗದ್ದುಗೆ ಏರಿಯಾನು, ನಮ್ಮ ಮೇಷ್ಟ್ರ ವಿವಿಧೋದ್ದೇಶ ಯೋಜನೆ, ಪುಸ್ತಕ ಮಹಾರಣ, ಇತಿಹಾಸ ಎಂದರೆ ಮೂಗುಮುರಿಯುವುದೇಕೆ, ಬಾಯಿ ಇದ್ರೆ ಬೊಂಬಾಯಿ, ಹಾಸ್ಯವೆನಲು ಸಸಾರವೇ, ಚೆಲುವಿನ ನಿಲುವು, ಮರೆಯಲಿ ಹ್ಯಾಂಗ ಮೊದಲಾದ ಪ್ರಬಂಧಗಳು ಇಲ್ಲಿವೆ.

ಅಭ್ಯಾಸ ಬಲ ಲೇಖನದಲ್ಲಿ ಒಳ್ಳೆಯ ಅಭ್ಯಾಸಗಳು ಬದುಕಿಗೆ ಹೊಸತನವನ್ನು, ಗಟ್ಟಿತನವನ್ನು ಕೊಡುತ್ತದೆ. 'ದನ ಕಾಯೋ ಕಾಯಕವಂತೆ' ಎಂಬ ಪ್ರಬಂಧದಲ್ಲಿ ಕಾಯಕದ ಮಹತ್ವವನ್ನು ಸಾರುವ ಅಂಶಗಳಿವೆ. ಅಲ್ಲದೆ ನಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕುವ ಮನಸ್ಸಿಗೆ ಮುದನೀಡುವ ವಿಷಯಗಳಿಂದ ಕೂಡಿದ ಆಪ್ತ ಬರಹವೂ ಹೌದು. ಲೇಖಕರು ದೊಡ್ಡಮ್ಮ ಸಾಕಿದ ದನವೊಂದು ರಾತ್ರಿ ಇಡೀ ಮನೆಗೆ ಬಾರದೇ ನೇರವಾಗಿ ನಮ್ಮ ಮೆಚ್ಚಿನ ಶಿವರಾಮ ಕಾರಂತರ ಮನೆಗೆ ನುಗ್ಗಿದ ಸನ್ನಿವೇಶ, ದನ ತಮ್ಮ ಬೆಳೆ ಹಾಡು ಮಾಡಿದ್ದಕ್ಕೆ ಕಾರಂತರು ಬೈದದ್ದು ಎಲ್ಲ ಸಂಗತಿಗಳನ್ನು ಸೊಗಸಾಗಿ ಬಿಂಬಿಸಿದ್ದಾರೆ.

ಬದುಕಿನಲ್ಲಿ ಹಾಸುಹೊಕ್ಕಾಗಿರುವ ಗಾದೆ ಮಾತು ಮರೆಯಾಗುತ್ತಿರುವ ಕಾಲಘಟ್ಟದಲ್ಲಿ ನಮ್ಮನ್ನು ಎಚ್ಚರಿಸುವ ಲೇಖನ ಗಾದೆ 'ತಿಳಿದವ ಗದ್ದುಗೆ ಏರಿಯಾನು'. ಈ ಲೇಖನದಲ್ಲಿ ಆಡು ಮಾತಿನಲ್ಲಿ ಸದಾ ಬಳಕೆಯಾಗುತ್ತಿದ್ದ ಗಾದೆ ಕಣ್ಮರೆಯಾಗುತ್ತಿದ್ದು, ಅವುಗಳನ್ನು ನಾವು ಬಳಸದೆ ಹೋದರೆ ಭಾಷೆಯ ಸೊಗಡು ಹೊರಟು ಹೋಗುತ್ತದೆ. ನಮ್ಮ ದೈನಂದಿನ ಮಾತಿನಲ್ಲಿ ಬರವಣಿಗೆಯಲ್ಲಿ ಆದಷ್ಟು ಗಾದೆ ಮಾತುಗಳ ಬಳಕೆ ಮಾಡಬೇಕು ಎನ್ನುವ ಕಳಕಳಿ ಇದೆ. ನಮ್ಮ ಮೇಷ್ಟ್ರ ವಿವಿಧೋದ್ದೇಶ ಯೋಜನೆ




ಬಾಯಿ ಇದ್ರೆ ಬೊಂಬಾಯಿ
ಲೇ: ಪ್ರೊ. ಜಿ.ಎನ್.ಉಪಾಧ್ಯ
ಪ್ರ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ

**ಬಾಲ್ಯದ ಮತ್ತು ಇತರ ದಿನಗಳ ಅನುಭವವನ್ನು ನವಿರಾದ ಹಾಸ್ಯದೊಂದಿಗೆ ಪ್ರಬಂಧವಾಗಿ ಮೂಡಿಸುವಲ್ಲಿ ಲೇಖಕರು ಯಶಸ್ಸನ್ನು ಕಂಡಿದ್ದಾರೆ.**

ಓದುಗರನ್ನು ನಗೆಗಡಲಲ್ಲಿ ತೇಲಿಸುವುದರೊಂದಿಗೆ ಲೇಖಕರ ಬಾಲ್ಯದ ಸವಿ ನೆನಪುಗಳ ಬುತ್ತಿಯನ್ನು ಬಿಚ್ಚಿಟ್ಟಿದೆ. ಮಸ್ತಕ ಮಹಾಪುರಾಣವಂತೂ ಮುಗಿಯದ ಕತೆಯೆಂಬಂತಿದೆ. ಮಕ್ಕಳಿಂದ ಮುದುಕರವರೆಗೆ ಆ ಮಂಡೆಬಿಸಿಯ ಕತೆ ರೋಚಕವಾಗಿ ಮೂಡಿಬಂದಿದೆ.

ತಲೆ ಎಂಬ ಪದದ ಸುತ್ತ ರೂಪುಗೊಂಡಿರುವ ಅರ್ಥಪೂರ್ಣ ಚಿಂತನೆಗಳು ವಿಶೇಷ ಗಮನಾರ್ಹ. ಮಾನವ ಜೀವನದಲ್ಲಿ ತಲೆಯ ಮಹತ್ವವನ್ನು ಕೇವಲ ಶಾರೀರಿಕ ಅಂಶವಾಗಿ ಅಲ್ಲದೆ, ಚಿಂತನೆ, ಗೌರವ, ಮತ್ತು ವ್ಯಕ್ತಿತ್ವದ ಸಂಕೇತವಾಗಿ ಲೇಖಕರು ಬಿಂಬಿಸಿದ್ದಾರೆ. ಅಲ್ಲದೆ ಕ್ಷೌರದ ಕತೆ, ಅಲ್ಲಲ್ಲಿ ನಡೆಯುವ ಮೋಸ, ವ್ಯಥೆಯ ಸಂಗತಿಗಳೂ ಇಲ್ಲಿವೆ.

ನಗೆಯೊಂದು ಬೆಳಕು. ಅದು ಭಾವ ಸಂಸ್ಕಾರ ಎಂಬ ನಿಲುವು ಬೇಂದ್ರೆ ಅವರದು. ನಗು ಯಾಕೆ ಮುಖ್ಯವಾಗುತ್ತದೆ ಎನ್ನುವುದನ್ನು ಅರ್ಥಪೂರ್ಣವಾಗಿ ಹಾಸ್ಯವೆನಲು ಸಸಾರವೇ ಎಂಬ ಲೇಖನದಲ್ಲಿ ವಿವರಿಸಲಾಗಿದೆ. ಚೆಲುವಿನ ಚೆಲುವಂತೂ ಬಲು ಚೆಲುವಾಗಿ ನಿರೂಪಿಸಿದ್ದಾರೆ. ಹೆತ್ತ ತಾಯಿ ಮತ್ತು ಹುಟ್ಟಿದ ಊರಿನ ಸೆಳೆತ ಅಲೆ ಅಲೆಯಾಗಿ ಚಿಮ್ಮಿ ಬರುವ ನೆನಪುಗಳನ್ನು ಹೊತ್ತ ಲೇಖನ ಮರೆಯಲಿ ಹ್ಯಾಂಗ ಖುಷಿಕೊಡುತ್ತದೆ

ಸ್ವಾರ್ಥವಿಲ್ಲದೆ ತ್ರಿಕರಣಪೂರ್ವಕವಾಗಿ ನಾಡಿನ ಬಲವರ್ಧನೆಗೆ ಶ್ರಮಿಸಿದ ಮಹಾನ್ ಸಾಹಿತಿಗಳಲ್ಲಿ ಒಬ್ಬರಾದ ಶಿವರಾಮ ಕಾರಂತರ ಅಪರೂಪದ ಕಾರ್ಯವೈಖರಿಗಳನ್ನು ಲೋಕಮುಖಕ್ಕೆ ಪರಿಚಯಿಸುವ ಲೇಖನ ಕಟ್ಟುವ ಕೈಂಕರ್ಯ ಮತ್ತು ಶಿವರಾಮ ಕಾರಂತರು. ಕಾವ್ಯದ ಮಹತ್ತನ್ನು ಸಾರುವ ಹೋಗಬೇಡ ಕವಿತೆ ನೀನು, ನಾನ ದೃಷ್ಟಿಗಳ ಸಂಗಮವಾಗಿರುವ ಸಾಹಿತ್ಯದ ಸೊಗಸು, ಸೊಬಗು ಆಳ ಹರಿವಿನ ಕುರಿತು ಅರಿವು ಮೂಡಿಸುವ ಲೇಖನ ವಿಚಾರ ಲಹರಿ ಲೇಖನವೂ ವಿಚಾರ ಪರಿಪ್ಲುತವಾಗಿ ಮೂಡಿಬಂದಿದೆ.

ಈ ಪ್ರಬಂಧ ಸಂಕಲನವು ಸಾಹಿತ್ಯಾಸಕ್ತರ ಮನಸೆಳೆಯುವಂತಹ ಚಿಂತನಾ ಸಮೃದ್ಧ ಕೃತಿ. ಈ ಸಂಕಲನದಲ್ಲಿ ಲೇಖಕರು ಸಮಾಜ, ಸಂಸ್ಕೃತಿ, ಶಿಕ್ಷಣ, ಮಾನವೀಯ ಮೌಲ್ಯಗಳು ಹಾಗೂ ಇಂದಿನ ಬದುಕಿನ ವೈವಿಧ್ಯಮಯ ಆಯಾಮಗಳತ್ತ ಗಮನ ಸೆಳೆದಿದ್ದಾರೆ.. ಅವರ ಬರವಣಿಗೆಯಲ್ಲಿ ಕಂಡು ಬರುವ ಸರಳತೆ, ಸ್ಪಷ್ಟತೆ ಮತ್ತು ತಾತ್ವಿಕತೆ ಓದುಗರ ಮನಸ್ಸಿಗೆ ಮುಟ್ಟುತ್ತದೆ. ಅಲ್ಲಲ್ಲಿ ಲಘು ಹಾಸ್ಯ, ಮತ್ತೊಮ್ಮೆ ಗಂಭೀರ, ಮಗದೊಮ್ಮೆ ಚಿಂತನೆಗೆ ಹಚ್ಚುವ ವಿಷಯಗಳಿಂದ ಓದಿನ ಪ್ರತಿ ಹಂತದಲ್ಲೂ ಮೊಗದಲ್ಲಿ ಮಾಸದ ಮುಗುಳ್ನಗೆಯೊಂದಿಗೆ ಓದುಗ ತನ್ನನ್ನು ತಾನು ಅರಿಯುವ ದಾರಿಯತ್ತ ಸಾಗುವಂತೆ ಮಾಡುವುದು ಈ ಕೃತಿಯ ವೈಶಿಷ್ಟ್ಯ.

## ಕೈದಿಗಳು ಹೇಳಿದ ಕಥೆಗಳು

ವಿವಿಧ ಕಾರಣಗಳಿಂದ ಜೈಲಿಗೆ ಸೇರಿರುವವರಿಗೆ ಸಾಹಿತ್ಯಕ ಚಟುವಟಿಕೆ, ರಂಗಭೂಮಿ ಚಟುವಟಿಕೆಗಳು ಒಂದು ಸಕಾರಾತ್ಮಕ ಥೆರಪಿ ಇದ್ದಂತೆ. ಗಣೇಶ ಅಮೀನಗಡ ಅವರು ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ; ಹಲವು ಕೈದಿಗಳನ್ನು ಮಾತನಾಡಿಸಿ, ಅವರ ಕಥೆಗಳನ್ನು ಸಂಗ್ರಹಿಸಿದ್ದಾರೆ. ಜೈಲಿನಲ್ಲಿರುವವರ ಅನುಭವಗಳನ್ನು ಅವರದೇ ಮಾತಿನಲ್ಲಿ ಹೇಳಿರುವುದು 'ಕೈದಿಗಳ ಕಥನ' ವೈಶಿಷ್ಟ್ಯ. ಇಲ್ಲಿ ಸುಮಾರು 26 ಕೈದಿಗಳು ಬರೆದ ಅನುಭವ, ಒಳತೋಟಿಗಳಿವೆ. ಅವುಗಳನ್ನು ಓದುವುದೆಂದರೆ ಒಂದು ವಿಶಿಷ್ಟ ಅನುಭವ. ಈ ಸಂಕಲನದ ಕುರಿತು ಮುನ್ನುಡಿಯಲ್ಲಿ ಡಾ. ಕೆ.ವಿ.ನಾರಾಯಣ ಅವರು ಬರೆದಿರುವ ಮಾತುಗಳು ಮನನೀಯ : ''ಜೈಲುಗಳು, ಹುಚ್ಚಾಸ್ಪತ್ರೆಗಳು ಹೊಸ ಜಗತ್ತಿನ ಕೊಡುಗೆಗಳು. ಅಪರಾಧ, ಶಿಕ್ಷೆಗಳ ಸಂಬಂಧದಲ್ಲಿ ಹುಟ್ಟಿಕೊಂಡ ಜೈಲುಗಳು ಮನುಷ್ಯನ ಸುಧಾರಣೆಯನ್ನೂ ತನ್ನ ಗುರಿಯನ್ನಾಗಿ ಮಾಡಿಕೊಂಡಿವೆ. ಸಮಾಜಕ್ಕೂ ಜೈಲುಗಳಿಗೂ ನಡುವಣ ಬಾಗಿಲಿನಂತೆ ಕೆಲಸ ಮಾಡುವ ನ್ಯಾಯಾಲಯಗಳಿಗೆ ಸುಧಾರಣೆ ಮುಖ್ಯ ಆಸಕ್ತಿಯಾಗಿಲ್ಲ; ಶಿಕ್ಷೆಯೊಂದೇ ಅವುಗಳ ಪರಮ ಗುರಿ. ಈಚಿನ ದಿನಗಳಲ್ಲಿ ಮಾನವ ಹಕ್ಕುಗಳ ನೆರಳಿನಲ್ಲಿ ನ್ಯಾಯಾಲಯಗಳೂ ಕೈದಿಗಳ ರಂಗಭೂಮಿಯ ನೆರವಿನಿಂದ ಕೈದಿಗಳ ಜಗತ್ತನ್ನು ತಿದ್ದುವ ಯತ್ನ ಮಾಡಿರುವುದೂ ಈ ನಿಟ್ಟಿನಲ್ಲಿಯೇ ಸಾಗಿದೆ. ಹಕ್ಕು ಮತ್ತು ಸುಧಾರಣೆಯನ್ನು ಕುರಿತು ಚಿಂತಿಸತೊಡಗಿವೆ. ಅದೇನೇ ಇರಲಿ, ಜೈಲಿನೊಳಗಿನ ಲೋಕವನ್ನು ಈ ಸಮಾಜ ತನ್ನ ಬೆನ್ನ ಮೇಲೆ ಹೊತ್ತುಕೊಂಡು ತಿರುಗುತ್ತಿದೆ. ಕೈದಿಗಳ ಮನಸ್ಸನ್ನು ಸಾಧನ ಹಾಗೂ ಗುರಿಯನ್ನಾಗಿ ಮಾಡಿಕೊಳ್ಳುತ್ತವೆ. ಈ ದಾರಿ ಸರಿಯೋ ತಪ್ಪೋ ಎನ್ನುವುದು ಸದ್ಯ ನಮಗೆ ಮುಖ್ಯವಲ್ಲ. ಆದರೆ ಕೈದಿಗಳಿಗೆ ಒಂದು ಒಳ ಜಗತ್ತಿದೆ. ನ್ಯಾಯಾಲಯದ ಅಥವಾ ಕಾನೂನಿನ ಪರಿಭಾಷೆ ಅವರನ್ನು ವಿವರಿಸುವ ಬಗೆಯನ್ನು ಬದಿಗಿರಿಸಿದರೆ ಅದರಲ್ಲಿರುವ ಒಳ ಜಗತ್ತಿನ ಸೆಳಕುಗಳು ನಾಗರಿಕ ಸಮಾಜಕ್ಕೆ ತಿಳಿಯುವ ಸಂಭವ ಕಡಿಮೆ. ಈ ಕೈದಿಗಳೊಡನೆ ಮಾತಾಡಿ ಅವರ ಕಥನಗಳನ್ನು ಹೊರತರುವ ಯತ್ನಗಳೂ ನಡೆದಿಲ್ಲ. ಡಾ.ಗಣೇಶ ಅಮೀನಗಡ ಇಂತಹದೊಂದು ಪ್ರಯತ್ನವನ್ನು ಮಾಡಿದ್ದರ ಫಲಿತವನ್ನು ಈ ಪುಸ್ತಕದಲ್ಲಿ ನೋಡಬಹುದು.'' (ಡಾ. ಕೆ.ವಿ. ನಾರಾಯಣ, ಮುನ್ನುಡಿಯಲ್ಲಿ)




ಕೈದಿಗಳ ಕಥನ
ಲೇ: ಗಣೇಶ ಅಮೀನಗಡ
ಪ್ರ: ಕವಿತಾ ಪ್ರಕಾಶನ ಮೈಸೂರು
ಬೆಲೆ ರು.170/-

## ವಿಶ್ವವಾಣಿ ಅಂಕಿತ ಟಾಪ್ ಟೆನ್

1




**ಅಜಿತ್ ದೋವಲ್**
(ಭಾರತದ ಭದ್ರತಾ ಸಲಹೆಗಾರರು ವಿದೇಶಾಂಗ ನೀತಿಗೆ ಹೊಸ ಭಾಷ್ಯ ಬರೆದ ವಿವರಗಳು ಈಗ ಪುಸ್ತಕ ರೂಪದಲ್ಲಿ)
ಲೇ: ರವೀಂದ್ರ ಜೋಶಿ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ: ರೂ 150/-

2




**ಶ್ರೇಷ್ಠತೆಯ ಸೊಕ್ಕು**
(ಬರಗೂರು ಅವರು ಬರೆದಿರುವ ಪ್ರಮುಖ ಲೇಖನಗಳು, ವ್ಯಕ್ತಿಚಿತ್ರಗಳು,ಪುಸ್ತಕಾವಲೋಕನ ಮೂರು ಭಾಗಗಳಲ್ಲಿ ಪ್ರಕಟವಾಗಿವೆ)
ಲೇ: ಬರಗೂರು ರಾಮಚಂದ್ರಪ್ಪ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 550/-

3

**ಅನಾಮಧೇಯ ಕರೆ**
ಸ್ವಗತದಲ್ಲಿ ಸಂವಾದ
(ಕನ್ನಡದ ಹನ್ನೆರಡು ಪ್ರಸಿದ್ಧ ಸಾಹಿತಿಗಳೊಂದಿಗೆ ಮಾತುಕತೆ)
ಲೇ: ವಿಕ್ರಮ ವಿಸಾಜಿ
ಪ್ರ: ನೆಲದ ನುಡಿ ಪ್ರಕಾಶನ,ಭಾಲ್ಕಿ
ಬೆಲೆ: ರೂ 450/-

4




**ಕಾರಂತರ ಸುಳಿಯಲ್ಲಿ**
(ಶಿವರಾಮ ಕಾರಂತರನ್ನು ಕುರಿತು ಅವರ ಮಕ್ಕಳು ಬರೆದ ಕಾರಂತರ ಕಥೆ)
ಲೇ: ಉಲ್ಲಾಸ ಕಾರಂತ, ಮಾಲವಿಕಾ ಕಪೂರ, ಕ್ಷಮಾರಾವ್
ಕನ್ನಡಕ್ಕೆ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 395/-

5




**ಬುದ್ಧಂ ಶರಣಂ ಗಚ್ಛಾಮಿ**
(ಅಮ್ರಪಾಲಿ, ಅಂಗುಲಿಮಾಲಾ ಮೊದಲಾದವರ ಕುರಿತ ಬುದ್ಧನ ಕಾಲದ ಕಥೆಗಳು)
ಲೇ: ಡಾ। ಲಕ್ಷ್ಮಣ ಕೌಂಟೆ
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ: ರೂ 350/-

6




**ಪದ ಪಂಚಾಮೃತ**
(ಭಾಷಣಕಾರರಿಗೆ ಉಪಯುಕ್ತವಾಗುವ ಅನೇಕ ಪದಪುಂಜಗಳು-ಅರ್ಥ, ವಿವರಣೆ ಸಹಿತ)
ಲೇ: ಪ್ರೊ। ಕೆ.ಪಿ. ಪುತ್ತೂರಾಯ
ಪ್ರ: ಜ್ಯೋತಿ ಪ್ರಕಾಶನ, ಬೆಂಗಳೂರು
ಬೆಲೆ: ರೂ 280/-

7




**ಇರಾನ್ ಗುಡ್ ಬ್ಯಾಡ್ ಅಗ್ಲಿ**
(ಇರಾನಿನ ಪುರಾತನ ಇತಿಹಾಸ ಮತ್ತು ಅದು ಬೆಳೆದು ಬಂದ ಬಗೆಯನ್ನು ವಿವರಿಸುವ ಕೃತಿ)
ಲೇ: ಗೋಪಾಲಕೃಷ್ಣ ಕುಂಟಿನಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ: ರೂ 150/-

8




**ವಾತಾಪಿ**
(ಕ್ರಿ. ಶ. 605-645ರ ವರೆಗೆ ಆಳಿದ ದಕ್ಷಿಣಾಪಥೇಶ್ವರ ಇಮ್ಮಡಿ ಪುಲಿಕೇಶಿಯ ರೋಚಕ ಚರಿತ್ರೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ: ರೂ 449/-

9




**ಕಥಾನಾಯಕನ ಕಥೆ - ಡಾ। ರಾಜಕುಮಾರ್ ಆತ್ಮ ಚರಿತ್ರೆ**
(ನಾನೇ ಹೇಳಿ ಬರೆಸಿದ ನನ್ನ ಕಥೆ - ರಾಜಕುಮಾರ್)
ನಿರೂಪಣೆ: ಚಿ.ದತ್ತರಾಜ್
ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬೆಲೆ: ರೂ 1200/-

10




**ರಹಸ್ಯ**
(ಓಶೋ ಅವರು 1978 ರಲ್ಲಿ 20 ದಿನಗಳ ಕಾಲ ಸೂಫಿಗಳ ಕುರಿತು ನೀಡಿದ ಪ್ರವಚನಗಳ ಸಂಕಲನ)
ಲೇ: ಓಶೋ
ಅನು: ಪ.ರಾ. ಕೃಷ್ಣಮೂರ್ತಿ
ಪ್ರ: ವಂಶಿ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ: ರೂ 300/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

## ಕಷ್ಟವನ್ನೆದುರಿಸಿ ಬದುಕನ್ನು ಕಟ್ಟಿದವರು

ನೆನಪಿನಂಗಳದಿಂದ ನನ್ನ ಕಥೆ ವ್ಯಥೆ
ಲೇ: ಪಿ. ರಾಮದಾಸ್ ನಾಯಕ್
ಆತ್ಮಕಥೆ
ಪ್ರ : ಸ್ನೇಹ ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು

» ಉದಯ ಕುಮಾರ ಹಬ್ಬು

ಇದು ಆತ್ಮಚರಿತ್ರೆಯೇ, ಸೊಲಿಲೊಕಿಯೇ? ಅಪಘಾತವೊಂದರಲ್ಲಿ ಕಾಲುಕಳೆದುಕೊಂಡರೂ, ಆ ನೋವಿನಿಂದ ಹೊರಬಂದು, ಇತರರಿಗೆ ಸಹಾಯ ಮಾಡುತ್ತಾ ಸ್ಫೂರ್ತಿ ತುಂಬಿದ ಅಪರೂಪದ ವ್ಯಕ್ತಿತ್ವದ ಅನಾವರಣ ಈ ಪುಸ್ತಕದಲ್ಲಿದೆ. ಲೇಖಕರ ಜೀವನದ ಕಹಿ ಸಿಹಿ ಅನುಭವಗಳು ಹರಳುಗಟ್ಟಿವೆ ಈ ಪುಸ್ತಕದಲ್ಲಿ. ಸದ್ಗುಣವಂತ, ಸಚ್ಚಾರಿತ್ರ್ಯವುಳ್ಳ, ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ, ಮಾನವೀಯ ಅನುಕಂಪ, ದಯೆ, ಕರುಣೆಯುಳ್ಳ, ಪ್ರಾಣಿದಯೆ ಇರುವ ಉತ್ತಮ ಮಿತ್ರ, ಉತ್ತಮ ಮಗ, ಗಂಡ, ತಂದೆಯಾಗಿ ಸಮಾಜಕ್ಕೆ ಅತ್ಯುತ್ತಮ ಕೊಡುಗೆಯನ್ನು ತನ್ನ ಧೀಮಂತ ಬದುಕಿನ ಮೂಲಕ, ಯಶಸ್ವಿ ನಾಯಕತ್ವದ ಮೂಲಕ ಕೊಟ್ಟು ನಿರ್ಲಿಪ್ತನಾದ ವ್ಯಕ್ತಿ ಈ ಪುಸ್ತಕದ ಲೇಖಕ ಪಿ. ರಾಮದಾಸ್ ನಾಯಕರು ಎಂದು ಪುಸ್ತಕ ಓದಿದಾಗ ಗೊತ್ತಾಗುತ್ತದೆ.

ಬಾಲ್ಯದ ಅನೇಕ ಸ್ವಾರಸ್ಯಕರ ಹುಡುಗಾಟದ ಪ್ರಸಂಗಗಳನ್ನು ನಿರೂಪಿಸಿದ್ದಾರೆ. ಅವರಿಗೆ ಬಾಲ್ಯದಿಂದಲೇ ನಾಯಕತ್ವ ಗುಣ ಇತ್ತು ಎಂದು ನಿರೂಪಣೆಯಿಂದ ಗೊತ್ತಾಗುತ್ತದೆ. ಪುಸ್ತಕಗಳನ್ನು ಓದುವುದೆಂದರೆ ಎಲ್ಲಿಲ್ಲದ ಹುಚ್ಚು. ಅವರು ಕಲಿತ ಶಾಲೆಯ ಹಳೆಯ ವಿದ್ಯಾರ್ಥಿಯಾಗಿ ಆ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾದರು.

ಎರಡನೆಯ ಭಾಗ ಅವರ ಬದುಕಿನ ದುರಂತದ ದಿನಗಳು. ಅವರಿದ್ದ ದ್ವಿಚಕ್ರ ವಾಹನಕ್ಕೆ ಒಂದು ಲಾರಿ ಬಡಿದು ಅವರ ಕಾಲುಗಳ ಮೂಳೆಗಳು ತುಂಡಾಗಿಬಿಟ್ಟಿದ್ದವು. ಅವರನ್ನು ಆಸ್ಪತ್ರೆಯಿಂದ ಆಸ್ಪತ್ರೆಗೆ ಕರೆದೊಯ್ಯುವಂತಾಗಿ ಕೊನೆಗೆ ಮಣಿಪಾಲದ ಒಂದು ಆಸ್ಪತ್ರೆಯಲ್ಲಿ ಸುಮಾರು 120 ದಿನಗಳ ಚಿಕಿತ್ಸೆ ಪಡೆಯಬೇಕಾಯಿತು. ಆ ನೋವಿನ ದಿನಗಳನ್ನು ಅತ್ಯಂತ ನಿಸ್ಪ್ರಹವಾಗಿ ನಿರೂಪಿಸಿದ್ದಾರೆ. ಸುದೀರ್ಘ ಕಾಲ ಆಸ್ಪತ್ರೆಯಲ್ಲಿದ್ದೂ ಇತರ ರೋಗಿಗಳಿಗೆ ಧೈರ್ಯ ಹೇಳಿ ತಮ್ಮ ನೋವನ್ನು ಮರೆಯುತ್ತಾರೆ. ಅವರ ಬದುಕಿನ ಈ ದುರಂತದ ಭಾಗ ತುಂಬ ಚಿತ್ರವತ್ತಾಗಿ ನಿರೂಪಣೆಗೊಂಡಿದ್ದು, ಓದುಗರ ಮನಸ್ಸಿನಲ್ಲಿ ನೋವನ್ನುಂಟುಮಾಡಬಲ್ಲದು. ಅಂತಹ ನೋವಿನಲ್ಲೂ ನಗೆಯ ಮಿಂಚನ್ನು ಕಂಡಿದ್ದಾರೆ. ಇತರರ ಕಷ್ಟ ಪರಿಹರಿಸುವುದರಲ್ಲಿ ಸಾರ್ಥಕತೆ ಕಂಡಿದ್ದಾರೆ. ಒಬ್ಬ ನಿವೃತ್ತ ರೋಗಿ ಕ್ರಚಸ್ ಹಿಡಿದು ನಡೆಯಲು ಧೈರ್ಯಗುಂದಿದಾಗ ಅವರೇ ಸ್ವತಃ ಕ್ರಚಸ್ ಹಿಡಿದು ನಡೆಯುತ್ತಿದ್ದರೂ ಸಹ ರೋಗಿಗೆ ಕ್ರಚಸ್ ಉಪಯೋಗಿಸಲು ಧೈರ್ಯ ನೀಡುತ್ತಾರೆ.

ಉದ್ಯೋಗ ಪರ್ವದಲ್ಲಿ ತಾವು ಕಂಡುಂಡ ವಿಶಿಷ್ಟ ಅನುಭವಗಳನ್ನು ಅತ್ಯಂತ ಕುತೂಹಲಕಾರಿ ನಿರೂಪಣೆಯಿಂದ ಓದುಗರನ್ನು ಹಿಡಿದಿಡುತ್ತಾರೆ. ವೃತ್ತಿಯಲ್ಲಿ ಎದುರಿಸಿದ ಅನೇಕ ಒತ್ತಡಭರಿತ ಸನ್ನಿವೇಶಗಳನ್ನು ಧೈರ್ಯದಿಂದ, ಚಾಣಾಕ್ಷತೆಯಿಂದ ಎದುರಿಸಿದ ಬಗೆಯನ್ನು ಆಕರ್ಷಕವಾಗಿ ನಿರೂಪಿಸಿದ್ದಾರೆ.

ಅಪಘಾತಕ್ಕೊಳಗಾಗಿ ಕಾಲುಗಳನ್ನು ಕಳೆದುಕೊಂಡ ಲೇಖಕರು, ಸುತ್ತಮುತ್ತಲಿನ ಪಶು- ಪಕ್ಷಿ- ಉರಗಗಳ ಮೇಲೆ ತೋರುವ ಪ್ರೀತಿ, ಅವರ ಪತ್ನಿಯೊಡನೆ ಪ್ರಾಣಿದಯೆಯಲ್ಲಿ ಕೈಗೊಂಡ ವಿವರಗಳು ಗಮನ ಸೆಳೆಯುತ್ತವೆ. ಬೆಕ್ಕುಗಳನ್ನು ಸಾಕಲು ಅವರ ಮಗ ಹೇಗೆ ಕಾರಣನಾದ? ಬೆಕ್ಕುಗಳು ಆರು ತಿಂಗಳಿಗೊಮ್ಮೆ ಐದಾರು ಮರಿಗಳನ್ನು ಹಾಕಿದಾಗ ಆ ಮರಿಗಳನ್ನು ಹೇಗೆ ಸಾಕಿದರು? ಸುತ್ತಮುತ್ತಲಿನ ಜನ ಹೇಗೆ ಮರಿಗಳನ್ನು ತಮ್ಮ ಮನೆಗೆ ಕೊಂಡೊಯ್ದರು? - ಈ ಮುಂತಾದ ಕುತೂಹಲಕಾರಿ ವಿದ್ಯಮಾನಗಳು ನಿರೂಪಿತಗೊಂಡಿವೆ. ನಾಯಕರು ಎದುರಿಸಿದ ಬದುಕಿನ ನೋವು ನಲಿವುಗಳು ಅವರದೇ. ಚಾರ್ಲಿ ಚಾಪ್ಲಿನ್ ಹಾಗೆ ನೋವಿನಲ್ಲೂ ನಗುವ ಕಲೆ ನಾಯಕರಿಗೆ ಸಿದ್ಧಿಸಿದೆ. ಸ್ವಾರಸ್ಯಕರ ಓದಿಗೆ, ಜೀವನದ ವಿಶಿಷ್ಟ ಅನುಭವಗಳ ಮುಖಾಮುಖಿಗೆ ಈ ಪುಸ್ತಕವನ್ನು ಕೈಗೆತ್ತಿಕೊಳ್ಳಬಹುದು.

## ಮತ್ತೆ ಮತ್ತೆ ಕನ್ನಡ

» ಕುಶಾಂಗಿ ಪಟೇಲ್

ಭಾಷೆ ಕೇವಲ ಸಂಸ್ಕೃತಿಯ ಸಂಕೇತವಲ್ಲ. ಅದು ಆರ್ಥಿಕತೆ, ಶಿಕ್ಷಣ, ಉದ್ಯಮ ಮತ್ತು ಜಾಗತಿಕ ಗುರುತಿನೊಂದಿಗೆ ಕೂಡಿದ ಶಕ್ತಿಯಾಗಿದೆ ಎಂಬ ಸಂದೇಶವನ್ನು ರಾ.ನಂ. ಚಂದ್ರಶೇಖರ ಅವರ ''ಮತ್ತೆ ಹಚ್ಚೋಣ ಕನ್ನಡದ ದೀಪ'' ಕೃತಿ, ಕನ್ನಡದ ಅಸ್ತಿತ್ವವನ್ನು ಹೊಸ ದೃಷ್ಟಿಕೋನದಲ್ಲಿ ಪರಿಗಣಿಸುವ ಚಿಂತನಾ ಸಂಕಲನ ಎನಿಸಿದೆ.

ಪುಸ್ತಕದ ಪ್ರಮುಖ ಶಕ್ತಿ ಅದರ ವಿಷಯ ವೈವಿಧ್ಯತೆ ಮತ್ತು ಸಮಗ್ರತೆ. ಕೃಷಿ, ಕೈಗಾರಿಕೆ, ಜಾಗತೀಕರಣ, ಶಿಕ್ಷಣ ಮತ್ತು ಆಡಳಿತ ಈ ಎಲ್ಲ ಕ್ಷೇತ್ರಗಳಲ್ಲಿ ಕನ್ನಡದ ಪಾತ್ರವನ್ನು ಲೇಖಕರು ಆಳವಾಗಿ ವಿಶ್ಲೇಷಿಸಿದ್ದಾರೆ. ವಿಶೇಷವಾಗಿ ಸಿರಿಧಾನ್ಯಗಳ (ಮಿಲೆಟ್‌ಗಳ) ಕುರಿತು ನೀಡಿರುವ ವಿಶ್ಲೇಷಣೆ ಗಮನಾರ್ಹ. ಪರಂಪರೆಯ ಆಹಾರ ಪದ್ಧತಿಗಳಾದ ಮಿಲೆಟ್‌ಗಳು ಇಂದಿನ ಆರೋಗ್ಯದ ದೃಷ್ಟಿಯಿಂದ ಮಾತ್ರವಲ್ಲದೆ, ರೈತರ ಆರ್ಥಿಕ ಸ್ಥಿತಿಯನ್ನು ಬಲಪಡಿಸುವ ಸಾಧನಗಳಾಗಬಹುದು ಎಂಬ ವಿಚಾರವನ್ನು ಲೇಖಕರು ಸ್ಪಷ್ಟಪಡಿಸುತ್ತಾರೆ. ಸ್ಥಳೀಯ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ಕೊಂಡೊಯ್ಯುವ ಅಗತ್ಯ ಮತ್ತು ಅದರ ಸಾಧ್ಯತೆಗಳನ್ನು ಈ ಭಾಗ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ.

ಇದೇ ಸಂದರ್ಭದಲ್ಲಿ, ಕರ್ನಾಟಕದಲ್ಲಿರುವ ವಿಶ್ವ ಪಾರಂಪರಿಕ ತಾಣಗಳ ಕುರಿತು ಕೃತಿಯಲ್ಲಿ ನೀಡಿರುವ ವಿವರಣೆಗಳು ಓದುಗರನ್ನು ಚಿಂತನೆಗೆ ದೂಡುತ್ತವೆ. ಯುನೆಸ್ಕೋ ಮಾನ್ಯತೆ ಪಡೆದ ಹಂಪಿ, ಪಟ್ಟದಕಲ್ಲು, ಬೇಲೂರು-ಹಳೇಬೀಡು ಹಾಗೂ ಮೊದಲಾದ ತಾಣಗಳು ಕೇವಲ ಪ್ರವಾಸೋದ್ಯಮದ ಕೇಂದ್ರಗಳಲ್ಲ. ಅವು ನಮ್ಮ ಇತಿಹಾಸ, ಸಂಸ್ಕೃತಿ ಮತ್ತು ನಾಗರಿಕತೆಯ ಸಾಕ್ಷಿಗಳಾಗಿವೆ. ಈ ತಾಣಗಳನ್ನು ಸಂರಕ್ಷಿಸುವುದರ ಜತೆಗೆ, ಅವುಗಳನ್ನು ಆರ್ಥಿಕ ಅಭಿವೃದ್ಧಿಗೆ ಬಳಸಿಕೊಳ್ಳುವ ಸಾಧ್ಯತೆಗಳನ್ನು ಲೇಖಕರು ಪ್ರಸ್ತಾಪಿಸುತ್ತಾರೆ. ಪ್ರವಾಸೋದ್ಯಮದ ಮೂಲಕ ಉದ್ಯೋಗ ಸೃಷ್ಟಿ, ಸ್ಥಳೀಯ ವ್ಯಾಪಾರ ಬೆಳವಣಿಗೆ ಮತ್ತು ಜಾಗತಿಕ ಗುರುತಿನ ವೃದ್ಧಿ, ಈ ಎಲ್ಲ ಅಂಶಗಳು ಈ ಚರ್ಚೆಯಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಪುಸ್ತಕವು ಮತ್ತೊಂದು ಮುಖ್ಯ ವಿಚಾರವನ್ನು ಪ್ರಸ್ತಾಪಿಸುತ್ತದೆ ಅದು ಕನ್ನಡದ ಪ್ರಾಯೋಗಿಕ ಬಳಕೆ. ಭಾಷೆ ಬದುಕಬೇಕಾದರೆ ಅದು ಶಿಕ್ಷಣ, ತಂತ್ರಜ್ಞಾನ ಮತ್ತು ಆಡಳಿತದಲ್ಲಿ ಸಕ್ರಿಯವಾಗಿ ಬಳಕೆಯಾಗಬೇಕು ಎಂಬ ತತ್ವವನ್ನು ಲೇಖಕರು ಸ್ಪಷ್ಟವಾಗಿ ಮಂಡಿಸಿದ್ದಾರೆ. ಡಿಜಿಟಲ್ ಯುಗದಲ್ಲಿ ಕನ್ನಡದ ಬಳಕೆಯನ್ನು ವಿಸ್ತರಿಸುವ ಅಗತ್ಯ ಮತ್ತು ಅದರ ಸವಾಲುಗಳನ್ನು ಕೃತಿ ಸ್ಪಷ್ಟಪಡಿಸುತ್ತದೆ. ಯುವಜನತೆ ಮತ್ತು ಉದ್ಯಮಿಗಳು ತಮ್ಮ ಕೆಲಸಗಳಲ್ಲಿ ಕನ್ನಡವನ್ನು ಬಳಸಿಕೊಂಡರೆ, ಅದು ಭಾಷೆಯ ಸ್ಥಿರತೆಗೆ ಮಾತ್ರವಲ್ಲ, ಆರ್ಥಿಕ ಪ್ರಗತಿಗೂ ಸಹಕಾರಿಯಾಗುತ್ತದೆ ಎಂಬ ಸಂದೇಶ ಇಲ್ಲಿ ಸ್ಪಷ್ಟವಾಗಿದೆ.

ಲೇಖನ ಶೈಲಿಯೂ ಕೃತಿಯ ಮತ್ತೊಂದು ಪ್ರಮುಖ ಅಂಶ. ಸರಳ, ನೇರ ಮತ್ತು ತಾತ್ವಿಕ ಚಿಂತನೆಗಳನ್ನು ಒಳಗೊಂಡಿರುವ ಭಾಷೆ ಓದುಗರನ್ನು ಸೆಳೆಯುತ್ತದೆ. ವಿಷಯಗಳು ಅತಿಯಾದ ಸಿದ್ಧಾಂತಗಳಲ್ಲಿ ಸಿಲುಕದೇ, ಪ್ರಾಯೋಗಿಕ ಉದಾಹರಣೆಗಳ ಮೂಲಕ ನಿರೂಪಿಸಲ್ಪಟ್ಟಿವೆ. ಇದರಿಂದ ಓದುಗರಿಗೆ ವಿಷಯದೊಂದಿಗೆ ಸಂಬಂಧ ಬೆಳೆಸಿಕೊಳ್ಳಲು ಸುಲಭವಾಗುತ್ತದೆ.ಒಟ್ಟಿನಲ್ಲಿ, ''ಮತ್ತೆ ಹಚ್ಚೋಣ ಕನ್ನಡದ ದೀಪ'' ಕೃತಿ ಕನ್ನಡದ ಭವಿಷ್ಯದ ಬಗ್ಗೆ ಸಮಗ್ರ ಚಿಂತನೆಗೆ ಪ್ರೇರೇಪಿಸುವ ಮಹತ್ವದ ಗ್ರಂಥವಾಗಿದೆ. ಕನ್ನಡವನ್ನು ಕೇವಲ ಪರಂಪರೆಯಾಗಿ ಉಳಿಸಿಕೊಳ್ಳುವುದಲ್ಲ, ಅದನ್ನು ಆರ್ಥಿಕ ಮತ್ತು ಜಾಗತಿಕ ಶಕ್ತಿಯಾಗಿ ರೂಪಿಸುವ ದಿಕ್ಕಿನಲ್ಲಿ ಚಿಂತಿಸಲು ಈ ಕೃತಿ ಪ್ರೇರೇಪಿಸುತ್ತದೆ.




ಮತ್ತೆ ಹಚ್ಚೋಣ ಕನ್ನಡದ ದೀಪ
ಲೇ: ರಾ. ನಂ. ಚಂದ್ರಶೇಖರ
ಪ್ರ: ಸಪ್ನ ಬುಕ್ ಹೌಸ್ ಬೆಂಗಳೂರು

## ನಂದಿ ಬೆಟ್ಟದ ಅವಲೋಕನ

» ಅಜಯ್ ಅಂಚೆಪಾಳ್ಯ

ಒಂದು ನಿಟ್ಟಿನಲ್ಲಿ ನೋಡಿದರೆ, ನಂದಿ ಬೆಟ್ಟವು ಬೆಂಗಳೂರಿನ ಅಸ್ಮಿತೆಯ ಭಾಗವೇ ಸರಿ. ನಂದಿ ಬೆಟ್ಟವು ಪುರಾತನ ಕಾಲದಿಂದಲೂ ಈ ಸೀಮೆಯ ಐತಿಹಾಸಿಕ, ಸಾಂಸ್ಕೃತಿಕ ಮಹತ್ವದ ತಾಣಗಳಲ್ಲಿ ಒಂದು. ನಂದಿ ಬೆಟ್ಟದ ಕುರಿತು ಡಿ ಜಿ ಮಲ್ಲಿ ಕಾರ್ಜುನ ಅವರು ಹೊರತಂದಿರುವ 'ನಂದಿ ಬೆಟ್ಟದ ಮೇಲುಗಡೆ' ಪುಸ್ತಕವು ಆ ಗಿರಿದುರ್ಗದ ಅಸ್ಮಿತೆಯನ್ನು ಅರ್ಥಪೂರ್ಣವಾಗಿ ಪರಿಚಯಮಾಡಿಕೊಡುತ್ತದೆ ಎನ್ನಬಹುದು. ಈ ಪುಸ್ತಕಕ್ಕೆ ಹೆಚ್ಚಿನ ತೂಕ ಬಂದಿರುವುದು, ಇಲ್ಲಿರುವ ಛಾಯಾಚಿತ್ರಗಳಿಂದ. ಸ್ವತಃ ಲೇಖಕರೇ ಚಿತ್ರಿಸಿರುವ ಹಲವು ಛಾಯಾಚಿತ್ರಗಳ ಜತೆಯಲ್ಲೇ, ಹಲವು ಹಳೆಯ, ಐತಿಹಾಸಿಕ ಛಾಯಾಚಿತ್ರಗಳು ನಂದಿ ಬೆಟ್ಟದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

ನಂದಿ ಬೆಟ್ಟಕ್ಕೂ ನಂದೀಶ್ವರನ ದೇಗುಲಕ್ಕೂ ಅವಿನಾಭಾವ ಸಂಬಂಧವಿದೆ. ನಂದಿ ದೇಗುಲವನ್ನು ನಿರ್ಮಿಸಿದವಳು ರಾಷ್ಟ್ರಕೂಟ ರಾಜ ನಾದ ಇಂದ್ರನ ಮಗಳು, ಬಾಣ ವಿದ್ಯಾ ಧರನ ಹೆಂಡತಿ, ರತ್ನಾವಳಿ ಎಂಬಾಕೆ. ಇವಳ ವಿವರಗಳನ್ನು ಒದಗಿಸಿದ ತಾಮ್ರಶಾಸನಗಳನ್ನು ಪುರಾತತ್ವ ಇಲಾಖೆಯ ನರಸಿಂಹಾಚಾರ್ ಅವರಿಗೆ ದೊರಕಿದ ವಿದ್ಯಮಾನವು ಕುತೂಹಲ ಹುಟ್ಟಿಸುವಂತಹದ್ದು. ''ನರಸಿಂಹಾಚಾರ್ ಅವರು ಆರ್ಕಿಯಾಲಜಿಕಲ್ ಸರ್ವೆ ಮಾಡುತ್ತಾ 1914ರ ಸಮಯಕ್ಕೆ ಚಿಕ್ಕಬಳ್ಳಾಪುರಕ್ಕೆ ಬಂದಾಗ, ಆಗಿನ ಪಟ್ಟಣದ ಅಮಲ್ದಾರರಾಗಿದ್ದ ನರಸಿಂಹಶಾಸ್ತ್ರಿಗಳು ಅವರಿಗೆ ಮೂರು ತಾಮ್ರ ಶಾಸನಗಳನ್ನು ಕೊಟ್ಟರಂತೆ. 1914ರ ಜೂನ್ 13ರಂದು ನಂದಿ ಗ್ರಾಮದ ಶೇಖ್ ಮೊಹಿದೀನ್ ಎಂಬ ವ್ಯಕ್ತಿಗೆ ಹೊಲದಲ್ಲಿ ಬಾವಿ ಅಗೆಸುವಾಗ ಏಳು ಅಡಿ ಆಳದಲ್ಲಿ ಅವು ಸಿಕ್ಕವಂತೆ. ಅವುಗಳ ಪೈಕಿ ಎರಡು ಗಂಗರವು : ಒಂದು ರಾಷ್ಟ್ರಕೂಟರದ್ದು!'' (ಪುಟ 20) ''ಸಿಡಿಮದ್ದನ್ನು ಪರಿಣಾಮಕಾರಿ ಯಾಗಿ ಬಳಸಿಕೊಳ್ಳುವ ತಾಂತ್ರಿಕತೆ ಟಿಪ್ಪುವಿನಲ್ಲಿತ್ತು. ಅದರ ದಾಸ್ತಾನು ಮಾಡಲೆಂದು ತನ್ನ ಸಾಮ್ರಾಜ್ಯದಲ್ಲಿ ಹಲವಾರು ಕಡೆ ಮದ್ದಿನ ಮನೆಗಳನ್ನು ನಿರ್ಮಿಸಿದ್ದ. ನಂದಿಬೆಟ್ಟದಲ್ಲಿಯೂ ಒಂದು ಮದ್ದಿನ ಮನೆಯಿದೆ. ಹಿಂದೆ ನಂದಿಬೆಟ್ಟದಲ್ಲಿದ್ದ ಟಿಪ್ಪು ಸುಲ್ತಾನನ ಮದ್ದಿನ ಮನೆ ಅತ್ಯಂತ ಹೀನಾಯ ಸ್ಥಿತಿಯಲ್ಲಿತ್ತು. ಅದರ ಸುತ್ತ ಕಳೆಗಿಡಗಳು ಬೆಳೆದು ಒಳಗೆ ತ್ಯಾಜ್ಯದ ರಾಶಿ ತುಂಬಿಹೋಗಿತ್ತು. 2021ರಲ್ಲಿ ಯುನೈಟೆಡ್ ವೇ ಬೆಂಗಳೂರು ಎಂಬ ಸ್ವಯಂಸೇವಾ ಸಂಸ್ಥೆಯವರು ಸುಮಾರು ಮೂರು ಲಕ್ಷ ರೂ. ವೆಚ್ಚದಲ್ಲಿ ಮದ್ದಿನ ಮನೆ ಅಥವಾ ಶಸ್ತ್ರಾಸ್ತ್ರ ಸಂಗ್ರಹಾರವನ್ನು ನವೀಕರಿಸಿದರು.'' (ಪುಟ 48) ಇಂತಹ ಹಲವು ಖಚಿತ ವಿವರಗಳು ಈ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ.ನಂದಿಯಲ್ಲಿರುವ ದೇಗುಲಗಳು, ಗಿಡಮರಗಳು, ಹೈದರ್ ಡ್ರಾಪ್, ಗಾಂಧೀಜಿಯವರು ನಂದಿ ಬೆಟ್ಟದಲ್ಲಿ ತಂಗಿದ ವಿವರ, ನಂದಿಬೆಟ್ಟದ ಕೋಟೆ, ಅದಕ್ಕಾಗಿ ನಡೆದ ಯುದ್ಧಗಳು, ಬ್ರಿಟಿಷರು ಇಲ್ಲಿ ನಡೆಸಿದ ಕಾಮಗಾರಿಗಳು, ಸಾಹಸಗಳು ಎಲ್ಲವೂ ಈ ಪುಸ್ತಕದಲ್ಲಿ ಅಡಕಗೊಂಡಿದ್ದು, ಕುತೂಹಲಕಾರಿ ಎನಿಸಿವೆ. ಇಂತಹ ವೈವಿಧ್ಯಮಯ ಐತಿಹಾಸಿಕ ಮಾಹಿತಿ ಮತ್ತು ಹಲವು ಉತ್ತಮ ಛಾಯಾಚಿತ್ರಗಳು ಈ ಪುಸ್ತಕವನ್ನು ಒಮ್ಮೆಯಾದರೂ ಓದುವಂತೆ ಮಾಡುತ್ತವೆ.




ನಂದಿಬೆಟ್ಟದ ಮೇಲುಗಡೆ
ಲೇ: ಡಿ.ಜಿ.ಮಲ್ಲಿಕಾರ್ಜುನ
ಪ್ರ: ನವಕರ್ನಾಟಕ ಬೆಂಗಳೂರು
ಬೆಲೆ ರು. 195/-

## ಗತಿಚಿತ್ರ

ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳ ಮತ್ತು ಕೃತಿಗಳ ವಿಮರ್ಶಾತ್ಮಕ ಪರಿಚಯ ಮಾಡಿಕೊಡುವ 27 ಲೇಖನಗಳು ಈ ಪುಸ್ತಕದಲ್ಲಿದ್ದು, ಇದನ್ನೋದಿದವರಿಗೆ ಕನ್ನಡ ಸಾಹಿತ್ಯದ ಸ್ಥೂಲ ಪರಿಚಯವಾಗಬಲ್ಲದು. ಜತೆಗೆ, ''ನಾಗರಾಜ್ ಹೆಗಡೆ ಅಪಗಾಲ ಇಲ್ಲಿಯ ಬರಹಗಳ ಮೂಲಕ ಕರಾವಳಿಯ ಮಣ್ಣಿಗೆ ಕಣ್ಣು ಕೊಟ್ಟಿದ್ದಾರೆ, ಮಾತಿನ ಸ್ಪರ್ಶ ನೀಡಿದ್ದಾರೆ, ಬಣ್ಣ ಹಚ್ಚಿದ್ದಾರೆ. ಕಡಲಿನ ರುಚಿಯನ್ನು, ಭಟ್ಕಳ ಮಲ್ಲಿಗೆಯ ಕಂಪನ್ನೂ ನೀಡಿದ್ದಾರೆ. ಹೀಗಾಗಿಯೇ ಈ ಬರಹಗಳನ್ನು 'ಜೀವದಾಯಿನಿ' ಎಂದು ಕರೆಯಲಾಗಿದೆ. ಇತ್ತ ವಿಮರ್ಶೆಯೂ ಅಲ್ಲದ; ಅತ್ತ ಪ್ರಬಂಧಗಳೂ ಅಲ್ಲದ ಇವೆರಡೂ ಪ್ರಕಾರಗಳ ಛಾಯೆಗಳನ್ನು ಒಳಗೊಂಡಂತೆ ಅನೇಕ ರೂಪಕ ಗಳಿಗೆ ಬರಹದ ರೂಪ ನೀಡಿದವರು ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು. ಅವರ ಆಲೋಚನೆಗಳ, ಚಿಂತನೆಗಳ ಮುಂದುವರಿಕೆಯಂತಿವೆ ಇಲ್ಲಿನ ಬರಹಗಳು.. .'' (ಬೆನ್ನುಡಿಯಿಂದ)




ಗತಿಚಿತ್ರ
ಲೇ: ನಾಗರಾಜ ಹೆಗಡೆ ಅಪಗಾಲ
ಪ್ರ: ಅಭಿನವ ಬೆಂಗಳೂರು
ಬೆಲೆ ರು.250/-

» ಗೊರೂರು ಶಿವೇಶ್

# ಕೊಳ್ಳಂಗಿಯ ಝುಂಪ ಮಹೋತ್ಸವ

**ಹಾಸನ ಜಿಲ್ಲೆಯ ಕೊಳ್ಳಂಗಿಯಲ್ಲಿ ನಡೆಯುವ 'ಝುಂಪ ಮಹೋತ್ಸವ' ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ, ಅದು ಇತಿಹಾಸ ಮತ್ತು ಜಾನಪದದ ಸಂಗಮ.**

ಕೊಳ್ಳಂಗಿಯ ಇತಿಹಾಸವು ಪುರಾತನವಾದದ್ದು. ಅರಕಪುರಿ ಎಂದು ಕರೆಯಲ್ಪಡುತ್ತಿದ್ದ ಇಂದಿನ ಅರಕಲಗೂಡು ಪ್ರಾಂತ್ಯವು ಪಾಳೆಯಗಾರ ಕೃಷ್ಣಪ್ಪ ನಾಯಕರ ಆಳ್ವಿಕೆಯಲ್ಲಿತ್ತು. ಅಂದಿನ ರಕ್ಷಣಾ ಪಡೆಯಲ್ಲಿ ದೇವಾಂಗ ಜನಾಂಗದವರು ಪ್ರಮುಖ ಸೈನಿಕರಾಗಿದ್ದರು. ಇವರು ಕೇವಲ ಯುದ್ಧರಂಗದ ವೀರರಷ್ಟೇ ಅಲ್ಲದೆ, ಸೈನ್ಯಕ್ಕೆ ಬೇಕಾದ ಮದ್ದು-ಗುಂಡುಗಳನ್ನು ತಯಾರಿಸುವ ನೈಪುಣ್ಯತೆಯನ್ನು ಹೊಂದಿದ್ದರು. ಈ ಸೈನಿಕರ ನಿಷ್ಠೆ ಮತ್ತು ದೇಶಪ್ರೇಮಕ್ಕೆ ಮೆಚ್ಚಿದ ಪಾಳೆಯಗಾರರು ಕೊಳ್ಳಂಗಿಯಲ್ಲಿ ಆಂಜನೇಯ, ಗಣಪತಿ ದೇವಾಲಯಗಳನ್ನು ನಿರ್ಮಿಸಿ, ಊರಿಗೆ ಪ್ರಮುಖ ಹೆಬ್ಬಾಗಿಲನ್ನು ಮಾಡಿಕೊಟ್ಟಿದ್ದರು. ಈ ಶೌರ್ಯದ ಪರಂಪರೆಯೇ ಇಂದಿನ ಉತ್ಸವಗಳಲ್ಲಿ 'ಅಲಗು ಸೇವೆ' ಮತ್ತು 'ಖಡ್ಗ'ಗಳ ರೂಪದಲ್ಲಿ ಆಚರಿಸಲ್ಪಡುತ್ತಿದೆ.

ಕೊಳ್ಳಂಗಿ ಗ್ರಾಮವು ಹತ್ತಾರು ಹಳ್ಳಿಗಳ ನಡುವೆ 'ಕಟ್ಟೆಮನೆ' ಎಂದು ಪ್ರಸಿದ್ಧಿ ಪಡೆದಿದೆ. ಕಟ್ಟೆಮನೆ ಎಂದರೆ ಧಾರ್ಮಿಕ ಮತ್ತು ಸಾಮಾಜಿಕ ನ್ಯಾಯದ ಕೇಂದ್ರ. ಹಿಂದಿನ ಕಾಲದಲ್ಲಿ ಜನರ ನಡುವೆ ಯಾವುದೇ ವ್ಯಾಜ್ಯ ಅಥವಾ ತಕರಾರುಗಳು ಉಂಟಾದಾಗ, ಈ ಗ್ರಾಮದ ಶೆಟ್ಟರು ಮತ್ತು ಯಜಮಾನರು ದೇವಸ್ಥಾನದ ಸನ್ನಿಧಿಯಲ್ಲಿ ಅದನ್ನು ಬಗೆಹರಿಸುತ್ತಿದ್ದರು. ಧರ್ಮದೇವತೆಯ ಸಾಕ್ಷಿಯಾಗಿ ನಡೆಯುತ್ತಿದ್ದ ಈ ತೀರ್ಪುಗಳಿಗೆ ಎಲ್ಲರೂ ತಲೆಬಾಗುತ್ತಿದ್ದರು. ಈ ಸಹಬಾಳ್ವೆ ಮತ್ತು ಬುದ್ಧಿವಂತಿಕೆಯ ಫಲವಾಗಿಯೇ ಕೊಳ್ಳಂಗಿಗೆ ಕಟ್ಟೆಮನೆ ಎಂಬ ಗೌರವಯುತ ಹೆಸರು ಬಂದಿದೆ. ಇದು ಕೇವಲ ಒಂದು ಜನಾಂಗಕ್ಕೆ ಸೀಮಿತವಾಗದೆ, ಇಡೀ ಪ್ರಾಂತ್ಯದ ಜನರಿಗೆ ಭರವಸೆಯ ತಾಣವಾಗಿತ್ತು.

'ಝುಂಪ' ಎನ್ನುವ ಪದದ ಅರ್ಥ ಕುತೂಹಲಕಾರಿ. 'ಝುಂಪ' ಎಂದರೆ ಎತ್ತರದಿಂದ ಹಾರುವುದು ಅಥವಾ ಜಿಗಿಯುವುದು. ವಿಜಯನಗರದ ಅರಸರ ಕಾಲದಲ್ಲಿ ಹಂಪಿಯ ಹೇಮಕೂಟದಲ್ಲಿ ಆರಂಭವಾದ ಈ ಸಂಪ್ರದಾಯವು ಶಿವ ಮತ್ತು ಪಂಪಾಂಬಿಕೆಯ ಕಲ್ಯಾಣೋತ್ಸವದ ನೆನಪಿಗೆ ನಡೆಯುತ್ತದೆ ಎನ್ನಲಾಗುತ್ತದೆ. ಕೊಳ್ಳಂಗಿಯಲ್ಲಿಯೂ ಈ ಉತ್ಸವವು ಯುಗಾದಿಯ ನಂತರದ ಮಂಗಳವಾರದಂದು ಅತ್ಯಂತ ವೈಭವದಿಂದ ಜರುಗುತ್ತದೆ.

ಯುಗಾದಿ ಹಬ್ಬದ ಸಂಭ್ರಮ ಮುಗಿದು, ಅದೇ ಬರುವ ಮಂಗಳವಾರ ರಾತ್ರಿ, ಊರ ಮುಂದಿನ ಕೆರೆಯಂಗಳದಲ್ಲಿ ದೇವರ ಪ್ರತಿಮೆಗಳಿಗೆ ಜಲಾಭಿಷೇಕ ನಡೆಸಲಾಗುತ್ತದೆ. ಅಲ್ಲಿಂದ ಕನ್ನಿಕೆಯರ ಕಳಸಗಳು ಮತ್ತು ದೀವಟಿಗೆಗಳ ಸಲಾಮಿನೊಂದಿಗೆ ಮೆರವಣಿಗೆ ಸಾಗುತ್ತದೆ. ಇಲ್ಲಿನ ಪ್ರಮುಖ ಆಕರ್ಷಣೆಯೆಂದರೆ ವೀರಭದ್ರನ ದಂಡಕಗಳು. ವೀರಕುಮಾರರು ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ದೇವರ ಹಲಗೆ ಹಿಡಿದು, ರಣವಾದ್ಯಗಳ ಲಯಕ್ಕೆ ತಕ್ಕಂತೆ ಕುಣಿಯುವ ದೃಶ್ಯ ಮೈರೋಮಾಂಚನಗೊಳಿಸುತ್ತದೆ. ದೇವಿಯ ಕಟುಕಗಳನ್ನು ಹಾಡುವ ಈ 'ಹೊಗಳು' ಸಂಪ್ರದಾಯವು ವಿಶಿಷ್ಟವಾದುದು. ದುಷ್ಟರ ಶಿಕ್ಷಿಸಿ, ಶಿಷ್ಟರ ರಕ್ಷಿಸು ಎಂದು ದೇವಿಯನ್ನು ಆಗ್ರಹಿಸುವ ಈ ದಂಡಕಗಳು ಭಕ್ತರಲ್ಲಿ ಶೌರ್ಯದ ಸಂಚಲನ ಮೂಡಿಸುತ್ತವೆ.

**ಮಣಜೂರು ಸಂಬಂಧ:** ಈ ಉತ್ಸವಕ್ಕೆ ಮಣಜೂರು ಗ್ರಾಮದೊಂದಿಗೆ ಒಂದು ಅಪೂರ್ವ ಸಂಬಂಧವಿದೆ. ಐತಿಹ್ಯದ ಪ್ರಕಾರ, ಮಣಜೂರಿನ ರೈತರೊಬ್ಬರ ಹೊಲದಲ್ಲಿ ನೇಗಿಲಿಗೆ ಸಿಕ್ಕ ಕಲ್ಲು, ಚೌಡೇಶ್ವರಿ ದೇವಿಯ ರೂಪವಾಗಿತ್ತು. ದೇವಿಯ ಇಚ್ಚೆಯಂತೆ ಆಕೆಯನ್ನು ಕೊಳ್ಳಂಗಿಯ ಬನಶಂಕರಿ ದೇವಾಲಯದಲ್ಲಿ ನೆಲೆಗೊಳಿಸಲಾಯಿತು. ಇಂದಿಗೂ ಝುಂಪೋತ್ಸವದ ದಿನ ಮಣಜೂರಿನ ಭಕ್ತರು ವಾದ್ಯದ ಸಮೇತ ಬಂದು ದರ್ಶನ ಪಡೆಯುವುದು ಪದ್ಧತಿಯಾಗಿದೆ.

ಬೆಳಕು ಹರಿಯುವ ಹೊತ್ತಿಗೆ ದೇವಾಲಯದ ಮುಂದೆ ಕೆಂಡೋತ್ಸವ ನಡೆಯುತ್ತದೆ. ಕೆಂಡ ಹಾಯುವ ಮೂಲಕ ಗ್ರಾಮದ ದನಕರುಗಳ ರೋಗ-ರುಜಿನಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆ ಇಲ್ಲಿದೆ. ಹತ್ತಾರು ಊರುಗಳಿಂದ ಬಂದ ಭಕ್ತರು ತಮ್ಮ ಕಷ್ಟಗಳನ್ನು ವೀರಭದ್ರನ ಮುಂದೆ ತೋಡಿಕೊಳ್ಳುತ್ತಾರೆ. ದೇವರು ನೀಡುವ ನಿಂಬೆಹಣ್ಣು ಮತ್ತು ತೆಂಗಿನಕಾಯಿ ಮಂತ್ರಾಕ್ಷತೆಯನ್ನು ನಂತರ ಊಟವನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ.

ಗೊರೂರು ಸೋಮಶೇಖರ್ ಅವರ 'ಗೊರೂರು ನೆನಪುಗಳು' ಕೃತಿಯಲ್ಲಿ ಬಂದಮ್ಮನ ಕುರಿತಾದ ಪ್ರಬಂಧವು ಈ ಸಂಸ್ಕೃತಿಯ ಬೇರುಗಳನ್ನು ಸಾರಿ ಹೇಳುತ್ತದೆ. ಪ್ರಕೃತಿಯೇ ಶಕ್ತಿಯಾಗಿ, ಹರಿಯುವ ನೀರೇ ಗಂಗೋಧಕವಾಗಿ ಆಚರಿಸಲ್ಪಡುವ ಈ ಉತ್ಸವವು ಮನುಷ್ಯ ಮತ್ತು ಪರಿಸರದ ನಡುವಿನ ಬಾಂಧವ್ಯವನ್ನು ಎತ್ತಿ ಹಿಡಿಯುತ್ತದೆ. ಇಂದಿನ ಆಧುನಿಕ ಯುಗದಲ್ಲೂ ಸಾವಿರಾರು ಭಕ್ತರನ್ನು ಸೆಳೆಯುತ್ತಿರುವ ಕೊಳ್ಳಂಗಿಯ ಝುಂಪ ಮಹೋತ್ಸವವು ನಮ್ಮ ಮಣ್ಣಿನ ಜನಪದ ಸೌಂದರ್ಯವನ್ನು ಜೀವಂತವಾಗಿರಿಸಿದೆ. ಇದು ಕೇವಲ ಒಂದು ಧಾರ್ಮಿಕ ಕ್ರಿಯೆಯಲ್ಲ, ನಮ್ಮ ಪೂರ್ವಜರ ಶೌರ್ಯ, ನ್ಯಾಯನಿಷ್ಠೆ ಮತ್ತು ಸಾಮುದಾಯಿಕ ಬದುಕಿನ ದರ್ಶನ ಮಾಡಿಸುವ ಒಂದು ಮಹಾನ್ ಕನ್ನಡಿ.

(ಪೂರಕ ಮಾಹಿತಿ: ಕೆ ಬಿ ಶಂಕರ ಶೆಟ್ಟಿ, ಕೊಳ್ಳಂಗಿ)

» ಹೊಸ್ಮನೆ ಮುತ್ತು

# ಪ್ರಳಯಕ್ಕೆ ಒಂದೇ ಗೆರೆಯ ಬೇಲಿ!

ಇಕ್ಕೇರಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿರುವ ಒಂದು ಪುಟ್ಟ ಗ್ರಾಮ. ಇಲ್ಲಿನ ಪುರಾತನ ಅಘೋರೇಶ್ವರ ದೇವಾಲಯವು ತನ್ನ ಬೃಹತ್ ಗಾತ್ರ, ಶಿಲಾ ಕೆತ್ತನೆ ಮತ್ತು ವಾಸ್ತುಶೈಲಿಯಿಂದ ಪ್ರಮುಖ ಎನಿಸಿದೆ. ಇಲ್ಲಿನ ಹಲವು ಕೆತ್ತನೆಗಳ ಪೈಕಿ, ಒಂದು ಕುತೂಹಲಕಾರಿ ಚಿತ್ರ ಗಮನ ಸೆಳೆಯುತ್ತದೆ. ದೇವಾಲಯದ ಎಡಭಾಗದ ಹೊರ ಗೋಡೆಯ ಮೇಲೆ ಒಂದು ಅಪರೂಪದ ಕೆತ್ತನೆಯನ್ನು ಕಾಣಬಹುದು. ಕಲ್ಲಿನಲ್ಲೇ ಕೆತ್ತಿದ ಈ ಚಿತ್ರವು ಎರಡು ಹಲ್ಲಿಗಳು ಮತ್ತು ಒಂದು ಚೇಳನ್ನು ಒಳಗೊಂಡಿದೆ. ಎರಡು ಹಲ್ಲಿಗಳ ನಡುವೆ ಅವುಗಳನ್ನು ವಿಭಜಿಸುವ ತೆಳುವಾದ ರೇಖೆಯೊಂದನ್ನು ಕೆತ್ತಲಾಗಿದೆ. ಈ ಕೆತ್ತನೆಗೆ ಸಂಬಂಧಿಸಿದಂತೆ ಸ್ಥಳೀಯವಾಗಿ ಒಂದು ವಿಶಿಷ್ಟವಾದ ದಂತಕಥೆ ಪ್ರಚಲಿತದಲ್ಲಿದೆ: ಗೋಡೆಯ ಮೇಲಿರುವ ಈ ಎರಡೂ ಹಲ್ಲಿಗಳು (ಕಲ್ಲಿನಕಲ್ಲಿ ಕೆತ್ತಿದವು) ಯಾವಾಗ ಆ ನಡುವಿನ ಗೆರೆಯನ್ನು ದಾಟಿ ಪರಸ್ಪರ ಸ್ಪರ್ಶಿಸುತ್ತವೆಯೋ, ಆ ಕ್ಷಣವೇ ಜಗತ್ತು ಅಂತ್ಯಗೊಳ್ಳುತ್ತದೆ ಅಥವಾ ಪ್ರಳಯ ಸಂಭವಿಸುತ್ತದೆ ಎಂಬುದು. ಪಕ್ಕದಲ್ಲಿರುವ ಚೇಳು, ಹಲ್ಲಿಗಳು ಒಂದಾಗದಂತೆ ತಡೆಯುವ ಶಕ್ತಿಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಲಾಗುತ್ತದೆ. ಇದೇ ರೀತಿ ನಮ್ಮ ನಾಡಿನ ವಿವಿಧ ದೇಗುಲಗಳಲ್ಲಿ ಕಲ್ಲಿನ ಕೋಳಿ ಕೂಗುವ ಚಿತ್ರವನ್ನೂ ಕಾಣಬಹುದು; ಅದು ನಿಜವಾಗಿಯೂ ಕೂಗಿದಾಗ, ಪ್ರಳಯವಾಗುತ್ತದೆ ಎಂಬ ಹೇಳಿಕೆ ಇದೆ; ಇಂತಹ ಕಥೆಗಳನ್ನು ಅಂದಿನ ಕಾಲಮಾನದ ನಂಬಿಕೆಗಳು ಮತ್ತು ಅದ್ಭುತರಮ್ಯ ಎನಿಸುವ ಕಥೆಗಳ ಭಾಗಗಳು ಎಂದೇ ತಿಳಿಯಬಹುದು.

ಅಘೋರೇಶ್ವರ ದೇಗುಲದಲ್ಲಿರುವ ಈ ಕೆತ್ತನೆಯು ವಾಸ್ತುಶಿಲ್ಪದ ಒಂದು ಭಾಗಕ್ಕಿಂತ ಹೆಚ್ಚಾಗಿ, ಒಂದು ಕಾಲದ ಜನಪದ ನಂಬಿಕೆ ಮತ್ತು ಭಯವನ್ನು ಕಲ್ಲಿನ ಮೂಲಕ ಶಾಶ್ವತಗೊಳಿಸಿದ ಒಂದು ವಿಶಿಷ್ಟ ಪ್ರಯತ್ನ. ಜತೆಗೆ, ಒಂದು ಕಥೆಯನ್ನು ರೂಪಕದ ಮೂಲಕ ಹೇಳುವ, ಆ ಮೂಲಕ ಒಂದು ಅದ್ಭುತ ರಮ್ಯ ಲೋಕವನ್ನು ವೀಕ್ಷಕರಿಗೆ ಕಟ್ಟಿಕೊಡುವ ಪ್ರಯತ್ನವೂ ಇಲ್ಲಿದೆ!

## ನಿಚ್ಚಳ ಹಾದಿಯ ಪಯಣ

» ಎಚ್. ಆನಂದರಾಮ ಶಾಸ್ತ್ರೀ



ಪತ್ರಿಕೆಗಳಲ್ಲಿ ಬರೆದೆ ಭರಪೂರ
ಸಾಹಿತ್ಯ ಬದಲಾಗಲಿಲ್ಲ.
ವೇದಿಕೆಗಳಲ್ಲಿ ಕೊರೆದೆ ನಿರಂತರ
ಸಮಾಜ ಬದಲಾಗಲಿಲ್ಲ.
ಸಮಾಜವ ಸ್ನೇಹಿತರಲ್ಲಿ ಜರಿದೆ ಬಹಿರಂಗ
ಮನಸು ತಿಳಿಯಾಗಲಿಲ್ಲ.
ದೇವರಲ್ಲಿ ಒರೆದೆ ಬಿನ್ನಹದೊಡನೆ ಅಂತರಂಗ.
ಕನಸು ನನಸಾಗಲಿಲ್ಲ.
ಜ್ಞಾನೋದಯವಾಗಿದೆ ನನಗೀಗ.
ಬದಲಾಗಿದ್ದೇನೆ ನಾನೀಗ.
ತಿಳಿಯಾಗಿದ್ದೇನೆ ಬಹು ಬೇಗ.
ಬರಿದೆ ಬರೆಯದೆ, ಕೊರೆದು ಮೆರೆಯದೆ,
ಪರರ ಜರಿಯದೆ,
ಮನದೊಳಗೆ ಮೊರೆಯಿಡುತ
ದೇವರಲ್ಲಿ,
ಕನಸ ನನಸಾಗಿಸಿಕೊಳಲು ಸಾಗಿದ್ದೇನೆ
ನಾನೇ ನಾನಾಗಿ ನನಗೆ ನಾನೇ ಆಗಿ
ನನ್ನೊಳಗಿನ ನಿಚ್ಚಳ ಹಾದಿಯಲ್ಲಿ

» ಮೋಹನ ಭಟ್ಟ, ಅಗಸೂರು

# ಬೇಸಿಗೆಯಲ್ಲಿ ರುಚಿಕರ ನಿರ್ನೇರಳೆ!

ನಮ್ಮ ಊರಿನಲ್ಲಿ ನೀರ್ನೇರಳೆ ಹಣ್ಣು ಎಂದು ನಾವೆಲ್ಲಾ ಕರೆಯುವ ಈ ಪುಟ್ಟ, ನೀರು ತುಂಬಿದ ಹಣ್ಣನ್ನು ಇಂಗ್ಲಿಷ್‌ನಲ್ಲಿ ವಾಟರ್ ಆ್ಯಪಲ್ ಎಂದೂ ಕರೆಯುವುದುಂಟು. ಬೇರೆ ಕೆಲವು ಹಣ್ಣುಗಳಿಗೂ ವಾಟರ್ ಆ್ಯಪಲ್ ಎಂದು ಕರೆಯುವ ಪದ್ಧತಿ ಇದೆ; ನಾವಿಲ್ಲಿ ಹೇಳಿರುವ ಹಣ್ಣು ಉಷ್ಣವಲಯದಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ; ನಮ್ಮ ರಾಜ್ಯದ ಕೆಲವು ಭಾಗಗಳಲ್ಲೂ ಬೆಳೆಯುತ್ತದೆ. ಈ ವಾಟರ್ ಆ್ಯಪಲ್‌ಗೆ ವೈಜ್ಞಾನಿಕ ಹೆಸರು ಸಿಜಜೆಯಮ್ ಆಕ್ವೆಮ್.

ಇದನ್ನು ಬೇಸಿಗೆಯ ಹಣ್ಣು ಎಂದು ಹೇಳಬಹುದು. ಶೇ. 90 ರಷ್ಟು ನೀರು ಹೊಂದಿರುವ ಇದು ತುಸು ಗುಲಾಬಿಯ ಸುವಾಸನೆಯನ್ನು ಹೊಂದಿದೆ ಮತ್ತು ನೀರಿನ ಅಂಶ ಅಧಿಕವಾಗಿರುವುದರಿಂದಾಗಿ, ಬೇಸಗೆಯಲ್ಲಿ ತಿನ್ನಲು ಸೂಕ್ತ; ಬೇಡವಾದ ಕೊಲೆಸ್ಟರಾಲ್ ನಿಯಂತ್ರಿಸಲು ಇದು ಸಹಾಯಕಾರಿ. ವಿಟಾಮಿನ್ ಸಿ, ಪೊಟ್ಯಾಶಿಯಮ್ ಹೊಂದಿರುವ ಈ ಹಣ್ಣು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಇಂತಹ ಅಪೂರ್ವ ಗುಣಗಳನ್ನು ಹೊಂದಿರುವ ನೀರ್‌ನೇರಳೆ ಹಣ್ಣನ್ನು ಕೃಷಿ ಮಾಡಲು ಸಹ ಸಾಧ್ಯವಿದೆ. ಇದರಲ್ಲಿ ಕೆಂಪು, ಬಿಳಿ, ಹಸಿರು ವರ್ಣ ಬಣ್ಣದ ಹಣ್ಣು ನೀಡುವ ತಳಿಗಳಿವೆ. ಗಿಡನೆಟ್ಟ ಎರಡರಿಂದ ನಾಲ್ಕುವರ್ಷಗಳಲ್ಲಿ ಫಲ ನೀಡಲು ಪ್ರಾರಂಭವಾಗುವದು. ಎಪ್ರಿಲ್- ಮೇ, ನವೆಂಬರ್ -ಡಿಸೆಂಬರ್, ಹಾಗೂ ಪರಿಸರ ವಾತಾವರಣ ಸರಿ ಇದ್ದರೆ ಇನ್ನೊಂದು ಬಾರಿ ಹಣ್ಣು ನೀಡುವ ಗಿಡಕ್ಕೆ ಫಲವತ್ತಾದ ಮಣ್ಣಿನೊಂದಿಗೆ ಪೋಪಕಾಂಶ ಸೇರಿಸಬೇಕು. ಬಿಸಿಲು ಇದ್ದರೆ, ಚೆನ್ನಾಗಿ ಬೆಳೆಯುವದು. ಇದರ ತಳಿಗಳು ಎತ್ತರವಾದ ಮರಗಳಾಗಿ ಬೆಳೆಯುವುದುಂಟು.

ವರ್ಷಕ್ಕೆ ನೂರಾರು ಹಣ್ಣುಗಳನ್ನು ಏಕಕಾಲಕ್ಕೆ ಬಿಡುವ ಗಿಡ, 40 ಕೆ.ಜಿಯ ವರೆಗೂ ಫಲ ನೀಡುವದು. ಬಿಸಿಲಿನಬೇಗೆಗೆ ಬೇಗ ಮುರುಟಿ ಹೋಗುವ ಇದು ಸೂಕ್ಷ್ಮತೆಯನ್ನು ಹೊಂದಿದೆ. ಹೂ ಬಿಡುವ ಮೊದಲು ಗೊಂಚಲಾಗಿರುವದು. ಹೂ ಅರಳಿದಾಗ ಬಹಳ ಅಂದವಾಗಿ ಕಾಣುವದು; ಈ ಗಿಡದ ಹೂವುಗಳನ್ನು ನೋಡುವುದೇ ಒಂದು ವಿಶಿಷ್ಟ ಅನುಭವ. ಆದರೆ ಹೆಚ್ಚು ಕಾಲ ಹಾಗೆಯೇ ಇರದು. ಹೂ ಆದ ವಾರದ ಅಂತರದಲ್ಲಿ ಹಣ್ಣು ಕಂಡು ಬರುವದು.

ಇಡೀ ಹಣ್ಣು ಕೆಂಪಾದಾಗ ಗಿಡದಿಂದ ಬೇರ್ಪಡಿಸುವುದು ಸೂಕ್ತ. ಇದಕ್ಕೆ ಕೆಂಪು ಇರುವೆಯ ಕಾಟ ಸಾಮಾನ್ಯ. ಶಾಲಾ ಮಕ್ಕಳಿಗೆ ಇದು ಅಚ್ಚುಮೆಚ್ಚು; ದೊಡ್ಡವರು ಸಹ ತಿನ್ನಬಹುದು; ನಮ್ಮ ರಾಜ್ಯದ ಕರಾವಳಿ ಮತ್ತು ಮಲೆನಾಡಿನಲ್ಲಿ ಸಹಜವಾಗಿ ಕಾಣಸಿಗುವ ಈ ಹಣ್ಣಿನ ಮರಗಳನ್ನು ಇತ್ತೀಚೆಗೆ, ತೋಟಗಾರಿಕೆ ಬೆಳೆಯಾಗಿಯೂ ಅಲ್ಲಲ್ಲಿ ಬೆಳೆಯಲಾಗುತ್ತಿದೆ ಮತ್ತು ಅಲ್ಲಲ್ಲಿ ಮಾರಾಟಕ್ಕೂ ಈ ಹಣ್ಣುಗಳು ಸಿಗುತ್ತವೆ.

ಅಂದಹಾಗೆ, ಈ ಬೇಸಗೆಯಲ್ಲಿ ನೀರ್‌ನೇರಳೆ ಹಣ್ಣನ್ನು ಎಲ್ಲಾದರೂ ಕಂಡರೆ, ತಿಂದು ನೋಡಿ; ಸಾಕಷ್ಟು ರುಚಿಕರ ಮತ್ತು ನಮ್ಮ ನಾಡಿನ ಹಣ್ಣೊಂದರ ರುಚಿಯನ್ನು ಗುರುತಿಸಿದಂತಾಗುವುದು.

» ಡಾ. ಶಶಿಕಿರಣ್ ಉಮಾಕಾಂತ್, ಉಡುಪಿ

# ಬಾಯಾರಿದಾಗ ಯಾವ ನೀರು ಉತ್ತಮ?

ಕುಡಿಯುವ ನೀರನ್ನು ಸಂಪೂರ್ಣ ಶುದ್ಧ ಮಾಡುವ ಆಧುನಿಕ 'ಆರ್‌ಒ' (ರಿವರ್ಸ್ ಆಸ್ಮೋಸಿಸ್) ಯಂತ್ರಗಳಿಗೆ ಹಲವರು ಮೊರೆಹೋಗಿದ್ದೇವೆ. ಬಟನ್ ಒತ್ತಿದ ತಕ್ಷಣ ನೀರು ಸಿಗುತ್ತದೆ ನಿಜ. ಆದರೆ ಅತಿ ಶುದ್ಧವಾದ ನೀರು ಯಾವಾಗಲೂ ಆರೋಗ್ಯಕರವೇ? ಶುದ್ಧತೆಯ ಭರದಲ್ಲಿ ನೀರಿನಲ್ಲಿರುವ ನೈಸರ್ಗಿಕ ಜೀವಸತ್ವಗಳನ್ನೇ ನಾವು ಕೊಲ್ಲುತ್ತಿದ್ದೇವಾ? ಬನ್ನಿ, ಸಾಮಾನ್ಯ ತಪ್ಪು ಕಲ್ಪನೆಗಳನ್ನು ಬದಿಗಿಟ್ಟು ವೈದ್ಯಕೀಯ ಸತ್ಯಗಳನ್ನು ಅರಿಯೋಣ.

**ಟಿಡಿಎಸ್ ಎಂದರೇನು?**

ನೀರಿನಲ್ಲಿ ಕರಗಿರುವ ಖನಿಜಗಳು ಮತ್ತು ಲವಣಗಳ ಒಟ್ಟು ಪ್ರಮಾಣವೇ ಟಿಡಿಎಸ್ (ಟೋಟಲ್ ಡಿಸಾಲ್ವ್ಡ್ ಸಾಲಿಡ್ಸ್). ಸುಮಾರು 200 ರೂಪಾಯಿಗೆ ಸಿಗುವ ಒಂದು ಸಣ್ಣ 'ಟಿಡಿಎಸ್ ಮೀಟರ್' ಸಹಾಯದಿಂದ ನಿಮ್ಮ ಮನೆಯ ನಲ್ಲಿಯ ನೀರಿನ ಟಿಡಿಎಸ್ ಎಷ್ಟಿದೆ ಎಂದು ನೀವೇ ಪರೀಕ್ಷಿಸಬಹುದು. ಈ ಸಂಖ್ಯೆ ನಿಮಗೆ ವಾಸ್ತವವಾಗಿ ಯಾವ ಯಂತ್ರ ಬೇಕು ಎಂದು ನಿರ್ಧರಿಸಲು ಸಹಾಯ ಮಾಡುತ್ತದೆ.

ಕಲ್ಮಶಗಳ ಜೊತೆಗೆ ಖನಿಜಗಳ ಕಳ್ಳ!

ಆರ್‌ಒ ತಂತ್ರಜ್ಞಾನ ನೀರನ್ನು ಅತ್ಯಂತ ಸೂಕ್ಷ್ಮವಾದ ಫಿಲ್ಟರ್ ಮೂಲಕ ಹಾಯಿಸಿ, ಕಲ್ಮಶಗಳನ್ನು ತೆಗೆಯುತ್ತದೆ. ಇದು ಎಷ್ಟೊಂದು ಪ್ರಬಲವೆಂದರೆ, ಕಲ್ಮಶಗಳ ಜೊತೆಗೆ ನಮ್ಮ ಹೃದಯ ಮತ್ತು ಮೂಳೆಗಳಿಗೆ ಅತ್ಯವಶ್ಯಕವಾದ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಂನಂತಹ ನೈಸರ್ಗಿಕ ಖನಿಜಗಳನ್ನೂ ಇದು ತೆಗೆದುಹಾಕುತ್ತದೆ! ದೀರ್ಘಕಾಲದವರೆಗೆ ಇಂತಹ 'ಡಿ-ಮಿನರಲೈಸ್ಡ್' (ಖನಿಜ ರಹಿತ) ನೀರನ್ನು ಕುಡಿಯುವುದರಿಂದ ಸುಸ್ತು, ಸ್ನಾಯು ಸೆಳೆತ ಅಥವಾ ಕ್ರ್ಯಾಂಪ್ ಉಂಟಾಗಬಹುದು.

### ನೀರಿನ ಸುರಕ್ಷಿತೆಯ ಚೆಕ್‌ಲಿಸ್ಟ್

- **ಕುದಿಸಿ ಆರಿಸಿದ ನೀರು: ಕನಿಷ್ಠ 1 ನಿಮಿಷ ಚೆನ್ನಾಗಿ ಕುದಿಸಿದ ನೀರಿಗೆ ಸರಿಸಾಟಿ ಯಾವುದೂ ಇಲ್ಲ.**
- **ಸ್ಟೀಲ್ , ಗಾಜಿನ ಪಾತ್ರೆ: ಯಾವುದೇ ರಾಸಾಯನಿಕ ಬಿಟ್ಟುಕೊಡದ, ನಿರ್ವಹಣೆಗೆ ಸುಲಭವಾದ ಇವು ನೀರು ಶೇಖರಿಸಿಡಲು ಅತ್ಯುತ್ತಮ.**
- **ಅಲ್ಟ್ರಾವಯೋಲೆಟ್ ಪ್ಯೂರಿಫೈಯರ್: ಟಿಡಿಎಸ್ 300 ಕ್ಕಿಂತ ಕಡಿಮೆ ಇರುವ ನೀರಿಗೆ ಇದುವೇ ಶ್ರೇಷ್ಠ.**
- **ಆರ್‌ಒ ಯಂತ್ರಗಳು: ನೀರಿನಲ್ಲಿ ಹಾನಿಕಾರಕ ರಾಸಾಯನಿಕಗಳಿದ್ದರೆ ಅಥವಾ ಟಿಡಿಎಸ್ 500 ಕ್ಕಿಂತ ಹೆಚ್ಚಿದ್ದರೆ ಮಾತ್ರ ಬಳಸಿ. ಅದರ ಟಿಡಿಎಸ್ ಅನ್ನು 50-150 ಗೆ ಸೆಟ್ ಮಾಡಿಸಿ.**

**ಕ್ಷ ಕಿರಣ**

**ಪರಿಹಾರ**

ನಿಮ್ಮ ಮನೆಯಲ್ಲಿ ಈಗಾಗಲೇ ಆರ್‌ಒ ಯಂತ್ರವಿದ್ದರೆ ಅದನ್ನು ಬಿಸಾಡಬೇಡಿ! ಯಂತ್ರದ ಒಳಗಿರುವ ಟಿಡಿಎಸ್ ಅಡ್ಜಸ್ಟರ್ ಅನ್ನು 50 ರಿಂದ 150ಕ್ಕೆ ಸೆಟ್ ಮಾಡಲು ನಿಮ್ಮ ಸರ್ವೀಸ್ ಟೆಕ್ನಿಷಿಯನ್ ಗೆ ತಿಳಿಸಿ. (ಅನೇಕರು ಇದು ಸೊನ್ನೆ ಇರಬೇಕು ಎಂದು ತಪ್ಪು ತಿಳಿದುಕೊಂಡಿರುತ್ತಾರೆ). ಹೀಗೆ ಮಾಡುವುದರಿಂದ ಆರ್‌ಒ ಯಂತ್ರವೇ ನೀರಿಗೆ ಸ್ವಲ್ಪ ಖನಿಜಗಳನ್ನು ವಾಪಸ್ ಸೇರಿಸುತ್ತದೆ.

**ನಿಜಕ್ಕೂ ಆರ್‌ಒ ಯಂತ್ರದ ಅಗತ್ಯವಿದೆಯೇ?**

ನಿಮ್ಮ ಮನೆಯ ನಲ್ಲಿಯ ನೀರಿನ ಟಿಡಿಎಸ್ ಪರಿಶೀಲಿಸಿ, ಆಮೇಲೆ ಈ ನಿರ್ಧಾರ ತೆಗೆದುಕೊಳ್ಳಿ: ಟಿಡಿಎಸ್ 300 ಕ್ಕಿಂತ ಕಡಿಮೆ ಇದ್ದರೆ, ನಿಮಗೆ ದುಬಾರಿ ಆರ್‌ಒ ಯಂತ್ರದ ಅಗತ್ಯವೇ ಇಲ್ಲ. ಕೇವಲ ಅಲ್ಟ್ರಾವಯೋಲೆಟ್ (ಯುವಿ) ಪ್ಯೂರಿಫೈಯರ್ ಸಾಕು. ಇದು ಕ್ರಿಮಿಗಳನ್ನು ಕೊಲ್ಲುತ್ತದೆ, ಆದರೆ ಖನಿಜಗಳನ್ನು ಹಾಗೇ ಉಳಿಸುತ್ತದೆ. ನಗರ ಪ್ರದೇಶದ ಮುನ್ಸಿಪಲ್ ನೀರಿಗೆ ಸಾಮಾನ್ಯವಾಗಿ ಇದುವೇ ಸೂಕ್ತ.

**ಟಿಡಿಎಸ್ 300-500 ಇದ್ದರೆ:**

ಅಲ್ಟ್ರಾವಯೋಲೆಟ್ ಪ್ಯೂರಿಫೈಯರ್ ಜೊತೆಗೆ ಒಂದು ಸೆಡಿಮೆಂಟ್ ಫಿಲ್ಟರ್ ಸಾಕು. ನೀರು ಉಪ್ಪಾಗಿದ್ದರೆ ಮಾತ್ರ ಆರ್‌ಒ ಬಗ್ಗೆ ಯೋಚಿಸಿ. ಟಿಡಿಎಸ್ 500 ಕ್ಕಿಂತ ಹೆಚ್ಚಿದ್ದರೆ: ಆರ್‌ಒ ಯಂತ್ರ ಕಡ್ಡಾಯವಾಗಿ ಬೇಕು (ಉದಾಹರಣೆಗೆ: ಒಣ ಪ್ರದೇಶದ ಬೋರ್‌ವೆಲ್ ನೀರು). ನೀರಿನಲ್ಲಿ ಆರ್ಸೆನಿಕ್, ಫ್ಲೋರೈಡ್ ಅಥವಾ ಸೀಸದ ಅಂಶ ಇದ್ದರೆ, ಟಿಡಿಎಸ್ ಎಷ್ಟೇ ಇದ್ದರೂ ಆರ್‌ಒ ಬಳಸಲೇಬೇಕು.

ಪ್ಲಾಸ್ಟಿಕ್ ಕ್ಯಾನ್ ನೀರಿನ ಅಪಾಯ!

ನಗರಗಳಲ್ಲಿ ನೀಲಿ ಬಣ್ಣದ 20 ಲೀಟರ್ ಪ್ಲಾಸ್ಟಿಕ್ ಕ್ಯಾನ್‌ಗಳ ಬಳಕೆ ಸಾಮಾನ್ಯ. ಇದು ಆರೋಗ್ಯಕರವಲ್ಲ. ಏಕೆಂದರೆ, ಒಂದೇ ಕ್ಯಾನ್ ಅನ್ನು ಸಾವಿರಾರು ಬಾರಿ ಬಳಸುತ್ತಾರೆ, ಮತ್ತು ಇವುಗಳನ್ನು ಸುಡುಬಿಸಿಲಿನಲ್ಲಿ ಸಾಗಿಸುತ್ತಾರೆ. ಬಿಸಿಲಿಗೆ ಪ್ಲಾಸ್ಟಿಕ್ ಕರಗಿ, 'ಮೈಕ್ರೊಪ್ಲಾಸ್ಟಿಕ್' ಮತ್ತು ರಾಸಾಯನಿಕಗಳು ನೇರವಾಗಿ ನೀರಿಗೆ ಸೇರುತ್ತವೆ.

**ಕುದಿಸಿ ಆರಿಸಿದ ನೀರು**

ಕ್ರಿಮಿಗಳನ್ನು ನಾಶಮಾಡಲು ನೀರನ್ನು ಕುದಿಸುವುದೇ ಅತ್ಯುತ್ತಮ ವಿಧಾನ. ಕನಿಷ್ಠ ಪಕ್ಷ 1 ನಿಮಿಷವಾದರೂ ನೀರನ್ನು ಚೆನ್ನಾಗಿ ಕುದಿಸಬೇಕು. ರಾತ್ರಿ 5-6 ಲೀಟರ್ ನೀರನ್ನು ಕುದಿಸಿ, ಸ್ಟೀಲ್ ಪಾತ್ರೆಯಲ್ಲಿ ಮುಚ್ಚಿಟ್ಟರೆ ಬೆಳಿಗ್ಗೆಗೆ ಸುರಕ್ಷಿತ ಮತ್ತು ಖನಿಜಯುಕ್ತ ನೀರು ಸಿದ್ಧ! (ನೆನಪಿರಲಿ, ಕುದಿಸಿದ ನೀರಿನ ಜೀವಿತಾವಧಿ 24 ಗಂಟೆ ಮಾತ್ರ. ಪ್ರತಿದಿನ ಹೊಸ ನೀರು ಕಾಯಿಸುವುದು ಒಳ್ಳೆಯದು). ಆದರೆ ರಾಸಾಯನಿಕ ಬೆರೆತಿದ್ದ ನೀರಿದ್ದರೆ ಬರೀ ಕುದಿಸುವುದು ಸಾಕಾಗುವುದಿಲ್ಲ.

ತಾಮ್ರದ ಪಾತ್ರೆ: ಕನಿಷ್ಠ 8 ಗಂಟೆ ನೀರಿಟ್ಟು, ಪಾತ್ರೆಯನ್ನು ಪ್ರತಿದಿನ ನಿಂಬೆ/ಹುಣಸೆಯಿಂದ ಉಜ್ಜಿ ತೊಳೆದರೆ ಮಾತ್ರ ಬಳಸಿ. ಇಲ್ಲವಾದರೆ ತಾಮ್ರದ ಅಂಶವೇ ಅತಿಯಾಗಿ ಹೊಟ್ಟೆ ಸೇರಿ ವಿಷವಾಗಬಹುದು. ಹುಳಿ ಪದಾರ್ಥಗಳನ್ನು ಇದರಲ್ಲಿ ಹಾಕಿಡಲೇಬಾರದು.

ನೀರನ್ನು ತಂಪಾಗಿಡಲು ಮಣ್ಣಿನ ಮಡಕೆ ಉತ್ತಮ, ಆದರೆ ಒಳಗೆ ಬ್ಯಾಕ್ಟೀರಿಯಾ ಅಥವಾ ಇತರ ಕ್ರಿಮಿಗಳು ಬೆಳೆಯದಂತೆ 1-2 ವಾರಗಳಿಗೊಮ್ಮೆ ಉಜ್ಜಿ ತೊಳೆದು ಬಿಸಿಲಿನಲ್ಲಿ ಒಣಗಿಸಬೇಕು.

ಬಿಸಿಲಿನಲ್ಲಿಟ್ಟ, ಗೀರುಬಿದ್ದ 20 ಲೀಟರ್ ಪ್ಲಾಸ್ಟಿಕ್ ಕ್ಯಾನ್‌ಗಳಿಂದ ಪ್ರತಿನಿತ್ಯ ನೀರು ಕುಡಿಯುವುದು ಅಪಾಯಕಾರಿಯಾಗಬಹುದು.

ನೀರಿನಲ್ಲಿ ನೀರಿನಲ್ಲಿ ಆರ್ಸೆನಿಕ್‌ನಂತಹ ಕೆಮಿಕಲ್‌ಗಳಿದ್ದರೆ, ಅದರಿಂದ ಅನ್ನ, ಬೇಳೆ ಬೇಯಿಸಬೇಡಿ. ಕುದಿಸಿದರೆ ರಾಸಾಯನಿಕಗಳು ಹೋಗುವುದಿಲ್ಲ, ಬದಲಿಗೆ ಇನ್ನಷ್ಟು ಸಾಂದ್ರವಾಗುತ್ತವೆ. ಅಂತಹ ಪರಿಸ್ಥಿತಿಯಲ್ಲಿ ಅಡುಗೆಗೂ ಆರ್‌ಒ ನೀರನ್ನೇ ಬಳಸಿ.

ಆಧುನಿಕ ತಂತ್ರಜ್ಞಾನ ಎಂದ ಕೂಡಲೇ ಅದು ಆರೋಗ್ಯಕರ ಇರಲೇಬೇಕು ಎಂದು ಕಣ್ಮುಚ್ಚಿ ನಂಬಬೇಡಿ. ನಿಮ್ಮ ಮನೆಯ ನಲ್ಲಿಯ ನೀರಿನ ಟಿಡಿಎಸ್ ಕಡಿಮೆಯಿದ್ದರೆ, ದುಬಾರಿ ಆರ್‌ಒ ಯಂತ್ರಗಳಿಗಿಂತ ಹಳೆಯ ಶೈಲಿಯ ಕುದಿಸಿದ ನೀರು ಅಥವಾ ಅಲ್ಟ್ರಾವಯೊಲೆಟ್ ಫಿಲ್ಟರ್ ನೂರು ಪಟ್ಟು ಶ್ರೇಷ್ಠ. ಪ್ಲಾಸ್ಟಿಕ್ ಕ್ಯಾನ್‌ಗಳನ್ನು ದೂರವಿಡಿ, ನೀರನ್ನು ಜವಾಬ್ದಾರಿಯಿಂದ ಸ್ಟೀಲ್ ಅಥವಾ ಮಣ್ಣಿನ ಮಡಿಕೆಯಲ್ಲಿ ಶೇಖರಿಸಿಟ್ಟುಕೊಂಡು ಕುಡಿಯಿರಿ.

## ವಿರಾಮದ ಪೋಸ್ಟ್ ಆಫೀಸು

**ಪೋಸ್ಟ್ ಆಫೀಸು**

ಖ್ಯಾತ ಛಾಯಾಚಿತ್ರಗ್ರಾಹಕರಾದ ರಘು ರಾಯ್ ನಿಧನರಾದಾಗ ಹಲವು ಲೇಖನಗಳು ಪ್ರಕಟವಾದವು; ಅವು ಇಂಗ್ಲಿಷ್ ಮಾಧ್ಯಮಗಳಲ್ಲೇ ಹೆಚ್ಚು. ಕನ್ನಡ ಪತ್ರಿಕೆಗಳಲ್ಲಿ ಈ ಖ್ಯಾತ ಛಾಯಾಚಿತ್ರಗ್ರಾಹಕನ ಕುರಿತು ಹೆಚ್ಚು ಬರಹಗಳು ಕಾಣಲಿಲ್ಲ. ವಿರಾಮದಲ್ಲಿ ಪ್ರಕಟವಾದ ಶಶಿಧರ ಹಾಲಾಡಿಯವರ ಲೇಖನ ಈ ಕೊರತೆಯನ್ನು ತುಂಬುವಂತಿದೆ. ಒಂದು ನಿಯೋಗ ಇಂದಿರಾಗಾಂಧಿಯವರನ್ನು ಭೇಟಿಯಾಗಲು ಬಂದಿತ್ತು, ಆಗ ಆ ಅಪರೂಪದ ಚಿತ್ರ ತೆಗೆದ ರಘು ರಾಯ್ ಅವರು ಸಂದರ್ಶನವೊಂದರಲ್ಲಿ ವಿವರಣೆ ನೀಡಿದ್ದಾರೆ. ಬಂದೂಕಿನ ಮೂಲಕ ಭಾರತವನ್ನೇ ಬೆದರಿಸಲು ಪ್ರಯತ್ನಿಸಿದ ಭಿಂದ್ರನ್ ವಾಲೆ ಅವರ ಭಾವಚಿತ್ರ ತೆಗೆಯಲು ಇವರೊಬ್ಬರಿಗೇ ಅವಕಾಶ ಸಿಕ್ಕಿದ್ದು ಒಂದು ವಿಶೇಷ. ಹಂಪಿ ಬಗೆಗಿನ ಅವರ ಪುಸ್ತಕದತ್ತ ಕನ್ನಡ ಪತ್ರಿಕೆಗಳು ಈಗಲಾದರೂ ಗಮನಹರಿಸಲಿ. ಡಿಜಿಟಲ್ ತಂತ್ರಜ್ಞಾನ ಬಂದಾಗ ಬಲು ಬೇಗ ಅದನ್ನು ಅಳವಡಿಸಿಕೊಂಡದ್ದು ಅವರ ಹಿರಿಮೆ. ವೈಯಕ್ತಿಕವಾಗಿ ಅವರ ಚಿತ್ರಗಳು ನನ್ನನ್ನು ಪ್ರಭಾವಿಸಿ ಫ್ರೀಲಾನ್ಸ್ ಬರಹದ ಜತೆ ಫೋಟೋಗ್ರಫಿ ನಡೆಸಲು ಪ್ರೇರಣೆ ನೀಡಿತು.

**● ಎಚ್.ಎಸ್.ಮಂಜುನಾಥ ಗೌರಿಬಿದನೂರು**

ವಿರಾಮ ಪುರವಣಿಯಲ್ಲಿ ಪ್ರಕಟವಾಗುತ್ತಿರುವ ಡಾ. ಶಶಿಕಿರಣ್ ಉಮಾಕಾಂತ್ ಅವರ ವೈದ್ಯಕೀಯ ಬರಹಗಳು ಬಹಳ ಪ್ರಮುಖವಾದವು ಎಂದೇ ಗುರುತಿಸಬಹುದು. ಅವರು ತಮ್ಮ ವೈದ್ಯಕೀಯ ಅನುಭವದ ಹಿನ್ನೆಲೆಯಲ್ಲಿ, ಜನರು ದಿನನಿತ್ಯದ ಆಹಾರ ಸೇವನೆಯಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ತಿಳಿಸುತ್ತಿರುವುದು ಗಮನಾರ್ಹ. ಅವರು ನೀಡುತ್ತಿರುವ ಸಲಹೆಗಳನ್ನು ಅನುಸರಿಸಿದರೆ, ಜನಸಾಮಾನ್ಯರ ಆರೋಗ್ಯ ಉತ್ತಮಗೊಳ್ಳುವುದಂತೂ ಖಚಿತ. ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ತಿಳಿಹೇಳುವ ಅವರ ಬರವಣಿಗೆಯ ಶೈಲಿ ಇಷ್ಟವಾಯಿತು.

**● ಯಲ್ಲಪ್ಪ ದೊಡ್ಡಮನಿ ನಾಗರಭಾವಿ**

# ನಿಮ್ಮ ಓವರ್ ಕೋಟ್‌ನಲ್ಲಿ ಕೂಲಿಂಗ್ ಟೆಕ್ನಾಲಜಿ ಇದೆಯೇ?

**Ask the Editor**



• ವಿಶ್ವೇಶ್ವರ ಭಟ್

**ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ**

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

**ಪ್ರಕಾಶ, (ಇಮೇಲ್ ಮೂಲಕ)**

- **ಭಟ್ರೇ, ಕುಮಟಾದಲ್ಲಿ ಅವಾರ್ಡ್ ತೆಗೆದುಕೊಳ್ಳುತ್ತಿದ್ದ ಒಂದು ಕಾರ್ಯಕ್ರಮದಲ್ಲಿ ನೀವು ಶರ್ಟ್ ಮತ್ತು ಓವರ್‌ಕೋಟ್ ಧರಿಸಿದ್ದನ್ನು ನೋಡಿದ್ದೆ. ಕುಮಟಾದಂಥ ಕರಾವಳಿ ಪ್ರದೇಶಗಳಲ್ಲಿ ಅಷ್ಟು ಬಿಸಿಯಿದ್ದರೂ ನೀವು ಓವರ್‌ಕೋಟ್ ಹೇಗೆ ಧರಿಸುತ್ತೀರಾ ಎಂದು ನನಗೆ ಆಶ್ಚರ್ಯವಾಯಿತು. ನಿಮಗೆ ಬಿಸಿ ಆಗೋದಿಲ್ಲವೇ? ಅಥವಾ ಆ ಬಿಸಿಯನ್ನು ತಾಳಿಕೊಳ್ಳಲು ಓವರ್‌ಕೋಟ್ ಒಳಗೆ ಐಸ್ ಅಥವಾ ಇನ್ನೇನಾದರೂ ಬಳಸುತ್ತೀರಾ? ನನಗೆ ನಿಜವಾಗಿಯೂ ಕುತೂಹಲವಾಗಿದೆ.**

– ಪ್ರಕಾಶ ಅವರೇ, ಕರಾವಳಿಯ ಧಗಧಗಿಸುವ ಬಿಸಿಲಿನಲ್ಲಿ ಓವರ್‌ಕೋಟ್ ಧರಿಸುವುದು ಅಂದರೆ ಅದು ಸೌನಾ ಬಾತ್ ಅನ್ನು ಮೊಬೈಲ್ ರೂಪದಲ್ಲಿ ಜತೆಯಲ್ಲೇ ಹೊತ್ತು ತಿರುಗಿದಂತೆ! ಕುಮಟಾದ ಆ ಉರಿ ಬಿಸಿಲಿನಲ್ಲಿ ನನ್ನನ್ನು ನೋಡಿ ನೀವು ಈ ಪ್ರಶ್ನೆ ಕೇಳಿರುವುದು ಸರಿಯಾಗಿದೆ. ನಿಮ್ಮ ಪ್ರಶ್ನೆಯಲ್ಲಿರುವ ಐಸ್ ಪ್ಯಾಕ್ ಐಡಿಯಾ ನಿಜಕ್ಕೂ ಅದ್ಭುತವಾಗಿದೆ! ಆದರೆ ಓವರ್‌ಕೋಟ್ ಒಳಗೆ ಐಸ್ ಇಟ್ಟುಕೊಂಡರೆ, ಐದು ನಿಮಿಷದಲ್ಲಿ ಆ ಐಸ್ ಕರಗಿ, ನಾನು ಪ್ರಶಸ್ತಿ ಸ್ವೀಕರಿಸುವ ಹೊತ್ತಿಗೆ ವೇದಿಕೆಯ ಮೇಲೆ ಒಬ್ಬ ನೆನೆದ ನಾಯಿಮರಿಯಂತೆ ಕಾಣಿಸಿಕೊಳ್ಳುವ ಅಪಾಯವಿತ್ತು. ಆಮೇಲೆ ಜನರಿಗೆ ನಾನು ಅವಾರ್ಡ್ ತೆಗೆದುಕೊಳ್ಳಲು ಬಂದಿದ್ದೇನೆಯೋ ಅಥವಾ ಸ್ವಿಮ್ಮಿಂಗ್ ಪೂಲ್‌ನಿಂದ ನೇರವಾಗಿ ಬಂದಿದ್ದೇನೆಯೋ ಎಂಬ ಗೊಂದಲ ಉಂಟಾಗುತ್ತಿತ್ತು.

ನನ್ನ ಈ ಕೋಟ್ ಧರಿಸುವ ಸಾಹಸದ ಹಿಂದೆ ಯಾವುದೇ 'ಕೂಲಿಂಗ್ ಟೆಕ್ನಾಲಜಿ' ಇಲ್ಲ, ಬದಲಿಗೆ ಕೇವಲ ಕೋಮಲ ಮತ್ತು ಮನೋಬಲ ಎಂಬ ಎರಡು ಪದರಗಳಿವೆ. ಅತಿಯಾದ ಬಿಸಿಲಿನಲ್ಲಿಯೂ ಕೋಟ್ ಧರಿಸುವುದರಿಂದ ಎರಡು ಲಾಭಗಳಿವೆ: ಒಂದು, ಬಿಸಿಲಿಗೆ ಮೈ ಕಪ್ಪಾಗುವುದಿಲ್ಲ (ಕೋಟ್ ಒಳಗೆ ಸೈಲೆಂಟ್ ಆಗಿ ಬೆವರುತ್ತಿದ್ದರೂ ಹೊರಗಿನ ಪ್ರಪಂಚಕ್ಕೆ ನಾವು ಫ್ರೆಶ್ ಆಗಿ ಕಾಣುತ್ತೇವೆ!). ಎರಡನೆಯದು, ಬೆವರಿನಿಂದ ಶರ್ಟ್ ನೆನೆದು ಹೋಗಿದ್ದರೆ ಅದನ್ನು ಈ ಓವರ್‌ಕೋಟ್ ಬಹಳ ಅಚ್ಚುಕಟ್ಟಾಗಿ ಮುಚ್ಚಿಡುತ್ತದೆ.

ಕರಾವಳಿಯ ಸೆಕೆಯನ್ನು ತಡೆಯಲು ನನ್ನ ಬಳಿ ಇರುವ ಏಕೈಕ ಮದ್ದು ಎಂದರೆ ಕಾರ್ಯಕ್ರಮ ಮುಗಿದ ತಕ್ಷಣ ಎಸಿ ರೂಮಿಗೆ ಓಡುವುದು ಅಥವಾ ಮನಸ್ಸಿನಲ್ಲೇ ಕುಮಟಾದ ಐಸ್ ಕ್ರೀಮ್ ಅಥವಾ ತಂಪು ಪಾನೀಯವನ್ನು ನೆನೆಸಿಕೊಳ್ಳುವುದು! ಪ್ರೀತಿಯಿಂದ ಜನ ನೀಡುವ ಗೌರವದ ಮುಂದೆ ಈ ಸಣ್ಣ ಬಿಸಿ ದೊಡ್ಡದಾಗಿ ಕಾಣುವುದಿಲ್ಲ ಅಷ್ಟೇ.

**ಅರುಣ್, (ಇಮೇಲ್ ಮೂಲಕ)**

- **ಭಟ್ರೇ, ನನ್ನ ಆಫೀಸ್‌ನಲ್ಲಿ ಒಬ್ಬ ಬೆಂಗಾಳಿ ಹುಡುಗಿ ಇದ್ದಾಳೆ. ಕಳೆದ ಆರು ತಿಂಗಳಿಂದ ನನಗೆ ಅವಳ ಮೇಲೆ ಕ್ರಶ್ ಬಂದಿದೆ. ಆದರೆ ಈಗ ಮಮತಾ ಬ್ಯಾನರ್ಜಿ ಅವರನ್ನು ನೋಡಿದ ನಂತರ ಬೆಂಗಾಳಿ ಹುಡುಗಿಯರ ಬಗ್ಗೆ ಸ್ವಲ್ಪ ಭಯ ಹುಟ್ಟಿದೆ. ಎಲ್ಲ ಬೆಂಗಾಳಿ ಹುಡುಗಿಯರೂ ಮಮತಾ ಬ್ಯಾನರ್ಜಿ ಅವರಂತೆಯೇ ಅಲ್ಲ ಎಂಬುದು ಗೊತ್ತು. ಆದರೂ ಯಾಕೋ ಸಂದೇಹ. ಅವಳಿಗೆ ನನ್ನ ಮನಸಿನ ಮಾತು ಹೇಳಲು ಮತ್ತು ಪ್ರಪೋಸ್ ಮಾಡಲು ನನಗೆ ನಿಜವಾಗಿಯೂ ಸಣ್ಣ ಅಳುಕು. ಏನು ಮಾಡಲಿ ?**

– ಅರುಣ್ ಅವರೇ, ನಿಮ್ಮ ಈ ಸಂದಿಗ್ಧತೆ ಕೇಳಿ ನಗು ಬರುವುದು ಸಹಜ, ಆದರೆ ಒಬ್ಬ ವ್ಯಕ್ತಿಯನ್ನು ನೋಡಿ ಇಡೀ ಸಮುದಾಯದ ಬಗ್ಗೆ ಅಭಿಪ್ರಾಯ ರೂಪಿಸಿಕೊಳ್ಳುವುದು 'ಬೆಂಗಳೂರಿನ ಟ್ರಾಫಿಕ್ ನೋಡಿ ಇಡೀ ಕರ್ನಾಟಕದ ರಸ್ತೆಗಳು ಹೀಗೆ ಇರುತ್ತವೆ' ಎಂದುಕೊಂಡಂತೆ! ರಾಜಕೀಯ ವ್ಯಕ್ತಿತ್ವಕ್ಕೂ, ವೈಯಕ್ತಿಕ ಬದುಕಿಗೂ ಮತ್ತು ಪ್ರಾದೇಶಿಕ ಸ್ವಭಾವಕ್ಕೂ ದೊಡ್ಡ ವ್ಯತ್ಯಾಸವಿರುತ್ತದೆ. ನಿಮ್ಮ ಅಳುಕನ್ನು ಹೋಗಲಾಡಿಸಲು ಕೆಲವು ಕ್ರಮಗಳನ್ನು ಹೇಳಬಹುದು.

ಮಮತಾ ಬ್ಯಾನರ್ಜಿ ಅವರು ಒಬ್ಬ ಹೋರಾಟಗಾರ್ತಿ ಮತ್ತು ದಶಕಗಳ ಕಾಲ ರಾಜಕೀಯದಲ್ಲಿ ಪಳಗಿದವರು. ಅವರ ಉಗ್ರ, ಆಕ್ರಮಣಕಾರಿ ಶೈಲಿ ಅವರ ವೃತ್ತಿಗೆ ಅನಿವಾರ್ಯವಿರಬಹುದು. ಆದರೆ ನೀವು ಇಷ್ಟಪಟ್ಟ ಹುಡುಗಿ ಸಾಹಿತ್ಯ, ಸಂಗೀತ, ಕಲೆ ಮತ್ತು ಸಿಹಿ ಪದಾರ್ಥಗಳಿಗೆ ಹೆಸರಾದ ಬಂಗಾಳದ ಸಂಸ್ಕೃತಿಯಿಂದ ಬಂದವರು. ಬೆಂಗಾಳಿ ಹುಡುಗಿಯರು ಸಾಮಾನ್ಯವಾಗಿ ಪ್ರಬುದ್ಧರು ಮತ್ತು ವಿಚಾರವಂತರಾಗಿರುತ್ತಾರೆ. ಅವರನ್ನು ರಾಜಕೀಯ ಬಿಂಬದ ಮೂಲಕ ನೋಡುವುದು ತಪ್ಪು.

ಅವಳ ಬಗ್ಗೆ ಇರುವ ಭಯವನ್ನು ಹೋಗಲಾಡಿಸಲು ಮೊದಲು ಅವಳೊಂದಿಗೆ ಹೆಚ್ಚು ಮಾತನಾಡಲು ಪ್ರಯತ್ನಿಸಿ. ಬೆಂಗಾಳಿ ಸಂಸ್ಕೃತಿ, ಅಲ್ಲಿನ ಆಹಾರ (ವಿಶೇಷವಾಗಿ ಸಿಹಿ ತಿಂಡಿಗಳು) ಅಥವಾ ಸಾಹಿತ್ಯದ ಬಗ್ಗೆ ಚರ್ಚೆ ನಡೆಸಿ. ಒಬ್ಬ ವ್ಯಕ್ತಿಯಾಗಿ ಅವಳ ಆಲೋಚನೆಗಳು ನಿಮ್ಮ ಆಲೋಚನೆಗಳಿಗೆ ಹೊಂದುತ್ತವೆಯೇ ಎಂದು ಗಮನಿಸಿ. ಆಗ ಆಟೋಮ್ಯಾಟಿಕ್ ಆಗಿ 'ಮಮತಾ ಬ್ಯಾನರ್ಜಿ' ನೆರಳು ಸರಿದು ಅವಳ ನಿಜವಾದ ವ್ಯಕ್ತಿತ್ವ ನಿಮಗೆ ಕಾಣಿಸುತ್ತದೆ.

ಆರು ತಿಂಗಳಿಂದ ಅವಳ ಮೇಲೆ ಕ್ರಶ್ ಇದೆ ಎಂದರೆ, ಅವಳಲ್ಲಿ ನಿಮಗೆ ಇಷ್ಟವಾಗುವ ಯಾವುದೋ ಒಂದು ವಿಶೇಷ ಗುಣ ಖಂಡಿತಾ ಇದ್ದೇ ಇರುತ್ತದೆ. ಕೇವಲ ಒಂದು ರಾಜಕೀಯ ಬಿಂಬಕ್ಕಾಗಿ ಆ ಗುಣವನ್ನು ಕಡೆಗಣಿಸಬೇಡಿ ಯಾವುದೇ ಹುಡುಗಿಗೆ ಪ್ರಪೋಸ್ ಮಾಡುವಾಗ ಆಕೆ ಬೆಂಗಾಳಿಯೋ ಅಥವಾ ಮತ್ಯಾವುದೋ ಪ್ರಾಂತ್ಯದವಳೋ ಎಂಬುದು ಮುಖ್ಯವಾಗುವುದಿಲ್ಲ; ಬದಲಿಗೆ ನಿಮ್ಮ ನಡುವಿನ ಒಡನಾಟ ಹೇಗಿದೆ ಎಂಬುದು ಮುಖ್ಯ. ಮೊದಲು ಗೆಳೆತನ ಬೆಳೆಸಿ. ಅವಳ ಇಷ್ಟ-ಕಷ್ಟಗಳನ್ನು ಅರ್ಥ ಮಾಡಿಕೊಳ್ಳಿ. ಒಮ್ಮೆ ನಿಮಗೆ ಅವಳ ಮೇಲೆ ನಂಬಿಕೆ ಬಂದ ಮೇಲೆ, ನೇರವಾಗಿ ಮತ್ತು ಗೌರವಯುತವಾಗಿ ನಿಮ್ಮ ಮನಸ್ಸಿನ ಮಾತು ಹೇಳಿ.

ಒಂದು ಮಾತು ನೆನಪಿರಲಿ. ಪ್ರೀತಿಯಲ್ಲಿ ರಿಸ್ಕ್ ತೆಗೆದುಕೊಳ್ಳದಿದ್ದರೆ ಗೆಲುವು ಸಿಗುವುದಿಲ್ಲ. ಮಮತಾ ಬ್ಯಾನರ್ಜಿ ಅವರ 'ಫೈಟಿಂಗ್ ಸ್ಪಿರಿಟ್' ಅನ್ನು ಇಲ್ಲಿ ನಿಮ್ಮ ಭಯಕ್ಕೆ ಬಳಸುವ ಬದಲು, ಅವಳಿಗೆ ಪ್ರಪೋಸ್ ಮಾಡುವ 'ಧೈರ್ಯ'ಕ್ಕೆ ಬಳಸಿಕೊಳ್ಳಿ

**ಶ್ರೀಹರ್ಷ, ಬೆಂಗಳೂರು**

- **ಭಟ್ರೇ, ನಾನು ಮೂರು ವರ್ಷಗಳ ಹಿಂದೆ ಕಂಪನಿಗೆ ಸೇರಿದ್ದೆ. ನನ್ನ ಜತೆ ಫ್ರೆಶರ್‌ಗಳಾಗಿ ಸೇರಿದ್ದ ಕೆಲವರು ಈಗಾಗಲೇ ಎರಡು ಬಾರಿ ಕೆಲಸ ಬದಲಿಸಿದ್ದಾರೆ. ಪ್ರತೀ ಎರಡು ವರ್ಷಕ್ಕೊಮ್ಮೆ ಕೆಲಸ ಬದಲಿಸುವುದು ಸರಿಯೇ? ಅಥವಾ ಒಂದೇ ಕಂಪನಿಯಲ್ಲಿ ಹೆಚ್ಚು ಕಾಲ ಕೆಲಸ ಮಾಡಿ ಕೌಶಲವನ್ನು ಬೆಳೆಸಿಕೊಳ್ಳುವುದು ಒಳ್ಳೆಯದೇ?**

–ಶ್ರೀ ಹರ್ಷ ಅವರೇ, ಉದ್ಯೋಗದ ಆರಂಭಿಕ ಹಂತದಲ್ಲಿರುವಾಗ ಈ ಗೊಂದಲ ಸಹಜ. ಈಗಿನ ಕಾರ್ಪೊರೇಟ್ ಜಗತ್ತಿನಲ್ಲಿ ಈ ಎರಡೂ ದೃಷ್ಟಿಕೋನಗಳಿಗೆ ತನ್ನದೇ ಆದ ಮಹತ್ವವಿದೆ. ಸಾಮಾನ್ಯವಾಗಿ ಒಂದೇ ಕಂಪನಿಯಲ್ಲಿ ಸಿಗುವ ವಾರ್ಷಿಕ ಏರಿಕೆಗಿಂತ, ಕೆಲಸ ಬದಲಿಸಿದಾಗ ಸಿಗುವ 'ಪ್ಯಾಕೇಜ್' ದೊಡ್ಡದಾಗಿರುತ್ತದೆ. ಬೇರೆ ಬೇರೆ ಕಂಪನಿಗಳ ಕೆಲಸದ ಸಂಸ್ಕೃತಿ (Work Culture), ವಿಭಿನ್ನ ತಂತ್ರಜ್ಞಾನಗಳು ಮತ್ತು ಹೊಸ ತಂಡಗಳೊಂದಿಗೆ ಕೆಲಸ ಮಾಡುವ ಕೌಶಲ ಬೇಗ ಸಿದ್ಧಿಸುತ್ತದೆ. ಅಲ್ಪಾವಧಿಯಲ್ಲಿ ಹೆಚ್ಚಿನ ಜನರ ಸಂಪರ್ಕ ಲಭ್ಯವಾಗುತ್ತದೆ. ಒಂದು ವಿಷಯದ ಬಗ್ಗೆ ಸಮಗ್ರವಾಗಿ ತಿಳಿದುಕೊಳ್ಳಲು ಸಮಯ ಬೇಕು. ದೀರ್ಘಕಾಲ ಒಂದೇ ಕಡೆ ಇದ್ದಾಗ ನೀವು ಆ ವಿಷಯದಲ್ಲಿ 'ಎಕ್ಸ್‌ಪರ್ಟ್' ಆಗುತ್ತೀರಿ. ಕಂಪನಿಯು ಹಳೆಯ ಉದ್ಯೋಗಿಗಳ ಮೇಲೆ ಹೆಚ್ಚು ನಂಬಿಕೆ ಇಡುತ್ತದೆ. ದೊಡ್ಡ ಪ್ರಾಜೆಕ್ಟ್‌ಗಳ ನೇತೃತ್ವ ವಹಿಸುವ ಅವಕಾಶ ಇವರಿಗೆ ಮೊದಲು ಸಿಗುತ್ತದೆ. ಆರ್ಥಿಕ ಮಂದಗತಿಯಂಥ ಸಂದರ್ಭಗಳಲ್ಲಿ ಕಂಪನಿ ಗಳು ಮೊದಲು ಕೈಬಿಡುವುದು ಇತ್ತೀಚೆಗೆ ಸೇರಿದವರನ್ನು. ಹಳೆಯ ಉದ್ಯೋಗಿಗಳಿಗೆ ಸುರಕ್ಷತೆ ಹೆಚ್ಚು. ಪ್ರತೀ ಎರಡು ವರ್ಷಕ್ಕೊಮ್ಮೆ ಕೆಲಸ ಬದಲಿಸುವುದು ಸರಿಯೇ ಎಂಬ ಪ್ರಶ್ನೆಗೆ ಉತ್ತರ ನಿಮ್ಮ ವೃತ್ತಿಜೀವನದ ಗುರಿಯಲ್ಲಿದೆ. ಕೆಲಸ ಬದಲಿಸುವುದು ಕೇವಲ ಹಣಕ್ಕಾಗಿ ಇರಬಾರದು. ಹೊಸ ಕಂಪನಿಯಲ್ಲಿ ಕಲಿಯಲು ಏನೂ ಇಲ್ಲದಿದ್ದರೆ, ಅಲ್ಲಿಗೆ ಹೋದರೂ ನಿಮ್ಮ ಮೌಲ್ಯ ಹೆಚ್ಚುವುದಿಲ್ಲ. ನೀವು ಪ್ರತಿ 1-2 ವರ್ಷಕ್ಕೊಮ್ಮೆ ಕೆಲಸ ಬದಲಿಸುತ್ತಿದ್ದರೆ, ಮುಂದೊಂದು ದಿನ ದೊಡ್ಡ ಕಂಪನಿಗಳು ನಿಮ್ಮನ್ನು ನಂಬಲು ಹಿಂಜರಿಯಬಹುದು. ಕನಿಷ್ಠ 3 ವರ್ಷ ಒಂದೆಡೆ ಕೆಲಸ ಮಾಡುವುದು ನಿಮಗೆ ಘನತೆ ತರುತ್ತದೆ. ನೀವು ಈಗಿರುವ ಕಂಪನಿಯಲ್ಲಿ ಕಲಿಯಲು ಹೊಸತು ಏನೂ ಉಳಿದಿಲ್ಲ ಮತ್ತು ಬೆಳವಣಿಗೆ ಕುಂಠಿತವಾಗಿದೆ ಎನಿಸಿದಾಗ ಮಾತ್ರ ಬದಲಾವಣೆಯ ಬಗ್ಗೆ ಯೋಚಿಸಿ.

ವೃತ್ತಿಜೀವನದ ಆರಂಭದ 5-8 ವರ್ಷಗಳಲ್ಲಿ 2-3 ವರ್ಷಕ್ಕೊಮ್ಮೆ ಬದಲಾವಣೆ ಮಾಡುವುದು ನಿಮ್ಮ ಮಾರುಕಟ್ಟೆ ಮೌಲ್ಯವನ್ನು ಹೆಚ್ಚಿಸಬಹುದು. ಆದರೆ, ಆ ಬದಲಾವಣೆ ಕೇವಲ 'ಜಂಪ್' ಆಗಿರದೆ, ಕೌಶಲದ ಏಣಿಯ 'ಮುಂದಿನ ಮೆಟ್ಟಿಲು' ಆಗಿರಲಿ.

**ಸುದೇಶ ಎಂ.,(ಇಮೇಲ್ ಮೂಲಕ)**

- **ಭಟ್ರೇ, ಮುಖ್ಯಮಂತ್ರಿಯಾಗಲು ಆಡಳಿತಾತ್ಮಕ ಅಥವಾ ರಾಜಕೀಯ ಹಿನ್ನೆಲೆ ಹಾಗೂ ಅನುಭವ ಅಗತ್ಯವೇ? ಇತ್ತೀಚಿನ ತಮಿಳುನಾಡಿನ ರಾಜಕೀಯ ಪ್ರವೃತ್ತಿ ನೋಡಿದರೆ, ಜನರು ಯಾವುದೇ ಆಡಳಿತ ಅನುಭವವಿಲ್ಲದ ಒಬ್ಬ ಸಿನಿಮಾ ನಟನನ್ನೇ ಮುಖ್ಯಮಂತ್ರಿಯಾಗಿ ನೋಡಲು ಬಯಸುತ್ತಿರುವಂತೆ ಕಾಣುತ್ತಿದೆ. ಕೇವಲ ನಟನಾಗಿರುವುದರಿಂದ ಒಬ್ಬ ವ್ಯಕ್ತಿ ಮುಖ್ಯಮಂತ್ರಿಯಾಗಬಹುದೇ? ಅಥವಾ ವೈದ್ಯರು, ವಕೀಲರು ಮತ್ತು ಇತರ ವೃತ್ತಿಗಳಂತೆ ರಾಜಕಾರಣಿಯಾಗಲು ಸಹ ನಿರ್ದಿಷ್ಟ ಜ್ಞಾನ ಮತ್ತು ಅನುಭವ ಇರಬೇಕೇ?**

– ಸುದೇಶ ಅವರೇ, ಇದು ಅತ್ಯಂತ ಪ್ರಸ್ತುತ ಮತ್ತು ಚರ್ಚಾರ್ಹವಾದ ಪ್ರಶ್ನೆ. ಪ್ರಜಾಪ್ರಭುತ್ವದಲ್ಲಿ ಸಂವಿಧಾನದ ಪ್ರಕಾರ ಅರ್ಹತೆಗಳಿಗೂ ಮತ್ತು ನೈಜವಾಗಿ ಬೇಕಾಗುವ ಕೌಶಲಗಳಿಗೂ ನಡುವೆ ದೊಡ್ಡ ವ್ಯತ್ಯಾಸವಿದೆ. ವೈದ್ಯರು ಅಥವಾ ವಕೀಲರಾಗಲು ನಿರ್ದಿಷ್ಟ ಪದವಿ ಮತ್ತು ಪರವಾನಗಿ ಅಗತ್ಯ. ಆದರೆ, ಸಂವಿಧಾನದ ಪ್ರಕಾರ ಮುಖ್ಯಮಂತ್ರಿಯಾಗಲು ಕನಿಷ್ಠ 25 ವರ್ಷ ವಯಸ್ಸು, ಭಾರತದ ಪೌರತ್ವ ಮತ್ತು ಶಾಸನಸಭೆಯ ಸದಸ್ಯತ್ವ (ಅಥವಾ 6 ತಿಂಗಳೊಳಗೆ ಸದಸ್ಯರಾಗುವ ಅವಕಾಶ) ಇದ್ದರೆ ಸಾಕು. ಇಲ್ಲಿ ಯಾವುದೇ ಶೈಕ್ಷಣಿಕ ಅಥವಾ ವೃತ್ತಿಪರ ಅನುಭವವನ್ನು ಕಡ್ಡಾಯಗೊಳಿಸಿಲ್ಲ. ಇದು ಪ್ರಜಾಪ್ರಭುತ್ವದ ಆಶಯ – ಅಂದರೆ, ಸಾಮಾನ್ಯ ಪ್ರಜೆಯೂ ದೇಶದ ಅತ್ಯುನ್ನತ ಹುದ್ದೆಗೇರಬಹುದು.

ನಟನಾಗಿ ಜನಪ್ರಿಯತೆ ಗಳಿಸುವುದು ಒಂದು ವಿಷಯವಾದರೆ, ರಾಜ್ಯವನ್ನು ಆಳುವುದು ಸಂಪೂರ್ಣವಾಗಿ ವಿಭಿನ್ನವಾದ ಕಲೆ. ಮುಖ್ಯಮಂತ್ರಿಗೆ ಈ ಕೆಳಗಿನ ಜ್ಞಾನ ಅಗತ್ಯವಿರುತ್ತದೆ – ರಾಜ್ಯದ ಆರ್ಥಿಕ ಪರಿಸ್ಥಿತಿಯ ತಿಳಿವಳಿಕೆ, ಸಂಕೀರ್ಣ ಸಾಮಾಜಿಕ ಸಮಸ್ಯೆಗಳನ್ನು ನಿಭಾಯಿಸುವ ತಾಳ್ಮೆ, ಐಎಎಸ್ ಅಧಿಕಾರಿಗಳಿಂದ ಕೆಲಸ ತೆಗೆಸುವ ಚಾಕಚಕ್ಯತೆ, ಕೇಂದ್ರ ಸರಕಾರದೊಂದಿಗೆ ಮತ್ತು ನೆರೆಹೊರೆಯ ರಾಜ್ಯಗಳೊಂದಿಗೆ (ಉದಾಹರಣೆಗೆ ಕಾವೇರಿ ಅಥವಾ ಕೃಷ್ಣಾ ನದಿ ನೀರಿನ ವಿಚಾರ) ಮಾತುಕತೆ ನಡೆಸುವ ಜಾಣ್ಮೆ.

ತಮಿಳುನಾಡಿನಲ್ಲಿ ಎಂ.ಜಿ.ಆರ್., ಜೆ. ಜಯಲಲಿತಾ ಅವರು ಸಿನಿಮಾ ಹಿನ್ನೆಲೆಯಿಂದ ಬಂದು ಯಶಸ್ವಿ ಮುಖ್ಯಮಂತ್ರಿಗಳಾದರು. ಆದರೆ ಅವರ ಯಶಸ್ಸಿನ ಹಿಂದೆ ಕೇವಲ ಗ್ಲಾಮರ್ ಇರಲಿಲ್ಲ. ಅವರು ಜನಸಾಮಾನ್ಯರ ಜತೆ ತಳಮಟ್ಟದಲ್ಲಿ ಕೆಲಸ ಮಾಡಿದ್ದರು. ಪಕ್ಷದ ಸಂಘಟನೆಯಲ್ಲಿ ದಶಕಗಳ ಕಾಲ ತೊಡಗಿಸಿಕೊಂಡಿದ್ದರು. ಕೇವಲ ಸಿನಿಮಾ ಇಮೇಜ್ ಬಳಸದೆ, ಬಲವಾದ ಸಿದ್ಧಾಂತ ಮತ್ತು ಆಡಳಿತಾತ್ಮಕ ತಂಡವನ್ನು ಹೊಂದಿದ್ದರು. ಯಾವುದೇ ಅನುಭವವಿಲ್ಲದ ವ್ಯಕ್ತಿ ಅಧಿಕಾರಕ್ಕೆ ಬಂದಾಗ, ಅವರು ಸಂಪೂರ್ಣವಾಗಿ ಅಧಿಕಾರಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ. ರಾಜಕೀಯ ಜಾಣ್ಮೆ ಇಲ್ಲದಿದ್ದರೆ ಸ್ವಪಕ್ಷದವರನ್ನೇ ನಿಭಾಯಿಸುವುದು ಕಷ್ಟವಾಗಬಹುದು. ಒಬ್ಬ ಉತ್ತಮ ನಟ ಅಥವಾ ವೈದ್ಯ ತನ್ನ ಕ್ಷೇತ್ರದಲ್ಲಿ ಎಷ್ಟು ಸಮರ್ಥನೋ, ಅದೇ ಸಾಮರ್ಥ್ಯ ರಾಜಕೀಯದಲ್ಲಿ ಕೆಲಸ ಮಾಡುತ್ತದೆ ಎಂದಿಲ್ಲ.

ಇಂದಿನ ಸಂಕೀರ್ಣ ಜಗತ್ತಿನಲ್ಲಿ ರಾಜಕೀಯವೂ ಒಂದು 'ವೃತ್ತಿಪರ' ಕ್ಷೇತ್ರವಾಗಿ ಬದಲಾಗುತ್ತಿದೆ. ಕೇವಲ ಭಾಷಣ ಅಥವಾ ಗ್ಲಾಮರ್‌ನಿಂದ ದೀರ್ಘಕಾಲ ಆಡಳಿತ ನಡೆಸಲು ಸಾಧ್ಯವಿಲ್ಲ ಎಂಬುದು ಜನರ ಅರಿವಿಗೂ ಬರುತ್ತಿದೆ. ಹೀಗಾಗಿ, ಸಾರ್ವಜನಿಕ ನೀತಿ (Public Policy) ಮತ್ತು ಆಡಳಿತದ ಬಗ್ಗೆ ಕನಿಷ್ಠ ಜ್ಞಾನ ಇರುವುದು ಈಗಿನ ಕಾಲದ ತುರ್ತು ಅಗತ್ಯ.

ಒಬ್ಬ ಸಿನಿಮಾ ನಟ ಮುಖ್ಯಮಂತ್ರಿಯಾಗಬಹುದು, ಆದರೆ ಅವರು ಯಶಸ್ವಿಯಾಗಬೇಕೆಂದರೆ ತಮಗೆ ತಿಳಿದಿಲ್ಲದ ಆಡಳಿತಾತ್ಮಕ ವಿಷಯಗಳನ್ನು ಕಲಿಯುವ ವಿನಯ ಮತ್ತು ಸಮರ್ಥ ಸಲಹೆಗಾರರನ್ನು ಆರಿಸಿಕೊಳ್ಳುವ ವಿವೇಚನೆ ಹೊಂದಿರಬೇಕು. ಅಂತಿಮವಾಗಿ, ಪ್ರಜಾಪ್ರಭುತ್ವದಲ್ಲಿ 'ಜನಬೆಂಬಲ'ವೇ ದೊಡ್ಡ ಅರ್ಹತೆ, ಆದರೆ 'ಅನುಭವ'ವು ಆಡಳಿತದ ಭದ್ರ ಬುನಾದಿ.

**ಚಂದ್ರು ವಿ.ಕೆ.,ರಾಜಾಜಿನಗರ**

- **ಭಟ್ರೇ, ಮೀನು ತಿಂದರೆ ಮನುಷ್ಯ ಬುದ್ಧಿವಂತನಾಗುತ್ತಾನೆ ಎನ್ನುವ ಮಾತಿದೆ. ಅದು ನಿಜವೇ? ಅದರ ಹಿಂದೆ ವೈಜ್ಞಾನಿಕ ಕಾರಣ ಇದೆಯೇ? ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು?**

– ಚಂದ್ರು ಅವರೇ, ಮೀನು ತಿಂದರೆ ಬುದ್ಧಿ ಚುರುಕಾಗುತ್ತದೆ ಎನ್ನುವ ಮಾತು ಕೇವಲ ಹಳೆಯ ಕಾಲದ ನಂಬಿಕೆಯಲ್ಲ, ಇದರ ಹಿಂದೆ ಬಲವಾದ ವೈಜ್ಞಾನಿಕ ಕಾರಣಗಳಿವೆ. ವಿಜ್ಞಾನಿಗಳು ಮೀನನ್ನು ಮೆದುಳಿನ ಆಹಾರ ಎಂದೇ ಕರೆಯುತ್ತಾರೆ

ನಮ್ಮ ಮಿದುಳಿನ ಸುಮಾರು ಶೇ.60 ಭಾಗ ಕೊಬ್ಬಿನಿಂದ ಕೂಡಿದೆ. ಇದರಲ್ಲಿ ಅರ್ಧದಷ್ಟು ಭಾಗ ಒಮೆಗಾ-3 ಮಾದರಿಯ ಕೊಬ್ಬಿನಂಶವಿರುತ್ತದೆ. ಮೀನಿನಲ್ಲಿ, ವಿಶೇಷವಾಗಿ ಅಂಜಲ್, ಬಂಗುಡೆ, ಮತ್ತು ಭೂತಾಯಿ ಮೀನುಗಳಲ್ಲಿ ಎಂಬ ಒಮೆಗಾ-3 ಸಮೃದ್ಧವಾಗಿದೆ. ಇದು ಮಿದುಳಿನ ಜೀವಕೋಶಗಳ ನಿರ್ಮಾಣಕ್ಕೆ ಸಹಾಯ ಮಾಡುತ್ತದೆ. ಕಲಿಕಾ ಸಾಮರ್ಥ್ಯ ಮತ್ತು ಸ್ಮರಣಶಕ್ತಿಯನ್ನು ಹೆಚ್ಚಿಸಲು ಇದು ಅತ್ಯಗತ್ಯ.

ಮಿದುಳಿನ ಜೀವಕೋಶಗಳು ಒಂದಕ್ಕೊಂದು ಮಾಹಿತಿಯನ್ನು ರವಾನಿಸಲು ಉತ್ತಮವಾದ ಪದರಗಳನ್ನು ಹೊಂದಿರಬೇಕು. ಮೀನಿನಲ್ಲಿರುವ ಪೋಷಕಾಂಶಗಳು ಈ ನರಕೋಶಗಳ ನಡುವಿನ ಸಂವಹನವನ್ನು ಸುಗಮಗೊಳಿಸುತ್ತವೆ. ಇದರಿಂದಾಗಿ ವಿಷಯಗಳನ್ನು ಬೇಗನೆ ಅರ್ಥಮಾಡಿಕೊಳ್ಳುವ ಮತ್ತು ನೆನಪಿಟ್ಟುಕೊಳ್ಳುವ ಶಕ್ತಿ ಹೆಚ್ಚುತ್ತದೆ.

ವಯಸ್ಸಾದಂತೆ ಮನುಷ್ಯರಲ್ಲಿ ಸ್ಮರಣಶಕ್ತಿ ಕಡಿಮೆಯಾಗುವುದು ಅಥವಾ ಅಲ್ಝೈಮರ್ಸ್‌ನಂಥ ಕಾಯಿಲೆಗಳು ಬರುವ ಸಾಧ್ಯತೆ ಇರುತ್ತದೆ. ಸಂಶೋಧನೆಗಳ ಪ್ರಕಾರ, ನಿಯಮಿತವಾಗಿ ಮೀನು ಸೇವಿಸುವವರ ಮಿದುಳಿನಲ್ಲಿ 'ಗ್ರೇ ಮ್ಯಾಟರ್' ಪ್ರಮಾಣ ಹೆಚ್ಚಿರುತ್ತದೆ. ಈ ಗ್ರೇ ಮ್ಯಾಟರ್ ನಿರ್ಧಾರ ತೆಗೆದುಕೊಳ್ಳುವ ಮತ್ತು ನೆನಪಿಟ್ಟುಕೊಳ್ಳುವ ಪ್ರಕ್ರಿಯೆಯನ್ನು ನಿಯಂತ್ರಿಸುತ್ತದೆ. ಮೀನಿನಲ್ಲಿ ವಿಟಮಿನ್ ಡಿ ಮತ್ತು ಅಯೋಡಿನ್ ಕೂಡ ಇರುತ್ತದೆ. ಇವು ಮಿದುಳಿನ ಬೆಳವಣಿಗೆಗೆ ಮತ್ತು ಮಾನಸಿಕ ಆರೋಗ್ಯವನ್ನು ಸಮತೋಲನದಲ್ಲಿಡಲು ಸಹಕಾರಿ. ಮೀನು ತಿನ್ನುವುದರಿಂದ ಖಂಡಿತವಾಗಿಯೂ ಮಿದುಳಿನ ಆರೋಗ್ಯ ಸುಧಾರಿಸುತ್ತದೆ ಎಂಬುದು ನಿಜ. ಆದರೆ ಇಲ್ಲಿ ಕೆಲವು ವಿಷಯಗಳನ್ನು ಗಮನಿಸಬೇಕು. ಮೀನು ಮಾತ್ರ ಸಾಕೇ? ಕೇವಲ ಮೀನು ತಿಂದ ತಕ್ಷಣ ಯಾರೂ ರಾತ್ರೋರಾತ್ರಿ ಬುದ್ಧಿವಂತರಾಗುವುದಿಲ್ಲ. ಬುದ್ಧಿವಂತಿಕೆಗೆ ಓದು, ನಿರಂತರ ಕಲಿಕೆ ಮತ್ತು ಮಿದುಳಿಗೆ ಕೆಲಸ ಕೊಡುವ ಹವ್ಯಾಸಗಳು ಅಷ್ಟೇ ಮುಖ್ಯ. ಮೀನು ಅದಕ್ಕೆ ಬೇಕಾದ 'ಇಂಧನ' ನೀಡುತ್ತದೆಯಷ್ಟೇ. ಸಸ್ಯಾಹಾರಿಗಳು ಒಮೆಗಾ-3 ಪಡೆಯಲು ವಾಲ್‌ನಟ್ಸ್, ಅಗಸೆ ಬೀಜ ಅಥವಾ ಚಿಯಾ ಬೀಜಗಳನ್ನು ಬಳಸಬಹುದು. ಕೆಲವು ದೊಡ್ಡ ಗಾತ್ರದ ಸಮುದ್ರದ ಮೀನುಗಳಲ್ಲಿ ಪಾದರಸದ ಅಂಶ ಹೆಚ್ಚಿರಬಹುದು, ಆದ್ದರಿಂದ ಮಿತವಾದ ಮತ್ತು ವೈವಿಧ್ಯಮಯ ಮೀನುಗಳ ಸೇವನೆ ಉತ್ತಮ.

ಮೀನು ಸೇವನೆಯು ಮಿದುಳಿನ ದಕ್ಷತೆಯನ್ನು ಹೆಚ್ಚಿಸಲು ಪೂರಕವಾಗಿ ಕೆಲಸ ಮಾಡುತ್ತದೆ ಎಂಬುದು ವೈಜ್ಞಾನಿಕವಾಗಿ ಸಾಬೀತಾದ ಸತ್ಯ.

» ಪ್ರವರ

# ಅಮ್ಮನಿಂದ ಮಗು ಏನೆಲ್ಲಾ ಕಲಿಯುತ್ತದೆ?

**ಮಗುವಿಗೆ ಅಮ್ಮನೇ ಗುರು! ಅದಕ್ಕೇ ಹಿಂದಿನವರು ಹೇಳಿದ್ದಾರೆ, ಮನೆಯೆ ಮೊದಲ ಪಾಠಶಾಲೆ.**

ಬಹಳ ಸಾರಿ ನಾವು ದೊಡ್ಡವರು ಮಕ್ಕಳ ಮೇಲೆ ರೇಗುತ್ತೇವೆ. ಮಕ್ಕಳೇಕೆ ಹಾಗೆ ವರ್ತಿಸುತ್ತಾರೆ ಎಂದು ಅವರ ಮೇಲೆ ಬೇಸರ ಮಾಡಿಕೊಳ್ಳುತ್ತೇವೆ. ಎಲ್ಲರ ಮುಂದೆ ಮಕ್ಕಳ ವರ್ತನೆ ಕೆಲವೊಮ್ಮೆ ಹೆತ್ತವರ ಮರ್ಯಾದೆಯನ್ನೂ ಹರಾಜು ಮಾಡುತ್ತವೆ. ಮಕ್ಕಳ ನಡವಳಿಕೆ, ವರ್ತನೆ, ಸಾಮಾಜಿಕವಾಗಿ ಅವರು ಬೆರೆಯುವ ರೀತಿ ಇತ್ಯಾದಿಗಳೆಲ್ಲವೂ, ನಮ್ಮದೇ ವರ್ತನೆಯ ಕನ್ನಡಿ ಎಂಬುದು ಮಾತ್ರ ಬಹಳ ಸಲ ನಮಗೆ ಅರಿವಾಗುವುದೇ ಇಲ್ಲ. ಮಕ್ಕಳು ಹಾಗೆ ವರ್ತಿಸುವುದಕ್ಕೆ ಕಾರಣವೇನು ಎಂಬುದು ಹೆತ್ತವರಿಗೆ ಕೆಲವೊಮ್ಮೆ ಮಿಲಿಯನ್ ಡಾಲರ್ ಪ್ರಶ್ನೆಯಾಗುತ್ತವೆ. ಮಕ್ಕಳನ್ನು ಬೆಳೆಸುವಲ್ಲಿ ಎಲ್ಲಿ ಎಡವಿದ್ದೇವೆ ಎಂಬ ಯೋಚನೆ ಒಂದೆಡೆಯಾದರೆ, ತಮ್ಮದೇ ನಡವಳಿಕೆಯೂ ಹಲವು ಬಾರಿ ಅವರ ಈ ವರ್ತನೆಗೆ ಕಾರಣವೂ ಆಗಿರಬಹುದು ಎಂದು ಯೋಚಿಸುವಲ್ಲಿ ಎಡವುತ್ತೇವೆ. ಸಾಕಷ್ಟು ಅಧ್ಯಯನಗಳೂ ಇದನ್ನು ಎತ್ತಿ ಹಿಡಿದಿವೆ ಕೂಡಾ. ಮಕ್ಕಳ ಮಾನಸಿಕತೆ, ಅವರ ನಡವಳಿಕೆ ಇಲ್ಲವೂ ಅವರ ಪೋಷಕರನ್ನೇ ಹೋಲುತ್ತವೆ, ತನ್ನ ಅಪ್ಪ ಹಾಗೂ ಅಮ್ಮನನ್ನು ನೋಡಿಯೇ ಮಗು ಕಲಿಯುತ್ತದೆ ಎಂದು ಹೇಳುತ್ತವೆ ಅನೇಕ ಅಧ್ಯಯನಗಳು. ಮುಖ್ಯವಾಗಿ ಹುಟ್ಟಿದಾರಭ್ಯ ಅಮ್ಮನ ಜೊತೆಗೆ ಹೆಚ್ಚು ಸಮಯವನ್ನು ಕಳೆಯುವ ಮಕ್ಕಳು ಅಮ್ಮನ ನಡತೆಯನ್ನೇ ನೋಡಿ ಕಲಿಯುತ್ತಾರೆ

ಮಕ್ಕಳು ಗಮನಿಸುವುದರಲ್ಲಿ ಸಿದ್ಧ ಹಸ್ತರು. ಮಕ್ಕಳು ನಮ್ಮನ್ನು ನೋಡುತ್ತಿಲ್ಲ ಎಂದು ನಾವು ಅವರಿರುವಾಗ ಆಡುವ ಜಗಳ, ಮಾತು, ಮುನಿಸು, ಬಳಸುವ ಶಬ್ದಗಳು ಎಲ್ಲವೂ ಮಕ್ಕಳ ಮನಸ್ಸಿನೊಳಗೆ ಅಚ್ಚಾಗಿಬಿಡುತ್ತವೆ. ಶಾಶ್ವತವಾಗಿ ನೆಲೆಯೂರುತ್ತವೆ. ಅಷ್ಟೇ ಅಲ್ಲ, ಅವನ್ನು ತನ್ನ ಜೀವನದಲ್ಲಿ ಮಗು ಬಳಸುತ್ತದೆ ಕೂಡಾ. ಇದನ್ನು ಪ್ರತಿಯೊಬ್ಬ ಹೆತ್ತವರೂ ಗಮನಿಸಿ ಹೆತ್ತವರಾಗಿ ಜವಾಬ್ದಾರಿಯುತವಾಗಿ ವರ್ತಿಸುವುದು ಹಾಗೂ ಮಕ್ಕಳಿಗೆ ಮಾದರಿಯಾಗಿ ನಡೆದುಕೊಳ್ಳುವುದು ಪ್ರತಿ ಪೋಷಕರಿಗೆ ಇರುವ ಬಹುದೊಡ್ಡ ಜವಾಬ್ದಾರಿ. ಬನ್ನಿ, ಪ್ರತಿ ಮಗುವೂ ಅಮ್ಮನನ್ನು ನೋಡಿ ತನ್ನ ಬಾಲ್ಯದಲ್ಲಿ ಏನೆಲ್ಲ ಕಲಿಯುತ್ತದೆ ಹಾಗೂ ಕಾಪಿ ಮಾಡುತ್ತದೆ ಎಂಬ ಆಸಕ್ತಿಕರವಾದ ಅಧ್ಯಯನದ ಝಲಕ್ ಇಲ್ಲಿದೆ.

1. ಅಮ್ಮ ಹೇಗೆ ಮಾತಾಡುತ್ತಾಳೆ ಎಂಬುದನ್ನು ಮಗು ಗಮನಿಸುತ್ತದೆಯಂತೆ. ಅಮ್ಮ ಮಾತಾಡುವ ಹಾಗೆಯೇ ಮಾತನಾಡಲು ಮಗು ಪ್ರಯತ್ನಿಸುತ್ತದೆ. ಅಮ್ಮ ಒಳ್ಳೆಯ ಮಾತಾಡಿದರೆ, ಮಗುವಿನ ಮೇಲೆ ಉತ್ತಮ ಪರಿಣಾಮ ಬೀರುತ್ತದೆ. ಕೆಟ್ಟದ್ದಾದರೆ, ಅದರ ಪರಿಣಾಮವನ್ನೂ ಮಗು ಆಡುವ ಮಾತಿನಿಂದಲೇ ಕಂಡುಹಿಡಿಯಬಹುದು.
2. ಅಮ್ಮನ ಒತ್ತಡವನ್ನೂ ಮಗು ಗಮನಿಸುತ್ತದೆಯಂತೆ. ಅಮ್ಮ ಗಡಿಬಿಡಿಯಲ್ಲಿ, ಹೆಚ್ಚು ಒತ್ತಡದಲ್ಲಿದ್ದಾಗ ಹೇಗೆ ವ್ಯವಹರಿಸುತ್ತಾಳೆ ಎಂಬುದು ಮಗುವಿಗೆ ಮುಖ್ಯವಾಗುತ್ತದೆ. ಆಕೆಯ ಕೋಪ, ತಾಪ, ಚೀರಾಟ ಇವೆಲ್ಲವನ್ನೂ ಮಗು ತನ್ನ ಒತ್ತಡದ ಸಮಯದಲ್ಲೂ ಕಾಪಿ ಮಾಡುತ್ತದೆ. ಅಮ್ಮ ಶಾಂತವಾಗಿ ಪರಿಸ್ಥಿತಿ ನಿಭಾಯಿಸುವವಳಾಗಿದ್ದರೆ ಮಗುವೂ ಶಾಂತವಾಗಿರುವುದನ್ನು ಕಲಿಯುತ್ತದೆ.
3. ಅಮ್ಮನ ಕೆಲಸವನ್ನು ಮಗು ನೋಡುತ್ತದೆ. ಅಮ್ಮ ಕಷ್ಟಪಟ್ಟು ದುಡಿಯುವವಳಾಗಿದ್ದರೆ ಮಗುವೂ ಅದನ್ನು ಮುಂದೆ ಅಳವಡಿಸಿಕೊಳ್ಳುತ್ತದೆ.
4. ಅಮ್ಮನ ವಹಿಸುವ ಆರೋಗ್ಯದ ಕಾಳಜಿ, ತನ್ನನ್ನು ತಾನು ನೋಡುವ ರೀತಿ ಎಲ್ಲವನ್ನೂ ಮಗು ಕಾಪಿ ಮಾಡುತ್ತದಂತೆ. ತಾನೂ ಹಾಗಿರಲು ಪ್ರಯತ್ನಿಸುತ್ತದಂತೆ.
5. ಅಮ್ಮನ ಆತ್ಮವಿಶ್ವಾಸ ಮಕ್ಕಳ ಮೇಲೆ ಪರಿಣಾಮ ಬೀರುತ್ತದಂತೆ. ಅಮ್ಮ ಆತ್ಮವಿಶ್ವಾಸಿಯಾಗಿದ್ದರೆ ಮಗುವೂ ಅಷೇ ಧೈರ್ಯಶಾಲಿಯಾಗಿ, ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುತ್ತದಂತೆ.
6. ಅಮ್ಮ ಸಾಮಾಜಿಕವಾಗಿ ಹೇಗೆ ನಡೆದುಕೊಳ್ಳುತ್ತಾಳೆ, ಬೇರೆಯವರ ಜೊತೆಗೆ ಹೇಗೆ ವ್ಯವಹರಿಸುತ್ತಾಳೆ ಎಂಬುದನ್ನೂ ಮಗು ನೋಡುತ್ತದೆ. ಅಷ್ಟೇ ಅಲ್ಲ, ತಾನೂ ಅದನ್ನೇ ಕಲಿಯುತ್ತದೆ.
7. ಅಮ್ಮ ಹಣವನ್ನು ಹೇಗೆ ಖರ್ಚು ಮಾಡುತ್ತಾಳೆ ಎಂಬುದೂ ಕೂಡ ಮಕ್ಕಳಿಗೆ ಸೋಜಿಗದ ವಿಚಾರವೇ. ಅದನ್ನೇ ಮಗೂ ಕೂಡಾ ಅಮ್ಮನನ್ನೇ ನೋಡಿ ಕಲಿಯುತ್ತದಂತೆ.
8. ಒಟ್ಟಾರೆಯಾಗಿ, ಅಮ್ಮನೆಂಬ ಜೀವ ಪ್ರತಿಯೊಂದು ಹಂತದಲ್ಲೂ ಮಕ್ಕಳ ಮಾನಸಿಕತೆಯ ಮೇಲೆ ಪರಿಣಾಮ ಬೀರುತ್ತದೆ. ಅಮ್ಮನ ಒಟ್ಟಾರೆ ವ್ಯಕ್ತಿತ್ವ ಮಕ್ಕಳ ಮೇಲೆ ಒಳ್ಳೆಯ ಹಾಗೂ ಕೆಟ್ಟ ಎರಡೂ ಪರಿಣಾಮಗಳನ್ನು ಬೀರಬಲ್ಲುದು. ಹಾಗಾಗಿ ಅಮ್ಮನೆಂಬ ತನ್ನ ಜವಾಬ್ದಾರಿಯುತ ಹುದ್ದೆಯ ಮೇಲೆ ಪ್ರತಿಯೊಬ್ಬ ಅಮ್ಮನಿಗೂ ತನ್ನ ಜವಾಬ್ದಾರಿಗಳ ಅರಿವಿರುವುದು ಅತ್ಯಂತ ಅಗತ್ಯ.

# ತನ್ನನ್ನು ತಾನೇ ನುಂಗಲಿದೆಯೇ ಎಐ?

▶▶ ಮೊದಲ ಪುಟದಿಂದ

ಇಂತಹ ಸಂದರ್ಭದಲ್ಲಿ ಮನುಷ್ಯ ಬರೆದ ಅಪ್ಪಟ ಲೇಖನಗಳಿಗೆ, ತೆಗೆದ ಫೋಟೋಗಳಿಗೆ ಚಿನ್ನದ ಬೆಲೆ ಬರಲಿದೆ. ನಾವು ಮಣ್ಣಿನಲ್ಲಿ ಬಿದ್ದು, ಬೆಳೆ ಬೆಳೆದು, ಬಿಸಿಲಿನಲ್ಲಿ ಬೆಂದು ಬರೆಯುವ ಅನುಭವಕ್ಕೂ, ಎಐ ಎಸಿ ರೂಮಿನಲ್ಲಿ ಕುಳಿತು ಡೇಟಾ ಸಂಸ್ಕರಿಸಿ ಬರೆಯುವ ಬರಹಕ್ಕೂ ಇರುವ ವ್ಯತ್ಯಾಸವೇ ಈ 'ಅಸಲಿ ಜ್ಞಾನ'. ಎಐಗೆ ಜೀವಂತ ಅನುಭವಗಳಿಲ್ಲ, ಅದಕ್ಕೆ ಕೇವಲ ಪದಗಳ ಪೋಣಿಸುವಿಕೆ ಮಾತ್ರ ಗೊತ್ತು. ಎಐ ಬದುಕಬೇಕಾದರೆ ಅದಕ್ಕೆ ಮನುಷ್ಯನ ಮೆದುಳಿನಿಂದ ಬರುವ 'ಫ್ರೆಶ್ ಡೇಟಾ' ಬೇಕು. ಇಲ್ಲದಿದ್ದರೆ ಅದು ತನ್ನದೇ ಕಾರ್ಬನ್-ಡೈ-ಆಕ್ಸೈಡ್ ಅನ್ನು ತಾನೇ ಉಸಿರಾಡಿ ಸಾಯುವ ರೋಗಿಯಂತಾಗುತ್ತದೆ. 'ಮಾಡಲ್ ಕೊಲ್ಯಾಪ್ಸ್' ತಡೆಯಲು ಟೆಕ್ ಕಂಪನಿಗಳು ಈಗ, ಮನುಷ್ಯರ ಹಳೆಯ ಬರಹಗಳನ್ನು ಹುಡುಕಿ ಹುಡುಕಿ ಖರೀದಿಸುತ್ತಿವೆ. 'ನ್ಯೂಯಾರ್ಕ್ ಟೈಮ್ಸ್ 'ನಂತಹ ಸಂಸ್ಥೆಗಳ ಮೇಲೆ ಎಐ ಕಂಪನಿಗಳು ಕೇಸ್ ಹಾಕುತ್ತಿರುವುದರ ಹಿಂದಿನ ಗುಟ್ಟು ಕೂಡ ಇದೇ.

'ಮಾಡಲ್ ಕೊಲ್ಯಾಪ್ಸ್' ಆದಾಗ ಸತ್ಯ ಯಾವುದು ಎಂದು ಪತ್ತೆ ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಎಐ ತಾನು ಸೃಷ್ಟಿಸಿದ ಸುಳ್ಳನ್ನೇ ಸಾವಿರ ಬಾರಿ ಪುನರಾವರ್ತಿಸಿ ಅದನ್ನೇ ಸತ್ಯದ ಡೇಟಾ ಆಗಿ ಇಂಟರ್ನೆಟ್‌ನಲ್ಲಿ ಹರಡಿರುತ್ತದೆ. ಮುಂದಿನ ಪೀಳಿಗೆಯ ಮಕ್ಕಳು ಗೂಗಲ್ ಮಾಡಿದಾಗ ಸಿಗುವ ಮಾಹಿತಿಯಲ್ಲಿ ಶೇ. 90ರಷ್ಟು ಕೃತಕ ಮತ್ತು ತಪ್ಪು ಮಾಹಿತಿಯೇ ಇರುವ ಸಾಧ್ಯತೆ ಇದೆ! ಇದು ಕೇವಲ ಮಾಹಿತಿಯ ಸಮಸ್ಯೆಯಲ್ಲ, ಆರ್ಥಿಕತೆಯ ಮೇಲೆ ಏಟು ನೀಡುವ ವಿಚಾರ. ಕಂಪನಿಗಳು ಎಐ ಮೇಲೆ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡುತ್ತಿವೆ. ಆದರೆ ಆ ಎಐ ಮಾಡೆಲ್ ತನ್ನ ಬುದ್ಧಿವಂತಿಕೆ ಕಳೆದುಕೊಂಡರೆ, ಹೂಡಿಕೆ ಮಾಡಿದ ಹಣವೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಎಐ ದಕ್ಷತೆ ಕುಸಿತವಾದರೆ, ಅದರ ಮೇಲೆ ಅವಲಂಬಿತವಾಗಿರುವ ಬ್ಯುಸಿನೆಸ್‌ಗಳು ಕೂಡ ಕುಸಿಯುತ್ತವೆ.

## ಭಾಷಾ ವೈವಿಧ್ಯತೆಯ ನಾಶ

ಕನ್ನಡದಂತಹ ಪ್ರಾದೇಶಿಕ ಭಾಷೆಗಳಿಗೆ ಇದು ದೊಡ್ಡ ಪೆಟ್ಟು. ಎಐ ಇಂಗ್ಲಿಷ್ ಡೇಟಾವನ್ನು ಕನ್ನಡಕ್ಕೆ ಅನುವಾದಿಸಿ ಇಂಟರ್ನೆಟ್ ತುಂಬಿಸುತ್ತದೆ. ಮೂಲ ಕನ್ನಡದ ಸೊಗಡು, ಗಾದೆಗಳು, ಒಗಟುಗಳು ಎಐ ಕಣ್ಣಿಗೆ ಬೀಳುವುದೇ ಇಲ್ಲ. ಎಐ ಸೃಷ್ಟಿಸಿದ 'ಕನ್ನಡ'ವನ್ನೇ ನೈಜ ಕನ್ನಡ ಎಂದು ಮುಂದಿನ ಎಐ ಮಾಡೆಲ್‌ಗಳು ಕಲಿಯುತ್ತಾ ಹೋದರೆ, ನಮ್ಮ ಭಾಷೆಯ ಶ್ರೀಮಂತಿಕೆ ಕಳೆದುಹೋಗುತ್ತದೆ. ಎಐ ಮಾಡೆಲ್‌ಗಳಲ್ಲಿ 'ಅಟೆನ್ಷನ್' (ಅಟೆನಟಿನ್ ಮೆಕ್ಯಾನಿಸಂ) ಎನ್ನುವ ತಂತ್ರಜ್ಞಾನವಿರುತ್ತದೆ. ಇದು ಯಾವ ಮಾಹಿತಿಗೆ ಎಷ್ಟು ತೂಕ ನೀಡಬೇಕು ಎಂದು ನಿರ್ಧರಿಸುತ್ತದೆ. ತನ್ನದೇ ಡೇಟಾವನ್ನು ಓದಿದಾಗ, ಎಐ ಅನಗತ್ಯ ವಿಷಯಗಳಿಗೆ ಹೆಚ್ಚಿನ ತೂಕ ನೀಡಲು ಶುರು ಮಾಡುತ್ತದೆ. ಇದು ಇಡೀ ಸಿಸ್ಟಮ್‌ನ ತರ್ಕವನ್ನೇ ಹಾದಿ ತಪ್ಪಿಸುತ್ತದೆ.

ಮಾಡಲ್ ಕೊಲ್ಯಾಪ್ಸ್ ತಡೆಯಲು ವಿಜ್ಞಾನಿಗಳು ಈಗ 'ವಾಟರ್ ಮಾರ್ಕಿಂಗ್' ತಂತ್ರಜ್ಞಾನ ತರುತ್ತಿದ್ದಾರೆ. ಅಂದರೆ, ಎಐ ಸೃಷ್ಟಿಸಿದ ಕಂಟೆಂಟ್‌ಗೆ ಒಂದು ಡಿಜಿಟಲ್ ಮುದ್ರೆ ಹಾಕುವುದು. ತರಬೇತಿ ನೀಡುವಾಗ ಅಂತಹ ಮುದ್ರೆ ಇರುವ ಡೇಟಾವನ್ನು ಹೊರತುಪಡಿಸಿ, ಕೇವಲ ಮನುಷ್ಯ ಸೃಷ್ಟಿಸಿದ ಡೇಟಾವನ್ನು ಮಾತ್ರ ಆಯ್ದುಕೊಳ್ಳುವುದು. ಆದರೆ ಇದು ಸಮುದ್ರದಲ್ಲಿ ಬಿದ್ದ ಸೂಜಿಯನ್ನು ಹುಡುಕಿದಷ್ಟೇ ಕಷ್ಟ. ಕೆಲವರು 'ಸಿಂಥೆಟಿಕ್ ಡೇಟಾ' ಎನ್ನುವುದು ವರ ಎಂದು ಭಾವಿಸುತ್ತಾರೆ. ಆದರೆ ಅದು ಒಂದು ಹಂತದವರೆಗೆ ಮಾತ್ರ ಸಹಕಾರಿ. ಒಂದು ಮಗು ಕೇವಲ ಕಂಪ್ಯೂಟರ್ ಗೇಮ್ ಆಡಿ, ಬದುಕುವುದನ್ನು ಕಲಿಯಲು ಸಾಧ್ಯವಿಲ್ಲ, ಅದು ಹೊರಗಿನ ಜಗತ್ತನ್ನು ನೋಡಲೇಬೇಕು, ಅಲ್ಲೇ ಕಲಿಯಬೇಕು. ಎಐ ಕೂಡ ಅಷ್ಟೇ, ಅದಕ್ಕೆ ಹೊರಜಗತ್ತಿನ ಅಸಲಿ ಡೇಟಾದ ಸ್ಪರ್ಶ ಇಲ್ಲದಿದ್ದರೆ ಅದು ಬರೀ ಒಂದು ಪ್ಲಾಸ್ಟಿಕ್ ಗೊಂಬೆಯಂತಾಗುತ್ತದೆ.

ತಂತ್ರಜ್ಞಾನ ಎಷ್ಟೇ ಮುಂದುವರಿದರೂ ನಮ್ಮ ಮೆದುಳಿಗೆ ಪರ್ಯಾಯವಿಲ್ಲ. ಎಐ ತನ್ನನ್ನು ತಾನು ನುಂಗುತ್ತಿರಬಹುದು, ಆದರೆ ನಾವು ನಮ್ಮ ಸೃಜನಶೀಲತೆಯನ್ನು ಎಐಗೆ ಬಲಿ ಕೊಡಬಾರದು. ನಾವು ಬರೆಯುವ ಪ್ರತಿಯೊಂದು ಅಸಲಿ ಸಾಲೂ, ಎಐ ಲೋಕಕ್ಕೆ ಬೇಕಾದ ಆಮ್ಲಜನಕವಿದ್ದಂತೆ. 'ಕೋಡಗನ ಕೋಳಿ ನುಂಗಿತ್ತಾ' ಎನ್ನುವ ಪದ ನಮಗೆ ಅಹಂಕಾರ ಬಿಡಲು ಹೇಳುತ್ತದೆ. ಎಐ ಜಗತ್ತು ಕೂಡ ಅಷ್ಟೇ, ನಾವು ಮನುಷ್ಯರಿಗಿಂತ ಮಿಗಿಲು ಎನ್ನುವ ಅಹಂಕಾರದಲ್ಲಿ ತನ್ನನ್ನೇ ತಾನು ನುಂಗಲು ಹೊರಟರೆ, ಅದರ ಅಳಿವು ಅನಿವಾರ್ಯ. ಎಐ ಎನ್ನುವುದು ನಮ್ಮ ಕೆಲಸಕ್ಕೆ ಸಹಾಯಕವಾಗಿರಲಿ, ಆದರೆ ಜ್ಞಾನದ ಮೂಲವಾಗಿ ಮನುಷ್ಯನ ಬುದ್ಧಿಯೇ ಸದಾ ಎತ್ತರದಲ್ಲಿರಲಿ. ನೆನಪಿಡಿ, ಎಐ ತನ್ನನ್ನೇ ತಾನು ನುಂಗಬಹುದು, ಆದರೆ ನಿಮ್ಮ ವಿವೇಚನೆಯನ್ನು ನುಂಗಲು ಬಿಡಬೇಡಿ!

# ಯೋಗ

ಅಮ್ಮನೆಂಬ ಜೀವಕೆ
ಕಂದ ನೀನೆ ಕಾಣಿಕೆ
ಅವಳ ಪ್ರೀತಿ ಪ್ರೇಮಕೆ
ಎಲ್ಲಿ ಇಹುದೊ ಹೋಲಿಕೆ ||

ಹೆತ್ತು ಹೊತ್ತು ಸಲಹುವಳು
ಮಮತೆ ನೀಡಿ ಬೆಳೆಸುವಳು
ಕಣ್ಣನೀರ ಒರೆಸುವಳು
ತುತ್ತನಿತ್ತು ಸಲಹುವಳು||

ವಾತ್ಸಲ್ಯದ ಗಣಿಯವಳು
ಮಮತೆಯೊಡಲ ಉಣಿಸುವಳು
ಸದಾ ಸ್ಫೂರ್ತಿ ತುಂಬುವಳು
ನೋವ ನುಂಗಿ ನಗುವವಳು ||

ಕೈಯ ಹಿಡಿದು ನಡೆಸುವಳು
ಚಂದ್ರಬಿಂಬ ತೋರುವಳು
ಅಳುವ ಕಂದನ ನಗಿಸುವಳು
ಮಗುವ ಬಾಳ ಬೆಳಗುವಳು ||

ಅವಳೆ ತ್ಯಾಗ ಮೂರ್ತಿಯು
ಅವಳ ಬದುಕೆ ಸ್ಫೂರ್ತಿಯು
ಅವಳ ತ್ಯಾಗ ವಾತ್ಸಲ್ಯಕೆ
ಸಿಲುಕುವುದೇ ಎನ್ನ ಯೋಗ! ||



» ಡಾ. ಮೈತ್ರಿ ಭಟ್, ವಿಟ್ಲ

# ನಡುರಾತ್ರಿಯ ಪುಳಕ!

» ವಿನಾಯಕ ಓಣಿ ವಿಘ್ನೇಶ್ವರ

ಕನ್ನಡ ನಾಟಕ ರಂಗಭೂಮಿಯ ಹಾಸ್ಯ ನಾಟಕಗಳಲ್ಲಿ 'ನೀನಾನಾದ್ರೆ, ನಾನೀನೇನ' ಕೂಡಾ ಒಂದು. ಆ ನಾಟಕದ ಮುಂದಿನ ಭಾಗವೋ ಎನ್ನುವಂತೆ, ಅದರಲ್ಲಿನ ಕೆಲವು ಪಾತ್ರಗಳ ಮುಂದಿನ ಬದುಕು ಮತ್ತು ಅವುಗಳ ನಡುವೆ ನಡೆಯುವ ಪ್ರಹಸನವೇ 'ನಡುರಾತ್ರಿಯ ಪುಳಕ'. ಎಸ್. ಸುರೇಂದ್ರನಾಥ್ ಅವರ ನಿರ್ದೇಶನದಲ್ಲಿ ಮೂಡಿಬಂದ ಈ ನಾಟಕವು ಶೇಕ್ಸ್‌ಪಿಯರ್‌ನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕದಿಂದ ಸ್ಫೂರ್ತಿ ಪಡೆದಿದ್ದರೂ, ಅದನ್ನು ನಮ್ಮ ನಾಡಿನ ಸೊಗಡಿಗೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ. ಬೆಂಗಳೂರಿನ ರಂಗಶಂಕರದಲ್ಲಿ ಇತ್ತೀಚೆಗಷ್ಟೇ (ಏಪ್ರಿಲ್ 30 ಮತ್ತು ಮೇ 1, 2026) ಪ್ರದರ್ಶನಗೊಂಡ ನಾಟಕವು ಪ್ರೇಕ್ಷಕರಿಗೆ ಹಾಸ್ಯದ ಹಬ್ಬವನ್ನು ನೀಡಿತು.

ನಾಟಕದ ಪ್ರಾರಂಭದ ಒಡಾಟ, ಒದ್ದಾಟವೇ ನಗಿಸಲು ಶುರು ಮಾಡುತ್ತದೆ.'ನೀನಾನಾದ್ರೆ ನಾನೀನೇನ' ನಾಟಕದ ಪಾತ್ರ 'ಸಿಕ್ಕೋಜಿ' (ಸಿಹಿಕಹಿ ಚಂದ್ರು ಅಭಿನಯ) ಎಂಬ ಪಾತ್ರದ ಸುತ್ತ ಈ ನಾಟಕ ಸುತ್ತುತ್ತದೆ. ಅವನು ತನ್ನ ಹೆಂಡತಿಯನ್ನು ಮೆಚ್ಚಿಸಲು ಹೆಣಗಾಡುತ್ತಿರುತ್ತಾನೆ. ಸಿಕ್ಕೋಜಿಯ ಮದುವೆ ವಾರ್ಷಿಕೋತ್ಸವಕ್ಕೆ

ಪ್ರದರ್ಶನ ನೀಡಲು ತಯಾರಾಗುವ ನಾಟಕ ತಂಡ. ಆ ತಂಡದ ಒಬ್ಬೊಬ್ಬ ಕಲಾವಿದನೂ ಕಲಾವಿದನೇ! ಅವರ ಆ ದೇಹ ಭಾಷೆ, ಸಂಭಾಷಣೆ ಮುಂತಾದವುಗಳು ನಾಟಕ ಮೇಷ್ಟ್ರಿಗೆ (ಎಸ್. ಸುರೇಂದ್ರನಾಥ್) ಕೊಡುವ ಕಾಟ ಅಷ್ಟಿಷ್ಟಲ್ಲ. ಹಾಸ್ಯವೆಂದರೆ ದ್ವಂದ್ವಾರ್ಥ ಮಾತ್ರ ಅನ್ನುವ ಕಾಲ ಒಂದಿತ್ತು. ಆದರೆ ಇಂತಹ ಹಾಸ್ಯ ನಾಟಕಗಳು ಶುದ್ಧ ಹಾಸ್ಯ ಪ್ರಿಯರಿಗೆ ರಸದೌತಣ ಕೊಡುತ್ತವೆ.ಯುವ ನಿರ್ದೇಶಕ ವಿನಯ್ ಶಾಸ್ತ್ರಿ ಅಭಿನಯಕ್ಕೂ ಸೈ ಅನಿಸುತ್ತಾರೆ.